ಕಸ್ತೂರಿ

ಫೆಬ್ರುವರಿ ೧೯೭೭

ಬೆಲೆ: ರೂ. ೧-೨೫



‘ಕಸ್ತೂರಿ’ಯ ಅರ್ಧವಾರ್ಷಿಕ ಪರಿವಿಡಿ

ಸೆಪ್ಟೆಂಬರ್ ೧೯೭೬ರಿಂದ ಫೆಬ್ರುವರಿ ೧೯೭೭ರ ವರೆಗೆ

ಕ್ರಮ: ಲೇಖನದ ಹೆಸರು, ತಿಂಗಳು, ಪುಟ ಸಂಖ್ಯೆ

ಸೆ. = ಸೆಪ್ಟೆಂಬರ್, ಅ. = ಅಕ್ಟೋಬರ್, ನ. = ನವಂಬರ್, ಡಿ. = ಡಿಸೆಂಬರ್

ಜ. = ಜನೆವರಿ, ಫೆ. = ಫೆಬ್ರುವರಿ



ಕಸ್ತೂರಿ



ವ್ಯವಸ್ಥಾಪಕ ಸಂಪಾದಕ :
ರಂಗನಾಥ ದಿವಾಕರ

ಪ್ರಧಾನ ಸಂಪಾದಕ :
ಖಾದ್ರಿ ಶಾಮಣ್ಣ

ಸಂಪಾದಕ :
ದ. ಲ. ಕೆರೂರ

ಕಲೆ :
ಕೆ. ಬಿ. ಕುಲಕರ್ಣಿ

ಮುಖಪುಟ :
ಪುಷ್ಪಕಾಶ್ಮೀರ
ಎಸ್. ಶಂಕರ

ಲೇಖಕರಿಗೆ ಸೂಚನೆ

ಕಸ್ತೂರಿಯಲ್ಲಿ ಪ್ರಕಟಣೆಗಾಗಿ ಕಳುಹಿಸುವ ಲೇಖ, ಪ್ರಬಂಧ, ಕಥೆ ಮೊದಲಾದವನ್ನು ಕಾಗದದ ಒಂದೇ ಮಗ್ಗಲಿಗೆ ವಿರಳವಾಗಿ ಬರೆದಿರಬೇಕು. ಲೇಖಕರ ಹೆಸರು ವಿಳಾಸ ಸ್ಪಷ್ಟವಿರಬೇಕು. ಅನುವಾದ ರೂಪಾಂತರ ಇಲ್ಲವೆ ಸಾಧಾರ ಲೇಖನಗಳಾದರೆ ಮೂಲ ಲೇಖಕರ ಮತ್ತು ಪ್ರಕಾಶಕರ ಹೆಸರು ವಿಳಾಸಗಳಿರಬೇಕು. ಇಂಥ ಲೇಖನಗಳಿಗೆ ಪೂರ್ವಾನುಮತಿ ದೊರಕಿಸಿಕೊಂಡರೆ ಉತ್ತಮ. ಅಸ್ವೀಕೃತ ಲೇಖನಗಳು ತಿರುಗಿ ಬೇಕಾಗಿದ್ದರೆ, ಜತೆಗೆ ಸಾಕಷ್ಟು ಅಂಚೆ ಚೀಟಿಗಳನ್ನು ಇರಿಸಿ. ಲೇಖನಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗೆ ಇದೆ.

ಚಂದಾದಾರರಿಗೆ ಸೂಚನೆ

ಕಸ್ತೂರಿ ತಿಂಗಳ ಒಂದನೇ ದಿನಾಂಕದೊಳಗೆ ಪ್ರಕಟವಾಗುವುದು. ತಿಂಗಳ ೫ ನೇ ದಿನಾಂಕದೊಳಗೆ ತಲುಪದೇ ಹೋದರೆ ಚಂದಾದಾರರು ತಮ್ಮ ಟಪಾಲುಕಟ್ಟೆಯಲ್ಲಿ ಮೊದಲು ವಿಚಾರಿಸಿ, ನಮಗೆ ತಿಳಿಸಬೇಕು. ಪತ್ರವ್ಯವಹಾರ ಮಾಡುವಾಗ ಚಂದಾ ನಂಬರು ಹಾಕಿರಬೇಕು.

ಚಂದಾ ದರ

೩ ವರ್ಷ	(ಅಂಚೆ ಸೇರಿ)	ರೂ. ೩೫-೦೦
೨ ವರ್ಷ	,,	ರೂ. ೨೫-೦೦
೧ ವರ್ಷ	,,	ರೂ. ೧೪-೦೦
ಅರ್ಧ ವರ್ಷ	,,	ರೂ. ೭-೫೦

KASTURI February 1977

ಈ ಸಂಚಿಕೆಯಲ್ಲಿ

ಸಹಚಿಂತನ

ಫಾಜ

ಜನವರಿ ಸಂಚಿಕೆಯಲ್ಲಿ ಪ್ರಕಟವಾದ ಹಿಂದಿಯ ಮೂಲ "ಬ್ಯಾಕ್ಟೀರಿಯಾ ನಾಶಕ ಫಾಜ" ಲೇಖನವನ್ನು ಸವಿಸ್ತಾರವಾಗಿ ಕನ್ನಡಕ್ಕೆ ಅನುವಾದಿಸಿದ ಶ್ರೀಮತಿ ಶಾಂತಾ ಮಂಜುನಾಥ್‌ರವರಿಗೆ ವಂದನೆಗಳು. ಇದೇ ರೀತಿ ಇನ್ನೂ ಇಂತಹ ಲೇಖನಗಳು ಪ್ರಕಟವಾಗಿ ಓದುಗರ ಜ್ಞಾನ ಭಂಡಾರ ಹೆಚ್ಚಲಿ ಎಂದು ಆಶಿಸುತ್ತೇನೆ.

ಮೈಸೂರು -ಎನ್. ರವಿಪ್ರಕಾಶ

ಹರ್ಷ

ಜನವರಿ 'ಕಸ್ತೂರಿ'ಯಲ್ಲಿ ಪ್ರಕಟವಾಗಿರುವ ಶ್ರೀ ಮಳಲಿ ವಸಂತಕುಮಾರ ಅವರ 'ಹರ್ಷ' ಕತೆ ತುಂಬಾ ಪರಿಣಾಮಕಾರಿಯಾಗಿದೆ. ಆರಂಭದಿಂದ ಸಾಗಿ ಬಂದ ನಾಯಿಯ ವ್ಯಕ್ತಿ ಚಿತ್ರಣ ಅಂತ್ಯದ ಅನಿರೀಕ್ಷಿತ ಭೀಕರ ದುರಂತ ಘಟನೆಯಿಂದ ಸಮರ್ಥ ಮುಕ್ತಾಯವನ್ನು ಪಡೆದುಕೊಳ್ಳುತ್ತದೆ. ಕತೆಯ ಉದ್ದಕ್ಕೂ ಲೇಖಕರ ಸೊಗಸಾದ ಚಿತ್ರಣ ಶಕ್ತಿ ಎದ್ದು ಕಾಣುತ್ತದೆ. ಬಹುಶಃ ಈ ಕತೆಯ ಜೀವಾಳವೇ ಅದೆಂದು ತೋರುತ್ತದೆ.

ಒಟ್ಟಿನಲ್ಲಿ ಹೇಳುವುದಾದರೆ ಇತ್ತೀಚಿನ ಕಸ್ತೂರಿ ಸಂಚಿಕೆಗಳಲ್ಲಿ ಪ್ರಕಟವಾದ 'ಮಮತೆ', 'ರಸಗುಲ್ಲ' ಮತ್ತು 'ಹರ್ಷ' ಕತೆಗಳು ಕಾಮ ಪ್ರೇಮಕ್ಕೆ ಸಂಬಂಧಪಟ್ಟ ಹಳೆಯ ಹಳಸು ಜಾಡನ್ನು ಬಿಟ್ಟು ಹೊಸ ರೀತಿಯಲ್ಲಿ ಜೀವನದ ಶುಭ್ರ ಚಿತ್ರಗಳನ್ನು ಕೊಡುತ್ತಿರುವುದು ಮೆಚ್ಚತಕ್ಕ ಸಂಗತಿ.

ಕಳಕಾಪುರ -ಬಿಂಡಿಗನವಲೆ ಶೇಷಣ್ಣ

ಹಂಪೆ-ಬಳ್ಳಾರಿ

ಟೀಕೂರು ಕೃಷ್ಣಮೂರ್ತಿಯವರು 'ಇದೆಂಥ ಅನಾಸಕ್ತಿ' ಎಂಬ ತಮ್ಮ ಲೇಖನದಲ್ಲಿ ಉಗ್ರನರಸಿಂಹ ಶಿಲ್ಪದೆದುರು ಅವರಿಗಾದ ಅನುಭವವನ್ನು ತಿಳಿಸುವುದರ ಜೊತೆಗೆ ಅದರ ಶಿಲ್ಪಿ ಯಾರೆಂದು ತಿಳಿಸಿದ್ದಲ್ಲಿ ಓದುಗರಿಗೆ ಹೆಚ್ಚು ಉಪಯೋಗವಾಗುತ್ತಿತ್ತು.

ತೀರ್ಥಹಳ್ಳಿ -ಬಿ. ಜಿ. ಸುಜಾತ.

ಹಂಪೆ ಹತ್ತಿರದಲ್ಲಿದ್ದರೂ ಹಾಯೆಂದಷ್ಟು ಅನಾಸಕ್ತಿ ಬೆಳೆಸಿಕೊಂಡಿರುವ, ಹಾಯ್ದರೂ ಏನನ್ನೂ ತಿಳಿಯ ಬಯಸುವ ಕಾತರತೆಯನ್ನು ಹೊಂದಿರದ ನಮ್ಮ ಕಥನವನ್ನು ಮೂದಲಿಸಿರುವ ಶ್ರೀ ಟೀಕೂರು ಕೃಷ್ಣಮೂರ್ತಿಯವರ ಹಂಪೆಯ ಬಗೆಗಿನ ಕಳಕಳಿ ಮೆಚ್ಚುವಂಥದು. ಹಂಪೆಯ ಗಾಣಗಿತ್ತಿ, ಬಳ್ಳಾರಿಯ ಚಂದಮ್ಮ ಮತ್ತು ಆ ಊರನ್ನು ಮುತ್ತಿದ್ದ ಮಹಾರಾಷ್ಟ್ರ ಸೇನೆಯನ್ನು ಎದುರಿಸಿದ ವೀರನಾಯಕ ಮೊದಲಾದವರು ಯಾರಿಗೆ ಗೊತ್ತಿದ್ದರು! ಆದರೆ ಶ್ರೀಯುತರು ಸೂಚಿಸಿರುವ ಆರ್ಥರ್ ವೆಲ್ಲೆಸ್ಲಿಯವರ ಮಂಟಪ ಬಳ್ಳಾರಿಯಲ್ಲಿ ಎಲ್ಲಿದೆ ಎಂಬುದು ಸ್ಪಷ್ಟವಾಗಲಿಲ್ಲ ಇದೇ
ಈ ಕೆಳಗಿನ ಕೆಲವು ಅಂಶಗಳನ್ನು ಕುರಿತೂ ಬರೆಯಬೇಕಾಗಿ ಅವರಲ್ಲಿ ಪ್ರಾರ್ಥನೆ:

೧) ಒಬ್ಬ ಶಿವಭಕ್ತ ವ್ಯಾಪಾರಿ ಬಳ್ಳ(ಸೇರು)ವೊಂದನ್ನು ಬಂಡೆಯ ಮೇಲೆ ಇಟ್ಟು ಪೂಜಿಸಿದ್ದರಿಂದ ಬಳ್ಳ+ಅರಿ ಬಳ್ಳಾರಿಯಾದುದರ ಐತಿಹಾಸಿಕ ಔಚಿತ್ಯ.

೨) ಬಳ್ಳಾರಿಯಲ್ಲಿ ಕನ್ನಡದ ಹಿರಿಮೆ ಗರಿಮೆ ಮೆರೆದ ಮಹನೀಯರು ಅಥವಾ ಸಂಸ್ಥೆಗಳು.

೩) ಬಳ್ಳಾರಿ ಮತ್ತು ಅದರ ಸುತ್ತಮುತ್ತಲಿನ ದೇವಾಲಯಗಳು, ಅವುಗಳ ಸ್ವಾರಸ್ಯ. ಮತ್ತು

೪) ತ್ರಿವರ್ಣ ಧ್ವಜವನ್ನು ಹೊತ್ತ ಬಳ್ಳಾರಿ ಗುಡ್ಡದ ಬಗೆಗೆ ನಮಗೆಲ್ಲಾ ತಿಳಿಯದಿರುವ ವಿಷಯಗಳು ಇತ್ಯಾದಿ.

ಹೊಸಪೇಟೆ -ವಿ. ಪ್ರಾಣೇಶರಾವ್
-ವಿ. ಲಕ್ಷ್ಮೀಪ್ರಾಣೇಶ

ತಿದ್ದುಪಡಿ

ಕಳೆದ ತಿಂಗಳ 'ಕಸ್ತೂರಿ'ಯ ೧೩ನೆಯ ಪುಟದಲ್ಲಿ ಬಂದ 'ಗಾಂಧೀಜಿ- ಅಂದು, ಇಂದು' ಸಂಗ್ರಹಿಸಿದವರ ಹೆಸರು 'ಡಿ. ಕೆ. ಜಯಂತಲತಾ' ಎಂದು ಪ್ರಕಟವಾಗಿದೆ. ಸಂಗ್ರಾಹಕರ ಹೆಸರು 'ಟಿ. ಕೆ. ಜಯಂತಲತಾ' ಎಂದಿರಬೇಕಿತ್ತು. ಈ ತಪ್ಪಿಗಾಗಿ ವಿಷಾದಿಸುತ್ತೇವೆ. -ಸಂಪಾದಕ

ವೈನಿ

ಜನವರಿ 'ಕಸ್ತೂರಿ'ಯಲ್ಲಿ ಪ್ರಕಟವಾದ ಪುಸ್ತಕ ವಿಭಾಗದ ಸಂಗ್ರಹ ಕಥೆ 'ವೈನಿ' ಅತ್ಯುತ್ತಮವಾಗಿದೆ. ದಿನಚರಿಯ ಮೂಲಕ ಕಥೆಯನ್ನು ಹೊರಗೆಡವುದರಲ್ಲಿ ಶ್ರೀ ಎನ್ಕೆಯವರ ಜಾಣ್ಮೆ ಮೆಚ್ಚುವಂಥದು. ಕಥೆ ಸ್ವಾರಸ್ಯಪೂರ್ಣವಾಗಿದ್ದು ಶೈಲಿಯೂ ಚೆನ್ನಾಗಿದೆ.

ಇದೇ ಸಂಚಿಕೆಯಲ್ಲಿ ಶ್ರೀ ಜಿ. ಟಿ. ನಾರಾಯಣರಾವ್ ಅವರು ಬರೆದ 'ಬುಧವಾಕ್ರಿಯಾಮಿ' ಲೇಖನವು ಖಗೋಲ ಜ್ಞಾನವನ್ನು ಅರಿಯಬೇಕೆಂಬ ಆಶಯವುಳ್ಳವರಿಗೆ ತುಂಬ ಸಹಾಯಕವಾಗಿದೆ. ಶ್ರೀಯುತರು ಇಂಥವೇ ವೈಜ್ಞಾನಿಕ ಲೇಖನಗಳನ್ನು 'ಕಸ್ತೂರಿ'ಯಲ್ಲಿ ಸದಾಕಾಲ ಬರೆಯುತ್ತಿರಲಿ.

ಇಡಕಲಗದ್ದೆ -ತಿ. ಮ. ಹೆಗಡೆ

ಮುದ್ದಣ

ನಿಮ್ಮ ಜನವರಿ ಸಂಚಿಕೆಯಲ್ಲಿ ಪ್ರಕಟವಾದ ಶ್ರೀ ಏರೋಡಿ ರಾಮಕೃಷ್ಣಯ್ಯನವರ "ಮುದ್ದಣ ನಾ ಕಂಡಂತೆ" ಲೇಖನದಲ್ಲಿ ಲೇಖಕರು ಮುದ್ದಣನ ಜೀವನ ಹಾಗೂ ಸಾಧನೆಗಳ ಸಮಗ್ರ ಪರಿಚಯವನು

ಓದುಗರಿಗೆ ಹೃದಯಂಗಮವಾಗಿ ತೋರಿಸಿಕೊಟ್ಟಿದ್ದಾರೆ.

ಕವಿ ಮುದ್ದಣನು ದೈವಾಧೀನನಾದ ನಂತರ ಕವಿಯ ಶ್ರೀಮತಿ ಕಮಲಬಾಯಿಯವರು ತಮ್ಮ ೧॥ ವರ್ಷದ ಮಗನನ್ನು ಶಿವಮೊಗ್ಗ ಜಿಲ್ಲೆಯ ಸಾಗರದ ಕಾಗೋಡು ಎಂಬ ತನ್ನ ತವರೂರಲ್ಲಿ ನೆಲಸಿ ವಿದ್ಯಾಭ್ಯಾಸವನ್ನು ಮಾಡಿಸಿದರು. ನಾನು ಇತ್ತೀಚೆಗೆ ಕವಿಪುತ್ರರಾದ ಶ್ರೀ ನಂದಳಿಕೆ ರಾಧಾಕೃಷ್ಣಯ್ಯನವರನ್ನು ಭದ್ರಾವತಿಯ ಅವರ ನಿವಾಸದಲ್ಲಿ ಸಂದರ್ಶಿಸಿದಾಗ ಅವರು ಭದ್ರಾವತಿ ಮಿಡ್ಲ್ ಸ್ಕೂಲಿನಲ್ಲಿ ಕನ್ನಡ ಪಂಡಿತ ವೃತ್ತಿಯಲ್ಲಿದ್ದವರು. ಈಗ ನಿವೃತ್ತಿ ಹೊಂದಿ ಭದ್ರಾವತಿಯಲ್ಲೇ ತಮ್ಮ ಪುತ್ರರೊಂದಿಗೆ ನಿವೃತ್ತ ಜೀವನವನ್ನು ನಡೆಸುತ್ತಿದ್ದಾರೆ.

ಅವರಿಗೆ ಮುದ್ದಣ್ಣನ ಪುತ್ರ ಎಂಬ ಗೌರವ ಮಾತ್ರ ಇದ್ದು, ಸರಕಾರದಿಂದ ಯಾವ ರೀತಿಯ ಸಹಾಯ ಸವಲತ್ತಾಗಲಿ, ಮುದ್ದಣ್ಣನ ಕೃತಿಗಳಾಗಲಿ, ಆದರ ಗೌರವ ಧನಗಳಾಗಲಿ, ಇವರಿಗೆ ಏನೂ ಸಿಗಲಿಲ್ಲ ಎಂದು ಅವರೊಡನೆ ಮಾತಾಡಿದಾಗ ತಿಳಿದು ಬಂತು.

ಕನ್ನಡ ಸಾಹಿತ್ಯಕ್ಕೆ ತನ್ನ ಅಲ್ಪಾಯುಷ್ಯದಲ್ಲೇ ಅಮೂಲ್ಯ ಕಾಣಿಕೆ ನೀಡಿದ ಮಹಾನುಭಾವ ಮುದ್ದಣ್ಣನ ಸಂತತಿ ಈ ರೀತಿ ಕರ್ನಾಟಕ ಸರಕಾರದಿಂದ, ಕನ್ನಡ ಜನತೆಯಿಂದ ನಿರ್ಲಕ್ಷಿಸಲ್ಪಟ್ಟಿದ್ದು ನಿಜಕ್ಕೂ ಶೋಚನೀಯ. ಆಗಲೇ ಇಂಥ ವ್ಯಕ್ತಿಗಳನ್ನು ಗೌರವಿಸುವ, ಅವರಿಗೆ ಪ್ರತಿ ತಿಂಗಳೂ ಗೌರವಧನ ನೀಡುವಂಥ ಒಂದು ಒಳ್ಳೆಯ ಸಂಪ್ರದಾಯವನ್ನು ಕರ್ನಾಟಕ ಸರಕಾರ ಪ್ರಾರಂಭಿಸಿದೆಯಷ್ಟೆ. ಶ್ರೀ ರಾಧಾಕೃಷ್ಣಯ್ಯನವರಿಗೆ ಅವರು ತಾವಾಗಿಯೇ ಬೇಡ ಬೇಕೆಂದು ನಿರೀಕ್ಷಿಸದೆಯೇ ರಾಜ್ಯ ಸರಕಾರ ತಾನಾಗಿಯೇ ಅವರ ನೆರವಿಗೆ ಧಾವಿಸುವುದು ಉಚಿತವಲ್ಲವೆ?

ಉಡುಪಿ —ಎನ್. ಬಾಲಚಂದ್ರನ್

ಒಂದು ಅನಿಸಿಕೆ

ಕಸ್ತೂರಿಯ ೧೯೭೭ರ ನಾಲ್ಕೈದು ಸಂಚಿಕೆಗಳಲ್ಲಿ ಮ. ಬ. ಚನ್ನಬಸಪ್ಪ ಎನ್ನುವವರೊಬ್ಬರ ಬರಹಗಳು ಪ್ರಕಟವಾಗಿವೆ 'ಇತ್ತೀಚಿನ ವರ್ಷಗಳಲ್ಲಿ ಕಸ್ತೂರಿಯ ಮಟ್ಟ ಇಳಿದು ಹೋಗಿದೆ.' ಎಂಬ ಹಲವಾರು ಓದುಗರ ಅನ್ನಿಸಿಕೆಗೆ ಆ ಬರಹಗಳು ಪ್ರಮುಖ ಉದಾಹರಣೆಯಾಗಬಲ್ಲವು ಅನ್ನೋದಿದೆ. ಯಾರಿಗಾದರೂ ಬರೆದಾತ ಒಬ್ಬ ಮನೋರೋಗಿಯಾಗಿರಬಹುದು ಎನ್ನಿಸಿದರೆ ಆಶ್ಚರ್ಯವಿಲ್ಲ

ಅಂತಹ ಅಸಡ್ಡಾಳ ಬರಹವನ್ನು ಕಸ್ತೂರಿಯ ಸಂಪಾದಕ ವರ್ಗ ಸರಿಯಾಗಿ ಓದಿ ನೋಡಿ ಪ್ರಕಟಿಸಿಲ್ಲ ಎಂದು ನನಗೆ ಸಂದೇಹ. ದಯವಿಟ್ಟು ಇನ್ನೊಮ್ಮೆ ಅವೆಲ್ಲವನ್ನು ಓದಿ ನೋಡಬೇಕಾಗಿ ಕೇಳಿಕೊಳ್ಳುತ್ತೇನೆ.

ಆ ಎಲ್ಲ ಬರಹಗಳ ಸಾರಾಂಶ ಇಷ್ಟೇ- 'ವಿದ್ಯೆ, ವಿಜ್ಞಾನ, ನಾಗರಿಕತೆ ಇವೆಗಳೆಲ್ಲವೂ ಪಾಪ, ಮಾನವ ಜನಾಂಗದ ದುರವಸ್ಥೆಗೆ ಇವೇ ಮೂಲ ಕಾರಣ. ಆದ್ದರಿಂದ ಮತ್ತೆ ಶಿಲಾಯುಗದ ಗುಹೆಗಳಿಗೆ ಮರಳಿ ಹೋಗುವುದೇ ಒಳಿತು' ಎಂಬುದೊಂದು- 'ಪ್ರತಿ ಕುಟುಂಬಕ್ಕೂ ಎರಡೆಕರೆ ಜಮೀನಿರಬೇಕು ಆಗ ಸಮೃದ್ಧಿ-ಸಂತೋಷದಾಯವಾಗುತ್ತದೆ' ಎಂಬ ಹುಚ್ಚು ಕನಸು ಇನ್ನೊಂದು- ಅದಿ ಮಾನವರ ಆವೃತ್ತಿ. ಮಹತ್ವಾಕಾಂಕ್ಷೆಯೇ ವಿದ್ಯೆ-ವಿಜ್ಞಾನದ ಬೆಳವಣಿಗೆಗೆ ಮೂಲ ಕಾರಣ ಎಂಬುದರ ಅರಿವು ಇಲ್ಲ. ಭಾರತವನ್ನು ಮಾತ್ರ ತೆಗೆದುಕೊಂಡರೂ ೬೦ ಕೋಟಿ ಜನಕ್ಕೆ ೩೦ ಕೋಟಿ ಎಕರೆ ಎಲ್ಲಿಂದ ತರುವುದು ಎಂಬುದರ ಪರಿವೆ ಇಲ್ಲ (ಜನಸಂಖ್ಯೆ ಬೆಳೆಯುತ್ತೆ. ಜಮೀನು?) ನಾಲ್ಕೈದು ಭಾಗಗಳಲ್ಲಿ ಹರಿದ ಪ್ರಾಸಾನುಪ್ರಾಸಗಳ- ಹೇಳಿದ್ದನ್ನೇ ಹೇಳುವ ಅಸಂಗತ ಶಬ್ದಜಾಲಗಳು ಇವೆರಡೇ ವಿಷಯಗಳ ಸುತ್ತ ಹೊರಳಾಡುತ್ತವೆ. ಇವೆರಡು ಮಾತು ಹೇಳಲು ಇಷ್ಟೊಂದು ಶಬ್ದಗಳ ದುಂದು ವೆಚ್ಚ ಪಾಪವಲ್ಲವೆ? ಮತ್ತು ಅದನ್ನು ಆತ ಇಷ್ಟೊಂದು ತಿರಸ್ಕರಿಸುವ ವಿದ್ಯೆಯ, ಪತ್ರಿಕೆಗಳ ಮೂಲಕ ಹೇಳಹೊರಟಿರುವುದು ಉಚಿತವೆ? ಆತ ಹೇಳುವ 'ಇರುವೆ ಜೇನುಗಳಲ್ಲಿ [ಶೋಷಣೆ ಇಲ್ಲ' ಎಂಬ ಒಂದು ಮಾತೇ ಪ್ರಾಥಮಿಕ ಜ್ಞಾನವೂ ಇಲ್ಲದ ಅಪ್ರಬುದ್ಧತೆಯನ್ನು ಸಾರುತ್ತಿರುವಾಗ ಉಳಿದವಕ್ಕೆ ಉತ್ತರ ವ್ಯರ್ಥ. ಗುಹಾವಾಸಿಗಳೂ ಹೆಣ್ಣು ಗಂಡಿಗಾಗಿ- ಮೂಳೆ ಚೂರಿಗಾಗಿ ನಾಯಿಗಳಂತೆ ಕಚ್ಚಾಡುತ್ತಿದ್ದರೆಂದೂ ಆತಗೆ ಗೊತ್ತಿರಲಿಕ್ಕಿಲ್ಲ. ಏನೇ ಇರಲಿ, ಆ ವ್ಯಕ್ತಿಗೆ ಈ ನಾಗರಿಕತೆ ಬೇಡವಾದ್ದರಿಂದ- ಆ ಬರಹವನ್ನು ಮೆಚ್ಚಿದವರನ್ನು ಕರೆದುಕೊಂಡು ಅಲ್ಲಿಗೇ ಆತ ವಾಪಸ್ ಹೋಗುವುದು; ಅವರಿಗೂ ಒಳಿತು ನಮಗೂ ಒಳಿತು. ಇನ್ನಾದರೂ 'ಕಸ್ತೂರಿ'ಯಂತಹ ಪತ್ರಿಕೆಯಲ್ಲಿ ಇಂತಹ ಅವ್ಯವಹಾರಿಕ 'ಅಸಂಬದ್ಧ ಪ್ರಲಾಪ'ಗಳಿಗೆ ದಯವಿಟ್ಟು ಅವಕಾಶ ಕೊಡಬೇಡಿ ಎಂದು ಕೇಳಿಕೊಳ್ಳುತ್ತೇನೆ.

ಸಾಗರ -ಕೆ. ಎಚ್. ಸುಭದ್ರಾ.

ಜೀನ್

ಜನವರಿಯ ಕಸ್ತೂರಿಯಲ್ಲಿ ರಾಜಗೋಪಾಲ ಮತ್ತು ಕೃಷ್ಣಪ್ರಸಾದರವರ "ಜೀನ್"ನ ಕುರಿತಾದ ಲೇಖನವು ನವೀನ ವಿಚಾರಗಳಿಂದ ಒಳಗೊಂಡಿದ್ದು ಆಶ್ಚರ್ಯಕರ ಕಲ್ಪನಾಲೋಕದಲ್ಲಿ ವಿಹರಿಸಿತು. ಅವರ ಕನಸುಗಳು ಬರುವ ಶತಮಾನದಲ್ಲಿ ಖಂಡಿತ ನನಸಾಗಬಹುದೆಂದು ನನ್ನ ಅನಿಸಿಕೆ. ಅದೃಷ್ಟದ ಆಟ ಎಂಬ ಅನುಭವ ಘಟನೆ ಹೃದಯವನ್ನು ಕಲಕುವಂತಿತ್ತು.

ಉಡುಪಿ ಮಾಲಾ



ಕಸ್ತೂರಿ

ಸಂಚಿಕೆ : ೬ ಕಸ್ತೂರಿ, ಫೆಬ್ರುವರಿ ೧೯೭೭ ವರ್ಷ : ೨೧

ನಿಷ್ಪ್ರಯೋಜಕ ಅಲ್ಪಸಿದ್ಧಿಗಳು

ಆಧ್ಯಾತ್ಮಿಕ ಜಗತ್ತಿನಲ್ಲಿ ಕ್ಷುದ್ರ ಶಕ್ತಿಸಿದ್ಧಿಗಳನ್ನು ಪಡೆಯುವುದು ತುಚ್ಛವಾದುದು, ಹೇಯವಾದುದು ಸಾಮಾನ್ಯವಾದುದು ಎಂದು ಶ್ರೀ ರಾಮಕೃಷ್ಣ ಪರಮಹಂಸರು ನಾನಾ ಕಥೆಗಳ ಮೂಲಕ ತಮ್ಮ ಶಿಷ್ಯರಿಗೆ ಬೋಧಿಸುತ್ತಿದ್ದರು. ಒಂದಿನ ಅವರು ಶಿಷ್ಯರೊಂದಿಗೆ ಸುಖಸಂಕಥಾ ವಿನೋದದಲ್ಲಿದ್ದಾಗ ಈ ಕೆಳಗಿನ ಕಥೆಯನ್ನು ಹೇಳಿದರು:

"ಒಬ್ಬ ಯೋಗಿ ಯೋಗಸಾಧನೆಯಿಂದ ವಾಕ್‌ಸಿದ್ಧಿ ಪಡೆದಿದ್ದನು. ಯಾರಿಗೆ ಏನಾದರೂ ಅಂದರೆ ತತ್ಕ್ಷಣ ಫಲಿಸುತ್ತಿತ್ತು. ಯಾರಿಗಾದರೂ 'ನೀನು ಸಾಯಿ' ಎಂದರೆ ಅವರು ಸತ್ತೇ ಹೋಗುತ್ತಿದ್ದರು. ಇನ್ನೊಮ್ಮೆ 'ನೀನು ಜೀವಂತನಾಗು' ಎಂದರೆ ಕೂಡಲೆ ಅವನು ಜೀವಂತನಾಗುತ್ತಿದ್ದನು.

"ಒಂದು ದಿನ ಆ ಯೋಗಿ ದಾರಿಯಲ್ಲಿ ಒಬ್ಬ ಸಾಧುವನ್ನು ಕಂಡನು. ಆ ಸಾಧುವು ಯಾವಾಗಲೂ ಈಶ್ವರ ಸ್ಮರಣೆಮಾಡುತ್ತಿದ್ದನು. ಆ ಸ್ಥಳದಲ್ಲಿ ಆತನು ಬಹುಕಾಲದಿಂದ ತಪಸ್ಸು ಮಾಡುತ್ತಿದ್ದಾನೆಯೇ ಎಂದು ಈ ಯೋಗಿ ಕೇಳಿದನು. ಇಷ್ಟೆಲ್ಲ ತಿಳಿದ ಆ ಅಹಂಕಾರಿ ಯೋಗಿಯು ಆ ಸಾಧುವಿನ ಬಳಿಗೆ ಬಂದು, 'ಇಷ್ಟು ದಿನ ನೀನು ಭಗವಾನ್ ಭಗವಾನ್' ಎಂದು ನಾಮಸ್ಮರಣೆ ಮಾಡುತ್ತಿರುವೆಯಲ್ಲ, ಅದರಿಂದ ನಿನಗೇನಾದರೂ ಲಾಭವಾಯಿತೇ?' ಎಂದು ವಿಚಾರಿಸಿದನು. ಆ ಸಾಧುವಿನ ಉತ್ತರ ಹೀಗಿತ್ತು. 'ಲಾಭವಾಗುವುದೇನು? ಹೇಳಿ, ಈಶ್ವರನನ್ನು ಪಡೆಯಬೇಕೆಂಬ ಇಚ್ಛೆಯು ಹೊರತು, ಬೇರೆ ಕಾಮನೆ ಏನೂ ನನಗಿಲ್ಲ. ಆದರೆ ಆತನನ್ನು ಪಡೆಯಬೇಕಾದರೆ ಆತನ ಕೃಪೆಯಿಂದಲೇ ಆಗಬೇಕು. ಆದ್ದರಿಂದಲೇ ಇಲ್ಲಿಯೇ ಬಿದ್ದುಕೊಂಡು ಆತನನ್ನು ಸ್ಮರಿಸುತ್ತ ಇದ್ದೇನೆ. ನಾನು ದೀನನಾಗಿದ್ದೇನೆ, ಜಿನನಾಗಿದ್ದೇನೆ ಎಂದು ಆತನು ಒಂದು ದಿನ ಕೃಪೆದೋರಬಹುದು.'

"ಯೋಗಿ ಆತನ ಮಾತನ್ನು ಕೇಳಿ, 'ನಿನಗೇನೂ ಲಾಭವಾಗದ ಪಕ್ಷಕ್ಕೆ ವೃಥಾಶ್ರಮಪಡುವುದರಿಂದ ಏನು ಪ್ರಯೋಜನ? ಏನಾದರೂ ಪಡೆಯುವಂತೆ ಪ್ರಯತ್ನ ಮಾಡು,' ಎಂದನು. ಆ ಸಾಧುವು ಕೇಳಿ ಸ್ವಲ್ಪ ಹೊತ್ತು ಸುಮ್ಮನಿದ್ದು, ಆನಂತರ 'ಒಳ್ಳೆಯದು, ಮಹಾಶಯರೇ ನೀವು ಏನು ಪಡೆದಿದ್ದೀರಿ ಕೇಳಬಹುದೆ?' ಎಂದು ಪ್ರಶ್ನಿಸಿದನು. ಆಗ

ಆ ಯೋಗಿ 'ನಾನು ಪಡೆದುದು ಏನೆಂದು ಕೇಳುತ್ತೀಯಾ, ಇಗೋ ನೋಡು' ಎಂದು ಹೇಳಿ ಹತ್ತಿರದ ಮರಕ್ಕೆ ಕಟ್ಟಿದ್ದ ಒಂದು ಆನೆಯ ಸಮೀಪಕ್ಕೆ ಹೋಗಿ 'ಎಲೇ ಆನೆಯೆ ಸಾಯಿ' ಎಂದು ಅಬ್ಬರಿಸಿದ. ಕೂಡಲೆ ಆ ಆನೆಯು ಸತ್ತುಬಿದ್ದಿತು. ಆ ಯೋಗಿಯು ಅಹಂಕಾರದಿಂದ ಉಬ್ಬಿ, 'ನೋಡಿದೆಯಾ ಸಾಧುವೇ?' ಎಂದು ಕೇಳಿದನು. 'ಇನ್ನೊಮ್ಮೆ ನೋಡು' ಎಂದು 'ಎಲೆ ಆನೆಯೆ ಜೀವಂತವಾಗು' ಎಂದು ಕೂಗಿದೊಡನೆ ಆ ಆನೆಯು ಜೀವಂತವಾಗಿ ಎದ್ದು ನಿಂತಿತು. 'ನೋಡಿದೆಯೊ?' ಎಂದು ಯೋಗಿ ಪುನಃ ಕೇಳಿದನು. ಇಷ್ಟು ಹೊತ್ತು ಸುಮ್ಮನಿದ್ದ ಸಾಧುಭಕ್ತನು ಆ ಯೋಗಿಯನ್ನು ಕುರಿತು, 'ಇನ್ನೇನು ಕಂಡೆ, ಹೇಳಿ. ಒಮ್ಮೆ ಆನೆ ಸತ್ತುಹೋಯಿತು. ಇನ್ನೊಮ್ಮೆ ಜೀವಂತವಾಯಿತು. ಹೀಗೆ ಆನೆ ಸತ್ತು ಜೀವಂತವಾದುದರಿಂದ ನಿಮಗೇನು ಲಾಭ ಆಯಿತು? ಇಂಥ ಶಕ್ತಿ ಪಡೆದು ನೀವು ಜನನ-ಮರಣ ಬಂಧನದಿಂದ ಮುಕ್ತರಾಗಿದ್ದೀರಾ? ಜರಾವ್ಯಾಧಿಗಳು ನಿಮ್ಮನ್ನು ಬಿಟ್ಟು ತೊಲಗಿವೆಯೆ? ಅಥವಾ ನಿಮಗೆ ಅಖಂಡ ಸಚ್ಚಿದಾನಂದ ಸ್ವರೂಪದ ದರ್ಶನವಾಯಿತೆ?' ಎಂದು ಕೇಳಿದನು. ಯೋಗಿ ಅದಕ್ಕೆ ಮಾರುತ್ತರ ಕೊಡದೆ ಸುಮ್ಮನಾದನು. ಆತನಿಗೆ ಜ್ಞಾನೋದಯವಾಯಿತು."

•


ಶ್ರೀ ಪರಮಹಂಸರು ಹೇಳಿದ ಇನ್ನೊಂದು ಕಥೆ ಇಂತಿದೆ:–

ಒಬ್ಬನಿಗೆ ಇಬ್ಬರು ಪುತ್ರರು. ಹಿರಿಯನಾದವನು ವೈರಾಗ್ಯಶಾಲಿಯಾಗಿ ಯೌವನದಲ್ಲಿಯೆ ಸಂಸಾರತ್ಯಾಗ ಮಾಡಿ ಸಂನ್ಯಾಸಿಯಾಗಿ ಹೊರಟುಹೋದನು. ಚಿಕ್ಕವನು ಕಲಿತು ಪಂಡಿತನಾಗಿ ವಿವಾಹ ಮಾಡಿಕೊಂಡು ಸಂಸಾರದಲ್ಲಿ ನೆಮ್ಮದಿಯಿಂದಿದ್ದನು. ಹನ್ನೆರಡು ವರ್ಷಗಳ ನಂತರ ಅಣ್ಣನು ತಮ್ಮನ ಭೆಟ್ಟಿಗೆ ಬಂದಾಗ ಆತನು ಅಣ್ಣನನ್ನು ಸ್ವಾಗತಿಸಿ ಪರಿ ಪರಿ ರೀತಿಯಿಂದ ಉಪಚರಿಸಿದನು.

ಹಾಗೇ ಹರಟುತ್ತ ಕುಳಿತಿದ್ದಾಗ ತಮ್ಮ, 'ಅಣ್ಣಾ ಹನ್ನೆರಡು ವರ್ಷ ಸಂನ್ಯಾಸದಿಂದ ನೀನು ಏನನ್ನು ಸಾಧಿಸಿದಿ?' ಎಂದು ಕೇಳಿದ.

'ಬಾ, ತೋರಿಸುತ್ತೇನೆ' ಎಂದು ಅಣ್ಣನು ತಮ್ಮನನ್ನು ಮನೆ ಸಮೀಪದ ನದೀ ತೀರಕ್ಕೆ ಕರೆದುಕೊಂಡು ಹೋದನು. ಅಲ್ಲದೆ ನದಿ ಪ್ರವಾಹದ ಮೇಲೆ ನಡೆದುಕೊಂಡೇ ಆಚೆಯ ದಡ ಸೇರಿದನು ಮತ್ತು 'ಕಂಡೆಯಲ್ಲವೆ ನನಗೇನು ಲಾಭವಾಯಿತು ಎಂಬುದನ್ನು?' ಎಂದು ಕೂಗಿ ಕೇಳಿದನು. ಆಗ ತಮ್ಮನು ಅಲ್ಲಿಯೆ ಇದ್ದ ನಾವಿಕನಿಗೆ ಒಂದೂವರೆ ಕಾಸು ಕೊಟ್ಟು, ಆತನ ನಾವೆಯಲ್ಲಿ ಆಚೆಯ ದಡ ಸೇರಿ, ಅಣ್ಣನ ಬಳಿಗೆ ಹೋಗಿ ನಿಂತು, 'ನಾನು ಕಂಡದ್ದರಲ್ಲಿ ವೈಚಿತ್ರ್ಯವೇನಿದೆ. ನೀನು ನಡೆದುಕೊಂಡೇ ನದಿ ದಾಟಿದೆ. ನಾನು ಒಂದೂವರೆ ಕಾಸು ತೆತ್ತು ದಾಟಿದೆ. ಅಷ್ಟೆ; ನಿನ್ನ ಹನ್ನೆರಡು ವರ್ಷಗಳ ಸಾಧನೆಯ ಬೆಲೆ ಕೇವಲ ಒಂದೂವರೆ ಕಾಸು ಅಷ್ಟೆ' ಎಂದು ಸ್ಪಷ್ಟೋಕ್ತಿಯಿಂದ ಅಣ್ಣನಿಗೆ ಉತ್ತರಿಸಿದನು.

ಆಗ ಅಣ್ಣನು ತಮ್ಮನ ಮಾತಿನಿಂದ ಎಚ್ಚೆತ್ತವನಾಗಿ ಈಶ್ವರ ಸಾಕ್ಷಾತ್ಕಾರದಲ್ಲಿ ಮನಸ್ಸಿಟ್ಟನು. ✡



ಅರ್ಥದ್ರವ್ಯವನ್ನು ಅನರ್ಥಕಾರಿ ಎಂದು ತಿಳಿಯಬೇಕು; ಯಾಕೆಂದರೆ ಸಿರಿವಂತರಿಗೆ ತನ್ನ ಮಕ್ಕಳಿಂದಲೂ ಭೀತಿ ತಪ್ಪಿದ್ದಲ್ಲ.

–ಆದಿ ಶಂಕರಾಚಾರ್ಯರು



ವಿಜಯನಗರ
ಕೆಲ ದಂತಕಥೆಗಳು

ಟೇಕೂರು ಕೃಷ್ಣಮೂರ್ತಿ

ಸೌರಮ್ಯ ನಗರೀ ಮಹಾನ್ ಸನ್ನೃಪತಿ ಎಂಬ ಕವಿವಾಣಿಯಂತೆ ದೇದೀಪ್ಯಮಾನವಾಗಿ ಬೆಳಗಿದ ವಿಜಯನಗರ ಪಟ್ಟಣದ ಕುರಿತು ಅನೇಕಾನೇಕ ದಂತಕಥೆಗಳು ಪ್ರಚಲಿತವಾಗಿವೆ. ಅವು ನಮ್ಮ ಸಂಸ್ಕೃತಿಗೆ ಅನುಗುಣವಾಗಿವೆ. ಅಲ್ಲದೆ ಬಹು ರಂಜಕವಾಗಿಯೂ ಇವೆ. ಇವುಗಳನ್ನು ಅರಿತಿರುವದೇ ಒಂದು ರೀತಿಯ ಹೆಮ್ಮೆ ಎಂದು ಹೇಳಬಹುದು. ಇವೆಲ್ಲಿಯೂ ಗ್ರಂಥಸ್ಥವಾಗಿರದಿದ್ದರೂ ಜನರ ಬಾಯಿಂದ ಬಾಯಿಗೆ ಪ್ರಚಾರ ಹೊಂದುತ್ತಲೇ ಇರುತ್ತವೆ.

ವಿಜಯನಗರ ಸಾಮ್ರಾಜ್ಯವು ಕ್ರಿ. ಶ. ೧೩೩೬ ರಿಂದ ೧೫೬೫ ರ ವರೆಗೆ ಉಜ್ವಲವಾಗಿ ಬೆಳಗಿತು. ಸಾಮ್ರಾಜ್ಯದ ಉದಯಾಸ್ತಮಾನಗಳು ಸ್ವಾಭಾವಿಕ ಎಂದು ಹೇಳಬಹುದಾದರೂ ಶ್ರೀ ವಿದ್ಯಾರಣ್ಯರಿಂದ ಪ್ರತಿಷ್ಠಿತವಾದ ಈ ಸಾಮ್ರಾಜ್ಯವು ಅಲ್ಪಕಾಲ ಮಾತ್ರ ಮೆರೆದು ಅವನತಿ ಹೊಂದಿದುದು ಶೋಚನೀಯವಾದುದು. ಈ ವಿಷಯದಲ್ಲಿ ದಂತಕಥೆ ಹೀಗಿದೆ:

ನಾಯಿಗಳನ್ನು ಮೊಲಗಳು ಬೆನ್ನಟ್ಟಿದ ಸ್ಥಳದಲ್ಲಿ ವಿಜಯನಗರದ ಶಂಕುಸ್ಥಾಪನೆ ಮಾಡಬೇಕು ಎಂದು ಸ್ಥಳ ನಿರ್ದೇಶನ ಮಾಡಿದ ಶ್ರೀ ವಿದ್ಯಾರಣ್ಯರು ಹಕ್ಕ ಬುಕ್ಕರಿಗೆ ಶಂಕುಸ್ಥಾಪನೆಯ ಮುಹೂರ್ತವನ್ನೂ ತಿಳಿಸಿದ್ದರು. ಆ ಮುಹೂರ್ತಕ್ಕೆ ಸರಿಯಾಗಿ ತಮ್ಮ ಕಡೆಯಿಂದ ಶಂಖಧ್ವನಿ ಕೇಳಿಬರುವದಾಗಿಯೂ ಕೂಡಲೇ ಈ ರಾಜಕುಮಾರರು ಶಾಸ್ತ್ರೋಕ್ತ ಶಂಕುಸ್ಥಾಪನೆ ಮಾಡಬೇಕೆಂದೂ ಅವರ ಆದೇಶವಿದ್ದಿತು.

ವಿದ್ಯಾರಣ್ಯರ ಈ ಏರ್ಪಾಡನ್ನು ತಿಳಿದು ದೇವೇಂದ್ರನಿಗೆ ವಿಮಂಚನೆ ಉಂಟಾಯಿತಂತೆ. ವಿದ್ಯಾರಣ್ಯರು ಹೇಳಿದ ಮುಹೂರ್ತಕ್ಕೆ ಸರಿಯಾಗಿ ವಿಜಯನಗರದ ಶಂಕುಸ್ಥಾಪನೆ ನಡೆದಿದ್ದರೆ ಆ ಪಟ್ಟಣವು ದೇವೇಂದ್ರನ ಅಮರಾವತಿಗಿಂತಲೂ ಸಮೃದ್ಧವಾಗಿ ಬೆಳೆದು ಆಚಂದ್ರಾರ್ಕ ಬಾಳುವಂತಾಗುತ್ತಿತ್ತು. ಅದಕ್ಕೆಂದೇ ದೇವೇಂದ್ರನಿಗೆ ಹೊಟ್ಟೆಯುರಿ. ಏನಾದರೂ ಮಾಡಿ ಈ ಮುಹೂರ್ತ ತಪ್ಪಿಸಬೇಕೆಂದು ಆತ ನಿಶ್ಚಯಿಸಿದ. ದಾಸಯ್ಯನ ವೇಷದಲ್ಲಿ ಆ ಪ್ರದೇಶಕ್ಕೆ ಬಂದ ಮತ್ತು ಶಂಕುಸ್ಥಾಪನೆಯ ದಿನ ಮುಹೂರ್ತಕ್ಕೆ ಇನ್ನೂ ಕೆಲ ಗಳಿಗೆಗಳಿರುವಾಗಲೇ ತನ್ನ ಶಂಖ ಊದಿಬಿಟ್ಟ. ರಾಜಕುಮಾರರು ಆತುರದಲ್ಲಿ ರಾಜಧಾನಿಯ ಶಂಕುಸ್ಥಾಪನೆಯನ್ನು ವಿಧ್ಯುಕ್ತವಾಗಿ ನೆರವೇರಿಸಿಬಿಟ್ಟರು. ಅಷ್ಟರಲ್ಲಿ ಮತ್ತೊಮ್ಮೆ ಶಂಖಧ್ವನಿ ಕೇಳಿಬಂತು. ಅಷ್ಟೊತ್ತಿಗಾಗಲೇ ಶಂಕುಸ್ಥಾಪನೆಯ ಕಾರ್ಯ ಮುಗಿದು ಹೋಗಿತ್ತು. ಈ ಎರಡನೇ ಶಂಖಧ್ವನಿ ಎಲ್ಲಿಯದೆಂದು ರಾಜಕುಮಾರರು ಶೋಧ ಮಾಡಿಸಲಾಗಿ, ಅದೇ ನಿಜವಾಗಿ ಗುರುಗಳ ಆದೇಶದ ಶಂಖಧ್ವನಿ ಎಂದು ಕಂಡುಬಂತು. ಮುಹೂರ್ತ ತಪ್ಪಿ ರಾಜಧಾನಿಯ ಶಂಕುಸ್ಥಾಪನೆ ನಡೆದದ್ದರಿಂದ ಆ ಸಾಮ್ರಾಜ್ಯ ದೀರ್ಘಕಾಲ ಬಾಳಲಿಲ್ಲ ಎಂದು ಹೇಳಲಾಗುತ್ತಿದೆ.

ಹನ್ನೆರಡು ಚದರು ಮೈಲು ವಿಸ್ತೀರ್ಣವಾಗಿದ್ದ ವಿಜಯನಗರ ಪಟ್ಟಣ ಉಧ್ವಸ್ತವಾದ ರೀತಿ ಕೂಡ ವಿಚಿತ್ರವೇ ಎನ್ನಬಹುದು.

ತಾಳೀಕೋಟೆಯಲ್ಲಿ ರಾಮರಾಯನ ಪರಾಭವವಾದ ಕೂಡಲೇ ಯವನರ ಸೈನ್ಯ ಮಿಂಚಿನ ವೇಗದಿಂದ ಬಂದು ವಿಜಯನಗರವನ್ನು ಉಧ್ವಸ್ತಗೊಳಿಸಿತು. ಅಷ್ಟೇ ತ್ವರೆಯಲ್ಲಿ ವಿಜಯನಗರದ ನಾಗರಿಕರು ಪಟ್ಟಣವನ್ನು ತೆರವು ಮಾಡಿ ಹೋಗಿದ್ದರು. ಇಂಥ ಘಟನೆ ಪ್ರಪಂಚದಲ್ಲಿ ಇನ್ನೆಲ್ಲಿಯೂ ಕಂಡುಬರುವದಿಲ್ಲ. ವಿಧಿವಿಲಾಸದಿಂದ ಹಂಪೆ ಕೊಂಪೆಯಾಯಿತು.

ಯವನರು ವಿಜಯನಗರನವನ್ನು ಉಧ್ವಸ್ತಗೊಳಿಸಿದರು. ಆದರೂ ಅಲ್ಲಿ ಇನ್ನೂ ಕೆಲವು ದೇವಾಲಯಗಳು ಸ್ಮಾರಕಗಳು ಅಲ್ಲಿಯ ಕಲಾ ವೈಭವವನ್ನು ಸಾರುತ್ತ ನಿಂತುಕೊಂಡಿವೆ. ಇದಕ್ಕೂ ಒಂದು ಕಥೆಯಿದೆ:

ಯುದ್ಧವಿಜಯೋನ್ಮತ್ತ ಯವನ ಸೈನಿಕರು ವಿಜಯನಗರಕ್ಕೆ ಆಗಮಿಸಿ ದೇವಾಲಯಗಳ ವಿಧ್ವಂಸನ ಕಾರ್ಯದಲ್ಲಿ ತೊಡಗಿದ್ದರು. ಹಲವಾರು ದೇವಾಲಯಗಳು ನೆಲಸಮವಾದ ನಂತರ ಒಂದು ದೇವಾಲಯದೆದುರು ಯವನ ಸೈನಿಕರ ತಂಡವೊಂದು ಬಂದು ನಿಂತಿತು. ಅದರ ಮುಖ್ಯಸ್ಥ, "ಇದು ಯಾವ ದೇವಾಲಯ ನೋಡಿಕೊಂಡು ಬಾ" ಎಂದು ಸೈನಿಕನೊಬ್ಬನಿಗೆ ಆಜ್ಞಾಪಿಸಿದ. ಆತ ಒಳಗೆ ಹೋಗಿ ಬಂದು, "ಯೇ ಸುವ್ವರ ಕಾ ದೇವಲ ಹೈ" ಅಂದನಂತೆ, ಆ ನಾಯಕನಿಗೆ ಇದೇಕೋ ಅಪಶಕುನ ಎಂದೆನಿಸಿ, "ಬಸ್ ಛೋಡೊ" ಎಂದು ತನ್ನ ವಿಧ್ವಂಸನ ಕಾರ್ಯ ನಿಲ್ಲಿಸಿದನಂತೆ,

ಅದು ವರಾಹಸ್ವಾಮಿಯ ದೇವಾಲಯವಾಗಿತ್ತು. ಅಲ್ಲಿಂದ ಮುಂದೆ ಯಾವ ದೇವಾಲಯದ ವಿಧ್ವಂಸನವೂ ನಡೆಯಲಿಲ್ಲ. ಹೀಗಾಗಿ ವಿಜಯನಗರದಲ್ಲಿ ಕೆಲ ದೇವಾಲಯಗಳು ಆ ಯವನರ ಕಾಕದೃಷ್ಟಿಯಿಂದ ಉಳಿದುಕೊಂಡವು.

ವಿಜಯನಗರದಲ್ಲಿ ಮಾತಂಗ ಪರ್ವತ ಅತಿ ಎತ್ತರವಾದ ಪ್ರದೇಶ. ಅಲ್ಲಿಗೆ ಏರಿ ಹೋದರೆ ಸಮಗ್ರ ವಿಜಯನಗರದ ದರ್ಶನ ರಮಣೀಯವಾಗಿ ಕಂಗೊಳಿಸುತ್ತದೆ. ವೀರ ನರಪತಿ ಕೃಷ್ಣದೇವರಾಯನ ಆಳ್ವಿಕೆಯಲ್ಲಿ ಒಂದು ದಿನ ಕೃಷ್ಣರಾಯನು ರಾಜಬೀದಿಯಲ್ಲಿ ಸವಾರಿ ಹೊರಟಿದ್ದಾಗ ಎಲ್ಲರೂ ಮಾತಂಗ ಪರ್ವತದ ಕಡೆಗೇ ನೋಡುತ್ತಿದ್ದುದನ್ನು ಕಂಡ. ಕುತೂಹಲದಿಂದ ತಾನೂ ಅತ್ತ ನೋಡಿದ. ಆ ಬೆಟ್ಟದ ಮೇಲೆ ಒಬ್ಬ ಒಂದು ದೊಡ್ಡ ಗಡಿಗೆಯಿಂದ ತನ್ನ ತಲೆ ಮರೆಸಿಕೊಂಡು ನಿಂತದ್ದು ಕಂಡಿತು. ರಾಯನು ತನ್ನ ಆಳುಗಳನ್ನು ಕಳಿಸಿ ಆತನನ್ನು ಹಿಡಿದು ತರಿಸಿದ, ಆತ ಬಂದಕೂಡಲೆ ಮುಖದ ಮೇಲಿನ ಗಡಿಗೆಯನ್ನು ತೆಗೆದುಹಾಕಲು ಹೇಳಿದ, ಆತ ಒಪ್ಪಲಿಲ್ಲ. ಸೈನಿಕರು ಅದನ್ನು ತೆಗೆಯ ಹೋದರೆ ಆತ ಆ ಗಡಿಗೆಯ ಕಂಠವನ್ನು ಇನ್ನಷ್ಟು ಬಿಗಿಯಾಗಿ ಹಿಡಿದಿಡುತ್ತಿದ್ದ. ಕೋಪಗೊಂಡ ರಾಯ ತನ್ನ ಕೈಯಲ್ಲಿಯ ಬೆತ್ತದಿಂದ ಹೊಡೆದು ಆ ಗಡಿಗೆ ಒಡೆಯಲಾಗಿ ಕೂಡಲೆ ಅಟ್ಟಹಾಸದ ನಗು ಕೇಳಿ ಬಂತು. ಜೊತೆ ಶಬ್ದಗಳೂ! "ಮಹಾರಾಜಾ ನಾನೇನೂ ಬಂದು ನಿಮಗೆ ಮುಖ ತೋರಿಸಲಿಲ್ಲ, ನೀವಾಗಿಯೇ ಗಡಿಗೆ ಒಡೆದು ನನ್ನ ಮುಖ ನೋಡಿದಿರಿ. ನನ್ನ ತಪ್ಪೇನಿಲ್ಲ. ನನ್ನ ಶಿರಚ್ಛೇದ ಮಾಡಬೇಡಿರಿ" ಎಂದು ವಿಕಟಕವಿ ತೆನ್ನಾಲಿ ರಾಮಕೃಷ್ಣ ಮಹಾರಾಜನಿಗೆ ಅಲ್ಪುರೆಯುತ್ತಿದ್ದ.

ಮುನ್ನಾ ದಿನ ತೆನ್ನಾಲಿ ರಾಮಕೃಷ್ಣನ ಮೇಲೆ ಕೋಪಗೊಂಡಿದ್ದ ಮಹಾರಾಜರು, "ನಾಳೆ ನಿನ್ನ ಮುಖ ತೋರಿಸಿದರೆ ಶಿರಚ್ಛೇದ ಮಾಡಿಸುತ್ತೇನೆ," ಎಂದು ಆಜ್ಞಾಪಿಸಿದ್ದರಂತೆ. ಅದಕ್ಕೆ ತೆನ್ನಾಲಿ ಹೂಡಿದ್ದ ಆಟವಿದಾಗಿತ್ತು.

"ಕೊನೆಗೂ ನೀನೇ ಗೆದ್ದಿ ರಾಮಕೃಷ್ಣ," ಎಂದು ಮಹಾರಾಜರು ಆತನನ್ನು ಬರಮಾಡಿಕೊಂಡು ಸಂಭಾವನೆಯಿತ್ತು ಕಳಿಸಿದರಂತೆ. ವಿಜಯನಗರ ಕುರಿತು ಇಂಥ ಅನೇಕ ದಂತಕಥೆಗಳು ಪ್ರಚಲಿತವಿವೆ. ★



ಬಿಂದು ಬಿಂದುಗಳಿಂದ ಸಿಂಧು ನಿರ್ಮಿಸಿದ


ಶ್ರೀ ಬಿಂದೂರಾವ ದೇಸಾಯಿ

ದ. ಲ ಕೆರೂರ

ಉದ್ಯೋಗಿನಂ ಪುರುಷಸಿಂಹಂ ಉಪೈತಿ ಲಕ್ಷ್ಮೀ ಎಂಬ ಸೂಕ್ತಿಗೆ ಉದಾಹರಣೆಯಾಗಿದ್ದಾರೆ ಹುಬ್ಬಳ್ಳಿಯ ಉದ್ಯೋಗಪತಿ ಶ್ರೀ ಬಿಂದೂರಾವ ದೇಸಾಯಿ ಅವರು. ಕೊಪ್ಪಿಕರ ಬೀದಿಯಲ್ಲಿಯ ಅವರ ಮೂರಂತಸ್ತಿನ "ದೇಸಾಯಿ ಅ್ಯಂಡ್ ಕಂಪನಿ" ಅಂಗಡಿಯನ್ನು ಪ್ರವೇಶಿಸಿದಾಗ ಶ್ರೀ ಬಿಂದೂರಾಯರ ಉದ್ಯಮಶೀಲತೆ ಕಣ್ಣಿಗೆ ಕಟ್ಟದಿರದು. ಮುಚ್ಚಂಜೆಯ ಪ್ರಶಾಂತ ಸಮಯದಲ್ಲಿ ಅವರ ಆ ಅಂಗಡಿ ಪ್ರವೇಶಿಸಿ ದೊಡ್ಡ ರಾಯರಿದ್ದಾರೆಯೆ? ಎಂದು ಸಿಬ್ಬಂದಿಯವರನ್ನು ವಿಚಾರಿಸಿದರೆ, ಅವರು ಹಿಂದುಗಡೆ ಮೂಲೆಯಲ್ಲಿಯ ಕೋಣೆಯೊಂದರ ಕಡೆಗೆ ಕೈಮಾಡಿ ತೋರಿಸುತ್ತಾರೆ. ಆ ಕೋಣೆಯನ್ನು ಒಳಹೊಕ್ಕರೆ ಅಲ್ಲಿ ನೀಳಕಾಯದ ಗೌರವರ್ಣದ ವ್ಯಕ್ತಿಯೊಂದು ಕುರ್ಚಿಯಲ್ಲಿ ಮಂಡಿಸಿ ಕಾಗದಪತ್ರಗಳನ್ನು ನೋಡುವದರಲ್ಲಿ ತಲ್ಲೀನನಾಗಿರುವದು ಕಂಡು ಬರುತ್ತದೆ. ಶುಭ್ರ ಖಾದಿ ಧೋತರ ಶರ್ಟಿನಿಂದ ಭೂಷಿತವಾದ ಆ ವ್ಯಕ್ತಿಯನ್ನು ನೋಡಿದ ಕೂಡಲೆ ಗೌರವದಿಂದ ತಲೆಬಾಗಬೇಕು ಅನಿಸದಿರದು. ಅವರ ಹಿಂದುಗಡೆ ಅವರ ಖಾದೀಕೋಟು ಪರಿಶುಭ್ರ ಪ್ರಭಾವಳಿಯಂತೆ ಗೋಡೆಯನ್ನು ಅಲಂಕರಿಸಿರುತ್ತದೆ. 'ನಮಸ್ಕಾರ ರಾಯರಿಗೆ' ಅಂದರೆ ಅವರು ಮುಗುಳ್ನಗೆ ಸೂಸುತ್ತ ಪ್ರತಿ ನಮಸ್ಕರಿಸಿ ಎದುರಿನ ಕುರ್ಚಿಯಲ್ಲಿ ಮಂಡಿಸಲು ಹೇಳುತ್ತಾರೆ. ೪೦ ರ ಅಂಚಿನಲ್ಲಿರುವಂತೆ ಕಾಣುತ್ತಿರುವ ಈ ವ್ಯಕ್ತಿಯು ಇತ್ತೀಚೆಗೆ ೭೦ ನೇ ವರ್ಷದ ಉತ್ಸವವನ್ನು ಆಚರಿಸಿಕೊಂಡ ಬಿಂದೂರಾಯರೇ ಎಂದು ನಿಮಗೆ ಸಂದೇಹ ಉಂಟಾಗದಿರದು ಆದರೆ ಅದೇ ನಿಜ. ೪೦ ರಂತೆ ತೋರುವ ಆದರೆ ಇಪ್ಪತ್ತರ ಹರೆಯದ ಉತ್ಸಾಹ ಹೊಂದಿರುವ ಆ ವ್ಯಕ್ತಿಯೇ ೭೦ ರ ವರ್ಧಂತಿಯನ್ನಾಚರಿಸಿದ ಶ್ರೀ ಬಿಂದೂರಾಯರು. ಸತತೋದ್ಯೋಗದಲ್ಲಿಯೆ ಅವರ ಈ ಚಿರಯೌವನದ ರಹಸ್ಯ ಅಡಗಿದೆ ಎಂದರೆ ತಪ್ಪಾಗದು. ಶ್ರೀ ಬಿಂದೂರಾಯರು ಉದ್ದಿಮೆರಂಗದಲ್ಲಿ ಕಳೆದ ಹಲವರ್ಷಗಳಿಂದ ಪರಿಶ್ರಮಿಸುತ್ತ ಇಂದಿನ ಈ ಉಚ್ಚ ಸ್ಥಾನಕ್ಕೇರಿದರು ಎಂಬುದು ನಿಜವಿದ್ದರೂ ಅವರು ಉದ್ದಿಮೆರಂಗ ಪ್ರವೇಶಿಸಿದ್ದು ಒಂದು ರೀತಿಯ ಚಮತ್ಕಾರವೇ ಹೌದು. ಬೆಳಗಾವಿ ಜಿಲ್ಲೆಯ ಕೌಜಲಗಿ ದೇಸಗತಿಯ ಕಾರಭಾರಿಯಾಗಿದ್ದ ಶ್ರೀ ಆನಂದರಾವ ದೇಸಾಯರು ಬ್ರಿಟಿಶ್ ಅಧಿಕಾರಿಯೊಬ್ಬನನ್ನು ಖಂಡಿಸಿದ್ದರಿಂದ ಅಲ್ಲಿಂದ ಹೊರಬೀಳಬೇಕಾಗಿಬಂದು ತೇಗೂರು ಗ್ರಾಮದಲ್ಲಿ ನೆಲಸಬೇಕಾಯಿತು. ಈ ಸಂಕ್ರಮಣಾವಸ್ಥೆಯಲ್ಲಿಯೆ ಅಂದರೆ ೯೦೬ ರಲ್ಲಿ ಶ್ರೀ ಬಿಂದುರಾಯರ ಜನನ ಶ್ರೀ ಆನಂದರಾಯರು

ತೇಗೂರಲ್ಲಿ ೩-೪ ವರ್ಷ ವಾಸವಾಗಿದ್ದರು. ಹಿಂದೆ ಬೆಳಗಾವಿಯ ಶ್ರೀ ನಾನಾಭಾಯಿ ಬಾಯಿಸ್ (ಅಬಕಾರಿ ಕಾಂಟ್ರ್ಯಾಕ್ಟ್)ರಲ್ಲಿ ಅವರಿಗೆ ಕೆಲಸ ದೊರೆತು ಅವರನ್ನು ಧಾರವಾಡ ರಾಣೆಬೆನ್ನೂರಗಳ ಅಬಕಾರಿ ಕಂಟ್ರ್ಯಾಕ್ಟಿನ ಮೇಲ್ವಿಚಾರಣೆ ನೋಡಲೆಂದು ಧಾರವಾಡಕ್ಕೆ ಕಳಿಸಲಾಯಿತು. ೧೯೧೨ ರಲ್ಲಿ ಅಲ್ಲಿಂದ ಆನಂದರಾಯರನ್ನು ಹುಬ್ಬಳ್ಳಿಗೆ ವರ್ಗಾಯಿಸಲಾಯಿತು. ಬಿಂದೂರಾಯರಿಗೆ ರಾಷ್ಟ್ರೀಯತ್ವದ ದೀಕ್ಷೆ ದೊರೆತದ್ದು ಹುಬ್ಬಳ್ಳಿಗೆ ಬಂದ ಕೂಡಲೆ. ಗಾಂಧೀಜಿಯವರ ಕರೆಗೆ ಓಗೊಟ್ಟು ರಾಷ್ಟ್ರೀಯ ವಿದ್ಯಾಲಯ ಸೇರಿದರು. ಮೂರು ವರ್ಷ ಚಹಾಪಾನ ನಿಷೇಧ. ರಾಷ್ಟ್ರೀಯ ವಿದ್ಯಾಲಯ ಅನಿವಾರ್ಯವಾಗಿ ಮುಚ್ಚಿದ್ದರಿಂದ ನ್ಯೂ ಇಂಗ್ಲಿಷ್ ಸ್ಕೂಲಿನಿಂದ ೧೯೨೫ ರಲ್ಲಿ ಮ್ಯಾಟ್ರಿಕ್ ಉತ್ತೀರ್ಣರಾದರು. ಜೊತೆಗೆ ನಿತ್ಯ ವ್ಯಾಯಾಮದಿಂದ ದೈಹಿಕ ಸಾಮರ್ಥ್ಯವನ್ನೂ ಬೆಳೆಸಿಕೊಂಡಿದ್ದರು.

ಬಿಂದೂರಾಯರ ವಾಚನಾಭಿರುಚಿಯೂ ಅಗಾಧವಾದುದು. ಮ್ಯಾಟ್ರಿಕ್ ಪಾಸಾಗುವ ಹೊತ್ತಿಗೇ ಸರಸ್ವತಿ ವಿದ್ಯಾರಣ್ಯ ವಾಚನಾಲಯದೊಳಗಿನ ಎಲ್ಲ ಪುಸ್ತಕಗಳನ್ನು ಓದಿ ಮುಗಿಸಿದ್ದರಂತೆ. ಇಷ್ಟೊಂದು ಓದಿದ ಅವರು ಅ. ನ. ಕೃ. ಅವರಂತೆ ಸಾಹಿತಿಗಳಾಗಬೇಕು ಎಂದು ಹಂಬಲಿಸಿದ್ದರೆ ಅಚ್ಚರಿಯೇನಲ್ಲ. 'ಆನಂದಲಹರಿ' 'ಆನಂದ ತುಷಾರ' ಎಂಬೆರಡು ಹಾಸ್ಯ ಚುಟುಕಿಗಳ ಪುಸ್ತಕಗಳನ್ನು ಪ್ರಕಟಿಸಿದ್ದರು. ಇವರ ಚುಟುಕವೊಂದನ್ನು ಖ್ಯಾತ ನಾಟಕಕಾರ ದಿ. ಗರೂಡ ಸದಾಶಿವರಾಯರು ಉಪಯೋಗಿಸಿಕೊಂಡಾಗ ಬಿಂದೂರಾಯರು ಪ್ರತಿಭಟಿಸಿದರು. ಪರಿಣಾಮವಾಗಿ ಗರೂಡರ ನಾಟಕ ಕಂಪನಿ ಹುಬ್ಬಳ್ಳಿಗೆ ಬಂದಾಗಲೆಲ್ಲ ಇವರಿಗೆ ಅಲ್ಲಿ ಉಚಿತ ಪ್ರವೇಶ.



ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಉತ್ತೀರ್ಣರಾದ ಶ್ರೀ ಬಿಂದೂರಾಯರು ಎಚ್ ಓ ಓದುವ ಹವ್ಯಾಸ ಹೊಂದಿದ್ದರು. ರೇಲ್ವೆಯಲ್ಲಿ ತಿಂಗಳೊಂದಕ್ಕೆ ೧೭ ರೂ.ಯ ಕಾರಕೂನನ ಕೆಲಸ ದೊರೆತಿದ್ದರೂ ಬೆಳಗಾವಿ ಕೋರ್ಟಿನಲ್ಲಿ ತಿಂಗಳೊಂದಕ್ಕೆ ೪೦ ರೂಪಾಯಿಗಳ ಕಾರಕೂನ ಕೆಲಸಕ್ಕೆ ಸೇರಿಕೊಳ್ಳುವ ಮನಸ್ಸು ಮಾಡಿದರು. ಅದೂ ಬಾಯಿಸ್‌ರವರ ಮನವೊಲಿಕೆಯ ಪರಿಣಾಮವಾಗಿ. ಅಲ್ಲಿಯೂ ಅವರಿಗೆ ಕೆಲಸದಲ್ಲಿ ಆಸಕ್ತಿ ಹುಟ್ಟಲಿಲ್ಲ. ಹುಬ್ಬಳ್ಳಿಗೆ ಹಿಂತಿರುಗಿದರು. ಆದರೆ ಶ್ರೀ ಬಾಯಿಸ್‌ರು ಬಿಂದೂರಾಯರಂಥ ಉತ್ಸಾಹಿ ತರುಣನನ್ನು ಹಾಗೇ ಬಿಡಲಿಲ್ಲ. ತಮ್ಮ ಗದಗಿನ ಶಾಖೆಯ ಮ್ಯಾನೇಜರನ್ನಾಗಿ ನೇಮಿಸಿದರು. ಅಲ್ಲಿ ಎರಡು ವರ್ಷ. ಮುಂದೆ ಬಾಗಲಕೋಟೆ, ಹುನಗುಂದ, ಇಳ-

[illegible]ಲ್ಲಿ ಕೆಲಸಮಾಡಿ ೧೯೨೮ ರಲ್ಲಿ ತಂದೆ ಆನಂದರಾಯರು ನಿಧನಹೊಂದಿದ್ದರಿಂದ ಹುಬ್ಬಳ್ಳಿಗೆ ಹಿಂತಿರುಗಿದರು.

ಶ್ರೀ ಬಾಯಿಸರು ಶ್ರೀ ಬಿಂದೂರಾಯರಿಗೆ ಅವರ ತಂದೆಯ ಕೆಲಸವನ್ನೇ ನೀಡಿ ಗದಗ, ಬಳ್ಳಾರಿ ಕರ್ನೂಲ ಶಾಖೆಗಳ ಮೇಲ್ವಿಚಾರಣೆಯನ್ನೂ ವಹಿಸಿಕೊಟ್ಟು ತಿಂಗಳಿಗೆ ೨೫೦ ರೂ. ಗಳ ವೇತನ ಗೊತ್ತುಪಡಿಸಿದರು. ಈ ರೀತಿ ಆರ್ಥಿಕ ಅನುಕೂಲತೆ ಒದಗಿಬಂದರೂ ಸಾತ್ವಿಕರಾದ ಶ್ರೀ ಬಿಂದೂರಾಯರಿಗೆ ಸಿಂಧಿ ಕಾಂಟ್ರಾಕ್ಟರರ ಜೊತೆಗೆ ಕೆಲಸಮಾಡುವದು ರುಚಿಸುತ್ತಿರಲಿಲ್ಲ. ಅಂಥದರಲ್ಲಿಯೆ ಇನ್ನೊಂದು ಅಪ್ರಿಯ ಘಟನೆ ನಡೆಯಿತು. ಶ್ರೀ ಬಾಯಿಸ್ ಅವರು ಕರ್ನೂಲ ಜಿಲ್ಲೆಯ ಅಬಕಾರಿ ಕಾಂಟ್ರಾಕ್ಟನ್ನು ಜಿದ್ದಿಗೆಬಿದ್ದು ಹಿಡಿದಿದ್ದರು. ಆ ವ್ಯವಹಾರದಿಂದ ಆ ವರ್ಷದಲ್ಲಿ ಅವರಿಗೆ ೮೦೦೦೦ ರೂ.ಗಳ ಹಾನಿ ಸಂಭವಿಸುವ ಭೀತಿ ಇದ್ದಿತು. ದಕ್ಷ ಮೇಲ್ವಿಚಾರಣೆ ನಡೆಸಿ ಕೆಲಸಗಾರರನ್ನು ಹತೋಟಿಯಲ್ಲಿಟ್ಟುಕೊಂಡರೆ ಹಾನಿ ಕಡಿಮೆ ಆಗಬಹುದಿತ್ತು. ಆದರೆ ಆ ಕೆಲಸಕ್ಕೆ ಕಂಪನಿಯಲ್ಲಿ ಯಾರೂ ಮುಂದಾಗಲಿಲ್ಲ. ಆಗ ಬಾಯಿಸರು ಶ್ರೀ ಬಿಂದೂರಾಯರನ್ನೇ ಹಿಡಿದು ಅವರಿಗೆ ಕಂಪನಿಯಲ್ಲಿ ಪಾಲನ್ನೂ ಹಾನಿ ಕಡಿಮೆಯಾದುದರಲ್ಲಿ ಕಾಲುಪಾಲನ್ನೂ ಕೊಡುವದಾಗಿ ಹೇಳಿ ಹುರಿದುಂಬಿಸಿ ಕರ್ನೂಲಿಗೆ ಕಳಿಸಿದರು. ಶ್ರೀ ಬಿಂದೂರಾಯರ ಕಷ್ಟಸಹಿಷ್ಣುತೆ, ದಕ್ಷತೆ, ಪ್ರಾಮಾಣಿಕತೆಗಳ ಫಲವಾಗಿ ಕರ್ನೂಲ ಜಿಲ್ಲೆಯ ಆ ಕಂಟ್ರಾಕ್ಟಿನಲ್ಲಿ ಆ ವರ್ಷ ಬಾಯಿಸರಿಗೆ ಯಾವ ಹಾನಿಯೂ ತಟ್ಟಲಿಲ್ಲ. ಅಷ್ಟೇ ಅಲ್ಲ ೮೦೦೦ ರೂ.ಗಳ ಲಾಭ ದೊರೆಯಿತು. ಆದರೆ ಬಾಯಿಸ್ ಕಂಪನಿಯವರು ತಮ್ಮ ವಚನಕ್ಕೆ ತಕ್ಕಂತೆ ನಡೆಯಲಿಲ್ಲ. ಶ್ರೀ ಬಿಂದೂರಾಯರು ಸ್ವತಂತ್ರ ಉದ್ಯಮ ಪ್ರಾರಂಭಿಸುವ ದೃಢನಿರ್ಧಾರ ಕೈಕೊಂಡರು.

ವಿಮಾ ವ್ಯವಹಾರದಲ್ಲಿ ಪ್ರಗತಿ ಸಾಧಿಸಿ ಕೂಡಿಟ್ಟ ಬಂಡವಾಳದಿಂದ ೧೯೩೯ ರ ಜನವರಿ ೧ ರಂದು ಸ್ವತಂತ್ರ ಉದ್ಯಮ ಪ್ರಾರಂಭಿಸಿದರು. ಬಾಯಿಸ್ ಕಂಪನಿಗೆ ಕೆಲ ತಿಂಗಳ ಹಿಂದೆಯೆ ರಾಜೀನಾಮೆ ಸಲ್ಲಿಸಿದ್ದ ಬಿಂದೂರಾಯರನ್ನು ಬಾಯಿಸ್ ಕಂಪನಿ ಬಿಡಲೊಪ್ಪದೆ, ಇವರು ಕೆಲಸ ಬಿಟ್ಟುಕೊಟ್ಟರೂ ಇವರ ಹೆಸರನ್ನು ತಮ್ಮ ವೇತನ ಪುಸ್ತಕದಲ್ಲಿ ಇಟ್ಟು ಪ್ರತಿ ವರ್ಷ ೨೦೦೦ ರೂ.ಗಳಂತೆ ಇವರಿಗೆ ಗೌರವಧನ ಸಲ್ಲಿಸುತ್ತ ಬಂದಿತು. ೧೯೪೮ ರಲ್ಲಿ ಪಾನಪ್ರತಿಬಂಧ ಜಾರಿಯಲ್ಲಿ ಬರುವವರೆಗೂ ಈ ಕ್ರಮ ಜಾರಿಯಲ್ಲಿತ್ತು.

ಶ್ರೀ ಬಿಂದೂರಾಯರು ಪೆಟ್ರೋಲ ಏಜನ್ಸಿ ಪಡೆಯಬೇಕೆಂದರೂ ಕಾರು-ಟ್ರಕ್ಕುಗಳ ಏಜನ್ಸಿ ಇಲ್ಲದವರಿಗೆ ಅದು ದೊರೆಯುವಂತಿದ್ದಿಲ್ಲವಾದ್ದರಿಂದ ಇವರು ಮುಂಬಯಿಯಲ್ಲಿ ಪ್ರಯತ್ನಿಸಿ ಟ್ರ್ಯಾಂಗುಲರ್ ಮೋಟರ ಕಂಪನಿಯ ಏಜನ್ಸಿ ಪಡೆದುಕೊಂಡು ಬಂದರು. ವೂಲ್ಸ್ಲೇ ಸ್ಟ್ಯಾಂಡರ್ಡ್, ಬೆಡ್‌ಫೋರ್ಡ್ ವಾಹನಗಳನ್ನು ಈ ಕಂಪನಿ ಒದಗಿಸುತ್ತಿತ್ತು.

ಜೊತೆಗೆ ಬಿಡಿಭಾಗಗಳ ಪೂರೈಕೆಯ ಏಜನ್ಸಿಯೂ ದೊರೆತದ್ದರಿಂದ ಶ್ರೀ ಬಿಂದೂರಾಯರ ಉದ್ಯಮಕ್ಕೆ ಬಲ ಬಂದಂತಾಯಿತು. ನಿಯಂತ್ರಿತ ದರದಿಂದ ವಾಹನಗಳನ್ನು ಒದಗಿಸುವ ಖ್ಯಾತಿಯನ್ನು ಬಿಂದೂರಾಯರು ಕಾಪಾಡಿಕೊಂಡು ಬಂದದ್ದರಿಂದ ಇವರ ವ್ಯವಹಾರದಲ್ಲಿ ಕ್ಷಿಪ್ರ ಪ್ರಗತಿ ಅಭಿವೃದ್ಧಿ ಕೂಡ ಬಂದವು. ಇವರ ಈ ಪ್ರಾಮಾಣಿಕತೆಯ ಕೀರ್ತಿ ಎಲ್ಲಿಯವರೆಗೆ ಹಬ್ಬಿತ್ತೆಂದರೆ ಕಾಬೂಲು, ಲಖನೌ, ಮದ್ರಾಸ, ಸೇಲಂಗಳಿಂದ ಇವರ ಕಂಪನಿಗೆ ಬೇಡಿಕೆಗಳು ಬರುತ್ತಿದ್ದವು.

ಆಗಿನ ಕಾಲಕ್ಕೆ ಕೂಡ ಕಾರುಗಳ ಕಳ್ಳ ಮಾರಾಟ ನಡೆಯುತ್ತಿದ್ದವು. ಇವರಲ್ಲಿ ನಿಯಂತ್ರಿತ ದರಕ್ಕೆ ಕೊಂಡ ಕಾರುಗಳನ್ನು ಅಧಿಕ ಬೆಲೆಗೆ ಇತರರಿಗೆ ಮಾರಿ ಮತ್ತೆ ಇವರ ಕಡೆಗೆ ನಿಯಂತ್ರಿತ ದರದಲ್ಲಿ ಕಾರು ಕೊಳ್ಳಲು ಬರುತ್ತಿದ್ದರು. ಇಂಥವರನ್ನು ಬಿಂದೂರಾಯರು ತಮ್ಮಿಂದ ಬಹು ದೂರ ಇಡುತ್ತಿದ್ದರು. ಅವರಿಗೆ ಕಾರುಗಳನ್ನೇ ಕೊಡುತ್ತಿರಲಿಲ್ಲ ಹೀಗೆ ತಿರಸ್ಕರಿಸಲ್ಪಟ್ಟವರಲ್ಲಿ ಸವಣೂರಿನ

ನವಾಬರೂ ಒಬ್ಬರು. ಬಿಂದೂರಾಯರ ಪ್ರಾಮಾಣಿಕತೆಗೆ ಇದಕ್ಕಿಂತ ಬೇರೆ ಉದಾಹರಣೆ ಬೇಕಿಲ್ಲ.

ಹೀಗೆ ಸುಸಂಸ್ಕೃತತೆಯಿಂದ ಪ್ರಾಮಾಣಿಕತನದಿಂದ ಪನ್ನೆರಡು ವರ್ಷ ತಮ್ಮ ಈ ಉದ್ಯಮ ನಡೆಸಿಕೊಂಡು ಬೆಳೆಸಿಕೊಂಡು ಬಂದ ಶ್ರೀ ಬಿಂದೂರಾಯರಿಗೆ ಕಮಾನಿ ಇಂಜನಿಯರಿಂಗ್ ಕಂಪನಿಯು ೧೯೫೦ ರಲ್ಲಿ ಫರ್ಗ್ಯುಸನ್ ಟ್ರ್ಯಾಕ್ಟರುಗಳ ಏಜನ್ಸಿ ದಯಪಾಲಿಸಿತು. ಯಾವ ಕೆಲಸವನ್ನೇ ಆಗಲಿ ಮನಮುಟ್ಟಿ ಮಾಡುವ ಸ್ವಭಾವದ ಬಿಂದೂರಾಯರು ಟ್ರ್ಯಾಕ್ಟರುಗಳ ಪ್ರಾತ್ಯಕ್ಷಿಕೆಗಳನ್ನು ನಾನಾ ಸ್ಥಳಗಳಲ್ಲಿ ಏರ್ಪಡಿಸಿ ಅವನ್ನು ಜನಪ್ರಿಯ ಮಾಡಲು ಹೆಣಗಿದರು. ಮಹಾರಾಷ್ಟ್ರ-ಕರ್ನಾಟಕ ಎರಡೂ ರಾಜ್ಯಗಳ ಟ್ರ್ಯಾಕ್ಟರ್ ಏಜನ್ಸಿ ಇವರ ಕಡೆಗೇ ಇತ್ತು. ಈಗ ಅವರು ಕೇವಲ ಕರ್ನಾಟಕದ ಏಜನ್ಸಿಯನ್ನು ಉಳಿಸಿಕೊಂಡಿದ್ದಾರೆ.

೧೯೭೬ ರಲ್ಲಿ ವಿಶ್ವಬ್ಯಾಂಕ್ ಹಮ್ಮಿಕೊಂಡಿದ್ದ ಟ್ರ್ಯಾಕ್ಟರ ಮಾರಾಟದ ಯೋಜನೆಯ ಅಂಗವಾಗಿ ದೇಸಾಯಿ ಆ್ಯಂಡ್ ಕಂಪನಿಯು ಕಳೆದ ವರ್ಷದಲ್ಲಿ ವಿಶ್ವಬ್ಯಾಂಕಿನ ಸಹಕಾರದಿಂದ ೬೨೦ ಟ್ರ್ಯಾಕ್ಟರುಗಳನ್ನು ಮಾರಿದೆ ಎಂದು ಹೇಳಿದರೆ ಈ ಕಂಪನಿಯ ಕಾರ್ಯದಕ್ಷತೆಯು, ಪ್ರಾಮಾಣಿಕತೆಯು ಪರಿಚಯವಾಗದಿರದು.

ಬಿಂದೂರಾಯರು ಸುದೈವಿಗಳು; ಬುದ್ಧಿವಂತ ಮಕ್ಕಳಿಗಿಂತ ಭಾಗ್ಯವಂತ ಮಕ್ಕಳನ್ನು ಕರುಣಿಸು ಎಂದು ಕುಂತಿ ಶ್ರೀಕೃಷ್ಣನಲ್ಲಿ ಬೇಡಿಕೊಂಡಿದ್ದಳಂತೆ ಹಾಗೇ ಬಿಂದೂರಾಯರು ಆನಂದರಾಯರ ಭಾಗ್ಯವಂತ ಪುತ್ರ. ಇವರ ಪತ್ನಿ ಇಂದಿರಾಬಾಯಿ ನಾಲ್ವರು ಪುತ್ರರನ್ನೂ ಒಬ್ಬ ಮಗಳನ್ನೂ ಪಡೆದು ಮನೆಯ ಭಾಗ್ಯಲಕ್ಷ್ಮಿಯಂತೆ ಕುಟುಂಬ ಸುಖವನ್ನು ಹೆಚ್ಚಿಸಿದರು. ಹೀಗೆ ಸುಖಸಾಮ್ರಾಜ್ಯದಲ್ಲಿ ಲೋಲಾಡುತ್ತಿರುವಾಗಲೇ ಇವರ ಪತ್ನಿ ಇವರನ್ನಗಲಿದರು (೧೯೬೫). ಹಿರಿಮಗ ವಸಂತರಾಯ ತಾಯಿಯನ್ನನುಸರಿಸಿದ. (೧೯೭೧) ಉಳಿದವರು ಕೃಷ್ಣರಾಯ, ಮೋಹನರಾಯ, ಮದನರಾಯ ತಂದೆಗೆ ಉದ್ಯಮದಲ್ಲಿ ನೆರವಾಗುತ್ತಿದ್ದಾರೆ. ಎನ್ನುವದಕ್ಕಿಂತ ಉದ್ಯಮದ ಸಂಪೂರ್ಣ ಹೊಣೆ ತಾವೇ ಹೊತ್ತುಕೊಂಡು ಅವರನ್ನು ಸಾರ್ವಜನಿಕ ಸೇವೆಗೆ ನೀಡಿದ್ದಾರೆ. ಬಿಂದೂರಾಯರು ಮಕ್ಕಳ ಈ ಸಹಾಯವನ್ನು ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತಾರೆ.

ಮೋಟರ ವಾಹನಗಳು-ಬಿಡಿ ಭಾಗಗಳ ಅಂಗಡಿ ನಗರದ ಮಧ್ಯದಲ್ಲಿ ಸ್ವತಂತ್ರ ಕಟ್ಟಡದಲ್ಲಿದ್ದರೆ ಟ್ರ್ಯಾಕ್ಟರ ವಿಭಾಗವು ವಿದ್ಯಾನಗರದಲ್ಲಿ ವಿಶಾಲವಾದ ಕಟ್ಟಡದಲ್ಲಿ ಕಾರ್ಯ ಮಾಡುತ್ತಿದೆ. ಜೊತೆಗೆ 'ಬರ್ಶೇನ್ ಗ್ಯಾಸ್' ಏಜನ್ಸಿಯೂ ಇವರಿಗೆ ಲಭಿಸಿದೆ. ೧೯೪೮ರಲ್ಲಿ ಕೇವಲ ೨೫೦೦೦ ರೂ. ಗಳ ಬಂಡವಳದಿಂದ ಬಿಂದೂರಾಯರು ಪ್ರಾರಂಭಿಸಿದ ಉದ್ಯಮ ಇಂದು ನಾನಾಮುಖವಾಗಿ ಬೆಳೆದು ಕೋಟಿಗಟ್ಟಲೆ ವ್ಯವಹಾರ ನಡೆಸುವ ಸಾಮರ್ಥ್ಯ ಹೊಂದಿದೆ. ದೇಸಾಯಿ ಕಂಪನಿಯ ಶಾಖೆ ಬೆಳಗಾವಿಯಲ್ಲಿದ್ದು ಅದನ್ನು ಅವರ ಸೋದರ ಶ್ರೀ ಮಧ್ವರಾಯರು ನೋಡಿಕೊಳ್ಳುತ್ತಿದ್ದಾರೆ. ಬಾಗಲಕೋಟೆ-ವಿಜಾಪುರಗಳಲ್ಲಿಯೂ ಈ ಕಂಪನಿಯ ಶಾಖೆಗಳಿವೆ.

ಇಷ್ಟೆಲ್ಲ ಅದ್ಭುತ ವ್ಯವಹಾರದ ಸೂತ್ರಧಾರ ಈ ನಿರಾಡಂಬರ ವ್ಯಕ್ತಿಯೇ ಎಂದು ಯಾರಿಗಾದರೂ ಸಂದೇಹ ಉಂಟಾಗದಿರದು. ಆದರೆ ಅವರೊಂದಿಗೆ ಸಂಭಾಷಣೆಗಿಳಿದರೆ ಸಾಕು. ಅವರ ಅಪಾರ ಅನುಭವದ ಪರಿಚಯವಾಗುತ್ತದೆ. ಸವಿಮಾತುಗಳಲ್ಲಿ ವ್ಯವಹಾರದ ಕೌಶಲವನ್ನು ತಿಳಿಸಿಕೊಡುವ, ಬಿಂದು ಮಾತುಗಳಲ್ಲಿ ಪ್ರಾಮಾಣಿಕತೆಯ ಮಹತಿಯನ್ನು ಬೋಧಿಸುವ ಇವರ ಸ್ವಭಾವದೆದುರು ಮಣಿಯದವರೇ ಇಲ್ಲ. ಇವರು ಸಿಟ್ಟಿಗೆದ್ದುದನ್ನು ಕಂಡವರೇ ಇಲ್ಲ ಎಂದು ಅವರ ಒಡನಾಡಿಗಳು ಹೇಳುತ್ತಾರೆ. ಡಾ. ಎನ್. ಎಸ್. ಹರ್ಡೀಕರ, ದಿ. ಹುಕ್ಕೇರಿಕರ ರಾಮರಾಯರು, ದಿವಾಕರ ರಂಗರಾಯರು ಇವರ ಒಡನಾಡಿಗಳು. ತಾವು ಮಾಡುವ ಪಾಪದ ಫಲ ತಮ್ಮ ತಂದೆಯವರನ್ನು ಕಾಡದಿರದು

[illegible] ಧರ್ಮಶೀಲತ್ವ ಬುದ್ಧಿಯಿಂದ ಸದಾಚಾರ ವ್ರತವನ್ನೇ ಇವರು ಕೈಕೊಂಡಿದ್ದಾರೆ. ತಮ್ಮಿಂದ ಆದಷ್ಟು ಪರರಿಗೆ ಕಲ್ಯಾಣವಾಗಬೇಕು ಎಂಬುದು ಇವರ ಗುರಿ. ಸ್ವಾಮಿ ರಾಮತೀರ್ಥರ ಗ್ರಂಥಗಳಿಂದ ಪ್ರಭಾವಿತರಾದ ಇವರು ಚಿಕಿತ್ಸಕ ಬುದ್ಧಿಯಿಂದ ದ್ವೈತಾದ್ವೈತ ಗ್ರಂಥಗಳನ್ನು ಸಾಕಷ್ಟು ಓದಬಲ್ಲವರಾಗಿದ್ದಾರೆ. ಆದರೆ ದ್ವೈತಾದ್ವೈತ ಚರ್ಚೆಯಲ್ಲಿ ಇವರಿಗೆ ಆಸಕ್ತಿ ಇಲ್ಲ. ಎಪ್ಪತ್ತು ವರ್ಷದವರಾಗಿದ್ದರೂ ನಡು ಬಾಗಿಲ್ಲ. ಕಣ್ಣಿನ ಕಾಂತಿ ಕುಂದಿಲ್ಲ. ಮೈಯ ಬಣ್ಣ ಮಾಸಿಲ್ಲ. ಆರೋಗ್ಯ ನಿಯಮಗಳ ಪರಿಪಾಲನೆಯೇ ತಮ್ಮ ಆರೋಗ್ಯ ಭಾಗ್ಯದ ಗುಟ್ಟು ಎಂದು ಇವರು ಕೇಳಿದವರಿಗೆಲ್ಲ ಹೇಳುತ್ತಾರೆ. ನಿತ್ಯ ಬೆಳಗ್ಗೆ ಎದ್ದು ನಾಲ್ಕು ಮೈಲು ತಿರುಗಾಟ, ಬಂದ ನಂತರ ಸ್ನಾನಾದಿಗಳನ್ನು ಮುಗಿಸಿ ತಮ್ಮ ಊರ ಸಮೀಪದ ಹೊಲದಲ್ಲಿ ನಾಲ್ಕಾರು ಗಂಟೆ ಕೃಷಿ ಮೇಲ್ವಿಚಾರಣೆ. ಮಧ್ಯಾಹ್ನದಲ್ಲಿ ಮನೆಯಲ್ಲಿ ಕುಟುಂಬದವರೊಡನೆ ಭೋಜನ, ಸಂಜೆ ಅಂಗಡಿಯಲ್ಲಿ ವ್ಯವಹಾರ, ರಾತ್ರಿ ತಮ್ಮ ಪ್ರತ್ಯೇಕವಾದ ಅಶೋಕನಗರದಲ್ಲಿಯ ಬಂಗಲೆಯಲ್ಲಿ ವಾಸ. ವಾನಪ್ರಸ್ಥಾಶ್ರಮದ ಜೀವನ. ಬೇನೆ ಬೇಸರಿಕೆಗಳು ಇವರ ಬಳಿ ಸುಳಿಯುವದಿಲ್ಲ. ಬಂದರೂ ಅನಿವಾರ್ಯ ಪ್ರಸಂಗದಲ್ಲಿ ಆಯುರ್ವೇದ ಮಾತ್ರ, ಇಲ್ಲದಿದ್ದಲ್ಲಿ ನಿಸರ್ಗ ಚಿಕಿತ್ಸೆ. ಇವರ ಸೂತ್ರ 'ಲಂಘನಂ ಪರಮೌಷಧಂ.'

ಸಾರ್ವಜನಿಕ ಸೇವೆಯಲ್ಲಿಯೂ ಶ್ರೀ ಬಿಂದೂರಾಯರದೇ ಒಂದು ವೈಶಿಷ್ಟ್ಯ. ಸೇವೆಗಿಂತ ಪ್ರತಿಷ್ಠೆ ಗೌರವಗಳಿಗಾಗಿ ಸಾರ್ವಜನಿಕ ಸೇವಾರಂಗಕ್ಕೆ ಧುಮುಕುವವರೇ ಬಹಳ. ಆದರೆ ಶ್ರೀ ಬಿಂದೂರಾಯರಂಥವರು ಸಮಾಜ ಸೇವಾ ರಂಗದಲ್ಲಿ ಅಪರೂಪ. ಉದ್ಯಮಿಗಳಾಗಿ ಕರ್ನಾಟಕ ವಾಣಿಜ್ಯೋದ್ಯಮ ಸಂಘದ ಸದಸ್ಯರಾಗಿ ತಮ್ಮ ನಿಷ್ಠ ಸೇವೆಯಿಂದ ಅಲ್ಲಿ ಜನಪ್ರಿಯರಾಗಿ ಆ ಸಂಘದ ಅಧ್ಯಕ್ಷ ಪದವಿಯನ್ನು ಪಡೆದರು. ಇವರು ಅಲ್ಲಿ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಆ ವಾಣಿಜ್ಯೋದ್ಯಮ ಸಂಘಕ್ಕೆ ಎಲ್ಲಿಲ್ಲದ ಮಹತ್ವವನ್ನು ದೊರಕಿಸಿಕೊಟ್ಟರು. ಕರ್ನಾಟಕ ವಿದ್ಯಾವರ್ಧಕ ಮಂಡಳದ ಸದಸ್ಯರಾಗಿದ್ದಾಗ ಹುಬ್ಬಳ್ಳಿ-ಗದಗಗಳ ನಡುವಿನ ಹಳ್ಳಿಗಳಿಗೆ ವಿದ್ಯುದ್ದೀಪಗಳನ್ನು ಒದಗಿಸಿಕೊಟ್ಟರು. ಧಾರವಾಡದ ಜನತಾ ಶಿಕ್ಷಣ ಸಮಿತಿಯ ಸಂಸ್ಥಾಪಕ ಶ್ರೀ ಹುಂಕ್ಕೇರಿಕರ ರಾಮರಾಯರ ನಿಧನದ ನಂತರ ಆ ಸಮಿತಿಯಲ್ಲಿ ಸದಸ್ಯರಾಗಿ ಅದನ್ನು ತಮ್ಮ ದಕ್ಷತೆಯಿಂದ ಬೆಳೆಸಿಕೊಂಡು ಬಂದರು. ಇದರಿಂದಾಗಿ ಆ ಸಮಿತಿಯ ಅಧ್ಯಕ್ಷ ಪದವೂ ಇವರ ಕೊರಳಿಗೆ ಬಿತ್ತು. ಮುಂದೆ ಧರ್ಮಸ್ಥಳದ ಶ್ರೀ ವೀರೇಂದ್ರ ಹೆಗಡೆಯವರೂ ಪೇಜಾವರದ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳೂ ಆ ಸಂಸ್ಥೆಯ ಹೊಣೆ ವಹಿಸಿಕೊಳ್ಳಲು ಮುಂದಾಗಿದರಿಂದ ಬಿಂದೂರಾಯರು ಸಂತೋಷದಿಂದ ಆ ಮಹಾನುಭಾವರಿಗೆ ಹೊಣೆ ಒಪ್ಪಿಸಿಕೊಟ್ಟರು. ಸಿಟಿ ಬ್ಯಾಂಕಿನ ಚೇರಮನ್ನರಾಗಿದ್ದ ಬಿಂದೂರಾಯರು ಅದರ ಉತ್ಕರ್ಷವನ್ನೇ ಉದ್ದೇಶಿಸಿ ಅದನ್ನು ವಿಜಯಾ ಬ್ಯಾಂಕಿನಲ್ಲಿ ವಿಲೀನಗೊಳಿಸಲು ಮುಂದಾದರು. ಈಗಲಾದರೂ ವಿಜಯಾ ಬ್ಯಾಂಕಿನ ಡೈರೆಕ್ಟರರಲ್ಲಿ ಒಬ್ಬರು ಇವರು. ಹುಬ್ಬಳ್ಳಿಯ ಆಯುರ್ವೇದ ವಿದ್ಯಾಲಯದ ಪ್ರಗತಿಗೂ ಬಹಳಷ್ಟು ಪರಿಶ್ರಮಿಸಿದ್ದಾರೆ. ತಮ್ಮಿಂದ ಯಾವ ಸಂಸ್ಥೆಗೇ ಆಗಲಿ ಕಲ್ಯಾಣವಾಗುತ್ತದೆ ಎಂದು ಅವರಿಗೆ ಮನವರಿಕೆಯಾದರೆ ಅವರು ಸ್ವಯಂಸ್ಫೂರ್ತಿಯಿಂದ ಆ ಕಾರ್ಯಕ್ಕೆ ತಮ್ಮನ್ನು ನೀಡಿಕೊಂಡು ಅದನ್ನು ಯಶಸ್ವಿಯಾಗಿ ಪೂರೈಸುತ್ತಾರೆ. ಈ ವಿಷಯದಲ್ಲಿ ಮಾತ್ರ ಅವರನ್ನು ಛಲಗಾರ ಎಂದು ಹೇಳಬಹುದು. ಅಲ್ಲಿಯ ತಮ್ಮ ಕರ್ತವ್ಯ ಪೂರೈಸಿದ ನಂತರ ಬೇರೊಬ್ಬರು ಅದರ ಹೊಣೆ ಹೊರಲು ಮುಂದೆ ಬಂದರೆ ಅವರಿಗೆ ಸಂತೋಷದಿಂದ ವಹಿಸಿಕೊಟ್ಟು ತಾವು ಹೊರಬೀಳುತ್ತಾರೆ. ಅಂತೇ ಅವರ ಮುಖದ ಮೇಲೆ ಸದಾ ವಿಜಯದ ನಗು. ಇದೇ ಅವರ ಸಮಾಜ ಸೇವೆಯ ವೈಶಿಷ್ಟ್ಯ.

ದಿಲ್ಲಿ-ಬೆಂಗಳೂರುಗಳ ಸುದ್ದಿಗಳು ಇವರಿಗೆ ಇವರ ಚೇಂಬರ್‌ನಲ್ಲಿಯೇ, ಪತ್ರಿಕೆಗಳಲ್ಲಿ ಪ್ರಕಟವಾಗುವ ಪೂರ್ವದಲ್ಲಿ ತಿಳಿದು ಬರುತ್ತವೆ ಎಂದರೆ ಇವರ ಜನಪ್ರಿಯತೆಯು ಅರಿವಾದೀತು. ಶಾಸಕರ, ಮಂತ್ರಿಗಳ ನಿಕಟ ಪರಿಚಯ, ಒಡನಾಟ ಇವರಿಗೆ ಇದ್ದರೂ ಇವರು ಆ ಜನನಾಯಕರ ಗತ್ತುಗಾರಿಕೆಯ ಜಾಲಕ್ಕೆ ಎಂದಿಗೂ ಸಿಲುಕಿದವರಲ್ಲ. ಅಧಿಕಾರ, ಗೌರವ, ಪ್ರತಿಷ್ಠೆ ಎಲ್ಲ ನಿಮಗಿರಲಿ, ನನ್ನ ಪಾಲಿನ ಸೇವೆ ನನಗೆ ಒಪ್ಪಿಸಿಕೊಡಿ ಸಾಕು ಎನ್ನುವ ನಿಃಸ್ಪೃಹ ಜನನಾಯಕರಿವರು. ಅಂತೇ ಅಜಾತ ಶತ್ರುಗಳೆಂದೂ ಹೆಸರುವಾಸಿ.

ಇವರ ಕೌಟುಂಬಿಕ ಜೀವನ ಸುಖಮಯ ಎಂದೇ ಹೇಳಬೇಕು. ಮಕ್ಕಳು, ಸೊಸೆಂದಿರು, ಮೊಮ್ಮಕ್ಕಳು ಎಲ್ಲರಿಗೂ ಬೇಕಾದ ಬೆಲ್ಲದ ಅಚ್ಚು ಬಿಂದೂರಾಯರು. ಒಂದು ದಿನ ಯಾರನ್ನೂ ಇವರು ಬಯ್ದವರಲ್ಲ. ಆದರೆ ಇವರ ಮೃದು ಹಿತವಚನಗಳು ಅವರನ್ನೆಲ್ಲ ಇವರ ಪ್ರಭಾವದಲ್ಲಿ ಹಿಡಿದಿಟ್ಟಿವೆ. ಸ್ವಂತ ಆಚರಣೆಯಿಂದ ಸದಾಚಾರ ಬೋಧಿಸುವ ಇವರು ಹಾಕಿದ ಗೆರೆಯನ್ನು ದಾಟುವ ಎದೆಗಾರಿಕೆ ಯಾರಿಗೂ ಇಲ್ಲ. ಹೀಗನ್ನುವದಕ್ಕಿಂತ ಇಂಥ ದೇವಮಾನವರಂಥ ಹಿರಿಯರನ್ನು ಪಡೆದ ಹೆಮ್ಮೆ ಅವರ ಕುಟುಂಬದವರಿಗೆಲ್ಲ ಎಂದರೆ ಹೆಚ್ಚು ಉಚಿತವಾದೀತು.

ಬಿಂದೂರಾಯರು ತಮ್ಮ ಪೂರ್ವಾರ್ಜಿತ ಆಸ್ತಿಯನ್ನೆಲ್ಲ ಒಂದು ಟ್ರಸ್ಟ್ ಆಗಿ ಪರಿವರ್ತಿಸಿ ಅದರಿಂದ ಬರುವ ಬಡ್ಡಿ ಹಣವನ್ನು ಬಡ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ ಉಪಯೋಗಿಸುತ್ತಾರೆ. ತಾವು ದುಡಿದ ಹಣದಲ್ಲಿ ಸ್ವಲ್ಪ ಭಾಗವನ್ನೂ ಅದಕ್ಕೆ ಸೇರಿಸಿದ್ದಾರೆ. ತಮ್ಮ ಉಪಭೋಗಕ್ಕಾಗಿ ತಾನೇ ದುಡಿದ ಹಣವಾಗಬೇಕು. "ಯಲ್ಲಭಸೇ ನಿಜ ಕರ್ಮೋಪಾತ್ತಂ ವಿತ್ತಂ ತೇನ ವಿನೋದಯ ಚಿತ್ತಂ" ಎಂಬಂತೆ. ಮನೆಯಲ್ಲಿ ನಾನಾ ನಿಮಿತ್ತಗಳಿಂದ ನಡೆವ ದಾನ ಧರ್ಮಾದಿಗಳೂ ವಿಪುಲವಾಗಿರುತ್ತವೆ. ತಮ್ಮ ೭೦ ನೇ ವರ್ಷದ ಉತ್ಸವದ ನಿಮಿತ್ತ, ಎರಡು ಜ್ಞಾನಸತ್ರಗಳನ್ನೇ ಏರ್ಪಡಿಸಿ ಪಂಡಿತವರೇಣ್ಯರನ್ನು ಸತ್ಕರಿಸಿದ್ದುಂಟು. ಈ ನಮ್ಮ ಸಂಸ್ಕೃತಿ ಪರಂಪರೆ-ದಾನ ಧರ್ಮಾದಿಗಳ ಸದಾಚಾರ ಪ್ರವೃತ್ತಿ, ಹೆಚ್ಚುತ್ತಲೇ ಹೋಗಬೇಕು. ಇದರಿಂದ ಲಭ್ಯವಾಗುವ ಪುಣ್ಯವಿಶೇಷ ನಮ್ಮ ಕುಟುಂಬವನ್ನು ಕಾಪಾಡಬಲ್ಲದು ಎಂದು ಇವರ ನಂಬಿಕೆ.

'ವರ್ತಮಾನೇ ಪ್ರವರ್ತಂತಃ' ಎಂಬ ಜಾತಿಗೆ ಸೇರಿದವರು ಬಿಂದೂರಾಯರು. ಎಪ್ಪತ್ತು ವರ್ಷಗಳ ನಿಮ್ಮ ಜೀವನ ಸಫಲವಾಗಿದೆಂದು ನಿಮಗೆ ಅನಿಸುವದಿಲ್ಲವೆ? "ಹೌದು, ಆತ ಆ ಭಗವಂತ ಯೋಜಿಸಿದ ರೀತಿಯಲ್ಲಿ ಸಫಲವಾಗಿದೆ. ನನ್ನದೇನೂ ಇಲ್ಲ, ನಡೆಯುವದಿಲ್ಲ ಇಲ್ಲಿ, ಆತ ತನ್ನ ಮನಸ್ಸಿಗೆ ಬಂದ ರೀತಿಯಲ್ಲಿ ನನ್ನನ್ನು ದುಡಿಸಿಕೊಂಡಿದ್ದಾನೆ. ಇನ್ನು ಇಷ್ಟೆಲ್ಲ ಜನ ನನ್ನನ್ನು ಪ್ರೀತಿಸುವ ರೀತಿ ನೋಡಿದಾಗ ನನ್ನ ಜೀವನ ಸಫಲವಾಗಿದೆ ಎಂದೇ ಹೇಳಬೇಕು." ಎನ್ನುತ್ತಾರೆ ಅವರು. ಸತ್ಕಾರ್ಯಗಳನ್ನು ಮಾಡುತ್ತ ಹೋದರೆ ದೇವರು ತಾನಾಗಿ ಒಲಿದು ನಮಗೆ ಸತ್ಫಲಗಳನ್ನು ನೀಡುತ್ತಾನೆ ಎಂದು ಅವರು ಸಾರಿ ಸಾರಿ ಹೇಳುತ್ತಾರೆ. ಅವರ ಜೀವನ ಧ್ಯೇಯವೇ ಅದಾಗಿರುವಾಗ ಅನ್ಯಥಾ ಶಬ್ದಗಳು ಅವರ ಬಾಯಿಂದ ಬರುವದೇ ಇಲ್ಲ.

ಭಗವದ್ಗೀತೆಯಲ್ಲಿ ಶ್ರೀ ಕೃಷ್ಣ ಬಣ್ಣಿಸಿರುವ ಸ್ಥಿತಪ್ರಜ್ಞನಿಗೆ ಉದಾಹರಣೆ ಎಂದು ಶ್ರೀ ಬಿಂದೂರಾಯರನ್ನು ಹೆಸರಿಸಬಹುದು, ಅವರ ಜೀವನದ ವಿವಿಧ ಘಟ್ಟಗಳನ್ನು ಪರಾಮರ್ಶಿಸಿದಾಗ ಅವರು ಪುಟಕ್ಕಿಟ್ಟ ಚಿನ್ನದಂತೆ ಹೇಗೆ ಪರಿಶುದ್ಧರಾಗುತ್ತ ಬಂದಿದ್ದಾರೆ ಎಂಬುದೂ ಹೊಳೆಯದಿರದು. ಇಂದಿನವರಿಗೆ ನಿಮ್ಮ ಸಂದೇಶ ಏನು ಎಂದು ಕೇಳಿದರೆ ಅವರಿಗೆ ಅಪಚಾರ ಮಾಡಿದಂತಾದೀತು. ಅವರ ಸಮಗ್ರ ಜೀವನವೇ ಒಂದು ಮಹಾ ಸಂದೇಶವಾಗಿರುವಾಗ ಅವರಿಂದ ನಾವು ಸಂದೇಶ ನಿರೀಕ್ಷಿಸುವದು ಕೇವಲ ನಮ್ಮ ಅಜ್ಞಾನವಾಗದಿರದು, ಆದರೂ ತಮ್ಮ ಮಾರ್ಗ

ಈಗ ನೀಡಿದ ಉಪದೇಶವನ್ನೇ ನಿಮಗೆ ಒದಗಿಸುತ್ತೇನೆ.

೧) ಯಾವುದೇ ಅಧಿಕಾರದ ಗೌರವದ ಸ್ಥಾನಮಾನದೆಡೆಗೆ ಆಸೆ ಮಾಡಬೇಡಿರಿ, ಅರ್ಹತೆ ಇದ್ದರೆ, ಅವು ಕೇಳದೆ ಬೇಡದೆ ಬಂದೇ ಬರುತ್ತವೆ.

೨) ಆರ್ತರಿಗೂ ಸಂಕಟದಲ್ಲಿದ್ದವರಿಗೂ ಮುಕ್ತಹಸ್ತದಿಂದ ಅನವರತ ನೆರವಾಗಿರಿ.

೩) ಸ್ವಪ್ರಯತ್ನ ಸ್ವಾವಲಂಬನೆದ ಮಹತಿಯನ್ನು ಮರೆಯಬೇಡಿರಿ.

೪) ಭೂಮಿತಾಯಿಯ ಸೇವೆಯನ್ನು ನಾವು ನಿಷ್ಠೆಯಿಂದ ಮಾಡಿದರೆ ಭೂದೇವಿ ನಮಗೆ ಸಕಲ ಸಮೃದ್ಧಿ ದಯಪಾಲಿಸುವಳು.


೫) ನೀವು ನಡೆಸುವ ವ್ಯವಹಾರದಲ್ಲಿ ನಿಮಗೆ ಬರುವ ಪ್ರತಿಯೊಂದು ಅನುಭವವನ್ನು ಬರೆದು ಇಡಿರಿ.

೬) ದೊಡ್ಡ ಗುರಿಯನ್ನು ನಿಶ್ಚಿತಗೊಳಿಸಿ ಅದನ್ನು ಸಾಧಿಸುವ ಸಂಕಲ್ಪ ಮಾಡಿರಿ.

ಈ ಆರು ಸೂತ್ರಗಳು ಎಂಥವರ ಜೀವನವನ್ನಾದರೂ ಯಶಸ್ವಿಯಾಗಿಸಲು ಶಕ್ತವಾಗಿವೆ! ಬಿಂದೂರಾಯರ ಜೀವನವನ್ನೇ ಸಮೃದ್ಧಗೊಳಿಸಿದ ಸೂತ್ರಗಳಿವು.

ಜೀವೇಮ ಶರದಶ್ಶತಂ ಎಂಬ ನುಡಿ ನಮ್ಮಲ್ಲಿದೆ. ಅಂತೇ ಬಿಂದೂರಾಯರು ನೂರು ವರುಷ ಬಾಳಿ ಅವರ ಮಾರ್ಗದರ್ಶನ ಸಮಾಜಕ್ಕೆ ದೊರೆಯಲಿ.

ವರುಷವೆಪ್ಪತ್ತೈದಾಗಿ ನಿಂದಿರಿ ನೀವು
ವರುಷವರುಷಕೆ ಕೀರ್ತಿ ಶಿಖರವನ್ನೇರಿ
ಹರುಷವನೆ ತಂದಿರಿ ಜನಮನಕೆ
ಮನೆಜನಕೆ
ಬಾಳಿ ಬೆಳಗಿರಿ ನೀವು ಮುದದಿ
ಶತವರುಷ



ನನ್ನ ಮಗಳಿಗೆ ಹಾಲು ಕುಡಿಯುವುದೆಂದರೆ ಆಗದು. ಒಂದು ಲೋಟ ಹಾಲು ಅವಳ ಕೈಯಲ್ಲಿ ಕೊಟ್ಟು ಕುಡಿಸಲು ಪ್ರಯತ್ನ ಪಟ್ಟರೆ, ಒಂದು ಚಮಚೆಗಿಂತ ಹೆಚ್ಚು ಅವಳ ಗಂಟಲಿನಲ್ಲಿ ಇಳಿಯುತ್ತಿರಲಿಲ್ಲ. ನಮ್ಮ ಮನೆ ಮುಂದೆ ಭಿಕ್ಷುಕರು ಯಾವಾಗಲೂ ಬಹಳವಾಗಿ ಬರುತ್ತಿದ್ದರು. ಒಂದು ದಿನ ನನ್ನ ಮಗಳು ಬಹಳ ಬಡಕಲಾಗಿದ್ದ ಭಿಕ್ಷುಕನನ್ನು ನೋಡಿ, ಅವನು ಹಾಗಿರಲು ಕಾರಣವೇನೆಂದು ಕೇಳಿದಳು. ನಾನು ಯಾವುದೇ ಜ್ಞಾಪದಲ್ಲಿ ಅವನು ಹಾಲು ಕುಡಿಯುತ್ತಿರಲಿಲ್ಲವಾಗಿ ಹಾಗಿದ್ದಾನೆಂದು ಹೇಳಿದೆ. ಆವಾಗ ಎರಡು ಮೂರು ದಿನಗಳಾದ ಮೇಲೆ ಒಂದು ದಿನ ತಾನಾಗಿಯೇ ಬಂದು ಬಹಳ ಆರ್ತಿನಿಂದ ಒಂದು ಲೋಟ ಹಾಲು ಕೊಡೆಂದು ಕೇಳಿ, ಒಂದೇ ನಿಮಿಷದಲ್ಲಿ ಕುಡಿದುಬಿಟ್ಟಳು. ನನಗೆ ಬಹಳ ಆಶ್ಚರ್ಯವಾಯಿತು. ಹಾಗೆ ಎರಡು ಮೂರು ಸಲ ನನ್ನೊಡನೆ ಹಾಲು ತೆಗೆದುಕೊಂಡು ಕುಡಿದಳು.

ಹೀಗೆ ಒಂದು ದಿನ ಅವಳು ಹಾಲು ಕುಡಿಯಲು, ನಾನು ಅಕಸ್ಮಾತ್ತಾಗಿ ಆಚೆ ಯಾರೊ ಕೂಗಿದ ಹಾಗಾಗಲು ಹೋದೆ. ಅಲ್ಲಿ ಆ ಬಡಕಲ ಭಿಕ್ಷುಕ ನಿಂತಿದ್ದನು. ನನಗೆ ಆಗ ನನ್ನ ಮಗಳು ಹಾಲು ಕುಡಿಯುವ ಕಾರಣ ಅರ್ಥವಾಗಿ ನನ್ನ ತಪ್ಪು ಅರಿಕೆಯಾಯಿತು.

—ಲೀಲಾ ಸುಬ್ರಹ್ಮಣ್ಯಂ

ಸಂಸ್ಕೃತಿಯ ತೋಟ

ಸಂಗ್ರಹ: ವೈ. ಎಸ್. ಗುಂಡೂರಾವ್

ಸಂಸ್ಕೃತಿ ಎಂದರೆ ಬಾಳ್ವೆಯನ್ನು ಹದಪಡಿಸುವುದು ಎಂದು ಅರ್ಥ. ನಾವು ಎಂಥ ನಯವಿನಯಗಳಿಂದ, ಎಂಥ ನವುರು ನಾಜೂಕುಗಳಿಂದ ಬಾಳ್ವೆಯನ್ನು ನಡೆಸಿದರೆ ಅದರಲ್ಲಿ ಹುಳಿಕಹಿಗಳು ಕಡಿಮೆಯಾಗಿ ಸ್ವಾರಸ್ಯ ಹೆಚ್ಚೀತೋ ಆ ತೆರದ ಮನೋಭಾವವನ್ನೂ ನಡತೆ ನಡಕೆಗಳನ್ನೂ ಸಂಪಾದಿಸಿಕೊಳ್ಳುವುದು ಸಂಸ್ಕೃತಿ. ಅದು ಒಂದು ಬಗೆಯ ಆತ್ಮಶಿಕ್ಷಣ.

ಸಂಸ್ಕೃತಿಯನ್ನು ಒಂದು ದೊಡ್ಡ ತೋಪಿಗೆ ಅಥವಾ ತೋಟಕ್ಕೆ ಹೋಲಿಸಬಹುದು. ತೋಟದಲ್ಲಿ ಹತ್ತಾರು ಜಾತಿಯ ಮರಗಳೂ ಗಿಡಗಳೂ ಬಳ್ಳಿಗಳೂ ಪೊದೆಗಳೂ ಇರುತ್ತವೆ. ಆ ಬಗೆ ಬಗೆಯ ಸಸ್ಯಗಳಲ್ಲಿ ಒಂದರ ಗಾಳಿ ಇನ್ನೊಂದಕ್ಕೆ ಬೀಸುತ್ತದೆ; ಒಂದರ ನೆರಳು ಇನ್ನೊಂದರ ಮೇಲೆ ಬೀಳುತ್ತದೆ; ಒಂದರ ಬೇರು ಇನ್ನೊಂದಕ್ಕೆ ತಾಕುತ್ತದೆ; ಹೀಗೆ ಒಂದರ ಬೆಳವಣಿಗೆಯನ್ನು ಇನ್ನೊಂದು ಅಷ್ಟೋ ಇಷ್ಟೋ ಮಟ್ಟಿಗೆ ಮಾರ್ಪಡಿಸುತ್ತದೆ. ಇಷ್ಟೆಲ್ಲಾ ನೆರೆಹೊರೆಯ ಸೋಂಕುಗಳಿದ್ದರು ಒಂದೊಂದು ಸಸ್ಯದ ಜೀವನವೂ ಬೇರೆಯಾಗಿರುತ್ತದೆ. ಹುಲ್ಲು ಮಲ್ಲಿಗೆಯಾಗುವುದಿಲ್ಲ; ಬೇವು ಮಾವಾಗುವುದಿಲ್ಲ; ಹುಣಿಸೆ ಹಲಸಾಗುವುದಿಲ್ಲ. ಗಿಡದ ಎತ್ತರ ಕುಳ್ಳುಗಳನ್ನು, ಅದರ ಕೊಂಬೆ ರೆಂಬೆಗಳ ಹರವನ್ನು ಅದರ ದಪ್ಪ ತೆಳುವುಗಳನ್ನು ಅದರ ಸುತ್ತಮುತ್ತಣ ಸಂದರ್ಭಗಳು ಗೊತ್ತು ಮಾಡುತ್ತಿವೆ. ಆದರೆ ಅದರ ಹೂವಿನ ವಾಸನೆಯೂ ಅದರ ಹಣ್ಣಿನ ರುಚಿಯೂ ಅದರ ನೆರೆಹೊರೆಯಿಂದ ಪೂರ್ತಿಯಾಗಿ, ಗುರುತು ಸಿಕ್ಕದಷ್ಟು ಮಟ್ಟಿಗೆ ಬದಲಾಯಿಸುವುದಿಲ್ಲ. ಆ ವಾಸನೆಯೇ, ಆ ರುಚಿಯೇ, ವ್ಯಕ್ತಿಗುಣ. ಈ ವ್ಯಕ್ತಿ ಗುಣಾಂಶಗಳ ಒಟ್ಟೇ ತೋಟದ ಸೊಗಸು. ಮನುಷ್ಯಸಂಸ್ಕೃತಿಯಲ್ಲೂ ಹೀಗೆಯೇ—ಅತ್ಯಂತ ಬೆಲೆಯುಳ್ಳ ಅಂಶ ವ್ಯಕ್ತಿಗುಣ. ಆ ವ್ಯಕ್ತಿ ಸಂಸ್ಕೃತಿ ಅಭಿವೃದ್ಧಿಯಾದಷ್ಟೂ ಸಮಸ್ತಜನ ಸಂಸ್ಕೃತಿಗೆ ಸೌಭಾಗ್ಯಾಭಿವೃದ್ಧಿ.

ಲೋಕಕ್ಕೆ ತಾನು ನೀಡುವ ಫಲಪುಷ್ಪಗಳಲ್ಲಿ ಹೇಗೋ ಲೋಕದಿಂದ ತಾನು ತೆಗೆದುಕೊಳ್ಳುವ ಆಹಾರದಲ್ಲಿಯೂ ಹಾಗೆ ಸಸ್ಯವು ತನ್ನ ಸಹಜ ಧರ್ಮವನ್ನು ಬಿಡಲಾರದು. ನೆಲದಿಂದಲೂ ನೀರಿನಿಂದಲೂ ಗಾಳಿಯಿಂದಲೂ ಬಿಸಿಲಿನಿಂದಲೂ ಮರವು ತನಗೆ ಬೇಕಾದ ಅಂಶಗಳನ್ನು ಆರಿಸಿ ಹೀರಿಕೊಳ್ಳುತ್ತದೆ; ಬೇಡದ್ದನ್ನು ಬಿಡುತ್ತದೆ. ಕಬ್ಬಿಗೆ ಬೇಕಾದದ್ದೆಲ್ಲಾ ಕಡಲೆಗೆ ಬೇಕಿಲ್ಲ; ತೊಗರಿಗೆ ಸಾಕಾದದ್ದು ತೆಂಗಿಗೆ ಸಾಲದು. ಹೀಗೆ ಲೋಕದಿಂದ ವಸ್ತುಗಳನ್ನು ಗ್ರಹಿಸುವುದರಲ್ಲಿ ಒಂದೊಂದರ ವ್ಯಕ್ತಿಧರ್ಮ ಒಂದೊಂದು

ಒಂದು ಜನಾಂಗದ ಅಥವಾ ಒಂದು ಸಮಾಜದ ಸಂಸ್ಕೃತಿಗೆ ಬೆಲೆ ಹೆಚ್ಚಬೇಕಾದರೆ ಅದರ ವ್ಯಕ್ತಿಗಳು ತಮ್ಮ ತಮ್ಮ ಆತ್ಮ ವ್ಯವಸಾಯಕ್ಕೆ ಯಥೇಷ್ಟವಾಗಿ ಅವಕಾಶ ಪಡೆದಿರಬೇಕು. ಮನುಷ್ಯನ ಸ್ವವ್ಯಕ್ತಿಗಿರುವ ಈ ವಿಶಾಲಾವಕಾಶವೇ ನಿಜವಾದ ಮತ್ತು ನ್ಯಾಯವಾದ ಸ್ವಾತಂತ್ರ್ಯ. ಗಿಡದಲ್ಲಿ ಹೂ ಚೆನ್ನಾಗಿ ಬರಬೇಕಾದರೆ, ಅದು ಬಿಸಿಲ ಕಡೆ ತಲೆ ತಿರುಗಿಸುವುದಕ್ಕೂ, ತೆರಪಿರುವ ಕಡೆ ಕೊಂಬೆ ಚಾಚುವುದಕ್ಕೂ, ತನಗೆ ಬೇಕಾದ ಭೂಸಾರವನ್ನು ಹೀರುವುದಕ್ಕೂ ಸ್ವತಂತ್ರವಾಗಿರಬೇಕು. ಹಾಗೆ ಅದಕ್ಕೆ ಕೊಟ್ಟ ಸ್ವಾತಂತ್ರ್ಯವು ಅದು ಬಿಡುವ ಹೂ ಹಣ್ಣುಗಳಿಂದ ಸಾರ್ಥಕವಾಗುತ್ತದೆ ಮಾನವ ಸಂಸ್ಕೃತಿಯ ಅಭಿವೃದ್ಧಿ ಸಾಫಲ್ಯಗಳ ಕಥೆಯೂ ಅದರಂತೆಯೇ ✿

(ಡಿ. ವಿ. ಜಿ ಯವರ 'ಸಂಸ್ಕೃತಿ' ಪುಸ್ತಕದಿಂದ)

ಹಮ್ಮುರಾಬಿಯ ಆಧುನಿಕ ಶಾಸನಗಳು

ಎಸ್. ಬಿ. ಖೋದಾನಪೂರ

ಶಿವ ಬಸವನ ಹಲ್ಲು ಮುರಿದರೆ, ಬಸವ ಶಿವನ ಹಲ್ಲು ಮುರಿಯಬೇಕು. ರೋಗಿ ಸತ್ತರೆ, ಅವನಿಗೆ ಉಪಚರಿಸಿದ ವೈದ್ಯನಿಗೆ ಮರಣ ದಂಡನೆ. ಓಡಿ ಹೋದ ಗುಲಾಮನಿಗೆ ಆಶ್ರಯವಿತ್ತಲ್ಲಿ, ಆಶ್ರಯದಾತನಿಗೆ ದಲ್ಲು. ಮನೆ ಬಿದ್ದು ಆ ಮನೆಯ ಮಾಲಿಕ ಸತ್ತರೆ, ಮನೆ ಕಟ್ಟಿದ ಮೇಸ್ತ್ರಿಗೆ ಫಾಶಿ ಶಿಕ್ಷೆ. ಹಲ್ಲಿಗೆ ಹಲ್ಲು, ಕಣ್ಣಿಗೆ ಕಣ್ಣು, ಜೀವಕ್ಕೆ ಜೀವ. ಇದುವೆ ನ್ಯಾಯ. ನಮಗೆ ಇದು ವಿಚಿತ್ರವೆನಿಸಬಹುದಾದರೂ ಸತ್ಯಸಂಗತಿ. ನಾಲ್ಕು ಸಾವಿರ ವರ್ಷಗಳ ಹಿಂದೆ ಬೆಬಿಲೋನಿಯಾದ ಹಮ್ಮುರಾಬಿ ರಾಜನ ರಾಜ್ಯದಲ್ಲಿ ಈ ನ್ಯಾಯ ಪದ್ಧತಿ ಇತ್ತು.

ಯುಫ್ರೆಟಿಸ್ ನದಿಗುಂಟ ಇರುವ, ಉಸುಕಿನಿಂದ ತುಂಬಿದ, ಭಯಾನಕ ಬಂಜರು ಭೂಮಿ ನಾಲ್ಕು ಸಾವಿರ ವರ್ಷಗಳ ಹಿಂದೆ ಯಾವಾಗಲೂ ಹಸಿರಾಗಿ ಕಂಗೊಳಿಸುವ ರಾಜ್ಯವಾಗಿತ್ತು. ಇಲ್ಲಿ ತೂಗುವ ತೋಟವಿತ್ತು. ಯುಫ್ರೆಟಿಸ್ ಮತ್ತು ಟೈಗ್ರಿಸ್ ನದಿಗಳ ಮಧ್ಯದಲ್ಲಿದ್ದ ಅನೇಕ ನಾಗರಿಕತೆಗಳಲ್ಲಿ ಅಕೆಡಿಯನ್ಸ್ ಮತ್ತು ಸುಮೇರಿಯನ್ಸ್ ಎರಡು. ಇವುಗಳ ಮಿಶ್ರಣವೆ ಬೆಬಿಲೋನಿಯಾ. ಬೆಬಿಲೋನಿಯಾದ ಪ್ರಸಿದ್ಧ ಅರಸು, ಶೂರ ಸೇನಾಪತಿ, ಶ್ರೇಷ್ಠ ಮತ್ತು ಮುತ್ಸದ್ದಿ ಶಾಸಕ ಹಮ್ಮುರಾಬಿ.

ಹಮ್ಮು ಎಂದರೆ ಶ್ರೇಷ್ಠವೆಂದೂ ಮತ್ತು ರಬಿ (ರಬ್ಬಿ) ಎಂದರೆ ಕಕ್ಕ- ಚಿಕ್ಕಪ್ಪ. ಹಮ್ಮುರಾಬಿ ಎಂದರೆ ಪ್ರೀತಿಯ ಚಿಕ್ಕಪ್ಪ. ಪ್ರೀತಿಯ ಚಿಕ್ಕಪ್ಪನಂತಿದ್ದ ಅವನನ್ನು ಜನರು ಹಾಗೆ ಕರೆದಿರಬೇಕು. ಅದೇ ರೂಢಿಯಾಗಿ ಪ್ರಚಾರದಲ್ಲಿರಬೇಕು. ಅಥವಾ ಅವನ ಹೆಸರು ಹಾಗೆಯೆ ಇದ್ದಿರಬೇಕು. ಪಶ್ಚಿಮ ಸೆಮೆಟಿಕ್ ಅಥವಾ ಅಮೊರಿಟಿಕ್ ವಂಶದ ಆರನೇಯ ಅರಸನಾಗಿ ಪಟ್ಟಕ್ಕೆ ಬಂದನು. ಒಂದು ಪಟ್ಟಣಕ್ಕೆ ಸೀಮಿತವಾಗಿದ್ದ ರಾಜ್ಯವನ್ನು ವಿಸ್ತರಿಸಿ ಶಕ್ತಿಯುತ ರಾಷ್ಟ್ರ ನಿರ್ಮಿಸಿದ. ಸಂಘಟನಾ ಶಕ್ತಿಯುಳ್ಳ ಹಮ್ಮುರಾಬಿ ರಾಜ್ಯಕ್ಕೆ ಭದ್ರತೆ, ಜನಜೀವನಕ್ಕೆ ಶಿಸ್ತು ತಂದುಕೊಟ್ಟು, ನೆಮ್ಮದಿ ದೊರಕಿಸಿದ. ಶಾಂತಿ ಸ್ಥಾಪಿಸಿದ. ರಸಿಕನಾದ ಹಮ್ಮುರಾಬಿ ರಾಜಧಾನಿಯನ್ನು ಸೌಂದರ್ಯದ ನೆಲೆಬೀಡನ್ನಾಗಿಸಿದ. ಜನಸೇವೆ ಜನಾರ್ದನ ಸೇವೆ ಎಂದು ನಂಬಿದ್ದ ಹಮ್ಮುರಾಬಿ ಎಲ್ಲ ಅಧಿಕಾರಿಗಳು ತನ್ನಂತೆ ನಡೆಯುವ ಹಾಗೆ ಮಾಡಿದ. ಆಧುನಿಕ ಕಲ್ಯಾಣ ರಾಜ್ಯದ ಕಲ್ಪನೆ ಅವನಿಗಿತ್ತು ಎನ್ನಬಹುದು. ಇದು

ಅವನ ಶಾಸನ ಮತ್ತು ಕಾರ್ಯದಿಂದ ಸ್ಪಷ್ಟವಾಗುತ್ತದೆ.

ಕಿಶ್ ಮತ್ತು ಪರ್ಷಿಯನ್ ಆಖಾತಗಳ ಜೋಡಣೆಯಿಂದ ನೀರಾವರಿ ಸಂಭವವಾಯಿತು. ನೆರೆ ಹಾವಳಿಯಿಂದ ದಕ್ಷಿಣದ ಪಟ್ಟಣಗಳು ರಕ್ಷಿಸಲ್ಪಟ್ಟವು. ಗುಡಿಗಳನ್ನು ಮತ್ತು ಮಂದಿರಗಳನ್ನು ಕಟ್ಟಿಸಿದ. ಲೌಕಿಕ ಮತ್ತು ಪಾರಮಾರ್ಥಿಕ ವಿಷಯಗಳಿಗೆ ಸಮನಾಗಿ ಲಕ್ಷ್ಯ ಕೊಟ್ಟಿದ್ದ. ಜನರಿಗೆ ಆರ್ಥಿಕ ಮತ್ತು ಸಾಮಾಜಿಕ ಭದ್ರತೆಯನ್ನು ತಂದುಕೊಟ್ಟಿದ್ದ.

ಇವೆಲ್ಲವುಗಳಿಗಿಂತ ಹಮ್ಮುರಾಬಿಯ ಶಾಸನಗಳು ಅವನನ್ನು ಚಿರಂಜೀವಿಯನ್ನಾಗಿ ಮಾಡಿವೆ. ಕ್ರಿ. ಶ. ಇಪ್ಪತ್ತನೆಯ ಶತಮಾನಕ್ಕೆ ಅತ್ಯವಶ್ಯವಾದ ಕಾಯ್ದೆಗಳನ್ನು ಕ್ರಿ. ಶ. ಪೂರ್ವ ಇಪ್ಪತ್ತನೆಯ ಶತಮಾನದಲ್ಲಿ ಜಾರಿಗೆ ತಂದಿದ್ದನೆಂದರೆ ಯಾರಿಗಾದರೂ ಆಶ್ಚರ್ಯವಾಗದಿರದು. ಇವನ ಶಾಸನಗಳು ಜಗತ್ತಿನಲ್ಲಿಯೇ ಪ್ರಪ್ರಥಮವಾದವುಗಳು. ಅವು ಬೆಳೆದಂತೆ ಅವುಗಳಲ್ಲಿ ಮೂಢನಂಬಿಕೆ ಅಥವಾ ಕುರುಡತನ ಕಾಣಲಾರೆವು. ಶಾಸನಗಳಷ್ಟೇ ಕಾರ್ಯಾಂಗ ಮತ್ತು ನ್ಯಾಯಾಂಗಗಳು ಸಹ ಜನರ ಕಲ್ಯಾಣಕ್ಕಾಗಿ ಸನ್ನದ್ಧವಾಗಿದ್ದವು. ಘೋರವಾಗಿಯೂ ಕ್ರೂರವಾಗಿಯೂ ಮೇಲು ನೋಟಕ್ಕೆ ಕಾಣುವ ಈ ಶಾಸನಗಳು ನಿಜವಾಗಿ ವಾಸ್ತವಿಕವಾಗಿದ್ದವು ಎಂದು ಕಾಣುತ್ತದೆ.

ಸುಮಾರು ನಾಲ್ಕು ಸಾವಿರ ವರ್ಷ ಅಜ್ಞಾತದಲ್ಲಿದ್ದ ಈ ಶಾಸನಗಳು ೧೯೦೨ರಲ್ಲಿ ಬೆಳಕಿಗೆ ಬಂದವು. ಪರ್ಷಿಯಾ ದೇಶದ ಸುಸಾ ಪಟ್ಟಣದಲ್ಲಿ ಶೋಧಿಸಲ್ಪಟ್ಟ ಎಂಟು ಫೂಟು ಎತ್ತರದ ಸಿಲಿಂಡರ್ ಆಕೃತಿಯ ಕರಿಕಲ್ಲಿನಲ್ಲಿ ೨೮೫ಕ್ಕೂ ಹೆಚ್ಚು ಶಾಸನಗಳನ್ನು ನಾವು ಕಾಣುತ್ತೇವೆ. ಇದು ಈಗ ಲೂವರೆ ಪಟ್ಟಣದಲ್ಲಿದೆ.

ಈ ಶಾಸನಗಳು ದೈವದತ್ತವಾದವುಗಳೆಂದು ತಿಳಿಯುವದು. ಸೂರ್ಯದೇವ (ಶಮಾಶಾ) ಹಮ್ಮುರಾಬಿಗೆ ಇವುಗಳನ್ನು ದಯಪಾಲಿಸುತ್ತಿರುವದು ಈ ಶಿಲಾಲಿಪಿ ತೋರಿಸುತ್ತದೆ. ಹಮ್ಮುರಾಬಿಯ ವರ್ಣನೆ ಇದೆ. ಸ್ವರ್ಗದ ಒಡೆಯನಾದ "ಅನು" ರಾಜಕುಮಾರನೆಂದು ಕರೆದ. ಇದಲ್ಲದೆ "ದೇವರನ್ನು ಪೂಜಿಸುವವ. ನ್ಯಾಯವನ್ನು ಎತ್ತಿ ಹಿಡಿಯುವವ ದುಷ್ಟತೆಯನ್ನು ನಾಶಮಾಡುವವ, ಶಿಷ್ಟರನ್ನು ರಕ್ಷಿಸುವವನು, ಬಲಾಢ್ಯರಿಂದ ತುಳಿಯಲ್ಪಡುವ ಅಶಕ್ತರನ್ನು ರಕ್ಷಿಸುವವ..." ಎಂದು ಪ್ರಸ್ತಾವನೆ ವರ್ಣಿಸುತ್ತದೆ. ಶಿಲಾಶಾಸನದ ಅಂತ್ಯದಲ್ಲಿ ಹೀಗಿದೆ. "ಧರ್ಮಕ್ಕನುಗುಣವಾಗಿ ರಚಿಸಿದ ಹಮ್ಮುರಾಬಿಯ ಶಾಸನಗಳು ರಾಜ್ಯಕ್ಕೆ ಸ್ಥಿರತೆಯನ್ನು ಮತ್ತು ಶುದ್ಧ ಸರಕಾರವನ್ನು ಒದಗಿಸಿದ್ದವು."

ಅನ್ಯಾಯದಿಂದ ತುಳಿಯಲ್ಪಡುವ ಬಡಜನರು, ಧರ್ಮ ದೇವತೆಯಂತಿರುವ ತನಗೆ ಯಾವದೇ ಸಮಯದಲ್ಲಿ ಭೆಟ್ಟಿಯಾಗಿ ತಿಳಿಸಲು ಅವರಿಗೆ ಸ್ವಾತಂತ್ರ್ಯ ಕೊಟ್ಟಿದ್ದ. "ಅನ್ಯಾಯವನ್ನು ಸಹಿಸುವದು ಸಹ ಪಾಪ" ಎಂದು ನಂಬಿದ್ದ ಈ ಅರಸ. ಅದರಂತೆ ಅನ್ಯಾಯವನ್ನು ತೊಡೆದು ಹಾಕಲು ಬದ್ಧಕಂಕಣರಾಗಿರಬೇಕೆಂದು ಜನತೆಗೆ ಕರೆ ಕೊಟ್ಟಿದ್ದ. ಈ ಉದಾತ್ತ ತತ್ವಗಳು ಶಾಸನಗಳಲ್ಲಿ ಅಡಕವಾಗಿವೆ.

ಹಮ್ಮುರಾಬಿಯ ಕಾಯ್ದೆಗಳು ಸುಮೇರಿಯನ್ ಶಾಸನಗಳ ಭಟ್ಟಿ ಇಳಿಸಿದ್ದಾಗಿರದೆ, ಬೆಬಿಲೋನಿಯಾದ ಪರಿಸ್ಥಿತಿಗೆ ಅನುಗುಣವಾಗಿ ವೈವಿಧ್ಯತೆಯಿಂದ ಕೂಡಿವೆ. ಅದರಲ್ಲಿ ಅನೇಕ ಶಾಸನಗಳು ಯಾವದೇ ಕಾಲಕ್ಕೂ ಯೋಗ್ಯವಾಗಿವೆ ಎನ್ನಬಹುದು. ದೈವದತ್ತವಾದವು ಎಂದರೂ ಕ್ರಮೇಣವಾಗಿ ಅವು ಲೌಕಿಕವಾಗಿವೆ. ಪ್ರಸಿದ್ಧ ಇತಿಹಾಸಕಾರನಾದ ವಿಲ್'ಡ್ಯೂರಂಟನ ಅಭಿಪ್ರಾಯದಂತೆ ಈ ಪ್ರಸ್ತಾವನೆ ಮತ್ತು ಶಬ್ದಗಳ ಜೋಡಣೆ ಸುಂದರವಾಗಿದೆ ಮತ್ತು ಪಾಂಡಿತ್ಯದಿಂದೊಡಗೂಡಿದೆ.

ಇನ್ನೂರಾ ಎಂಬತ್ತೈದು ಶಾಸನಗಳನ್ನು ಕ್ರಮಬದ್ಧವಾಗಿ ಜೋಡಿಸಲಾಗಿದೆ. ವ್ಯಕ್ತಿಯ ಆಸ್ತಿ, ಭೂಮಿ ಸೀಮೆ, ವ್ಯಾಪಾರ, ಉದ್ಯೋಗ, ಕುಟುಂಬ, ಕಾರ್ಮಿಕ ಕಲ್ಯಾಣ,

ಜೀವ ವಿಮೆ ಮುಂತಾದವುಗಳಿಗೆ ಅವು ಸಂಬಂಧಿಸಿದವುಗಳನ್ನು ಕುರಿತವು ಒಡಂಬಡಿಕೆ, ಒಪ್ಪಂದ ಕರಾರುಗಳನ್ನು ಸ್ಟ್ಯಾಂಪ ಕಾಗದದ ಮೇಲೆ ಬರೆದು ಅದನ್ನು ಸರಕಾರದಲ್ಲಿ ನೋಂದಾಯಿಸುವ (Registration) ಪರಿಪಾಠವು ಜಾರಿಯಲ್ಲಿತ್ತು, ಬೆಬಿಲೋನಿಯಾ ಆಧುನಿಕ ಯುರೋಪಿನಷ್ಟು ಮುಂದುವರಿದಿರಬೇಕೆಂದು ಅನೇಕ ಇತಿಹಾಸಕಾರರು ಅಭಿಪ್ರಾಯಪಟ್ಟಿದ್ದಾರೆ.

ಪ್ರಥಮವಾಗಿ ದೈವ ಪರೀಕ್ಷೆ ಅಥವಾ ಅಗ್ನಿ ಪರೀಕ್ಷೆ ಇತ್ತು. ಅಪರಾಧಿ ಎಂದು ತಿಳಿಯಲ್ಪಟ್ಟವ ಯುಫ್ರೆಟಿಸ್ ನದಿಯಲ್ಲಿ ಜಿಗಿಯಬೇಕು. ಜೀವ ಸಹಿತ ಮರಳಿದರೆ ನಿರಪರಾಧಿ. ಇಲ್ಲವೆ ಮರಣಶಿಕ್ಷೆ. ಕ್ರಮೇಣ ಮುಯ್ಯಿಗೆ ಮುಯ್ಯಿ ತತ್ವಕ್ಕೆ ಹಾದಿ ಮಾಡಿದಂತಿದೆ. ಅಂದರೆ "ಕಣ್ಣಿಗೆ ಕಣ್ಣು, ಹಲ್ಲಿಗೆ ಹಲ್ಲು, ಜೀವಕ್ಕೆ ಜೀವ." ನಂತರ ಅನೇಕ ಸುಧಾರಣೆಗಳಾಗಿ ದಂಡವನ್ನು ಹಣದ ರೂಪದಲ್ಲಿ ತೆಗೆದುಕೊಳ್ಳುವ ರೂಢಿ ಪ್ರಾರಂಭವಾಯಿತು. ಆದರೆ ಈ ದಂಡವನ್ನು ಅಪರಾಧಕ್ಕೆ ಮತ್ತು ಅಪರಾಧಿಯ ಅಂತಸ್ತಿಗೆ ತಕ್ಕಂತೆ ವಸೂಲು ಮಾಡಲಾಗುತ್ತಿತ್ತು. ಶ್ರೀಮಂತರ ವಿರುದ್ಧ ಮಾಡಿದ ಅಪರಾಧಕ್ಕೆ ಹೆಚ್ಚು ದಂಡ ತೆತ್ತಬೇಕಾಗಿತ್ತು.

ವಿಚಿತ್ರ, ಅನಾಗರಿಕ ಶಿಕ್ಷಾಪದ್ಧತಿ ಪ್ರಾರಂಭದಲ್ಲಿತ್ತು. ತಂದೆಯನ್ನು ಹೊಡೆದ ಮಗನ ಕೈ ಕತ್ತರಿಸಲಾಗುತ್ತಿತ್ತು. ಆಪರೇಶನ್ [illegible] ರೋಗಿ ಸತ್ತರೆ ಅಥವಾ ಅಂಗವಿಹೀನನಾದರೆ, ಆ ವೈದ್ಯನ ಬೆರಳುಗಳನ್ನು ದಂಡವಾಗಿ ಕೊಡಬೇಕಾಗುತ್ತಿತ್ತು. [illegible] ಕೂಸುಗಳನ್ನು ಬದಲಿಸಿದ ದಾದಿಗಳ ಮೊಲೆಗಳನ್ನು ಕೊಯ್ಯಲಾಗುತ್ತಿತ್ತು. ಬಲಾತ್ಕಾರ, ಅಪಹರಣ, ದರೋಡೆ [illegible], [illegible], ಪತಿಹತ್ಯೆ, ಕಲಬೆರಿಕೆ ಮುಂತಾದ ಅಪರಾಧಕ್ಕೆ ಮರಣ ದಂಡನೆ. [illegible] ಪ್ರವೇಶ ಮಾಡಿದ ಪುರೋಹಿತನಿಗೆ, [illegible] ಪತ್ನಿಗೆ, ರಣರಂಗದಿಂದ ಭಯಪಟ್ಟು ಓಡಿ ಬಂದ ಹೇಡಿಗೆ, ಓಡಿ ಹೋದ ಗುಲಾಮನಿಗೆ ಆಶ್ರಯ ನೀಡಿದವನಿಗೆ ಸಿಗುವ ಶಿಕ್ಷೆ-ಮರಣ. ಅಪರಾಧಿಗಳನ್ನು ಜೇಲಿನಲ್ಲಿ ಇಡುವ ಪದ್ಧತಿ ಇದ್ದಿಲ್ಲ. ಇದರಿಂದ ಜೇಲು ಮತ್ತು [illegible] ಉಳಿತಾಯವಾಗುತ್ತಿತ್ತು.

ಸಂಯುಕ್ತ ರಾಷ್ಟ್ರ ಸಂಘದಲ್ಲಿ ಅಪರಾಧ ಶಾಸ್ತ್ರ ತಜ್ಞರಾಗಿದ್ದ ಡಾ. ರೆಕ್‌ಲೆಸ್ ಇವರು ಇದೇ ರೀತಿ ಅಭಿಪ್ರಾಯಪಟ್ಟಿದ್ದಾರೆ. ಶಿಕ್ಷೆಯನ್ನು ದೀರ್ಘಾವಧಿ ಕೊಡಬಾರದು. ಮತ್ತು ತನಿಖೆ ಅಥವಾ ವಿಚಾರಣೆಯನ್ನು ಕಡಿಮೆ ಅವಧಿಯಲ್ಲಿ ಮಾಡಬೇಕೆಂದು ಡಾ. ರೆಕ್‌ಲೆಸ್ ಶಿಫಾರಸು ಮಾಡಿದ್ದಾರೆ.

ನಿತ್ಯ ಜೀವನದಲ್ಲಿಯೂ ಜನತೆಗೆ ಅನ್ಯಾಯವಾಗದಂತೆ ವ್ಯವಸ್ಥೆ ಇದ್ದುದನ್ನು ಕಾಣುವೆವು. ಪೇಟೆಯನ್ನು ನಿಯಂತ್ರಿಸಲು ಪ್ರಯತ್ನ ಮಾಡಿದ್ದ ಹಮ್ಮುರಾಬಿ. ಸಂಬಳ, ಕೂಲಿ, ಬೆಲೆಗಳನ್ನು ಗೊತ್ತುಪಡಿಸುವುದು ಸರಕಾರದ ಕರ್ತವ್ಯವಾಗಿತ್ತು. ಇದಲ್ಲದೆ ವೈದ್ಯರ ಶುಲ್ಕ, ಸಿಂಪಿಗ, ಬಡಿಗ, ಅಂಬಿಗ, ಕೂಲಿಕಾರ, ಕಲ್ಲು ಒಡೆಯುವವ



ಬಿಟ್ಬಿಡಿ ಸಾರ್ ನನ್ನ ಜೇಬು ಅಂತ ಕೈ ಹಾಕಿದ್ದೆ...!

ಮುಂತಾದವರ ಕೂಲಿಯೂ ಸಹ ಸರಕಾರದಿಂದ ನಿಗದಿ ಮಾಡಲ್ಪಡುತ್ತಿತ್ತು. ಈಗ ನಾವು ಮಾಡುವ ಪ್ರಯತ್ನದಲ್ಲಿ ಯಶಸ್ಸು ಸಿಗಬೇಕಾಗಿದೆ. ಆದರೆ ನಾಲ್ಕು ಸಾವಿರ ವರ್ಷಗಳ ಹಿಂದೆ ಈ ಕ್ರಮ ಯಶಸ್ವಿಯಾಗಿ ನಿರ್ವಹಿಸಲಾಗುತ್ತಿತ್ತು ಎಂದರೆ ನಿಜವಾಗಿಯೂ ಆಶ್ಚರ್ಯಕರವಾದ ಸಂಗತಿ. ಸಂಪತ್ತಿನ ಕೇಂದ್ರೀಕರಣಕ್ಕೆ ಆಸ್ಪದವಿಲ್ಲದಂತೆ ಎಲ್ಲ ಪುತ್ರರಲ್ಲಿ ಆಸ್ತಿಯ ವಿಭಜನೆ.

ದೇವರಿಗೆ ಹೊಣೆಗಾರರಾಗಿದ್ದ ಪುರೋಹಿತರು ಮೊದಲು ನ್ಯಾಯಾಧೀಶರಾಗಿದ್ದರು. ಅವರು ಸರಕಾರಕ್ಕೆ ಜವಾಬ್ದಾರರು ಆಗುವಂತೆ ಹಮ್ಮುರಾಬಿ ಬದಲಾವಣೆ ಮಾಡಿದ. ವಕೀಲರು ಇದ್ದ ಹಾಗೆ ಕಾಣುವದಿಲ್ಲ. ವಾದಿಯು ಸ್ವತಃ ವಾದ ಮಾಡಬೇಕು. ಅಪರಾಧ ಹೊರಿಸಿದಲ್ಲಿ ಅದನ್ನು ಸಿದ್ಧ ಮಾಡಲಿಕ್ಕೇ ಬೇಕು. ತಪ್ಪಿದಲ್ಲಿ ಆರೋಪಿಸಿದವನು ಜೀವ ಕೊಡಬೇಕು. ಲಂಚ, ರುಷುವತ್ತುಗಳಿಗಾಸ್ಪದ ವಿದ್ದಿಲ್ಲವೆಂದು ತಿಳಿಯುತ್ತದೆ. ಕಳ್ಳನನ್ನು ಬಂಧಿಸುವುದು ಆ ಪಟ್ಟಣದ ಕೊತವಾಲನ ಕರ್ತವ್ಯವಾಗಿತ್ತು. ಗೊತ್ತುಪಡಿಸಿದ ಸಮಯದಲ್ಲಿ ಕಳ್ಳನ ಬಂಧನವಾಗದಿದ್ದಲ್ಲಿ ಹಾನಿಗೊಳಗಾದವರಿಗೆ ಪರಿಹಾರ ಧನವನ್ನು ಕೊಡುವದು ಆ ಅಧಿಕಾರಿಯ ಹೊಣೆಗಾರಿಕೆ. ಸುವ್ಯವಸ್ಥಿತವಾಗಿರುವ ಆಧುನಿಕ ಜಗತ್ತಿನ ಯಾವ ಪಟ್ಟಣದಲ್ಲಿಯೂ ಇದನ್ನು ಕಾಣಲಾರೆವು.

ಗುಲಾಮಗಿರಿ ಮತ್ತು ಜೀತದಾಳು ಪದ್ಧತಿ ಇದ್ದರೂ ಅದಕ್ಕೆ ತಕ್ಕ ಪರಿಹಾರವಿತ್ತು. ಸಾಲ ಮುಟ್ಟಿಸಲಾರದ ಸಾಲಗಾರ ಸಾವಕಾರನ ಸೇವೆಯನ್ನು ಮೂರು ವರ್ಷ ಮಾಡಿದನಂತರ ಪುನಃ ಸ್ವತಂತ್ರನಾಗುತ್ತಿದ್ದ. ಜೀವನಪರ್ಯಂತ ದುಡಿಯುವ ಅಥವಾ ಬಡ್ಡಿ ಕೊಡುವ ಅವಶ್ಯಕತೆ ಇದ್ದಿಲ್ಲ. ಮೂರು ವರ್ಷ ಸಾವಕಾರನಲ್ಲಿ ದುಡಿಯುವದರಿಂದ ಯಾರಿಗೂ ಹಾನಿಯಾಗುತ್ತಿರಲಿಲ್ಲ. ಇಬ್ಬರಲ್ಲಿಯೂ ನೀತಿ ಉಳಿಯುತ್ತಿತ್ತು. ಪ್ರಕೃತಿಯ (ದೇವರ) ವಿಕೋಪದಿಂದ ಸಾಲವಾಗಿದ್ದಲ್ಲಿ ಸಾಲಗಾರ ಗುಲಾಮನಾಗಿ ಸೇವೆ ಮಾಡುವ ಅವಶ್ಯಕತೆ ಇದ್ದಿಲ್ಲ. ಈ ಪದ್ಧತಿಗಳನ್ನು ನಮ್ಮ ಪರಿಸ್ಥಿತಿಗನುಗುಣವಾಗಿ ಉಪಯೋಗಿಸಿದಲ್ಲಿ ಯಾರಿಗೂ ಅನ್ಯಾಯವಾಗಲಿಕ್ಕಿಲ್ಲ. ಇಷ್ಟವಾದಲ್ಲಿ ತೋಳ-ಕುರಿ ನ್ಯಾಯದ ಭೀತಿ ಅನೇಕ ಕಡೆಗೆ ಉಂಟಾಗಬಹುದು.

ವಿಚಿತ್ರ ಮತ್ತು ಅವ್ಯವಹಾರಿಕವಾಗಿ ಕಾಣುವ ಈ ನ್ಯಾಯ ಪದ್ಧತಿಯನ್ನು ಒಳಹೊಕ್ಕು ನೋಡಬೇಕು. ಇಲ್ಲದಿದ್ದರೆ ಕುರುಡರು ಆನೆ ಕಂಡಂತಾಗಬಹುದು. ವೈದ್ಯನ ಅಲಕ್ಷತನ ಮುಂದ್ದಾಂ ಆಗಿದ್ದರೆ ಮಾತ್ರ ಶಿಕ್ಷೆ. ಅತಿ ಲಾಭದಾಸೆಗಾಗಿ ವ್ಯಾಪಾರಿ ಕಲಬೆರಿಕೆ ಮಾಡಿದರೆ ಅಥವಾ ಗಿರಾಕಿಗಳಿಗೆ ಮೋಸ ಮಾಡಿದ್ದನ್ನು ರುಜುವಾತು ಪಡಿಸಿದಲ್ಲಿ ಮಾತ್ರ ಅವನ ಆಸ್ತಿಯನ್ನು ಸರಕಾರ ತನ್ನ ವಶಕ್ಕೆ ತೆಗೆದುಕೊಳ್ಳುತ್ತಿತ್ತು.

ಈ ಶಾಸನಗಳು ಜನರಿಗೆ ಕಾಣುವಂತೆ ಬರೆಯಿಸಿದ ಹಲಗೆಯನ್ನು ಮಹತ್ವದ ಸಾರ್ವಜನಿಕ ಸ್ಥಳಗಳಲ್ಲಿ ಇಡಲಾಗುತ್ತಿತ್ತು. ನ್ಯಾಯದಾನದಲ್ಲಿ ವಿಲಂಬ, ನ್ಯಾಯವನ್ನೇ ತಿರಸ್ಕರಿಸಿದಂತೆ ಎಂಬುದನ್ನು ಇಲ್ಲಿ ಕಾಣುತ್ತೇವೆ. ನ್ಯಾಯಾಂಗವು ಕೇಂದ್ರೀಕೃತವಾಗಿತ್ತು.

ಆಧುನಿಕ ಸಂಕೀರ್ಣ ಸಮಾಜದಲ್ಲಿ ಈ ನ್ಯಾಯ ಪದ್ಧತಿ ಸಾಧ್ಯವಾಗಲಾರದೆಂದು ಹೇಳಬಹುದಾದರೂ ಈ ಶಾಸನಗಳನ್ನು ನಮ್ಮ ಪರಿಸ್ಥಿತಿಗೆ ತಕ್ಕಂತೆ ಬದಲಾಯಿಸಿಕೊಳ್ಳಬಹುದಲ್ಲ?

"ಹಮ್ಮುರಾಬಿಯ ನಂತರ ಶಾಸನಗಳಲ್ಲಿ ಏನಾದರೂ ಪ್ರಗತಿಯಾಗಿದೆಯೋ? ಅಥವಾ ಶಾಸನಗಳ ಸಂಖ್ಯೆ ಮತ್ತು ಗಾತ್ರ ಮಾತ್ರ ದೊಡ್ಡದಾಗಿದೆಯೋ?" ಎನ್ನುವ ಸುಪ್ರಸಿದ್ಧ ಇತಿಹಾಸ ತಜ್ಞ ವಿಲ್ ಡುರಂಟನ ಪ್ರಶ್ನೆ ಪ್ರಶ್ನೆಯಾಗಿಯೇ ಉಳಿಯಬಹುದಲ್ಲವೆ? ✡



ಜಾತಸ್ಯ ಮರಣಂ ಧ್ರುವಂ

ಡಾ. ಕುಸುಮ ಅಗ್ರವಾಲ

ಸೃಷ್ಟಿಯ ಆರಂಭದಿಂದಲೂ ಮನುಷ್ಯನಿಗೆ ರಹಸ್ಯಾತ್ಮಕವಾಗಿರುವ ಸಂಗತಿಗಳಲ್ಲಿ ಮೃತ್ಯುವೂ ಒಂದು. ಮರಣದ ಸುತ್ತ ಪರಿವೇಷ್ಟಿತವಾಗಿರುವ ಅವಗುಂಠನವನ್ನು ಕಿತ್ತೊಗೆಯಲು ಆತ ಅದೆಷ್ಟು ಪ್ರಯತ್ನಿಸಿದರೂ ಸಫಲನಾಗಲಿಲ್ಲ. ಜಾತಸ್ಯ ಮರಣಂ ಧ್ರುವಂ ಎನ್ನುವುದು ಕಟು ಸತ್ಯವಾದರೂ ಅದರ ಪ್ರಭಾವ ಏಕಪ್ರಕಾರವಾಗಿಲ್ಲ. ಮೃತ್ಯು ಹೇಗೂ ಕಟ್ಟಿಟ್ಟದ್ದು; ಅದರ ಬಗೆಗೆ ತಲೆ ಕೆಡಿಸಿಕೊಂಡು ಜೀವನದಲ್ಲಿ ಲಭ್ಯವಿರುವ ಸುಖಸಂತೋಷಗಳಿಂದ ಅದೇಕೆ ವಂಚಿತರಾಗಬೇಕು? ಎಂದು ಕೆಲವರು ಭೌತಿಕ ಸುಖದತ್ತ ತಮ್ಮೆಲ್ಲ ಲಕ್ಷ್ಯವನ್ನು ಕೇಂದ್ರೀಕರಿಸಿದರೆ ಇನ್ನು ಕೆಲವರು ನಶ್ವರವಾದ ಪ್ರಪಂಚದಲ್ಲಿ ಕ್ಷಣಿಕ ಸುಖವನ್ನರಸುವುದೇಕೆ? ಎಂಬ ವೈರಾಗ್ಯ ಭಾವನೆಯನ್ನು ತಾಳಿ ಆಯುಷ್ಯವೆಲ್ಲವನ್ನು ಭಗವಚ್ಚಿಂತನೆಯಲ್ಲಿ ಕಳೆಯುತ್ತಾರೆ. ಮೃತ್ಯುವಿನ ಪ್ರಭಾವ ಸಾಯುವವನ ಮೇಲಷ್ಟೇ ಆಗುವುದಿಲ್ಲ. ಅವನ ಬಂಧುಬಾಂಧವರ ಮೇಲೂ ಅದು ಎಂದೆಂದಿಗೂ ಅಳಿಸಲಾಗದ ಕರಾಳ ಛಾಯೆಯನ್ನು ಬಿಟ್ಟು ಹೋಗುತ್ತದೆ. ಮಾನವ ಬಹು ದೀರ್ಘಕಾಲದಿಂದ ಧರ್ಮ-ದರ್ಶನಗಳ ಸಹಾಯದಿಂದ ಮೃತ್ಯುವನ್ನು ಅರ್ಥವಿಸಲು ಪ್ರಯತ್ನಿಸಿದರೂ ಅವನ ಮನಸ್ಸಿನಲ್ಲಿರುವ ಮೃತ್ಯುವಿನ ಬಗೆಗಿನ ಭಯಾವಹ ಕಲ್ಪನೆ ದೂರವಾಗಲಿಲ್ಲ. ಮೃತ್ಯುವನ್ನು ಜಯಿಸಬೇಕೆಂದು ವಿಜ್ಞಾನಿಗಳೂ ಸಾಕಷ್ಟು ಪ್ರಯತ್ನಿಸಿದರು. ಆದರೆ ಜಯ ದೊರೆಯಲಿಲ್ಲ.

ಮೃತ ವ್ಯಕ್ತಿಯ ಬಂಧುಬಾಂಧವರ ಮೇಲೆ ಮೃತ್ಯುವಿನಿಂದೊದಗುವ ಪರಿಣಾಮ ಅಷ್ಟಿಷ್ಟಲ್ಲ. ಕೆಲವೊಮ್ಮೆ ಅದು ವ್ಯಕ್ತಿಗಳ ಮನಃಸಂತುಲನವನ್ನೇ ಕದಡಿಸಿ ತತ್ಪರಿಣಾಮವಾಗಿ ಅವರ ಪ್ರವೃತ್ತಿಗಳು ಸಾಮಾಜಿಕ ಶಿಷ್ಟಾಚಾರಕ್ಕೆ ವಿಪರೀತವಾಗುವಂತಹ ಪರಿಸ್ಥಿತಿಯೂ ಏರ್ಪಡಬಹುದು. ಮೃತ್ಯುವಿನಿಂದೊದಗುವ ಆಘಾತವನ್ನು ಕಡಿಮೆಮಾಡಿ ಮೃತ್ಯುವನ್ನು ನಿಜವಾದ ಅರ್ಥದಲ್ಲಿ ಸ್ವೀಕರಿಸುವಂತಹ ಪರಿಸ್ಥಿತಿಯನ್ನೇರ್ಪಡಿಸಲು ಮನೋವೈಜ್ಞಾನಿಕರು ಬಹುಕಾಲದಿಂದಲೂ ಪ್ರಯತ್ನಿಸುತ್ತಿದ್ದಾರೆ. ಈಗಂತೂ ಈ ವಿಷಯಕ್ಕೆ ಸಂಬಂಧಿಸಿ ಥನೆಟಾಲಜಿ ಅಥವಾ ಮೃತ್ಯುಶಾಸ್ತ್ರ ಎಂಬ ಮನೋವೈಜ್ಞಾನದ ಒಂದು ಶಾಖೆಯೇ ಹುಟ್ಟಿಕೊಂಡಿದೆ.

ಮೃತ್ಯುವಶನಾಗಿರುವ ವ್ಯಕ್ತಿಯಲ್ಲೂ ಆತನ ಪರಿವಾರದ ಸದಸ್ಯರಲ್ಲೂ ಮೃತ್ಯುವಿನ ಬಗೆಗೆ ಸರಿಯಾದ ಕಲ್ಪನೆಯನ್ನುಂಟುಮಾಡಿ ಅದರ ಬಗೆಗಿನ ಭಯಾವಹ ಭಾವನೆಯನ್ನು ಹೊಡೆದೋಡಿಸುವುದೇ ಮೃತ್ಯುಶಾಸ್ತ್ರದ ಮೂಲ ಉದ್ದೇಶ. ವಿಜ್ಞಾನದ ಈ ಹೊಸ ಶಾಖೆಯ ಅಭ್ಯುದಯಕ್ಕಾಗಿ ಅನೇಕರು ಪ್ರಯತ್ನಿಸುತ್ತಿದ್ದರೂ ಈ ವಿಷಯದಲ್ಲಿ ಎಲ್ಲಕ್ಕೂ ಮೊದಲು ಕೇಳಿಬರುವ ಹೆಸರೆಂದರೆ ಡಾ. ಕುಬಲರ್ ಅವರದು. ಅವರು ಮೃತ್ಯುಶಾಸ್ತ್ರಕ್ಕೆ ಸಂಬಂಧಿಸಿದ ಅನೇಕ ಲೇಖನಗಳನ್ನು ಬರೆದಿದ್ದು ಪ್ರಪಂಚದಾದ್ಯಂತ ಸಂಚರಿಸಿ ಸ್ಕೂಲುಗಳಲ್ಲೂ ಕಾಲೇಜುಗಳಲ್ಲೂ ವಿಶ್ವ-

ವಿದ್ಯಾಸಿಲಯಗಳಲ್ಲೂ ಈ ಬಗೆಗೆ ವ್ಯಾಖ್ಯಾನಗಳನ್ನು ಕೊಟ್ಟಿದ್ದಾರೆ ಡಾ. ಕೂಬಲರ್ ಬರೆದ 'On Death And Dying' ಎಂಬ ಪುಸ್ತಕ ಇಂದು ಸರ್ವಮಾನ್ಯವಾಗಿದೆ. ಮೃತ್ಯು ಶಾಸ್ತ್ರದ ಬಗೆಗೆ ಹೀಗೆ ಪುಸ್ತಕ ಬರೆಯುವುದರಿಂದ, ವ್ಯಾಖ್ಯಾನಗಳನ್ನಾಗಲಿ ಚರ್ಚಾ ಗೋಷ್ಠಿಗಳನ್ನಾಗಲಿ ಏರ್ಪಡಿಸುವುದರಿಂದ ಪಾಶ್ಚಾತ್ಯ ಪ್ರಪಂಚದಲ್ಲಿ ಸಾಮಾನ್ಯ ಮನುಷ್ಯನಿಗೊದಗುತ್ತಿರುವ ಪ್ರಯೋಜನ ಕೇವಲ ಎರಡು ವರ್ಷಗಳ ಹಿಂದೆ ಒದಗುತ್ತಿರಲಿಲ್ಲ ಎಂದು ಕೊಲಂಬಿಯ ವಿಶ್ವವಿದ್ಯಾನಿಲಯದ ಮೆಡಿಕಲ್ ಸ್ಕೂಲಿನಲ್ಲಿ ಮೃತ್ಯು ಶಾಸ್ತ್ರವನ್ನೋದಿಸುತ್ತಿರುವ ಡಾ. ಆಸ್ಟಿನ್ ಕುತ್ಚರ್ ಹೇಳುತ್ತಾರೆ. ಆಸ್ಪತ್ರೆಗಳು, ಧಾರ್ಮಿಕ ಸಂಘಟನೆಗಳು, ವಿಶ್ವವಿದ್ಯಾನಿಲಯದ ಮನೋವಿಜ್ಞಾನದ ವಿಭಾಗಗಳು ಮುಂತಾದೆಡೆಗಳಲ್ಲಿ ಈ ಬಗ್ಗೆ ವಿಚಾರ ಗೋಷ್ಠಿಗಳೇರ್ಪಡಿಸುವಷ್ಟು ಮೃತ್ಯುಶಾಸ್ತ್ರ ಇಂದು ಅಮೆರಿಕದಲ್ಲಿ ಜನಪ್ರಿಯವಾಗಿದೆ.

ರೋಗಿಯೊಬ್ಬ ಮರಣಾಸನ್ನನಾದಾಗ ಅದನ್ನು ಆತನಿಂದ ಮುಚ್ಚಿಡುವ ಬದಲು ಸ್ವಲ್ಪ ಚಾತುರ್ಯವನ್ನುಪಯೋಗಿಸಿ ಇದ್ದುದನ್ನು ಇದ್ದಂತೆ ಹೇಳಿಬಿಡುವುದು ಒಳ್ಳೆಯದು ಎಂದು ಮನೋವಿಜ್ಞಾನಿಗಳು ಹೇಳುತ್ತಾರೆ. ಕುಟುಂಬದ ಉಳಿದ ಸದಸ್ಯರು ತಮ್ಮ ದುಃಖವನ್ನಾಗಲಿ ಭಾವನೆಯನ್ನಾಗಲಿ ಹತ್ತಿಕ್ಕುವುದಕ್ಕಿಂತ ಅದನ್ನು ಮುಕ್ತವಾಗಿ ವ್ಯಕ್ತಪಡಿಸುವುದು ಹಿತವಾದದ್ದು. ಬರಲಿರುವ ಮೃತ್ಯುವಿನ ಸೂಚನೆಯನ್ನು ಕೊಡುವುದರಿಂದ ರೋಗಿಗೆ ಇನ್ನೊಂದು ಲಾಭವೂ ಉಂಟು. ಅಂತಹ ಪ್ರಸಂಗದಲ್ಲಿ ಇತರರಿಂದ ಸೇವೆ ಮಾಡಿಸಿಕೊಂಡ ಬಗ್ಗೆ ಅವನಿಗೆ ಸಂಕೋಚವನ್ನಾಗಲಿ ಅಪರಾಧಿ ಭಾವನೆಯನ್ನಾಗಲಿ ಬರುವುದಿಲ್ಲ, ತನ್ನ ಭಾವನೆಗಳನ್ನು ದುಃಖವನ್ನು ಪ್ರಕಟಿಸುವ ಮೂಲಕವೋ ಅಥವಾ ಇನ್ನಾವುದಾದರೂ ಮಾಧ್ಯಮದ ಮೂಲಕವೊ ವ್ಯಕ್ತಪಡಿಸುವ ಅವಕಾಶ ಅವನಿಗೆ ದೊರೆಯುವುದು. ಇದನ್ನು ಹೇಳುವಾಗ ನನ್ನದೇ ಆದ ಒಂದು ಅನುಭವ ನೆನಪಿಗೆ ಬರುತ್ತದೆ. ನನ್ನ ತಾಯಿ ಆಗ ಆಸ್ಪತ್ರೆಯೊಂದರಲ್ಲಿ ರೋಗಗ್ರಸ್ತಳಾಗಿ ಮಲಗಿದ್ದಳು. ತಾನು ಮಕ್ಕಳಿಗೆ ಏನಾದರೂ ಮಾಡುವುದಂತೂ ದೂರವುಳಿಯಿತು; ಮಕ್ಕಳಿಂದಲೇ ಸಹಾಯ ಪಡೆಯಬೇಕಾಯಿತಲ್ಲಾ! ಛೇ! ನನ್ನಿಂದ ಅವರಿಗೆಷ್ಟು ತೊಂದರೆ ಎಂಬ ಭಾವನೆ ಅವಳಲ್ಲಿ ಮನೆಮಾಡಿತ್ತು. ತನ್ನಿಂದ ಮಕ್ಕಳಿಗೆ ಸಾಧ್ಯವಿದ್ದಷ್ಟು ಕಡಿಮೆ ತೊಂದರೆಯಾಗಬೇಕು. ಅದಕ್ಕಾಗಿ ತಾನು ಹೆಚ್ಚು ಕಷ್ಟ ಸಹಿಸಬೇಕು ಎಂಬ ನಿರ್ಧಾರಕ್ಕೆ ಆಕೆ ಬಂದುಬಿಟ್ಟಿತ್ತು. ತನಗೂ ಮಕ್ಕಳಿಗೂ ಇರುವ ಭೌತಿಕ ಸಂಪರ್ಕ ಶೀಘ್ರದಲ್ಲೇ ಕೊನೆಗೊಳ್ಳುವುದೆ ಎನ್ನುವುದು ಒಂದು ವೇಳೆ ಗೊತ್ತಾಗಿದ್ದರೆ ಅವಳಿಗೆ ಇಷ್ಟು ಸಂಕೋಚವಾಗುತ್ತಿರಲಿಲ್ಲವೋ ಏನೋ.

ಮುಂದೆ ಮೃತ್ಯುವೊದಗಲಿದೆಯೆಂಬುದನ್ನು ರೋಗಿಗೆ ತಿಳಿಸುವುದು ಹೇಗೆ? ಎಲ್ಲಕ್ಕೂ ಮೊದಲು ರೋಗಿಯ ಸ್ಥಿತಿ ನಿಜಕ್ಕೂ ಗಂಭೀರವಾಗಿದೆಯೆನ್ನುವುದನ್ನು ಡಾಕ್ಟರಿಂದ ಖಚಿತಪಡಿಸಿಕೊಳ್ಳಬೇಕು. ಆತ ಬದುಕುವುದು ಸಾಧ್ಯವೇ ಇಲ್ಲವೆಂದಾಗ ಆ ಸಂಗತಿಯನ್ನು ರೋಗಿಗೆ ಒಮ್ಮೆಲೇ ತಿಳಿಸದೆ ಕ್ರಮ ಕ್ರಮವಾಗಿ ಆತನಿಗೆ ಆಘಾತವಾಗದ ರೀತಿಯಲ್ಲಿ ತಿಳಿಸಬೇಕು. ಅತ್ಯಂತ ನಿರಾಶೆಯ ಕ್ಷಣಗಳಲ್ಲಿ ಆತ ಆತ್ಮಹತ್ಯೆಯನ್ನು ಮಾಡಿಕೊಳ್ಳುವ ಸಂಭವವಿರುವುದರಿಂದ ಈ ಬಗ್ಗೆ ತುಂಬಾ ಎಚ್ಚರಿಕೆಯನ್ನು ವಹಿಸುವುದು ಅತ್ಯವಶ್ಯ. ಜೀವನದ ಕೊನೆಯ ಕ್ಷಣದವರೆಗೂ ರೋಗದಿಂದ ಪಾರಾಗುವ ಆಶೆ ಕೆಲವರಿಗಿರುತ್ತದೆ. ಅಂತಹವರ ಆಶೆಯನ್ನು ಸುಮ್ಮನೆ ಭಂಗಗೊಳಿಸಬಾರದು. ಆದ್ದರಿಂದ ತನ್ನ ನಿಜವಾದ ಸ್ಥಿತಿಯ ಬಗ್ಗೆ ತಿಳಿಯಲು ಆತನಿಗೆ ಆಸಕ್ತಿಯಿದೆಯೋ ಇಲ್ಲವೋ ಎಂಬುದನ್ನು ಅರಿತು, ಇದೆಯೆಂದಾಗ ಮಾತ್ರ ಮುಚ್ಚುಮರೆಯಿಲ್ಲದೆ ನಿಜಸ್ಥಿತಿಯನ್ನು ತಿಳಿಸಬೇಕು.

ಮರಣಾಸನ್ನ ಸ್ಥಿತಿಯಲ್ಲಿಯೂ ರೋಗಿಯ ಮನಸ್ಸು ಚುರುಕಾಗಿಯೇ ಇರುತ್ತದೆ. ಆದ್ದರಿಂದ ಅವನಲ್ಲಿ ಆತ್ಮವಿಶ್ವಾಸ ಬೆಳೆಸಲು ಸುಳ್ಳುಸುಳ್ಳೇ ಅಕ್ಕರೆ ಇಲ್ಲವೆ ಸಂತೋಷ ವ್ಯಕ್ತಪಡಿಸಿದರೆ ಸೂಕ್ಷ್ಮಸಂವೇದಿಯಾದ ಅವನ ಮನಸ್ಸು ನಾಟಕೀಯತೆಯನ್ನು ಗ್ರಹಿಸಿ ಚಿಂತಾಕ್ರಾಂತವಾಗುವುದು. ಆದ್ದರಿಂದ ಇಂಥವನ್ನು ಯಾರೂ ಮಾಡಲೇಬಾರದು ಎಂದು ಅಮೇರಿಕದ ರಾಷ್ಟ್ರೀಯ ಮಾನಸಿಕ ಸ್ವಾಸ್ಥ್ಯ ಸಂಸ್ಥೆಯ ಡಾ. ರೋಲ್ಸ್ಟನ್ ಹೇಳುತ್ತಾರೆ. ರೋಗಿ ಬದುಕುಳಿಯುವುದು ಅಸಾಧ್ಯವೆಂದಾಗ ಆಪ್ತೇಷ್ಟರು ಅವನ ಇಚ್ಛೆಗಳನ್ನು ಪೂರ್ಣಗೊಳಿಸಲು ಪ್ರಯತ್ನಿಸಬೇಕು.

ರೋಗಿ ಸಾಲ ಮಾಡಿದ್ದರೆ, ಸಾಲವನ್ನು ಕೊನೆಗೂ ತೀರಿಸಲು ಆಗಲಿಲ್ಲವಲ್ಲಾ ಎಂದಾತ ಕೊರಗುತ್ತಿರಬಹುದು. ಅಂತಹ ವೇಳೆ ಜುಲ್ಲಾತ ತನ್ನ ಸಾಲವನ್ನು ತೀರಿಸಬೇಕೆಂದು ಬಂಧುಬಾಂಧವರಿಗೆ ಹೇಳಿದರೆ ಅವರು ಅವನ ಮರಣ ಸಂಭವಿಸುವ ವರೆಗೆ ಕಾಯದೆ ಆದಷ್ಟು ಬೇಗ ಸಾಲ ತೀರಿಸಬೇಕು. ಇದರಿಂದ ಏನೂ ಸಾಧಿಸಲಿಕ್ಕಾಗದಿದ್ದರೂ ರೋಗಿಯನ್ನು ಆತ್ಮಗ್ಲಾನಿಯಿಂದಲಾದರೂ ಪಾರುಮಾಡಿ ಆತ ಸಮಾಧಾನದಿಂದ ಕೊನೆಯುಸಿರೆಳೆಯುವ ಹಾಗೆ ಮಾಡಿದಂತಾಗುತ್ತದೆ.

ತಂದೆತಾಯಿಗಳು ಪ್ರಾಣಘಾತಕವಾದ ರೋಗಕ್ಕೆ ಬಲಿಯಾಗಿದ್ದರೆ ಅವರು ತಮ್ಮ ಮಕ್ಕಳಿಗೆ ತಿಳಿಯುವ ಹಾಗೆ ಎಷ್ಟು ಸಾಧ್ಯವೊ ಅಷ್ಟನ್ನು ಹೇಳಿಬಿಡುವುದು ಒಳ್ಳೆಯದು ಎಂಬ ಬಗ್ಗೆ ಮನಃಶಾಸ್ತ್ರಜ್ಞರಲ್ಲಿ ಭಿನ್ನಾಭಿಪ್ರಾಯವಿಲ್ಲ. ಒಮ್ಮೆಲೇ ಮೃತ್ಯು ಸಂಭವಿಸಿದರೆ ಅದರಿಂದ ಮಕ್ಕಳ ಮೇಲೆ ಬಲವಾದ ಆಘಾತವಾಗುವ ಸಂಭವವಿದೆ. ಆದರೆ ತಮಗೆ ಒದಗಲಿರುವ ಮೃತ್ಯುವಿನ ಸೂಚನೆಯನ್ನು ಮಕ್ಕಳಿಗೆ ಮೊದಲೇ ಕೊಟ್ಟಿದ್ದರೆ ಅದರಿಂದ ಅವರ ಮೇಲೆ ಅಷ್ಟು ದೊಡ್ಡ ಆಘಾತವಾಗುವುದಿಲ್ಲ. ಮೃತ್ಯುವಿನ ಬಗೆಗೆ ಮಕ್ಕಳಲ್ಲೆಂದೂ ತಪ್ಪು ಕಲ್ಪನೆಗಳನ್ನುಂಟುಮಾಡಬಾರದು. ಇದರಿಂದ ಲಾಭದ ಬದಲು ಹಾನಿಯೇ ಹೆಚ್ಚು. ತಾಯಿ ತೀರಿಕೊಂಡಾಗ ಕೆಲವರು ಮಕ್ಕಳನ್ನು ಸಮಾಧಾನಪಡಿಸಲೋಸುಗ ಅವಳು ಮಲಗಿದ್ದಾಳೆ ಎಂದು ಹೇಳುವುದುಂಟು. ಇದರಿಂದ ಅವರ ಸುಪ್ತಮನಸ್ಸಿನ ಮೇಲೆ ಅವಾಂಛಿತ ಪರಿಣಾಮವಾಗಿ ಮಕ್ಕಳು ನಿದ್ದೆಗೆ ಹೆದರುವಂತಾದೀತು. ಧರ್ಮದ ಬಗೆಗೂ ಏನೂ ಗೊತ್ತಿರದ ಮಕ್ಕಳಿಗೆ ಮೃತ್ಯುವಿನ ಬಗೆಗೆ ಧಾರ್ಮಿಕವ್ಯಾಖ್ಯೆಯನ್ನು ನೀಡುವ ಚಟ ಕೆಲ ಹಿರಿಯರಿಗುಂಟು. ಇದೂ ಒಳ್ಳೆಯದಲ್ಲ. ಇದರಿಂದ ಮಕ್ಕಳ ಮನಸ್ಸಿನಲ್ಲಿ ವೃಥಾ ಭಯವನ್ನುಂಟುಮಾಡಿದಂತಾಗುತ್ತದೆ ಅಷ್ಟೆ. ತಮ್ಮಿಂದಾಗಿಯೆ ತಂದೆ ತಾಯಿಗಳು ಬೇನೆ ಬಿದ್ದರೆಂಬ ಭಾವನೆ ಕೆಲವು ಮಕ್ಕಳಲ್ಲಿ ಮೂಡುವುದುಂಟು. ವ್ಯಾಧಿಗ್ರಸ್ತರಾದ ತಂದೆ ತಾಯಿಗಳು ಮಕ್ಕಳಿಗೆ ರೋಗದ ಕಾರಣವನ್ನು ತಿಳಿಸಿ ಹೇಳುವುದಲ್ಲದೆ ಮರಣ ಖಚಿತವಾಗಿದ್ದರೆ ಅದನ್ನೂ ತಿಳಿಸಿ ಬಿಡುವುದರಿಂದ ಮಕ್ಕಳಲ್ಲಿ ಅಪರಾಧಿ ಭಾವನೆಯುಂಟಾಗಲು ಆಸ್ಪದವೇ ಇರುವುದಿಲ್ಲ.

ನ್ಯೂಯಾರ್ಕಿನಲ್ಲೊಬ್ಬ ವ್ಯಾಪಾರಸ್ಥನಿದ್ದ. ಅವನ ಪತ್ನಿ ರುಗ್ಣಶಯ್ಯೆಯಲ್ಲಿದ್ದಾಗ ಮಗಳ ವಯಸ್ಸು ಮೂರನ್ನು ಮೀರಿರಲಿಲ್ಲ. ಅವಳು ಯಾವಾಗಲೂ ತಾಯಿಯ ಬಳಿಯೆ ಇದ್ದು ಅಕ್ಕರೆಯಿಂದ ಐಸ್ ಕ್ಯಾಂಡಿಯನ್ನು ಚೀಪಿಸುತ್ತಿದ್ದಳು. ತಾಯಿ ಸದಾಕಾಲವೂ ಮಲಗಿರುತ್ತಿದ್ದುದರಿಂದ ತಾಯಿ ರೋಗಗ್ರಸ್ತಳಾಗಿದ್ದು ಅವಳಿಗೆ ಕ್ರಮೇಣವಾಗಿಯಾದರೂ ಗೊತ್ತಾಯಿತು. ನಿಜಸ್ಥಿತಿಯ ಅರಿವು ಅವಳಿಗಾದ್ದರಿಂದ ತಾಯಿಯ ಮರಣ ಸಂಭವಿಸಿದಾಗ ಅವಳಿಗೆ ವಿಶೇಷ ದುಃಖವಾಗಲಿಲ್ಲ. ತಂದೆ ತಾಯಿಗಳ ಮರಣದ ಆಘಾತವನ್ನು ಸಹಿಸುವ ತ್ರಾಣ ಮಕ್ಕಳಲ್ಲಿ ಇರುವುದಿಲ್ಲವಾದ್ದರಿಂದ ಆ ಸುಗತಿಯನ್ನು ಅವರಿಂದ ಆದಷ್ಟು ಬಚ್ಚಿಡಬೇಕೆಂಬ ಭಾವನೆ ಸಾರ್ವತ್ರಿಕವಾಗಿದೆ. ಆದರೆ ಮನಃಶಾಸ್ತ್ರಜ್ಞರ ಅಭಿಪ್ರಾಯ ತದ್ವಿರುದ್ಧವಾಗಿದೆ. ಅವರ ಪ್ರಕಾರ ದಾಪ

ಕರ್ಮ ನಡೆಯುವಾಗಲೂ ಮಕ್ಕಳನ್ನು ಸೇರಿಸಿಕೊಳ್ಳಬೇಕು. ಇದರಿಂದ ಅವರ ಪಾಲಿಗೆ ಮೃತ್ಯು ಒಂದು ಭೀಷಣ ರಹಸ್ಯವಾಗುಳಿಯದೆ ಎಲ್ಲರ ದುಃಖದಲ್ಲಿಯೂ ತಮ್ಮ ದುಃಖವನ್ನು ಹಂಚಿಕೊಳ್ಳುವಂತಾಗುವುದು.

ಪತಿ-ಪತ್ನಿಯರಲ್ಲಿ ಯಾರಾದರೊಬ್ಬರ ಸ್ಥಿತಿ ಚಿಂತಾಜನಕವಾಗಿದ್ದರೆ ಪರಿಸ್ಥಿತಿ ಇನ್ನೂ ಗಂಭೀರವಾಗುತ್ತದೆ. ಪತಿಯು ಮರಣಾಸನ್ನನಾಗಿದ್ದರೆ ಅವನಿಗೊದಗಬಹುದಾದ ಮೃತ್ಯುವಿನ ಕಲ್ಪನೆಯಿಂದ ಶೋಕತಪ್ತಳಾದ ಪತ್ನಿ ತನ್ನೆಲ್ಲ ಧೈರ್ಯವನ್ನು ಕಳೆದುಕೊಳ್ಳುವುದರಿಂದ ಪತಿಯ ಬಳಿ ಬರಲೂ ಅವಳಿಂದಾಗುವುದಿಲ್ಲ. ಇದರಿಂದ ಪತಿ-ಪತ್ನಿಯರಿಬ್ಬರಿಗೂ ತೊಂದರೆಯಾಗುವುದು ಸಹಜವೆ. ಆದ್ದರಿಂದ ಇಂಥ ಪ್ರಸಂಗದಲ್ಲಿ ಪತಿಯಾಗಲಿ ಪತ್ನಿಯಾಗಲಿ ಮೃತ್ಯುವಿನ ಬಗೆಗಿರುವ ಭಯವನ್ನು ಸಾಧ್ಯವಿದ್ದಷ್ಟು ಮಟ್ಟಿಗೆ ಹೊಡೆದೋಡಿಸಲು ಪ್ರಯತ್ನಿಸಿ ಆದಷ್ಟು ಹೆಚ್ಚು ಸಮಯವನ್ನು ರೋಗಗ್ರಸ್ತನಾದ ವ್ಯಕ್ತಿಯ ಬಳಿ ಕಳೆಯಬೇಕು. ಇದರಿಂದ ಸಮಾಧಾನಚಿತ್ತದಿಂದ ಮರಣಹೊಂದಲು ರೋಗಿಗೆ ಸಾಧ್ಯವಾಗುವುದು. ಕೊನೆಗಾಲದಲ್ಲಿ ಅವನ ಬಳಿ ಇರಲು ಸಾಧ್ಯವಾಗಲಿಲ್ಲವಲ್ಲ ಎಂಬ ಕೊರಗು ಅವನ ಸಹವರ್ತಿಗೆ ತಪ್ಪುವುದು.

ಅಕಸ್ಮಾತ್ತಾಗಿ ಮಗು ತೀರಿಹೋಗುವ ದುರ್ಭರ ಪ್ರಸಂಗ ಒಮ್ಮೊಮ್ಮೆ ತಂದೆ ತಾಯಿಗಳಿಗೆ ಒದಗುವುದುಂಟು. ಅಂತಹ ಪ್ರಸಂಗದಲ್ಲಿ ತಾಯಿ ಸ್ತ್ರೀ ಸಹಜ ಸ್ವಭಾವದಂತೆ ತನ್ನ ಅಳಲನ್ನು ನಾಲ್ಕು ಜನರಲ್ಲಿ ತೋಡಿಕೊಂಡು ದುಃಖವನ್ನು ಕಡಿಮೆ ಮಾಡಿಕೊಳ್ಳುತ್ತಾಳೆ. ಆದರೆ ತಂದೆ ಹೀಗೆ ಮಾಡಿದರೆ ತನ್ನ ಗಾಂಭೀರ್ಯಕ್ಕೆಲ್ಲಿ ಚ್ಯುತಿ ಬರುತ್ತದೋ ಎಂದು ದುಃಖವನ್ನು ಒಳಗೊಳಗೇ ನುಂಗಿಕೊಂಡು ಕಷ್ಟಪಡುತ್ತಾನೆ. ಆದ್ದರಿಂದ ಇಂತಹ ಪ್ರಸಂಗದಲ್ಲಿ ತಾಯಿಗಿಂತ ತಂದೆಗೇ ತೊಂದರೆ ಹೆಚ್ಚು. ಕುಟುಂಬದ ಸದಸ್ಯರೊಬ್ಬರು ನಿಧನರಾದಾಗ ತಂದೆಯು ಇಂತಹ ಹುಸಿ ಜಂಭವನ್ನು ಬಿಟ್ಟು ಮುಕ್ತವಾಗಿ ದುಃಖವನ್ನು ಪ್ರಕಟಿಸಿದರೆ ಮೃತ್ಯುವಿನ ಭಯಾವಹ ಸ್ವರೂಪ ಅವನ ಪಾಲಿಗೆ ಕಡಿಮೆಯಾಗುವುದಲ್ಲದೆ ಹೊಸ ಪರಿಸ್ಥಿತಿಗೆ ಹೊಂದಿಕೊಳ್ಳಲೂ ಸಹಾಯವಾಗುವುದು. ದುಃಖವನ್ನು ಒಳಗೊಳಗೆ ಸಹಿಸಿ ನವೆಯುವುದರಿಂದ ನಿದ್ರಾನಾಶ, ತಲೆನೋವುಗಳಂತಹ ಶಾರೀರಕ ಅಥವಾ ಮಾನಸಿಕ ವ್ಯಾಧಿಗಳೂ ತಲೆದೋರುವವು. ಒಮ್ಮೊಮ್ಮೆ ತೀರಾ ವಿಚಿತ್ರವಾದ ಲಕ್ಷಣಗಳೂ ತಲೆದೋರಬಹುದು. ಉದಾಹರಣೆಗೆ ಹೇಳುವುದಾದರೆ ಯಾವನೊಬ್ಬ ಜಠರದ ಕ್ಯಾನ್ಸರಿನಿಂದ ಮರಣ ಹೊಂದಿದರೆ ಅವನ ಆಪ್ತಬಾಂಧವರಲ್ಲಿ ಜಠರವೇದನೆ ತಲೆದೋರಬಹುದು. ಆದ್ದರಿಂದ ತೀರಾ ಸನಿಹದವರು ನಿಧನರಾದಾಗ ದುಃಖವನ್ನು ಹತ್ತಿಕ್ಕಿಕೊಳ್ಳದೆ ನಿಸ್ಸಂಕೋಚವಾಗಿ ವ್ಯಕ್ತಪಡಿಸುವುದು ಒಳ್ಳೆಯದು.

ಮೃತ್ಯುವು ಎಲ್ಲರಿಗೂ ಕಟ್ಟಿಟ್ಟದ್ದು. ಯಾರೂ ಅದರಿಂದ ಹೊರತಾಗಿಲ್ಲ. ಅಂದ ಮೇಲೆ ಆಪ್ತಬಾಂಧವರು ನಿಧನರಾದಾಗ ದುಃಖವನ್ನು ಸಹಿಸುವ ಮನಃಸ್ಥೈರ್ಯವನ್ನು ಮೊದಲಿನಿಂದಲೆ ನಿರ್ಮಿಸಿಕೊಳ್ಳುವುದು ಒಳ್ಳೆಯದಲ್ಲವೆ? ಮೃತ್ಯುವು ಜೀವನದ ಧರ್ಮ. ಮೃತ್ಯುವಿನ ಪರಿಣಾಮಗಳನ್ನು ಸಹಿಸುವ ಶಕ್ತಿ ಪ್ರತಿಯೊಬ್ಬನಲ್ಲಿಯೂ ಇರಬೇಕು. ಸತ್ತವರನ್ನು ನೆನೆಸಿಕೊಂಡು ಕೊರಗುವುದರಿಂದ ಸ್ವಂತದ ಜೀವನಕ್ಕೂ ಸುಖವಿಲ್ಲ; ಸತ್ತವರ ಆತ್ಮಕ್ಕೂ ಶಾಂತಿಯಿಲ್ಲ. ಆದ್ದರಿಂದ ಮೃತ್ಯುವನ್ನು ಸಾಮಾನ್ಯ ಹಾಗೂ ಸಹಜ ಸ್ಥಿತಿಯಲ್ಲಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸುವುದು ಅತ್ಯಗತ್ಯ.



ಕಳೆದುಹೋದ ಧನ, ಮಿತ್ರ, ಹೆಂಡತಿ, ಭೂಮಿ ಮತ್ತೆ ಲಭಿಸಬಹುದು ಆದರೆ ಶರೀರವೇ ಕಳೆದುಹೋದರೆ ಪುನಃ ದೊರೆಯದು.

– ಸುಭಾಷಿತ

ಮುನಿದು ಪೊಡವಿ ನುಂಗುವೊಡೆ

ಜಿ. ಟಿ. ನಾರಾಯಣರಾವ್

ಶೀರ್ಷಿಕೆಯ ಪೂರ್ಣ ಪಾಠ ಹೀಗಿದೆ "ಮುನಿದು ಪೊಡವಿ ನುಂಗುವಡೆ ಮನೆ ತಾಗುವುದೆ? ಕುಪಿತ ಪೆಗ್ಗಡಲುಕ್ಕಿ ಜಗವ ಮೊಗೆವಡೆ ಮೊಳೆಗಳಡ್ಡ ಬಹವೇ?" ಉತ್ತರ ತೀರ ಸರಳ: ಈ ನೈಸರ್ಗಿಕ ಪ್ರಕೋಪಗಳಿಗೆ ಎದುರಾಗಿ ಮನೆಯಾಗಲಿ ಮೊಳೆಯಾಗಲಿ ಜೀವಿಗೆ ಗುರಾಣಿ ಕಾಪನ್ನು ಒದಗಿಸಲಾರವು. ಇಂಥ ಭೀಕರ ಪರಿಸ್ಥಿತಿ ಮಾನವನಿಗೆ ಈಗ ಎದುರಾಗಿದೆ ಎಂಬುದಾಗಿ ಪರಿಸರ ವಿಜ್ಞಾನಿಗಳು ಎಚ್ಚರಿಕೆಯ ಗಂಟೆಯನ್ನು ಬಾರಿಸಿದ್ದಾರೆ.

ಯಾವುದೇ ಜೀವಿ (ಸಸ್ಯ, ಮತ್ತು ಪ್ರಾಣಿ) ಬದುಕಿ ಬಾಳುವ ಪ್ರದೇಶಕ್ಕೆ ಆ ಜೀವಿಯ ಪರಿಸರವೆಂದು ಹೆಸರು. ನಿರ್ದಿಷ್ಟವಾಗಿ ಹೇಳುವುದಾದರೆ ಜೀವಿಯ ಮೇಲೆ ಪ್ರಭಾವ ಬೀರುವ ಸಕಲ ಬಾಹ್ಯ ಬಲಗಳ ಮೊತ್ತವೂ ಅದರ ಪರಿಸರವಾಗುತ್ತದೆ. ಉದಾಹರಣೆಗೆ ಮನುಷ್ಯನನ್ನು ಪರಿಶೀಲಿಸೋಣ. ಇವನಿಗೆ ಉಸಿರಾಡಲು ವಾಯು ಬೇಕು, ನಿಲ್ಲಲು ನೆಲ ಬೇಕು, ತಿನ್ನಲು ಆಹಾರ ಬೇಕು. ಇವನ್ನೆಲ್ಲ ಈತ ಪಡೆಯುವುದು ಪರಿಸರದಿಂದ. ಮನುಷ್ಯನನ್ನು ಅವನ ಪರಿಸರದಿಂದ ಬೇರ್ಪಡಿಸಿದರೆ ತಕ್ಷಣ ಮರಣ ಸಂಭವಿಸುವುದು ಖಚಿತ. ನಮ್ಮ ಎಂದಿನ ಉಡುಪಿನಲ್ಲೇ ನಾವು ಚಂದ್ರನಲ್ಲಿ ಇಳಿದದ್ದಾದರೆ ರಕ್ತನಾಳಗಳು ಒಡೆದು ಆ ಕ್ಷಣವೇ ಸತ್ತು ಹೋದೇವು. (ಭೂ ಪರಿಸರದಲ್ಲಿನ ವಾಯುಮಂಡಲದ ಸಂಮರ್ದ ಅಲ್ಲಿ ಇಲ್ಲದಿರುವುದರಿಂದ ಹೀಗಾಗುತ್ತದೆ: ಅಂದರೆ ಧಮನಿಗಳಲ್ಲಿ ಹರಿಯುತ್ತಿರುವ ನೆತ್ತರಿನ ಹೊರಮುಖ ಒತ್ತಡವನ್ನು ಸಂತುಲಿಸಲು ವಾಯುಮಂಡಲದ ಅದುಮಿಕೆ ಒತ್ತಡ ಅಗತ್ಯ.)

ಯಾವುದೇ ಜೀವಿಯ ದೃಷ್ಟಿಯಿಂದ ಅದರ ಪರಿಸರದಲ್ಲಿ ಎರಡು ಮುಖ್ಯ ವಿಭಾಗಗಳನ್ನು ಗುರುತಿಸಬಹುದು: ಇತರ ಜೀವಿಗಳ ಸಮುದಾಯ, ಅಜೈವಿಕ ವಸ್ತುಗಳ ಸಮುದಾಯ. ಮನುಷ್ಯನನ್ನು ಕುರಿತಂತೆ ಪ್ರಾಣಿ ಹಾಗೂ ಸಸ್ಯ ಪ್ರಪಂಚ ಇತರ ಜೀವಿಗಳ ಸಮುದಾಯವಾಗುವುದು; ಗಾಳಿ, ನೀರು, ಮಣ್ಣು ಮುಂತಾದವು ಅಜೈವಿಕ ವಸ್ತುಗಳ ಸಮುದಾಯವಾಗುತ್ತದೆ

ಪರಿಸರದ (ನಿಸರ್ಗದ ಎನ್ನಿ ಬೇಕಾದರೆ) ಸುದೀರ್ಘ ಪ್ರಯೋಗದ ಫಲ ಜೀವಿ. ಇದರ ಉಳಿವಿಗೆ ಬಾಳ್ವಿಗೆ ಪರಿಸರ ಅತ್ಯಗತ್ಯ. ಆದ್ದರಿಂದ ಪರಿಸರವಿಲ್ಲದೇ ಜೀವಿ ಇಲ್ಲ. ಆದರೆ ಜೀವಿ ಇಲ್ಲದಿದ್ದರೂ ಪರಿಸರ ಉಳಿದೀತು. (ಇದನ್ನು ಆಗ ಪರಿಸರವೆಂದು ಕರೆಯುವುದಿಲ್ಲ ಮಾತ್ರ.) ಉದಾಹರಣೆಗೆ ಚಂದ್ರ, ಶುಕ್ರ, ಸೂರ್ಯ ಮುಂತಾದ ಆಕಾಶಕಾಯಗಳಲ್ಲಿ ಪರಿಸರವಿದ್ದರೂ ಜೀವಿ ಇಲ್ಲ. ನಮ್ಮ ಭೂಮಿಯಲ್ಲೇ ನಿರ್ಜೀವ ಪ್ರದೇಶಗಳು ಸಾಕಷ್ಟು ಇವೆ.

ಜೀವಿಯನ್ನು ಸೃಷ್ಟಿಸಿದ್ದು ಪರಿಸರ, ನಿಜ. ಆದರೆ ಮುಂದೆ ಜೀವಿಯೂ ಪರಿಸರವನ್ನು ಸೃಷ್ಟಿಸದೆ (ಅಥವಾ ಪ್ರಭಾವಿಸದೆ) ಇಲ್ಲ. ಹವಳದ ದಿಬ್ಬಗಳು, ನಿಬಿಡ ಕಾನನಗಳು, ವಿಶಾಲ ಹುಲ್ಲುಗಾವಲುಗಳು, ಮನುಷ್ಯ ಕೃತ ಭೂದೃಶ್ಯ ಇವೆಲ್ಲವೂ ಪರಿಸರದ ಮೇಲೆ ಜೀವಿ ಬೀರಿರುವ ಪ್ರಭಾವಕ್ಕೆ ನಿದರ್ಶನಗಳು. ಈ ಅಂತರ ಕ್ರಿಯೆಗಳು ಲಕ್ಷಾಂತರ ವರ್ಷಗಳಿಂದ [illegible] ರೀತಿಗಳಲ್ಲಿ ನಡೆದುಕೊಂಡು ಬಂದಿರುವುದರಿಂದ ನಿಸರ್ಗದ ಸಮತೋಲ ಎಂದೂ ವಿಶೇಷವಾಗಿ ಕದಲಲಿಲ್ಲ.

ಸ್ಪರ್ಧಾತ್ಮಕವಾದ ಈ ಪ್ರಪಂಚದಲ್ಲಿನ ಹೋರಾಟದ ಬದುಕಿನಲ್ಲಿ ಸಾಹಸ ಪ್ರವೃತ್ತಿಯ ಜೀವಿಗಳ ಸಂಖ್ಯೆಯಲ್ಲಿ ಇರುವ ಒಂದು ಹದವೇ ನಿಸರ್ಗದ ಸಮತೋಲ; ಲಭ್ಯ ಆಹಾರ ಹಾಗೂ ಇತರ ಆವಶ್ಯಕ ವಸ್ತುಗಳನ್ನು ಇದು ಅವಲಂಬಿಸಿದೆ. ಇಲಿಗಳು ಮಿತಿಮೀರುವಂತಿಲ್ಲ – ಹಾವುಗಳಿವೆ; ಹಾವುಗಳು ಮಿತಿಮೀರುವಂತಿಲ್ಲ – ಮುಂಗುಸಿಗಳಿವೆ; ಇತ್ಯಾದಿ. ಅರ್ಥಾತ್ ನಿಸರ್ಗ (ಅಥವಾ ಪರಿಸರ) ಅವ್ಯಕ್ತವಾದ ಒಂದು ವಿಧಾನದಿಂದ ಜೀವಿಗಳ ಸಮಗ್ರತೆಯಲ್ಲಿ ಸಮತೋಲವನ್ನು ಕಾಪಿರಿಸಲು ಪ್ರಯತ್ನಿಸುತ್ತಿದೆ. ಇದೊಂದು ಸರಪಳಿಕ್ರಿಯೆ, ಸರಪಳಿಯ ಕೊಂಡಿಗಳೂ ಶಾಖೋಪ ಶಾಖೆಗಳೂ ಅಸಂಖ್ಯಾತ. ಹೀಗೆ ನಿಸರ್ಗದ ಸಮತೋಲ ಒಂದು ವಿಧವಾದ ಆಂತರಿಕ ಗತ್ಯಾತ್ಮಕ ಹೊಂದಾಣಿಕೆ.

ಇಂಥ ನೈಸರ್ಗಿಕ ಘಟಕಗಳ ಪ್ರಭಾವವನ್ನು ಬಲಾತ್ಕಾರವಾಗಿ ತಡೆಗಟ್ಟಲಾದರೆ ಅಥವಾ ನಿಶ್ಚಿತ ರಂಗಗಳಲ್ಲಿ ವೇಗೋತ್ಕರ್ಷಿಸಲಾದರೆ ಆದರಿಂದ ನಿಸರ್ಗದ ಸಮತೋಲಕ್ಕೆ ಭಂಗ ತಟ್ಟುತ್ತದೆ. ಒಂದು ವಲಯದಲ್ಲಿ ಕಂಡುಬಂದ ಕೊರತೆ ಸಾರ್ವತ್ರಿಕವಾಗಿ ಹಬ್ಬುವುದು ಅನಿವಾರ್ಯ. ಹುಲಿಗಳ ನಿರ್ಮೂಲನ ಜಿಂಕೆಗಳ ಅತಿವೃದ್ಧಿಗೂ ಜಿಂಕೆಗಳ ಅತಿ ವೃದ್ಧಿ ಪೈರಿನ ನಾಶಕ್ಕೂ ಪೈರಿನ ನಾಶ ಮನುಷ್ಯನ ಆರ್ಥಿಕತೆಯ ಏರುಪೇರಿಗೂ ಕಾರಣವಾಗುವುದು ಒಂದು ಉದಾಹರಣೆ. ಕಾಡಿಗೆ ಹೊಡೆದ ಕೊಡಲಿ ಪೆಟ್ಟು ನಾಡಿಗೆ ದಾಳಿ ಇಡುವ [illegible] ಕೊನೆಗಾಣುವುದು ಅಪರೂಪವೇನಲ್ಲ.

ಬದುಕನ್ನು ಹಸನು ಮಾಡಲು ಯಂತ್ರ ಸ್ಥಾವರಗಳನ್ನು ಸ್ಥಾಪಿಸಲಾಯಿತು. ಇದಕ್ಕಾಗಿ ವಿಶಾಲ ಪ್ರದೇಶದಲ್ಲಿ ನಿಸರ್ಗವನ್ನು ಬೋಳಿಸಿ ಭಾರೀ ಕಟ್ಟಡಗಳನ್ನೂ ಕಾರ್ಖಾನೆಗಳನ್ನೂ ಕಟ್ಟಲಾಯಿತು. ಈ ಕಾರ್ಖಾನೆಗಳ ಉಚ್ಚಾಟನೆಗಳು (ಅಂದರೆ ಕಲುಷಿತ ರಾಸಾಯನಿಕ ಮಿಶ್ರಿತ ದ್ರವ, ಹೊಗೆ, ಧೂಳು, [illegible], ಒತ್ತಡದ ಏರಿಕೆ ಇತ್ಯಾದಿ) ಅವೇ ಮನುಷ್ಯನ ಬದುಕನ್ನು ಅಸಹನೀಯವಾಗಿ ಮಾಡುವುದನ್ನು ಕಾಣುವಾಗ ನಮ್ಮ ಒಟ್ಟು ಗಣನೆಗಳಲ್ಲಿ ಏನೋ ತಪ್ಪು ನುಸುಳಿದೆ ಎಂಬುದು ಸ್ಪಷ್ಟ.

ಪರಿಸರದ ಬಲಗಳೊಡನೆ ಪ್ರಗತಿಯ ಹೆಸರಿನಲ್ಲಿ ಸೆಣಸುತ್ತಿರುವ ತಂತ್ರ ವಿದ್ಯಾ ವಿಶಾರದ ಮಾನವ ಮಾಡಿರುವುದಾದರೂ ಏನು ? ನಿಸರ್ಗದ ಸಮತೋಲಕ್ಕೆ ಬತ್ತಿ ಇಟ್ಟದ್ದು. ಇದರ ವಿಷ ಫಲ ಪರಿಸರ ಮಾಲಿನ್ಯ–ಮನುಷ್ಯ ಜೀವನದ [illegible]ವನ್ನು ತೆಗೆದುಕೊಳ್ಳಲು ಎದ್ದಿರುವ ಹೊಸ ಬೇತಾಳ. ಇದರಿಂದ ವಿಮೋಚನೆ ಪಡೆದು ಬಾಳುವುದು ಖಂಡಿತ ಸಾಧ್ಯ ಉಂಟೆಂದು ಪರಿಸರ ವಿಜ್ಞಾನಿಗಳು ಪದೇ ಪದೇ ಹೇಳುತ್ತ ಬಂದಿದ್ದಾರೆ. ಪರಿಸರ ಮಾಲಿನ್ಯ ಉಲ್ಬಣಾವಸ್ಥೆಗೆ ಹೋಗಿರುವ ಈಚಿನ ದಿನಗಳಲ್ಲಿ ಇವರ ಮಾತಿಗೆ ಅಧಿಕಾರ ವಲಯಗಳಲ್ಲಿ ಹೆಚ್ಚಿನ ತೂಕ ಬಂದಿದೆ.

ಜೀವಿಗಳು ಮತ್ತು ಅವುಗಳ ಪರಿಸರವನ್ನು ಶಾಸ್ತ್ರೀಯವಾಗಿ ಅಭ್ಯಸಿಸುವ ವಿಜ್ಞಾನ ವಿಭಾಗವೇ ಪರಿಸರ ವಿಜ್ಞಾನ. ನಿಸರ್ಗದ ಸಮತೋಲವನ್ನು ಕುರಿತ ಅಧ್ಯಯನವಿದು. ಜೀವಿಗಳ ಅಂತರ ಸಂಬಂಧಗಳನ್ನೂ ಅಂತರ ಕ್ರಿಯೆಗಳನ್ನೂ ಪರಿಸರ ವಿಜ್ಞಾನದಲ್ಲಿ ಪರಿಶೀಲಿಸಲಾಗುವುದು. ಜೀವವಿಜ್ಞಾನದ ಶಾಖೆಯಾದ ಇದಕ್ಕೆ ೧೮೭೦ ರಿಂದ ಈಚೆಗೆ

ಸ್ವತಂತ್ರವಾದ ಮತ್ತು ಮುಖ್ಯವಾದ ಒಂದು ವಿಜ್ಞಾನ ವಿಭಾಗ ಎಂಬ ಅಂತಸ್ತು ಪ್ರಾಪ್ತವಾಗಿದೆ.

೨

ನಾನು ಮೈಸೂರಿನ ಒಂದು ಬಡಾವಣೆಯ ನಿವಾಸಿ. ಇಲ್ಲಿ ವಾತಾವರಣ ಸಾಕಷ್ಟು ಶಾಂತವಾಗಿಯೇ ಉಂಟು. ನನ್ನ ಮನೆಯ ಕಿಟಕಿಯ ಒಳಗೆ ಮತ್ತು ಅಕ್ಕಪಕ್ಕದ ಮನೆಗಳಲ್ಲಿ ಚಿಕ್ಕಪುಟ್ಟಗಾದರೂ ಹಸಿರು ಕಂಗೊಳಿಸುತ್ತಿದೆ. ಎಳೆ ಮುಂಜಾನೆಯ ತಾಸುಗಳಲ್ಲಿ ಇದು ಫೋಟೋದಲ್ಲಿಯಂತೆಯೇ ಇರುವುದು – ಶಬ್ದರಾಹಿತ್ಯದಲ್ಲಿ. ಆದರೆ ಹಕ್ಕಿಗಳ ಇಂಚರ ಇಲ್ಲಿಲ್ಲ. ನೇಸರು ಏರಿದಂತೆ ರಸ್ತೆಯಲ್ಲಿನ ಆಟೋ ಅರ್ಭಟ, ಬಸ್ಸು ಲಾರಿಗಳ ಸರಟೆಯು ಜೊತೆಗೆ ಅವು ಉಗುಳುವ ದಟ್ಟ ಕಪ್ಪಿನ ಹೊಗೆ ಇವುಗಳಿಂದ ಈ ಪ್ರದೇಶ ಕೂಡ ಒಂದು ಕಲು ಅಸಹನೀಯವಾಗುತ್ತದೆ. ಆದರೆ ದಿಲ್ಲಿ, ಮುಂಬಯಿ, ಕಲ್ಕತ್ತಗಳಿಂದ ಬರುವಂಥ ನನ್ನ ಮಿತ್ರರು ಮಾತ್ರ "ಎಂಥ ಸುಖಾಶ್ರಮವನ್ನು ಕಟ್ಟಿಕೊಂಡು ಹಾಯಾಗಿದ್ದೀರಲ್ಲ" ಎಂದು ನನಗೆ ಅಭಿನಂದನೆ ಸಲ್ಲಿಸುತ್ತಾರೆ.

ಅಪರೂಪಕ್ಕೆ ನಾನು ಬೆಂಗಳೂರಿಗೆ ಹೋಗುವುದುಂಟು. ಎಷ್ಟು ಬೇಗನೆ ಇಲ್ಲಿಂದ ತೊಲಗಿ ಹೋದೇನು ಎಂಬುದು ಅಲ್ಲಿ ಮೊದಲು ಮೂಡುವ ಭಾವ. ಇಡೀ ನಗರಕ್ಕೆ ದುರ್ವಾಸನೆಯನ್ನು ಸಿಂಪಡಿಸಿರುವಂತೆ ನನಗೆ ಅನ್ನಿಸುತ್ತದೆ. ಕಟ್ಟಡಗಳ, ವಾಹನಗಳ ಮತ್ತು ಜನರ ನೀರಸ ಯಾಂತ್ರಿಕತೆ, ಹುಚ್ಚು ಅತಿ ವೇಗ ಮತ್ತು ಗಬ್ಬು "ನನ್ನನ್ನು ಕುರುಡನನ್ನಾಗಿ ಮಾಡಯ್ಯ, ಕಿವುಡನನ್ನಾಗಿ ಮಾಡಯ್ಯ, ಮೂಗಿಲ್ಲದವನನ್ನಾಗಿ ಮಾಡಯ್ಯ" ಎಂದು ಮೊರೆ ಇಡುವಂತೆ ಮಾಡುತ್ತವೆ.

ಮೊನ್ನೆ ಮೊನ್ನೆ ಸಾಕ್ಷಾತ್ ಮುಂಬಯಿಗೆ ಹಾರಿ ಹೋಗಿ ನಾನು ಅಲ್ಲಿ ಒಂದಷ್ಟು ದಿವಸ ಇರುವ ಸುಯೋಗ ಲಭಿಸಿತು. ಇಳಿಯುವ ಮುನ್ನ, ಮಡಿಕೇರಿಯ ಮಂಜನ್ನು, ಹಸಿರನ್ನು ಆ ಸಂಜೆ ಅಲ್ಲಿ ಕಂಡು ನನ್ನ ಭೂಗೋಳದ ಪಾಠಗಳನ್ನು ಮರು ಜಪಿಸಿದೆ. ನನ್ನ ನೆನಪು ತಪ್ಪಿರಲಿಲ್ಲ, ಅನುಭವ ಮಾತ್ರ ಆ ಸೀಮೆಗೆ ತಲುಪಿರಲಿಲ್ಲ. ಅದು ಮಂಜಲ್ಲ. ನಗರದ ಪಾಪದ ಲೇಪದ ಮುಸುಕು. ವೃತ್ತ ಯಂತ್ರಸ್ಥಾವರಗಳ ರಾಕ್ಷಸಾಕಾರದ ಚಿಮಣಿಗಳು ನಿರಂತರವಾಗಿ ಕಾರುತ್ತಿರುವ ರಾಸಾಯನಿಕ ಧೂಮದ ಕವಚ. ಇಡೀ ಮುಂಬಯಿ ಒಂದು ಬೃಹತ್ ಅನಿಲಕೋಷ್ಠ. ಅಲ್ಲಿ ನಾನಿದ್ದ ಹತ್ತು ದಿವಸಗಳ ಕಾಲ ಉಸಿರಾಟಕ್ಕಾಗಿ ಚಡಪಡಿಸಿದ್ದುಂಟು. ಕಣ್ಣುರಿ ತಲೆನೋವುಗಳಿಂದ ನರಳಿದ್ದುಂಟು. ಬಿಳಿ ಬಟ್ಟೆ ಎಲ್ಲವೂ ಮಸಿ ಲೇಪಿತವಾಗಿ ಮಡಿಕೆಗಳಲ್ಲಿ ಕರಿಪಟ್ಟೆಗಳಿಂದ ಅಲಂಕೃತವಾಗಿ ಹೊಸ ಮೆರುಗನ್ನು ಪಡೆದುವು. ಖಂಡಿತ ಮಾನವ ಈ ಕುಂಭೀಪಾಕದಲ್ಲಿ ತೊಳಲಲೆಂದು ಹುಟ್ಟಿದವನಲ್ಲ.

ನಾನು ಮಡಿಕೇರಿಯವ. ಕೊಡಗಿನ ಒಂದೊಂದು ಗಿರಿಶಿಖರವೂ ಕಾಡು ಕಂದರಗಳ ಆಳವೂ ಹೊಳೆ ತೊರೆಗಳ ಹರಿವೂ ನನಗೆ ವಿಶೇಷವಾದ ಸಂದೇಶ ಮತ್ತು ಶಿಕ್ಷಣಗಳನ್ನು ನೀಡಿವೆ. ಹಸಿರು ಹುಚ್ಚೆದ್ದು ಹರಿಯುತ್ತಿದ್ದ ಈ ನೆಲದಲ್ಲಿ, "ನೀಂ ನಡೆದು ನೋಡು ಕೊಡಗಿನ ಬೆಡಗು" ಎಂಬ ಕವಿ ಉದ್ಗಾರವನ್ನು ಸಹಜವಾಗಿ ಗಳಿಸಿದ್ದ ಈ ಕಾವೇರಿ ಮಂಡಲದಲ್ಲಿ ಈಗ ಬೋಳು ಬೆಟ್ಟಗಳು, ಹಾಳು ದಾರಿಗಳು, ಬತ್ತಿದ ಹೊಳೆಗಳು ಗೋಗರೆಯುತ್ತ ಮೂಕವೇದನೆಯನ್ನು ಪ್ರದರ್ಶಿಸುತ್ತಿವೆ.

ಯಾವುದೇ ದಿನ ನೀವು ಮೈಸೂರಿನಿಂದ ಮಡಿಕೇರಿ ಹಾದಿಯಾಗಿ ಪ್ರಯಾಣಿಸಿ ನೋಡಿ. ಎಷ್ಟೊಂದು ಭರ್ತಿ ಸೌದೆ ಲಾರಿಗಳು ನಿಮ್ಮನ್ನು ಅಡ್ಡ ಹಾಯುತ್ತವೆ! ಎಂಟು ಗಂಟೆಗಳ ಪ್ರಯಾಣದ ವೇಳೆ ಐವತ್ತು ಎಂದರೂ ಐವತ್ತು ಲಾರಿಗಳನ್ನು ನಾನು ಎಣಿಸಿದ್ದುಂಟು. ನಾಗರಿಕ ಮಾನವ "ರಿಷೀರೋ ಮಶೀನ" ಹೊಡೆದು ಪ್ರಕೃತಿಯ ಹರವನ್ನು ಬೋಳಿಸಿದ್ದಕ್ಕೆ ಇವು ಜೀವಂತ ಕೆಲವೇ ನಿದರ್ಶನಗಳು ಮಾತ್ರ. ಕೊಡಗಿನ

ಬೇಸಗೆಯಲ್ಲಿ ಕುಡಿವ ನೀರಿಗೆ ಬರ ಎಂಬ ಹೊಸ ಸಮಸ್ಯೆ ಉದ್ಭವಿಸಿದೆ. ಋತುಗಳ ಪುನರಾವರ್ತನೆಯಲ್ಲಿ ಏರುಪೇರು, ಅತಿವೃಷ್ಟಿ ಅನಾವೃಷ್ಟಿಗಳ ಭೀಕರ ಪ್ರಹಾರ, ತತ್ಪರಿಣಾಮವಾಗಿ ಜನರ ಸಾಮಾಜಿಕ ಮತ್ತು ಆರ್ಥಿಕ ವ್ಯವಹಾರಗಳಲ್ಲಿ ತಲೆದೋರುವ ಕ್ಷೋಭೆ - ಇವೆಲ್ಲವುಗಳಿಗೂ ಕಾರಣವನ್ನು ಕಾಣುವುದು ಕಷ್ಟವಲ್ಲ.

ನಾನು ಕಟ್ಟಾ ಸಸ್ಯಾಹಾರಿ. ಒಂದು ಜಿರಲೆಯನ್ನು ಕೊಲ್ಲುವುದೂ ನನಗಾಗದು. ಹೇಡಿ ಅನ್ನಿ ಬೇಕಾದರೆ. ಜಬರೆ ಸವಪ್ರೂರಿನ ಮಹಾ ಪರಾಕ್ರಮಿಗಳು ಬೇಟೆ ಆಡುವ ವೈಖರಿ ನೋಡಿ, ಒಂದು ಹುಲಿ ಅಥವಾ ಒಂದು ಚಿರತೆ ಅಥವಾ ಒಂದು ಕಾಡು ಹಂದಿ ಇವರ ಲಕ್ಷ್ಯ. (ಈಗೀಗ ಇವನ್ನು ಮೃಗಾಲಯಗಳಲ್ಲಿನ ಕೀರ ಅಸ್ವಾಭಾವಿಕ ಪರಿಸರದಲ್ಲಿ ಮಾತ್ರ ನೋಡಬಹುದಷ್ಟೆ) ಅದರ [illegible] ಯಾವ ಶಸ್ತ್ರವೂ ಇಲ್ಲ. ಅದಕ್ಕೆ ಬೇಟೆಯ ಯಾವ ಹಿಕ್ಮತ್ತೂ ತಿಳಿದಿಲ್ಲ. ಆದರೆ ಪ್ರಬುದ್ಧ ಬುದ್ಧಿವಂತರ ಹೊಂಚೇನು, ಸಂಚೇನು, ಶಸ್ತ್ರಾಸ್ತ್ರಗಳ ಅಟ್ಟಹಾಸವೇನು? ಆ ನಿರಪರಾಧಿಯನ್ನು ಇರುಕಿನಲ್ಲಿ ಸಿಲುಕಿಸಿ ಅದು ಆತ್ಮರಕ್ಷಣೆಗಾಗಿ ಏನಾದರೂ ಮಾಡಿದಾಗ ಅದನ್ನು ಕ್ರೌರ್ಯ ಎಂದು ಸಾರಿ ಸಾರ್ವಜನಿಕವಾಗಿ ಕೊಲೆಗೈದು ಮೆರೆಯುವ ಅತಿರಥ ಮಹಾರಥರ ಮರ್ಜಿ ನನಗೆ ಅರ್ಥವಾಗುವುದಿಲ್ಲ.

ನಿಸರ್ಗದ ನಿರಂತರ ಸೂರೆ ದರೋಡೆಗಳು ತೊಡಗಿದ್ದು ಇಂದು ನಿನ್ನೆ ಇಲ್ಲ. ಆದರೆ ಕಳೆದ ಸಮಸ್ತ ಶತಮಾನಗಳಲ್ಲಿಯೂ ನಡೆಯದಿದ್ದಷ್ಟು ಹಾನಿ ಈ ಶತಮಾನದಲ್ಲಿ ನಡೆದು ಹೋಗಿದೆ. ಪರಿಸರದ ಶಿಶುವಾದ ಮನುಷ್ಯ ನಡೆಸುತ್ತಿರುವ ಈ ಘೋರ ಹತ್ಯಾಕಾಂಡದ ಪರಿಣಾಮವಾಗಿ ಭೂಗೋಳದಲ್ಲಿ ಸಾಕಷ್ಟು ಅಸ್ತವ್ಯಸ್ತತೆಗಳು ತಲೆದೋರಿವೆ. ಇವು ಅಂತಿಮವಾಗಿ ಸ್ವತಃ ಮನುಷ್ಯನಿಗೆ ಮರಣವನ್ನು ತಂದೊಡ್ಡದಿರವು (ಈಗಾಗಲೇ ತಂದೊಡ್ಡಿವೆ) ಎಂಬುದಾಗಿ ಪರಿಸರ ವಿಜ್ಞಾನಿಗಳು ಪದೇ ಪದೇ ಹೇಳುತ್ತಿದ್ದಾರೆ. ಭೂಮಂಡಲದ ಯಾವ ಭಾಗವೂ ಇಂದು ಪರಿಸರ ಮಾಲಿನ್ಯದಿಂದ ವಿಮೋಚಿತವಾಗಿಲ್ಲ ಎಂದು ಅವರು ಸಾಕ್ಷ್ಯಾಧಾರಗಳಿಂದ ರುಜುವಾತಿಸುವುದುಂಟು. ಮಂಗಳೂರು, ಅಮ್ಮಸಂದ್ರ, ದಾಂಡೇಲಿ, ಭದ್ರಾವತಿ, ಹರಿಹರ, ಕಾರವಾರ ಇವೇ ಮುಂತಾದ ಪ್ರದೇಶಗಳಲ್ಲಿ ವಾಸಿಸುವರಿಗೆ ಪರಿಸರ ಮಾಲಿನ್ಯದ ಪ್ರತ್ಯಕ್ಷ ಅನುಭವ ಸಾಕಷ್ಟು ಆಗಿದೆ.

೩

೧೮೫೫ರಷ್ಟು ಹಿಂದೆಯೇ ಅಮೆರಿಕದ ರೆಡ್ ಇಂಡಿಯನ್ ನಾಯಕನೊರ್ವ ಈ ದಿಶೆಯಲ್ಲಿ ಎಷ್ಟು ವೈಜ್ಞಾನಿಕವಾಗಿ ಯೋಚಿಸಿದ್ದ ಎನ್ನುವುದಕ್ಕೆ ಈಚೆಗೆ ಪ್ರಕಟವಾದ ಅವನ ಒಂದು ಕಾಗದದಲ್ಲಿ ಪುರಾವೆಗಳು ದೊರೆಯುತ್ತವೆ.

ಅಮೇರಿಕದ ಅಧ್ಯಕ್ಷರು ರೆಡ್ ಇಂಡಿಯನ್ ಬುಡಕಟ್ಟಿನ ನಾಯಕ ಸಿಯಾಟಲ್ ಅವರಿಗೆ ಒಂದು ಕೋರಿಕೆಯನ್ನು ಸಲ್ಲಿಸಿ ರೆಡ್ ಇಂಡಿಯನ್ನರ ವಸತಿ ಪ್ರದೇಶವನ್ನು ಸರಕಾರಕ್ಕೆ ಮಾರಬೇಕೆಂದು ಕೇಳಿಕೊಂಡಿದ್ದರು (೧೮೫೫). ದೊರೆಯ ಕೋರಿಕೆ ಎಂದರೆ ಮಿಲಿಟರಿ ಹುಕುಂ ಎಂದು ಅರ್ಥವಷ್ಟೇ? ಆಧುನಿಕ ಯಂತ್ರ ಸ್ಥಾವರಗಳ ಸ್ಥಾಪನೆಗೆ, ನಾಗರಿಕ ಜನತೆಯ ಹೊಸ ಬಗೆಯ ವಹಿವಾಟುಗಳಿಗೆ ಮಾತ್ರ ಸಮಗ್ರವಾಗಿ ರಾಷ್ಟ್ರದ ಸುಧಾರಣೆಗೆ ಈ ಹೆಜ್ಜೆ ಅವಶ್ಯವಾಗಿತ್ತು. "ಮುಗ್ಧ ಅನಾಗರಿಕ, ಅವಿದ್ಯಾವಂತ" ಸಿಯಾತಲ್ ರಾಷ್ಟ್ರಾಧ್ಯಕ್ಷರಿಗೆ ಬರೆದ ಉತ್ತರದ ಕೆಲವು ಅಂಶಗಳನ್ನು ಇಲ್ಲಿ ಉದ್ಧರಿಸಿದೆ.

"ವಾಷಿಂಗ್ಟನ್ನಿನಲ್ಲಿರುವ ಮಹಾ ಪ್ರಭುಗಳು ನಮ್ಮ ನೆಲವನ್ನು ಕೊಳ್ಳುವ ತಮ್ಮ ಆಶಯವನ್ನು ವ್ಯಕ್ತಪಡಿಸಿದ್ದಾರೆ. ಸ್ನೇಹ ಮತ್ತು ಸದ್ಭಾವನೆಯ ಮಾತುಗಳನ್ನು ಸಹ ಮಹಾಪ್ರಭುಗಳು ನಮಗೆ ಕಳಿಸಿರುವರು. ಇದು ಅವರ ದಯಾಮತಿಕೆಯ ದ್ಯೋತಕ ಏಕೆಂದರೆ ನಾವು ಮರುಸಲ್ಲಿಸಬಹುದಾದಂಥ ಸ್ನೇಹ


ಅವರಿಗೆ ಅಗತ್ಯವಿಲ್ಲ ಎಂದು ನಮಗೆ ತಿಳಿದಿದೆ. ನಾವು ನಿಮ್ಮ ಬೇಡಿಕೆಯನ್ನು ಪರಿಶೀಲಿಸುತ್ತೇವೆ. ಹಾಗೆ ಮಾಡದಿದ್ದರೆ ಬಿಳಿ ಮನುಷ್ಯ ಕೋವಿಗಳ ಸಮೇತ ಬಂದು ನಮ್ಮ ನೆಲವನ್ನು ನುಂಗಬಲ್ಲ ಎಂದು ನಮಗೆ ಗೊತ್ತಿದೆ. ಆದರೆ ನೀವು ಬಾನನ್ನು ಹೇಗೆ ತಾನೇ ಕೊಳ್ಳಬಲ್ಲಿರಿ ಅಥವಾ ಮಾರಬಲ್ಲಿರಿ? ನೆಲದ ಬಿಸುಪನ್ನು? ಈ ಭಾವನೆಯೇ ನಮಗೆ ವಿಚಿತ್ರವಾಗಿದೆ ಭೂಮಿಯ ಪ್ರತಿಯೊಂದು ಭಾಗವೂ ನನ್ನ ಮಂದಿಗೆ ಪವಿತ್ರವಾದುದು. ಒಂದೊಂದು ಮರದ ಕೊಂಬೆರೆಂಬೆಗಳು, ಜಲ ತೀರದುದ್ದಕ್ಕಿನ ಬಿಳಿ ಮರಳ ಹಾಸು, ದಟ್ಟ ಕಾಡುಗಳಲ್ಲಿನ ಮಬ್ಬು ಇಬ್ಬನಿಯು ಮುಸುಕು, ಗುಂಯಿಗುಡುವ ಕೀಟದ ಸ್ವನ ಎಲ್ಲವೂ ನಮ್ಮ ಬಳಗದವರಿಗೆ ಆತ್ಮೀಯವಾದುದು. ಬಿಳಿ ಮನುಷ್ಯನಿಗೆ ನಮ್ಮ ರೀತಿಗಳು ಅರ್ಥವಾಗುವುದಿಲ್ಲ ಎಂದು ನಮಗೆ ಗೊತ್ತಿದೆ. ನೆಲದ ಯಾವುದೇ ಭಾಗ ಅವನಿಗೆ ಇನ್ನೊಂದು ಭಾಗದಂತೆ ಒಂದೇ. ಏಕೆಂದರೆ ಅವನು ರಾತ್ರಿಂಚರನಾದ ಹೊಸಬ. ತನಗೆ ಬೇಕಾದದ್ದನ್ನು ನೆಲದಿಂದ ಕತ್ತರಿಸುವುದೊಂದೇ ಅವನಿಗೆ ತಿಳಿದಿರುವ ಕಸುಬು. ಭೂಮಿ ಅವನ ಭ್ರಾತೃವಲ್ಲ, ಶತ್ರು. ಇದನ್ನು ಜಯಿಸಿದ ಬಳಿಕ ಅವನು ಮತ್ತೆ ಮುಂದೆ ಸಾಗುತ್ತಾನೆ. ಅವನ ಸುಡುವ ಹಸಿವು ಇಡೀ ಇಳೆಯನ್ನೇ ಕಬಳಿಸಿ ಬೆಂಗಾಡಾಗಿಸುತ್ತದೆ.

"ನಿಮ್ಮ ನಗರಗಳ ದೃಶ್ಯ ಕೆಂಪು ಮನುಷ್ಯನ ಕಂಗಳಿಗೆ ನೋವು ಉಂಟುಮಾಡುವುದು. ಪ್ರಾಯಶಃ ಕೆಂಪು ಮನುಷ್ಯ ಒಬ್ಬ ಮೃಗ. ನಿಮ್ಮ ಸೂಕ್ಷ್ಮ ಅವನಿಗೆ ಅರ್ಥವಾಗುವುದಿಲ್ಲ. ನೀವು ನೀಡುವ ಕರೆಯನ್ನು ನಾವು ಮನ್ನಿಸುವುದು ಅನಿವಾರ್ಯವಾಗಿದೆ. ಆದರೆ ಒಂದು ಷರತ್ತನ್ನು ನಿಮ್ಮ ಮುಂದಿಡಬಯಸುವೆನು: ಈ ನೆಲದ ಜಂತುಗಳನ್ನು ಬಿಳಿ ಮನುಷ್ಯ ತನ್ನ ಸೋದರ ಪ್ರಾಣಿಗಳೆಂಬುದಾಗಿ ಪರಿಗಣಿಸಬೇಕು. ನಾವು ಕಂಡುಕೊಂಡಿರುವ ಒಂದು ಸತ್ಯ ಉಂಟು. ಇದನ್ನು ಬಿಳಿ ಮನುಷ್ಯ ಕೂಡ ಒಂದಲ್ಲ ಒಂದು ದಿನ ತಿಳಿದೇ ತಿಳಿಯುತ್ತಾನೆ: ನಮ್ಮೆಲ್ಲರ ದೇವರೂ ಒಬ್ಬನೇ. ನಮ್ಮ ನೆಲವನ್ನು ಹೇಗೆ ನೀವು ಸ್ವಂತಕ್ಕೆ ಪಡೆಯಬೇಕೆಂದು ಹವಣಿಸಿದ್ದೀರೋ ಹಾಗೆ ಆತನನ್ನು ಕೂಡ ಕೇವಲ ನಿಮ್ಮ ಖಾಸಗಿ ಸೊತ್ತಾಗಿ ಮಾಡಿಕೊಳ್ಳಲು ಬಗೆದಿರಬಹುದು. ಆದರೆ ಇದು ನಡೆಯದು. ಅವನು ಜನರ ದೇವರು. ಅವನ ಕರುಣೆ ಕೆಂಪು ಮಂದಿಗೂ ಬಿಳಿ ಮಂದಿಗೂ ಸಮವಾಗಿಯೇ ಇದೆ. ಧರಣಿ ಮಂಡಲ ಅವನಿಗೆ ಅಮೂಲ್ಯವಾದದ್ದು. ಇದನ್ನು ಕಲಗೆಡಿಸುವುದೆಂದರೆ ಸೃಷ್ಟೀಶನ ಮೇಲೆ ಅವಹೇಳನ ಹೇರಿದಂತೆ, ಬಿಳಿಯರು ಕೂಡ ಪ್ರಾಯಶಃ ಇತರ ಬುಡಕಟ್ಟಿನವರಿಗಿಂತ ಬಹು ಬೇಗ, ತೊಲಗಿ ಹೋಗುತ್ತಾರೆ. ನಿಮ್ಮ ಹಾಸಿಗೆಯನ್ನು ಹೊಲಸುಗೊಳಿಸುವುದನ್ನು ಹೀಗೆಯೇ ಮುಂದುವರಿಸುತ್ತೀರಿ – ಒಂದು ರಾತ್ರಿ ಆ ರೊಚ್ಚಿನಲ್ಲಿ ನಿಮ್ಮ ಉಸಿರೇ ಕಟ್ಟಿ ಹೋಗುತ್ತದೆ. ಕಾಡೆಮ್ಮೆಗಳೆಲ್ಲವನ್ನೂ ಕಡಿದೊಗೆದ ಬಳಿಕ ಕಾಡುಕುದುರೆಗಳೆಲ್ಲವನ್ನೂ ಪಳಗಿಸಿ ಮುಗಿದ ತರುವಾಯ ವನಾಂತರಗಳ ಪ್ರಶಾಂತ ಏಕಾಂತಗಳೆಲ್ಲವೂ ನರಗಬ್ಬಿನಿಂದ ನಾರುತ್ತಿರುವಾಗ ಮತ್ತು ಫಲಸಮೃದ್ಧ ಗಿರಿದೃಶ್ಯಗಳು ಚಲ್ಲಗಾತಿಯರ ಬೋಳು ಹರಟೆಯಲ್ಲಿ ಮುಳುಗಿ ಹೋದಾಗ ಪೊದರೆಲ್ಲಿ ಉಳಿದಿರುವುದು? ಹದ್ದನ್ನು ಎಲ್ಲಿ ಅರಸಲಿ? ಈ ಕೊರೆದ ಈ ತನನಕ್ಕೆ ಅಂತ್ಯ ಎಂದು? ಸಾವಿನ ಮೊನೆ ತಿವಿಯುವಂದೇ ಬದುಕಿನ ಕೊನೆ.

"ಬಿಳಿ ಮನುಷ್ಯನ ಪಟ್ಟಣಗಳಲ್ಲಿ ಎಲ್ಲಿಯೂ ಶಾಂತಪ್ರದೇಶವೇ ಇಲ್ಲ. ವಸಂತ ಮಾರುತದಿಂದ ತೂಗುವ ಎಲೆಗಳ ನಿನಾದ ಅಲ್ಲಿಲ್ಲ, ಜೀರುಂಡೆಗಳ ರೆಕ್ಕೆ ಅದಿರಿಕೆಯ ಸೊಲ್ಲು ಅಲ್ಲಿಲ್ಲ. ಆದರೆ ನಾನೊಬ್ಬ ಅನಾಗರಿಕ. ನನಗೆ ತಿಳಿಯಲಾರದೋ ಏನೋ. ನಗರದ ಹರಟೆ ನನ್ನ ಕಿವಿಗಳನ್ನು ಇರಿಯುತ್ತದೆ. ಕೋಗಿಲೆಯ ಕುಹೂ ಕುಹೂ ರವವನ್ನಾಗಲಿ ರಾತ್ರಿ ವೇಳೆ ಕೊಳದ ಸುತ್ತ ನೆರೆದು ಅಖಂಡ ಸಂವಾದದಲ್ಲಿ ಲೀನವಾಗಿರುವ ಮಂಡೂಕಗಳ ಟ್ರೊಂಯ್ ಟ್ರೊಂಯ್ ನಾದವನ್ನಾಗಲಿ

ಆಲಿಸಲಾಗದಿದ್ದರೆ ಬದುಕಿನಲ್ಲಿ ಉಳಿದುದೇನು? ನಡುಹಗಲ ಮಳೆಯಿಂದ ತೊಳೆದ ತಿಳಿದ ಗಾಳಿ, ಘಮಘಮಿಸುವ ಕಂಪನ್ನು ಧರಿಸಿದ ತಂಗಾಳಿಯು ಮೇಲು ಬೀಸು ಕೆಂಪು ಮನುಷ್ಯನಿಗೆ ಬಲು ಇಂಪು. ಪಕ್ಷಿಗಳ ಕಲರವ ಕೆಂಪು ಮನುಷ್ಯನಿಗೆ ಬಲು ಇಂಪು. ಈತನಿಗೆ ವಾಯು ಅತ್ಯಮೂಲ್ಯವಾದದ್ದು. ಏಕೆಂದರೆ ಇದೇ ಸರ್ವರಿಗೂ ಪ್ರಾಣಿಗಳನ್ನೂ ಸಸ್ಯಗಳನ್ನೂ ಒಳಗೊಂಡಂತೆ, ಜೀವದಾಯಕ ಉಸಿರು. ತಾನು ಶ್ವಾಸಿಸುವ ವಾಯುವನ್ನು ಬಿಳಿ ಮನುಷ್ಯ ಗಮನಿಸಿರುವಂತೆ ತೋರುವುದಿಲ್ಲ. ನವೆದು ನವೆದು ಸಾಯುತ್ತಿರುವ ರೋಗಿಯಂತೆ ಅವನು ಪರಿಮಳಕ್ಕೆ ಮರವಟ್ಟಿದ್ದಾನೆ. ಪ್ರಾಣಿ ಸಂಗ ಇಲ್ಲದಂಥ ಮನುಷ್ಯನ ಬದುಕು ಬದುಕೇ? ವನ್ಯಪ್ರಾಣಿಗಳೆಲ್ಲವೂ ನಿರ್ನಾಮವಾಗಿ ಹೋದುವೋ ಮನುಷ್ಯ ಧೃತಿಗೆಟ್ಟವನಾಗಿ ಏಕಾಂಗಿಯಾಗಿ ಸತ್ತ್ವ ಕಳೆದುಕೊಂಡವನಾಗಿ ನಶಿಸಿಯೇ ಹೋಗುವುದು ನಿಚ್ಚಳ ಸತ್ಯ. ಏಕೆಂದರೆ ಪ್ರಾಣಿಗಳಿಗೆ ಇಂದು ಯಾವ ಗತಿ ಒದಗುವುದೋ ಅದು ಮನುಷ್ಯನಿಗೆ ನಾಳೆ ಒದಗುವುದು ನಿಸರ್ಗ ನಿಯಮ.

"ಬಿಳಿ ಮನುಷ್ಯನ ಕನಸುಗಳೇನು? ಚಳಿಗಾಲದ ಸುದೀರ್ಘ ರಾತ್ರಿಗಳಲ್ಲಿ ಅವನು ತನ್ನ ಎಳೆಯರ ಕಲ್ಪನೆಗಳಿಗೆ ಕಟ್ಟುವ ರೆಕ್ಕೆಗಳೇನು? ಅವರ ಮುಂದೆ ಇಡುವ ಧ್ಯೇಯಾದರ್ಶಗಳೇನು? ಅವರು ಲೋಕವನ್ನು ಯಾವ ತೆರನಾಗಿ ಸ್ವಾಗತಿಸಬೇಕು ಎಂದು ಅವನು ಬಯಸುತ್ತಾನೆ? ಇವು ಯಾವುವೂ ನಮಗೆ ತಿಳಿದಿಲ್ಲ. ನಾವು ದಸ್ಯುಗಳು. ಬಿಳಿ ಮನುಷ್ಯನ ಕನಸುಗಳಿಗೆ ಪ್ರವೇಶ ನಮಗಿಲ್ಲ. ಅವು ಹೇಗಿದ್ದಾವು ಎಂಬುದು ನಮಗೆ ಗೊತ್ತಿಲ್ಲದಿರುವುದರಿಂದ ನಮ್ಮ ಚಿಂತನೆಯ ಧಾಟಿಯಲ್ಲಿಯೇ ನಾವು ಮುಂದುವರಿಯುತ್ತೇವೆ. ನಮಗೆ ನೀವು ಪ್ರತ್ಯೇಕ ಪ್ರದೇಶವೊಂದನ್ನು ಒದಗಿಸುವ ಮಾತು ಕೊಟ್ಟಿದ್ದೀರಿ. ಆ ಭರವಸೆ ಮೇಲೆಗೆ ನಾವು ನಿಮಗೆ ಈ ನೆಲೆಯನ್ನು ಮಾರುತ್ತೇವೆ. [illegible] ದಲ್ಲಿ ನಮ್ಮ ಇಚ್ಛಾನುಸಾರ ನಾವು ಉಳಿದ ದಿನಗಳನ್ನು ಕಳೆಯೋಣ. ಕೊನೆಯ ಕೆಂಪು ಮನುಷ್ಯ ಈ ಸುಂದರ ವಸುಂಧರೆಯಿಂದ ಅಂತರ್ಧಾನನಾದ ಮೇಲೆಯೂ ಅಲ್ಲದೆ ಆತನ ಸ್ಮೃತಿ ಪ್ರೇರಿಗಳ ಮೇಲೆ ಸರಿಯುವ ಮೋಡದ ನೆರಳಾದ ಮೇಲೆಯೂ ಈ ಕಿನಾರೆ ಮತ್ತು ಕಾಡುಗಳು ಆತನ ಸತ್ತ್ವ ತೇಜಸ್ಸುಗಳನ್ನು ಹಿಡಿದಿಟ್ಟಿರುತ್ತವೆ. ಏಕೆಂದರೆ ಕೆಂಪು ಜನ ಭೂಮಾತೆಯನ್ನು, ನವಜಾತ ಶಿಶು ತನ್ನ ತಾಯಿಯ ಗುಂಡಿಗೆ ಮಿಡಿತವನ್ನು ಮುದ್ದಿಸಿ ಅಪ್ಪುವಂತೆ ಪ್ರೀತಿಸಿ ಆಲಿಂಗಿಸಿಕೊಂಡಿದ್ದಾರೆ. ನಮ್ಮ ಈ ವಲಯವನ್ನು ನಾವು ನಿಮಗೆ ಮಾರುತ್ತೇವೆ. ಆದರೆ ನಾವು ಇದನ್ನು ಪ್ರೀತಿಸಿದಂತೆ ನೀವೂ ಪ್ರೀತಿಸಬೇಕು. ಓಲೈಸಿದಂತೆ ನೀವೂ ಓಲೈಸಬೇಕು. ಆರೈಸಿದಂತೆ ನೀವೂ ಆರೈಸಬೇಕು. ಇದರ ಈಗಿನ ಚಿತ್ರವನ್ನು ನಿಮ್ಮ ಮನಃಪಟಲದ ಮೇಲೆ ಮೂಡಿಸಿ ಚೆನ್ನಾಗಿ



ಕಾರ್ಮಿಕ ಆರ್ಥಿಕ ಮಟ್ಟ ಸುಧಾರಣೆಯಾಗದ ಹೊರತು ದೇಶ ಉದ್ಧಾರವಾಗೋಲ್ಲ ಅಂತ ನೀವು ಭಾಷಣ ಮಾಡಿದ ಮೇಲೆ ನಮ್ಮ ಕಾರ್ಖಾನೆಯ ಫೋರ್‌ಮನ್‌ಗಳಿಗೆ ಬಡ್ತಿ ಕೊಟ್ಟು ಮ್ಯಾನೇಜರ್‌ಗಳನ್ನಾಗಿ ಮಾಡಿದೆ!

ಉಪಯೋಗಿಸಿಕೊಳ್ಳಿ. ನಿಮ್ಮ ಸಮಸ್ತ ಶಕ್ತಿ ಸಾಮರ್ಥ್ಯಗಳಿಂದ ಹಾಗೂ ಪ್ರಾಮಾಣಿಕವಾಗಿ ಇದನ್ನು ರಕ್ಷಿಸಿ. ಭಗವಂತ ನಮ್ಮನ್ನೆಲ್ಲ ಹೇಗೆ ಪ್ರೀತಿಯಿಂದ ನೋಡುವನೋ ಹಾಗೆ ನೀವು ಇದನ್ನು ಪ್ರೀತಿಯಿಂದ ನೋಡಿಕೊಳ್ಳಿ. ಒಂದು ಸಂಗತಿ ನಮಗೆ ಚೆನ್ನಾಗಿ ಗೊತ್ತಾಗಿದೆ: ನಿಮ್ಮ ಹಾಗೂ ನಮ್ಮ ದೇವರು ಒಬ್ಬನೇ. ಈ ನೆಲ ಅವನ ಕೃತಿ. ಇದು ಅವನಿಗೆ ಪ್ರಿಯವಾದದ್ದು. ಇದಕ್ಕೆ ಹಾನಿ ಮಾಡದಿರಿ. ಇಲ್ಲಿ ಬಿಳಿ ಮನುಷ್ಯ ಕೂಡ ಅಪವಾದ ಆಗಲಾರ."

ಇಪ್ಪತ್ತನೆಯ ಶತಮಾನದ ಉತ್ತರಾರ್ಧದಲ್ಲಿ ವಾಸ್ತವವಾಗಿ ತಲೆದೋರಿರುವ ಪರಿಸರ ಮಾಲಿನ್ಯದ ಭೀತಿ ಆಗಮನವನ್ನು ಪ್ರವಾದಿಯ ಮಾತುಗಳ ರೀತಿಯಲ್ಲಿ ಪ್ರತಿಧ್ವನಿಸಿರುವ ದಿವ್ಯವಾಣಿಯ ಶಬ್ದಗಳ ತೆರದಲ್ಲಿ ಈ ಮೇಲಿನ ಗುಂಪಿಗೆ ಸೇರುವ ನ್ಯಾಯಯುತವಾಗಿಯೇ ಈ ಪತ್ರ ವರ್ಣಿಸಿದೆ.

೪

ಆಧುನಿಕ ಜೀವನದ ಸುಖಸೌಕರ್ಯಗಳಿಗೆ ನಾವು ತೆರಬೇಕಾದ ಅತ್ಯಲ್ಪ ಶುಲ್ಕ ಅಥವಾ ದಂಡ ಪರಿಸರ ಮಾಲಿನ್ಯ. ಪರಿಸರ ವಿಜ್ಞಾನಿಗಳು ಕೊಂಚ ಸಮರ್ಥ ಪ್ರಮಾಣದಲ್ಲಿ ಇದು ಪಿಡುಗಾಗಿಲ್ಲ ಎಂದು ಸಮಸ್ಯೆಯನ್ನು ಅಲಕ್ಷಿಸುವುದು ಸುಲಭ. ಆದರೆ ಮುಂಬರುವ ದಿವಸಗಳಲ್ಲಿ ನಮ್ಮ ಪೀಳಿಗೆ ಚೆನ್ನಾಗಿ ಬದುಕಿ ಬಾಳಬೇಕಾದರೆ ನಾವು ಒಂದು ಅಂಶವನ್ನು ಸ್ಪಷ್ಟವಾಗಿ ತಿಳಿದಿರುವುದು ಅವಶ್ಯ. ನಿಸರ್ಗದ ಪಾಲಿಗೆ ಪ್ರಯೋಗ ಮಂದಿರದಲ್ಲಿ ಸುದೀರ್ಘ ಕಾಲದಿಂದ ಅಸಂಖ್ಯಾತ ಪ್ರಯೋಗಗಳು ನಡೆದು ವರ್ತಮಾನಕಾಲದ ಸೃಷ್ಟಿ ಒಡಮೂಡಿದೆ. ಈ ಪ್ರಯೋಗಗಳ ನಿಷ್ಕರ್ಷೆಯನ್ನು ಅರಿತು ಇವುಗಳಿಗೆ (ಅಂದರೆ ನಿಸರ್ಗದ ಬಲಗಳಿಗೆ) ಅನುವರ್ತಿಯಾಗಿ ಬದುಕಲು ಮಾನವ ಕಲಿತಾಗ ಮಾತ್ರ ಈತನ ದಿನಗಳು ಹಸನಾಗುವುವು. ಇವನ ಪೀಳಿಗೆ ಸೊಗದಿಂದ ಬದುಕುವುದು. ಹಾಗಿಲ್ಲದೇ ನಾನೇ ಅಥವಾ ಪರಿಸರದ ಸಾರ್ವಭೌಮ ನಾನು, ಇದನ್ನು ನನ್ನ ಇಚ್ಛಾನುಸಾರ ಪರಿವರ್ತಿಸಿ ಹೇಗಾದರೂ ಅಲ್ಲಾವುದ್ದೀನನ ವಿಚಿತ್ರ ದೀಪದಿಂದ ಹೊರಹೊಮ್ಮುವ ರಾಕ್ಷಸನ ತೆರದಲ್ಲಿ ನನಗೆ ಸೇವೆ ಸಲ್ಲಿಸಲು ವಿಧಿಸುತ್ತೇನೆ ಎಂದು ಹೊರಟನೋ ಆಗ ಇವನ ಸರ್ವನಾಶ ಬಲು ಖಾತ್ರಿ. ಪೊಡವಿಯೇ ಮುನಿದು ಇವನನ್ನು ಶಿಕ್ಷಿಸುವುದು ಕಟ್ಟಿಟ್ಟಬುತ್ತಿ. ಪರಿಸರವನ್ನು ಎದುರಿಸಿ ಮನುಷ್ಯ ಸುತರಾಂ ಉಳಿಯಲಾರ.

ನಮಗಿರುವುದು ಒಂದೇ ಪರಿಸರ
ನಮ್ಮ ಉಳಿವಿಗೆ ಅದ್ವಿತೀಯವಾದಂಥ
ಆಕರ
ಪರಿಸರವನ್ನು ರಕ್ಷಿಸೋಣ, ಅದು
ನಮ್ಮನ್ನು ಪೋಷಿಸುತ್ತದೆ
ಪರಿಸರವನ್ನು ಅಲಕ್ಷಿಸೋಣ, ಅದು
ನಮ್ಮನ್ನು ಶೋಷಿಸುತ್ತದೆ
ಗಿಡ ನೆಟ್ಟು ಬೆಳೆಸಿ ಕಾಪಾಡುವಾಗ
ಪರಿಸರವನ್ನು ಪೋಷಿಸುತ್ತೇವೆ
ಮರ ಕಡಿದು ಕತ್ತರಿಸಿ ಪರಿಸರವನ್ನು
ಕೊಲ್ಲುತ್ತೇವೆ
ವನ್ಯ ಮೃಗಗಳೆಲ್ಲವೂ ಪರಿಸರದ
ಅಮೂಲ್ಯ ಸಂಪತ್ತು
ನಮ್ಮದೆಷ್ಟೋ ಅಷ್ಟೇ ಅವುಗಳದು
ಕೂಡ ಈ ಜಗತ್ತು



ಅಪೂರ್ವ ವಿಶ್ವ ವಿದ್ಯಾಲಯ

ದಕ್ಷಿಣ ಆಫ್ರಿಕೆಯಲ್ಲಿಯ ಪ್ರಿಟೋರಿಯಾದಲ್ಲಿರುವ ದಕ್ಷಿಣ ಆಫ್ರಿಕಾ ವಿಶ್ವ ವಿದ್ಯಾಲಯವು ಸುಮಾರು ೨೬೦೦೦ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಶಿಕ್ಷಣ ನೀಡುವುದು ಪತ್ರವ್ಯವಹಾರದ ಮುಖಾಂತರ ಮಾತ್ರವೇ. ಇದರ ವೈಶಿಷ್ಟ್ಯವೇ ಇದು.

ತಾರೆ

ಕಣ್ಣಿಗೆ ತಿಂಗಳಂತೆ ಬಂದು
ಉಲ್ಕೆಯಂತೆ ಬಿಸಿಯಾಗಿ ಕಾದು;
ಹೆಪ್ಪುಗಟ್ಟಿ
ಕಾದು ಜ್ವಾಲೆಯಂತೆ ಕಾಡಿ, ಸಿಡಿದುಕ್ಕಿ
ಧುಬುಧುಬಿಯಂತೆ ಸೊಕ್ಕಿ
ಲೆಕ್ಕವಿಲ್ಲದಷ್ಟು ಕಲೆ ಕಡಿಸಿದ
ಥಳಕು ಪಳಕಿನ ಸೆಳಕು;
ಕಣ್ಣು ಮುಚ್ಚಾಲೆಯಾಟವಾಡಿ
ಸುಂಟರಗಾಳಿಯಂತೆ ಸುಳಿ ಸುತ್ತಿ
ಮಾದಕ ಆಯಸ್ಕಾಂತವಾಗುವ
ಗಿಲೀಟು ಬಂಗಾರದ ಸರಕು.

ಮೊನ್ನೆಯಷ್ಟೆ ಹೊರಗಿಟ್ಟ ಪೋರಿ
ಗುಂಡಿನಂತೆ ಧಿಡೀರನೆ ಬಂದೆರಗಿ
ನೋಡುತ್ತಿದ್ದಂತೆ ಎದೆ ತುಂಬಿ
ದುಂಡಗೆ ಗುಂಡಗಾಗಿ
ಲಕ್ಷೋಪಲಕ್ಷ ಎದೆ ಗುಂಡಿಗೆಗಳ ಚೆಂಡಾಡಿ
ಹಲವರ ಹಗಲುಗನಸಿನ ಪ್ರೇಯಸಿಯಾಗಿ
ಮರುಳು ಮಾಡುವ ಮೋಹನಕಲೆಯಾಗಿ
ಕಂಡ ಕಂಡವರ ಹೊಲಸು ಮಾತಿನಲಿ
ಜನಪ್ರಿಯತೆಯ ಗೊಂಡಾರಣ್ಯದಲಿ
ಅಂದ ಚೆಂದದ ಅಗ್ನಿಪರೀಕ್ಷೆಯಲಿ
ಅದೃಷ್ಟ ಒಲಿದ ಮಾರಿಗೊಂಬೆ,
ರತಿ, ರಂಭೆಯರಿಗೇನು ಕಡಿಮೆ!
ಕ್ಯಾಮರ ಕ್ಲಿಕ್ಕಿಸಿ, ಪುಕಾರೆಬ್ಬಿಸಿ,
ಬಟ್ಟೆ ಬಿಚ್ಚಿ
ಅಗ್ಗದ ಪ್ರಚಾರ ದೊರೆವಾಗ
ಮತ್ತೇಕೆ ದುಡಿಮೆ?
ಬಿಗಿ ಬಂಧಗಳಿಗೆ ಸುಂಕ ತೆರಬೇಕಿಲ್ಲ
'ಭಕ್ತ'ರ ಗಾಢಾನುರತಿಗೆ
ಕುದಿ ಮೊದಲಿಲ್ಲ;
ಬೆಳಗೊಬ್ಬನ ತೋಳತೆಕ್ಕೆ,
ಸಂಜೆ ಮಾನಭಂಗ
ನಿಶೆಯಲಿ ಹೊಸಬನೊಡನೆ ಕುಂಟು ಸಂಗ
ಸುಖ ಪಡೆಯಲೆಂಬೇ ಹುಚ್ಚಿನೆಂಬ
ಭ್ರಮೆಯಲ್ಲಿ
ಪ್ರೇಮ ಫೇಲಾದ ಗಾಡಿಯಾಗಿ,
ಬದುಕು ಕ್ಲೀಷೆಯಾಗಿ
ರಾಜರಸ್ತೆಯಲ್ಲಾಗುವ ಕೆಟ್ಟ ಅಪಘಾತ

ಚಿನ್ನದ ಗೂಡಿನ ಬೆಳ್ಳಿಯ ಹಕ್ಕಿಗೆ
ವಜ್ರದ ಬೆಂಡೋಲೆ.
ನೆರಳಿನ ಆಟದ ಸೂತ್ರದ ಗೊಂಬೆಗೆ
ಕಾಣದ ಸಂಕೋಲೆ.
ಬಾಳ ಒರತೆ ಬತ್ತಿ, ಹಳೆ ನಾಣ್ಯವಾಗಿ
ಚಿಗುರಿದ ಕನಸೆಲ್ಲ ಚಿವುಟುವ
ಭೀತಿ ಬೆಳೆದು
ಹುಚ್ಚು ಹಗರಣದಲ್ಲಿ ಹಳಸಿದ ಹೂರಣವೇ
ಸವಿಯೆನಿಸಿ, ಹತ್ತಿರವಾದವರೇ ದೂರಾಗಿ
ಪ್ರಿಯರ ನೆನಪಿನಿಂದ ಮರೆತು
ಅರಳುವ ಮೊದಲೆ ಬಾಡುವ ಪುಷ್ಪ.

ಸಂತೋಷಕುಮಾರ ಗುಲ್ವಾಡಿ

[illegible]

ಹಿಂದಿ ಮೂಲ: ಡಾ. ಮದನ ಮೋಹನ ಕುಮಾರ
ಅನುವಾದ: ಡಾ. ಬಿ. ಆರ್. ಭಟ್ಟ

ಭಾರತ ಮತ್ತು ಅಮೇರಿಕಗಳ ನಡುವಣ ವಾಣಿಜ್ಯ ಸಂಬಂಧದ ಮೂಲವನ್ನು ನಾವು ಇಂದಿಗೆ ಇನ್ನೂರು ವರುಷಗಳ ಮೊದಲೇ ಗುರುತಿಸಬಹುದು. ಆಗ ಈ ಎರಡು ದೇಶಗಳೂ ಬ್ರಿಟನ್ನಿನ ವಸಾಹತುಗಳಾಗಿದ್ದುವು. ಭಾರತವು ಅನೇಕ ವರ್ಷಗಳಿಂದ ಸಂಬಾರಜಿನಸಿ, ರೇಶ್ಮೆ, ಹತ್ತಿ ಬಟ್ಟೆ, ಔಷಧಿ–ಮೂಲಿಕೆಗಳು, ಸುಗಂಧ ದ್ರವ್ಯಗಳು, ಚಹದ ಎಲೆ, ನೀಲಿ ಬಣ್ಣ ಮತ್ತು ಪೆಟ್ಲುಪ್ಪುಗಳಿಗೆ ಹೆಸರುವಾಸಿಯಾಗಿತ್ತು. ಇವೆಲ್ಲವೂ ಪ್ರಪಂಚದ ಅನೇಕ ಬಂದರುಗಳಿಗೆ ರಫ್ತಾಗುತ್ತಿದ್ದುವು. ಕ್ರಿಸ್ತಶಕ ೧೭೭೦ ರ ಮೊದಲೇ ಅಮೇರಿಕದ ವಸಾಹತುಗಳಿಂದ ನಾಲ್ಕುನೂರರಷ್ಟು ಹಡಗುಗಳು ಸಮುದ್ರದಾಚೆಯ ವ್ಯಾಪಾರದಲ್ಲಿ ತೊಡಗಿದ್ದುವು. ಬ್ರಿಟನ್ನಿನ ವ್ಯಾಪಾರೀ ನೌಕೆಗಳಲ್ಲಿ ಮೂರನೆಯ ಒಂದಂಶ ಅಮೇರಿಕದ ತಯಾರಿಯಾಗಿತ್ತು. ರಾಳ, ಟಾರೆಣ್ಣೆ, ಕರ್ಪೂರತೈಲ ಇತ್ಯಾದಿಗಳು ಈ ವಸಾಹತುಗಳಿಂದ ರಫ್ತಾಗುತ್ತಿದ್ದುವು. ಅಮೇರಿಕದ ನಾವಿಕರು ಸಮುದ್ರ ಪ್ರಯಾಣದಲ್ಲಿ ಕುಶಲರಾಗಿದ್ದರಲ್ಲದೆ ಚತುರ ವರ್ತಕರೂ ಆಗಿದ್ದರು. ಆದರೆ ಬ್ರಿಟನ್ನಿನ ಸಮುದ್ರಯಾನ ಕಾನೂನಿನ ನಿರ್ಬಂಧಗಳು ಭಾರತ ಮತ್ತು ಅಮೇರಿಕಗಳ ನಡುವಣ ನೇರ ವ್ಯಾಪಾರವನ್ನು ತಡೆಗಟ್ಟುತ್ತಿದ್ದುವು.


ಹದಿನೇಳನೆಯ ಶತಮಾನದಲ್ಲಿಯೂ ಹದಿನೆಂಟನೆಯ ಶತಮಾನದ ಮೊದಲಿನ ವರ್ಷಗಳಲ್ಲಿಯೂ ಭಾರತದ ಸಾಮಾನುಗಳು ಪೋರ್ಚುಗೀಸ್, ಡಚ್, ಫ್ರೆಂಚ್ ಮತ್ತು ಬ್ರಿಟಿಷ್ ವ್ಯಾಪಾರಿಗಳ ಮುಖಾಂತರ ಅಮೇರಿಕದ ವಸಾಹತುಗಳಿಗೆ ತಲುಪುತ್ತಿದ್ದುವು. ಅಮೇರಿಕದ ಸ್ವಾತಂತ್ರ್ಯ ಸಂಗ್ರಾಮ ಅವಧಿ (೧೭೭೫–೧೭೮೩) ಯಷ್ಟರಲ್ಲಿ ಕೆಲ ಸಾಹಸಿ ವಸಾಹತುದಾರರು ದೂರ ದೇಶಗಳೊಡನೆ ವ್ಯಾಪಾರ ಸಂಬಂಧ ಬೆಳೆಸುವ ಪ್ರಯತ್ನವನ್ನು ಕೈಗೊಂಡರು. ಅದು ಅಮೇರಿಕದಲ್ಲಿ ಆರ್ಥಿಕ ಬದಲಾವಣೆಗಳು ಉಂಟಾಗುವ ಕಾಲವಾಗಿತ್ತು. ಈ ಬದಲಾವಣೆಗಳಿಂದಾಗಿ ಕೊನೆಗೆ ಅಮೇರಿಕವು ಅತಿ ದೊಡ್ಡ ರಫ್ತು ವ್ಯಾಪಾರವಿರುವ ದೇಶಗಳಲ್ಲಿ ಒಂದಾಗುವುದಿತ್ತು. ಅದಾಗಲೆ ಅಮೇರಿಕವು ಆ ತನಕ ಇಂಗ್ಲೆಂಡಿನಿಂದಲೇ ಆಮದಾಗುತ್ತಿದ್ದ ಸರಕುಗಳನ್ನು ತಯಾರಿಸಲು ಪ್ರಾರಂಭಿಸಿತ್ತು. ಇದರಿಂದಾಗಿ ಉಪಯೋಗಿಸಿ ಮಿಕ್ಕಿದ ಅಂತಹ ಸರಕುಗಳಿಗೆ ಹೊಸ ಗಿರಾಕಿಗಳನ್ನು ಹುಡುಕ

(ಕೃಪೆ: ಸ್ಪ್ಯಾನ್)

ಬೇಕಾಗಿತ್ತು.

೧೭೮೪ ರಲ್ಲಿ ಮೊದಲಾಗಿ ಪೂರ್ವ ದೇಶಗಳತ್ತ ಹೊರಟ ಅಮೇರಿಕದ ಹಡಗು ಚೀನ ತಲುಪಿ ಪಶ್ಚಿಮದ ಮಾರುಕಟ್ಟೆಗೆ ದಾರಿ ಮಾಡಿಕೊಂಡಿತು. ಅದಾದ ಮೂರು ವರ್ಷಗಳ ತರುವಾಯ ಭಾರತಕ್ಕೆ ಪ್ರಥಮತಃ ಭೇಟಿ ಕೊಟ್ಟ ಅಮೇರಿಕದ ಮೊದಲನೆಯ ಹಡಗು ಕಲ್ಕತ್ತೆಯ ಬಂದರು ತಲುಪಿತು. ಬ್ರಿಟಿಷ್ ವರ್ತಕರೂ ವ್ಯಾಪಾರ ಮಳಿಗೆಗಳೂ ಈ ಹಡಗಿನ ಸಾಮಾನುಗಳನ್ನು ಮಾರುಕಟ್ಟೆ ಸೇರಿಸಲು ನಿರಾಕರಿಸಿದರು. ಇದೇನೂ ಆಶ್ಚರ್ಯಕರ ಸಂಗತಿಯಾಗಿರಲಿಲ್ಲ. ಅಮೇರಿಕದ ವರ್ತಕರಿಗೆ ಭಾರತದ ವ್ಯಾಪಾರೋದ್ಯಮದಲ್ಲಿ ನೆಲೆ ಸಿಗಲು ಬ್ರಿಟಿಷರು ಬಿಡುತ್ತಿದ್ದಿಲ್ಲ. (೧೭೯೨ ರಲ್ಲೂ ಜಾರ್ಜ್ ವಾಶಿಂಗ್ಟನ್ನನು ಬೆಂಜಮಿನ್ ಜೋಯ್ ಎಂಬುವನನ್ನು ಅಮೇರಿಕದ ಮೊದಲನೆಯ ರಾಯಭಾರಿಯಾಗಿ ಕಲ್ಕತ್ತೆಗೆ ಕಳುಹಿಸಿದಾಗ ಅವನ ಆ ಪದವಿಯನ್ನು ಮಾನ್ಯ ಮಾಡಲು ಬ್ರಿಟಿಷರು ನಿರಾಕರಿಸಿದಾಗ ಜೋಯ್ ಮರುವರ್ಷ ತನ್ನ ಹುದ್ದೆಗೆ ರಾಜೀನಾಮೆಯಿತ್ತನು.)

ಈ ಸಂದಿಗ್ಧ ಕಷ್ಟಕಾಲದಲ್ಲಿ ರಾಮದುಲಾಲ ಡೇ ಎಂಬವನು ಅಮೇರಿಕನ್ ವರ್ತಕರಿಗೆ ಸ್ನೇಹಹಸ್ತ ಚಾಚಿದನು. ಅವನ ಈ ಸಹಾಯವು ಎಷ್ಟು ಮಹತ್ವದ್ದಾಗಿತ್ತೆಂದರೆ ಇದರಿಂದಾಗಿ ಅವನು ಆ ಬಳಿಕ ಭಾರತದಲ್ಲಿ ಅಮೇರಿಕದ ವಾಣಿಜ್ಯದ ಅಗ್ರಗಾಮಿ ಪುರುಷನೆಂದೆನಿಸಿಕೊಂಡನು. ಹಲವು ವರ್ಷಗಳ ಮೊದಲು, ರಾಮದುಲಾಲ ಡೇ ನವತಾರುಣ್ಯದಲ್ಲಿದ್ದಾಗ ಅವನು ತನ್ನ ಜೀವನೋಪಾಯವನ್ನು ತಿಂಗಳಿಗೆ ಹತ್ತು ರೂಪಾಯಿಗಳ ಗಳಿಕೆಯ, ವಿನಯಶೀಲ ರಫ್ತುಪಟ್ಟಿ ಕಾರಕೂನನಾಗಿ ಪ್ರಾರಂಭಿಸಿದ್ದನು. ಅವನು ಮದನಮೋಹನದತ್ತ ಎಂಬ ರಫ್ತು-ಭಂಡಾರಶಾಲೆಯ ಸಿರಿವಂತ ದಿವಾನನ ಕೈಕೆಳಗೆ ಕೆಲಸ ಮಾಡುತ್ತಿದ್ದನು. ಈ ದತ್ತನು ಐಶ್ವರ್ಯದಲ್ಲಿ ರಾಬರ್ಟ್ ಕ್ಲೈವನ ದಿವಾನನಾದ ರಾಜಾ ನಬಕಿಶನನಿಗೆ ಮಾತ್ರ ದ್ವಿತೀಯನಾಗಿದ್ದನು. ಒಂದು ದಿನ ದತ್ತನು ರಾಮದುಲಾಲನನ್ನು ಕಲ್ಕತ್ತೆಯ ಹಳೇ ಕೋರ್ಟ್ ರಸ್ತೆಯಲ್ಲಿದ್ದ "ಟುಲ್ಲೋ ಮತ್ತು ಕಂಪನಿ"ಯವರ ಆಫೀಸಿಗೆ, ಅಲ್ಲಿ ಹರಾಜಿನಲ್ಲಿ ಕೆಲ ಸಾಮಾನುಗಳನ್ನು ಕೊಂಡುಕೊಳ್ಳಲು ಕಳುಹಿಸಿದ್ದನು. ಆದರೆ ರಾಮದುಲಾಲನು ಅಲ್ಲಿಗೆ ತಲುಪಬೇಕಾದರೆ ಸಾಮಾನುಗಳು ಆದಾಗಲೇ ಮಾರಲ್ಪಟ್ಟಿದ್ದವು. ಆ ಬಳಿಕ ಹರಾಜಾಗುವ ಸಾಮಾನಿನ ತಂಡವು ಹೂಗ್ಲಿ ನದಿ ಮುಖದಲ್ಲಿ ತತ್ತರಿಸಿ, ಸರಕು ಸಹಿತ ತಳ ಸೇರಿದ ಒಂದು ಭಗ್ನ ನೌಕೆಯದಾಗಿತ್ತು. ಕೆಲ ದಿನಗಳ ಮೊದಲು ರಾಮದುಲಾಲನು ಡಯಮಂಡ್ ಬಂದರಿಗೆ ತಾನು ಕೊಟ್ಟ ಭೇಟಿಯ ಸಮಯದಲ್ಲಿ ಅಚಿಂತಿತವಾಗಿ ಈ ಭಗ್ನ ನೌಕೆಯನ್ನು ನೋಡಿದ್ದನಲ್ಲದೆ, ಆದರಿಂದಾಗಿ ನೌಕೆಯು ಹರಾಜಿನಲ್ಲಿ ಅತಿ ಕಡಿಮೆ ಬೆಲೆಗೆ ಮಾರಲ್ಪಡುವುದನ್ನು ಕಂಡು ಅವನು ಅದರ ಕ್ರಯವನ್ನು ರೂ. ೧೪,೦೦೦ ಕ್ಕೆ ಏರಿಸಿ, ಅದನ್ನು ಕೊಂಡನು. ಮರುಕಟ್ಟ "ಟುಲ್ಲೋ ಮತ್ತು ಕಂಪನಿ"ಯವರ ವಿರಾಮದ ಕೋಣೆಗೆ ಹೋದನು. ಅದಾಗಲೇ ಹರಾಜು ಕೋಣೆಗೆ ನುಗ್ಗಿದ ಇಂಗ್ಲಿಷ್ ವರ್ತಕನೊಬ್ಬನು, ನೌಕೆಯು ಹರಾಜಿನಲ್ಲಿ ಭಾರತೀಯನೊಬ್ಬನಿಗೆ ಹೋದುದನ್ನು ಕಂಡು ದಿಗಿಲುಪಟ್ಟನು. ಆ



ಇಂಗ್ಲಿಷ್ ಹರಾಜಿನ ವ್ಯಾಪಾರದ ಲಾಭಕ್ಕೆ ಭಗ್ನ ನೌಕೆಯನ್ನು ತನಗೆ ಮಾರುವಂತೆ ರಾಮದುಲಾಲನೊಡನೆ ಕೇಳಿಕೊಂಡನು. ಮೇಧಾವಿಯಾದ ಈ ನೌಕಾಧಿಕಾರಿಯು ತನ್ನ ವಿವೇಚನೆಯಿಂದಾಗಿ ಭಗ್ನನೌಕೆಯ ಸರಿಯಾದ ಅಂದಾಜು ಬೆಲೆಯನ್ನು ಕುರಿತು ವಿವರಿಸಿದ ಅವರ ವ್ಯವಹಾರದ ವಿಷಯದಲ್ಲಿ ಆಸಕ್ತಿ ತೋರಿಸಲಿಲ್ಲ. ಕೊನೆಗೆ, ಹಲವು ವಿಜ್ಞಾಪನೆಗಳ ಬಳಿಕ ರಾಮದುಲಾಲನು ಒಂದು ಲಕ್ಷ ರೂಪಾಯಿಗಳನ್ನು ಲಾಭಕ್ಕೆ ವ್ಯವಹಾರವನ್ನು ತೀರಿಸಿದನು.

ರಾಮದುಲಾಲನು ತನ್ನ ಧನಿಯಾದ ಮದನಮೋಹನದತ್ತನ ಬಳಿ ಬರಿಗಾಲಲ್ಲಿ ಹೋಗಿ, ಕೈಮುಗಿದು ತನಗೆ ಸಕಾಲದಲ್ಲಿ ಹರಾಜಿಗೆ ತಲುಪಲಾಗದುದಕ್ಕೆ ಕ್ಷಮೆ ಬೇಡಿದನು. ಆ ಬಳಿಕ ಭಗ್ನ ನೌಕೆಯ ವ್ಯವಹಾರವನ್ನು ತಿಳಿಸಿ, ಯಜಮಾನನು ತನ್ನೊಡನೆ ಕೊಟ್ಟ ರೂ. ೧೪,೦೦೦ ವನ್ನು ಅದರೊಂದಿಗೆ ತಾನು ಗಳಿಸಿದ ಒಂದು ಲಕ್ಷದ ಮೊತ್ತವನ್ನು ಅವನ ಕಾಲಬಳಿಯಿಟ್ಟನು. ಮದನಮೋಹನನು ಆಶ್ಚರ್ಯಚಕಿತನಾಗಿ, ತನ್ನ ನೌಕರನಾದ ರಾಮದುಲಾಲನ ಗುಣಗ್ರಾಹಿಯಾಗಿ ಸಂತುಷ್ಟನಾಗಿ ಆನಂದಬಾಷ್ಪ ಸುರಿಸಿದನು. ಅಲ್ಲದೆ, ಲಾಭವಾಗಿ ಬಂದ ಇಡೀ ಒಂದು ಲಕ್ಷದ ಮೊತ್ತವನ್ನು ರಾಮದುಲಾಲನ ಪ್ರಾಮಾಣಿಕತೆಗಾಗಿ ಅವನಿಗೇ ಕೊಟ್ಟನು. ಈ ಬಂಡವಾಳದಿಂದ ರಾಮದುಲಾಲ ಡೇ ೧೭೮೫ ರಲ್ಲಿ ಸ್ವತಂತ್ರ ವ್ಯಾಪಾರವನ್ನು ಸ್ಥಾಪಿಸಿ, ಕೆಲವೇ ವರ್ಷಗಳಲ್ಲಿ ವ್ಯಾಪಾರದಲ್ಲಿ ಉನ್ನತಿಯನ್ನೂ ಅಭಿವೃದ್ಧಿಯನ್ನೂ ಹೊಂದಿದನು.

ಅಮೆರಿಕದ ಮೊದಲ ಹಡಗು ೧೭೮೭ ರಲ್ಲಿ ಕಲ್ಕತ್ತೆ ತಲುಪುವ ವೇಳೆಗೆ ರಾಮದುಲಾಲ ಡೇ ಖ್ಯಾತ ಧನಿಕ ವರ್ತಕನಾಗಿದ್ದನು. ಅವನಿಗೆ ದೇಶೀಯ ಮತ್ತು ವಿದೇಶೀಯ ವರ್ತಕರೊಡನೆ ವಿಶಾಲ ಸಂಪರ್ಕವಿತ್ತು. ಅವನ ಪ್ರತಿಸ್ಪರ್ಧಿಗಳಾದ ದಲ್ಲಾಳಿಗಳೂ ಅಮೆರಿಕದ ಹಡಗಿನ ಅಧಿಕಾರಿಗಳಿಗೆ ತಮ್ಮ ಸರಕುಗಳನ್ನು ಒಳ್ಳೆಯ ಬೆಲೆಗೆ ಮಾರುವಂತೆ ಸಹಾಯ ಮಾಡಿದನು. ಅವನು ಮುಕ್ತಹಸ್ತದಿಂದ ಇವರಿಗೆ ಹಣವನ್ನು ಮುಂಗಡ ಕೊಟ್ಟು ಭಾರಿಯಾಗಿ ಅವರೆಲ್ಲ ತಮ್ಮ ಹಡಗುಗಳನ್ನು ಭಾರತದ ಅತ್ಯುತ್ತಮ ಸರಕುಗಳಿಂದ ತುಂಬಿಕೊಳ್ಳುತ್ತಿದ್ದಂತೆ, ಅವನಿಗೆ ಸ್ಥಳೀಯ ಮಾರುಕಟ್ಟೆಯ ಮೇಲೆ ಹತೋಟಿಯಿದ್ದುದರಿಂದ ಅವನು ಅಮೇರಿಕನ್ನರ ಒಳ್ಳೆಯ ಸರಕುಗಳನ್ನು ನ್ಯಾಯವಾದ ಬೆಲೆಗಳಿಗೆ ಪಡೆಯುವಂತೆ ಖಚಿತಪಡಿಸಿದನು. ಇದರಿಂದಾಗಿ ಹಡಗಿನ ಅಪ್ರಬುದ್ಧ ಅಧಿಕಾರಿಗಳೂ ಅವರ ಕೈಕೆಳಗಿನ ಮೇಲ್ವಿಚಾರಕರೂ ಅಮೆರಿಕಕ್ಕೆ ಮರಳಿ, ಹೆಚ್ಚಿನ ಲಾಭದಿಂದ ಅವರೂ ಐಶ್ವರ್ಯ ಗಳಿಸಿ, ಪ್ರತಿಭಾವಂತ ವರ್ತಕರಾದರು.

ರಾಮದುಲಾಲನ ಯಶಸ್ಸು ಅಮೆರಿಕದ ವ್ಯಾಪಾರೀ ವಲಯಗಳಲ್ಲಿ ಹರಡಿತ್ತು. ಚಿತ್ರವೆಂದರೆ ಬಂಗಾಳದಲ್ಲಿಯೂ ಅಥವಾ ಭಾರತದಲ್ಲಿಯೂ ಅಮೇರಿಕದ ವ್ಯಾಪಾರದ ಬಹ್ವಂಶವು ಅವನ ಮುಖಾಂತರವೇ ನಡೆಯುತ್ತಿತ್ತು. ಅವನ ಅಸಾಧಾರಣ ಪ್ರಾಮಾಣಿಕತೆ, ಸಂಚಿತ್ತ ಮಹೋದ್ಯಮ ಸಾಧನೋಪಾಯ, ನಿಷ್ಪಕ್ಷಪಾತ ಧೋರಣೆ ಮತ್ತು ಸಹಾಯಕತೆಗಳಿಂದಾಗಿ ಅಮೆರಿಕದ ಎಲ್ಲ ಬಂದರುಗಳಿಂದ ವ್ಯಾಪಾರವು ಅಧಿಕಾಧಿಕವಾಗಿ ಬಂಗಾಳಕ್ಕೆ ಬರತೊಡಗಿತು. ಅವನ ಸಹಾಯ ಪಡೆದವರೆಲ್ಲ ಅವನನ್ನು ವಾತ್ಸಲ್ಯ-ಕೃತಜ್ಞತೆಗಳಿಂದ ಕಾಣ ಲಾರಂಭಿಸಿದರು. ಅವನು ವ್ಯಾಪಾರೋದ್ಯಮದಲ್ಲಿ ಮಹೋನ್ನತನೆಂದು ಪರಿಗಣಿಸಲ್ಪಟ್ಟನು.

ಹೀಗಾಗಿ ಅಮೆರಿಕದ ಪಟ್ಟಣಗಳಾದ ಸೇಲಮ್, ಬೊಸ್ಟನ್, ನ್ಯೂಯಾರ್ಕ್, ಫಿಲಡಲ್ಫಿಯಾ ಮತ್ತು ಮಾರ್ಬಲ್‌ಹೆಡ್‌ಗಳಲ್ಲಿದ್ದ ೩೫ ವರ್ತಕರು ಒಟ್ಟುಗೂಡಿ ಉದಾತ್ತ ಮೊಬಲಗಿನ ಚಂದಾ ಎತ್ತಿ ಅದರಿಂದ ಜಾರ್ಜ್ ವಾಶಿಂಗ್‌ಟನ್ನನ ಭಾವಚಿತ್ರವೊಂದನ್ನು ವರ್ಣತೈಲಗಳಿಂದ ಬರೆಸಿ, ರಾಮದುಲಾಲನಿಗೆ ಕಾಣಿಕೆಯಾಗಿ ಕಳುಹಿದರು. ಅಮೆರಿಕದ ಸುಪ್ರಖ್ಯಾತ ಚಿತ್ರಗಾರನಾದ ಗಿಲ್ಬರ್ಟ್ ಸ್ಟುವರ್ಟ್ ರಚಿಸಿದ ಈ

ಶೋಭಾಯಮಾನ ಭಾವಚಿತ್ರವು ೯ ಅಡಿ ಉದ್ದವೂ ೬ ಅಡಿ ಅಗಲವೂ ಇದೆ. ಅದು ಜಾರ್ಜ್ ವಾಶಿಂಗ್‌ಟನ್ನನ ಬದುಕಿನ ಕೊನೆಯ ವರ್ಷಗಳಲ್ಲಿ ಚಿತ್ರಿಸಲ್ಪಟ್ಟು ಈ ಬಂಧವಿಮೋಚಕ ಸ್ವದೇಶಾಭಿಮಾನಿಯ ಮರಣದ ಒಂದು ವರ್ಷದ ತರುವಾಯ ಭಾರತವನ್ನು ತಲುಪಿತು.

೧೮೦೦ ರಲ್ಲಿ ಕಾಣಿಕೆಯಾಗಿ ಕೊಡಲ್ಪಟ್ಟ ಈ ಭಾವಚಿತ್ರವು ರಾಮದೂಲಾಲನ ವ್ಯಾಪಾರದ ಮಳಿಗೆಯಲ್ಲಿ ಅವನ ಮರಣ ತರುವಾಯದ ಹಲವು ದಶಕಗಳ ವರೆಗೂ ಅತಿ ಜಾಗ್ರತೆಯಿಂದ ರಕ್ಷಿಸಲ್ಪಟ್ಟಿತ್ತು. ಅದೊಂದು ಅಮೂಲ್ಯ ವಸ್ತುವಿನಂತೆ ಪರಿಗಣಿಸಲ್ಪಟ್ಟು ಅವನ ವಂಶಜರು ಅದನ್ನು ಸ್ವಾಭಿಮಾನದಿಂದ ಪ್ರದರ್ಶಿಸುತ್ತಿದ್ದರು. ೧೯ನೆಯ ಶತಮಾನದ ಕೊನೆಯಲ್ಲಿ ಅದು ಪತಲ್‌ದಂಗಾದ ಮಲ್ಲಿಕರಲ್ಲಿ ತಲುಪಿ, ಕೊನೆಗೆ ಅವರ ವೆಲ್ಲಿಂಗ್‌ಟನ್ ಸ್ಕ್ವೇರ್ ವಾಸಸ್ಥಾನದಲ್ಲಿ ಉಳಿಯಿತು. ಗಿಲೀಟು ಹಾಕಿದ ಅವರ ಸುಭದ್ರ ಸುಂದರ ಚೌಕಟ್ಟಿನೊಡನೆ ಅದನ್ನು ರೂ. ೯೦,೦೦೦ ಕ್ಕೆ ಐಶ್ವರ್ಯವಂತ ಅಮೇರಿಕನನೊಬ್ಬನು ಪಡೆದುಕೊಂಡು ಅದು ಪುನಃ ಅಮೇರಿಕ ಸೇರಿದೆಯೆಂದು ನಂಬಲಾಗಿದೆ. ಸ್ಟುಅರ್ಟ್ ರಚಿಸಿದ ಈ ಭಾವಚಿತ್ರವು ವೈಶಿಷ್ಟ್ಯ ಸೂಚಕವಾಗಿದೆ. ಇದರಲ್ಲಿ ವಾಶಿಂಗ್‌ಟನ್ನನು ವೀರೋಚಿತ ಶೈಲಿಯಲ್ಲಿ ನಿರೂಪಿಸಲ್ಪಟ್ಟಿದ್ದಾನೆ. ಅವನ ಎಡಗೈ ಖಡ್ಗದ ಮೇಲಿದೆ. ಬಲಗೈ ಸಾರ್ವಜನಿಕ ಭಾಷಣದ ಸಮಯದಲ್ಲೆಂಬಂತೆ ಚಾಚಲ್ಪಟ್ಟಿದೆ. ಸೇನಾಧಿಪತಿಯ ಮುಖವು ಅವನ ಅಗಲವಾದ ಹಣೆಯನ್ನೂ ನಿಶ್ಚಲ ಬಾಯಿಯನ್ನೂ ಎತ್ತಿ ತೋರಿಸುವುದರಿಂದ ಅವನ ಮುಖಭಾವಕ್ಕೆ ತೀಕ್ಷ್ಣತೆಯನ್ನು ಒದಗಿಸಿದೆ. ಇದು ಸ್ಟುಅರ್ಟ್ ರಚಿಸಿದ ಇತರ ವಾಶಿಂಗ್‌ಟನ್ ಭಾವಚಿತ್ರಗಳಲ್ಲಿಯ ಸೌಮ್ಯತೆಯಿಂದ ವಿಭಿನ್ನವಾಗಿದೆ.

ರಾಮದೂಲಾಲನನ್ನು ಅತ್ಯಂತ ಗೌರವಾದರಗಳಿಂದ ಕಾಣುತ್ತಿದ್ದರೆಂಬುದಕ್ಕೆ ಸಾಕ್ಷಿಯೆಂಬಂತೆ ಅಮೇರಿಕದ ಧನಿಕ ವರ್ತಕನೊಬ್ಬನು ತಾನು ಹೊಸತಾಗಿ ಕಟ್ಟಿಸಿದ ಹಡಗಿಗೆ ಅವನ ಹೆಸರನ್ನೇ ಕೊಟ್ಟನು. ಈ ಭಾರತೀಯನ ಜೀವಮಾನದಲ್ಲಿ "ರಾಮದೂಲಾಲ್" ಹಡಗು ರಾಮದೂಲಾಲನ ಸರಕನ್ನು ಹೇರಿಕೊಂಡು ಮೂರು ಸಲ ಕಲ್ಕತ್ತೆಗೆ ಬಂತು. ಆ ಹೆಸರೇ ಅಭಿವೃದ್ಧಿ ಮತ್ತು ಅದೃಷ್ಟ ಸೂಚಕವಾಯಿತು.

ಪ್ರಾಯಶಃ ಈ ಭಾರತೀಯ ವರ್ತಕನೂ ಇದನ್ನೇ ನಂಬಿರಬಹುದು. ಇವನ ಒಂದು ಹಡಗಿಗೂ "ರಾಮ ದೂಲಾಲ್" ಎಂಬ ಹೆಸರಿತ್ತು. ಅವನ ಬೇರೆ ಮೂರು ಹಡಗುಗಳು "ಕಮಲಾ" (ಹುಟ್ಟು ಕುರುಡಿಯಾಗಿ ಏಳು ವರ್ಷ ಪ್ರಾಯದಲ್ಲಿ ತೀರಿಹೋದ ಮಗಳ ಹೆಸರು), "ಬಿಮೊಲಾ" (ಅವನು ಎರಡನೆಯ ಹೆಂಡತಿಯಿಂದ ಪಡೆದ ಅತಿ ಪ್ರೀತಿಯ ಮಗಳ ಹೆಸರು), ಮತ್ತು "ಡೇವಿಡ್ ಕ್ಲಾರ್ಕ್" (ರಾಮದೂಲಾಲನು ದಲ್ಲಾಲಿಯಾಗಿದ್ದ ಮತ್ತು ಅವನೊಡನೆ ವೃದ್ಧಿ ಹೊಂದಿದ ಅಗ್ರ ಬ್ರಿಟಿಷ್ ವ್ಯಾಪಾರೀ ಸಂಸ್ಥೆಯಾದ ಫೇರ್ಲಿ ಫರ್ಗೂಸನ್ ಮತ್ತು ಕಂಪನಿಯ ಹಿರಿಯ ಪಾಲುಗಾರನ ಹೆಸರು) ನಾಮಾಂಕಿತವಾಗಿದ್ದುವು. ಈ ನಾಲ್ಕು ಹಡಗುಗಳು ಭಾರತೀಯ ಸರಕನ್ನು ಅಮೇರಿಕ, ಇಂಗ್ಲೆಂಡ್, ಚೀನ, ಮಾಲ್ಟಾ, ಮಾರಿಶಸ್, ಜಾವಾ ಮತ್ತು ಫಿಲಿಪೀನ್ಸ್‌ಗಳಿಗೆ ಸಾಗಿಸುತ್ತಿದ್ದುವು. ರಾಮದೂಲಾಲನು ಅನೇಕ ಅಮೇರಿಕನ್ ವ್ಯಾಪಾರಿಗಳಿಗೂ ಚೀನದಲ್ಲಿಯ ಅಗ್ರ ವ್ಯಾಪಾರೀ ಸಂಸ್ಥೆಗಳಿಗೂ ಫಿಲಿಪೀನ್ಸ್ ಕಂಪನಿಗೂ ಏಕೈಕ ಪ್ರತಿನಿಧಿಯಾಗಿದ್ದನು. ಶಾಲೆಯ ಹತ್ತಿರವೂ ಸುಳಿಯದ ಇಂಗ್ಲಿಷ್ ಶಿಕ್ಷಣವನ್ನೂ ಪಡೆಯದ ರಾಮದೂಲಾಲನ ವ್ಯಾಪಾರೀ ಯಶಸ್ಸು ಅಸಾಧಾರಣವಾಗಿತ್ತು. ಇಂದಿನ ಡಮ್ ಡಮ್ ವಿಮಾನ ನಿಲ್ದಾಣದ ಬಳಿಯಲ್ಲಿದ್ದ ರೇಕ್‌ಜನೀ ಹಳ್ಳಿಯಲ್ಲಿ ಬಡಕುಟುಂಬವೊಂದರಲ್ಲಿ ಅವನ ಜನನವು ೧೭೫೨ ರಲ್ಲಿ ಆಯಿತು. ಅವನ ತಂದೆ ಬಲರಾಮನು ಬಂಗಾಳಿ ಭಾಷೆಯ ಮತ್ತು ಅಂಕಗಣಿತದ

ಅದಿ ಪಾಠಗಳನ್ನು ರೈತ ಮಕ್ಕಳಿಗೆ ಕಲಿಸಿ ಉತ್ಕೃಷ್ಟ ರೂಪದಲ್ಲಿ ಪ್ರತಿಫಲ ಪಡೆದು ಅತಿ ಕಷ್ಟದಿಂದ ಜೀವನವನ್ನು ಸಾಗಿಸುತ್ತಿದ್ದನು. ಇದೇ ಸಮಯದಲ್ಲಿ ಮರಾಠಾ ಅಶ್ವಾರೋಹಿಗಳು ಬಂಗಾಳದ ಕಲ್ಕತ್ತೆಯ ಹೊರವಲಯಗಳಲ್ಲಿ ಸುಲಿಗೆ ನಡೆಸಿದರು. ರಾಣಿಗಂಜ್ ಮತ್ತು ಅದರ ಹತ್ತಿರದ ಹಳ್ಳಿಗಳು ಕೊಳ್ಳೆಹೊಡೆಯಲ್ಪಟ್ಟವು. ಬಲರಾಮನು ತನ್ನ ಗುಡಿಸಲನ್ನು ಬಿಟ್ಟು ಗರ್ಭವತಿಯಾದ ಪತ್ನಿಯೊಡನೆ ವಲಸೆ ಹೋಗುವಾಗ ನಿರ್ಜನ ಗದ್ದೆಯೊಂದರಲ್ಲಿ ಅವಳು ರಾಮದೂಲಾಲನನ್ನು ಹೆತ್ತಳು. ಐದನೆಯ ವರ್ಷದಲ್ಲಿ ನಿರ್ಗತಿಕನಾದ ರಾಮದೂಲಾಲನು ತನಗಿಂತ ಸಣ್ಣ ಪ್ರಾಯದ ಒಬ್ಬ ತಮ್ಮ ಮತ್ತು ತಂಗಿಯರೊಡನೆ ಕಲ್ಕತ್ತೆಯಲ್ಲಿಯ ತನ್ನ ಅಜ್ಜನ ನಿವಾಸಕ್ಕೆ ಹೋದನು.

ಅವನ ಅಜ್ಜಿಯು ಮದನಮೋಹನ ದತ್ತನಲ್ಲಿ ಅಡಿಗೆಯವಳಾಗಿದ್ದಳು. ರಾಮದೂಲಾಲನಿಗೂ ಈ ಮನೆಯಲ್ಲಿ ಆಶ್ರಯ ದೊರಕಿತು. ಅವನಿಗೆ ದತ್ತನ ಮಕ್ಕಳೊಡನೆ ಬಂಗಾಳಿ ಓದುಬರಹದಲ್ಲಿಯೂ ಅಂಕಗಣಿತದಲ್ಲಿಯೂ ಪ್ರಾರಂಭಿಕ ಶಿಕ್ಷಣ ದೊರೆಯಿತು. ಆಮೇಲೆ ಮದನಮೋಹನ ದತ್ತನ ರಫ್ತು ಆಮದು ಸಂಸ್ಥೆಯಲ್ಲಿ ಸಂದೇಶ ವಾಹಕ ಹುಡುಗನಾಗಿಯೂ ರಫ್ತುಪಟ್ಟಿಯ ಕಾರಕೂನನಾಗಿಯೂ ಕೆಲಸ ಮಾಡುವಾಗ ಇಂಗ್ಲಿಷ್ ಭಾಷಾಜ್ಞಾನವನ್ನು ಸ್ವಲ್ಪಮಟ್ಟಿಗೆ ಪಡೆದನು. ಕಾಲಕ್ರಮೇಣ ಅವನು ಆ ಭಾಷೆಯಲ್ಲಿ ನಿರರ್ಗಳವಾಗಿ ಮಾತನಾಡಬಲ್ಲವನಾದನು. ಆದರೆ ಅಕ್ಷರ ಸಂಯೋಜನೆಯ ಕಷ್ಟದಿಂದಾಗಿ ಅವನಿಗೆ ಇಂಗ್ಲಿಷಿನಲ್ಲಿ ಬರೆಯುವುದು ತಿಳಿಯದಾಗಿತ್ತು. ಇದರಿಂದಾಗಿ ಅವನು ವ್ಯಾಪಾರೀ ಪತ್ರವ್ಯವಹಾರಕ್ಕಾಗಿ ತನ್ನದೇ ಆದ ಒಂದು ವಿಶಿಷ್ಟ ಕ್ರಮವನ್ನು ಇಟ್ಟುಕೊಂಡಿದ್ದನು. ರಾತ್ರಿ ಬಹಳವಾದ ಮೇಲೆ ಅವನು ತನ್ನ ವ್ಯಾಪಾರೀ ಪತ್ರಗಳನ್ನು ಇಂಗ್ಲಿಷಿನಲ್ಲಿ ಬರೆಯುತ್ತಿದ್ದನು. ಆದರೆ ಲಿಪಿಯು ಬಂಗಾಳಿಯದಾಗಿತ್ತು. ಮರುದಿನ ಬೆಳಿಗ್ಗೆ ಆತನ ಕಾರಕೂನರು ಇದನ್ನು ರೋಮನ್ ಲಿಪಿಯಲ್ಲಿ ಬರೆಯುತ್ತಿದ್ದರು. ರಾಮದೂಲಾಲನು ತನ್ನ ವ್ಯಾಪಾರೀ ಪತ್ರವ್ಯವಹಾರಕ್ಕಾಗಿ ಪ್ರಸಿದ್ಧನಾಗಿದ್ದನು – ಅದು ಕುಟಿಲವೂ ಜಟಿಲವೂ ಆಗಿರದೆ ನೇರ, ಸುಲಭ ಮತ್ತು ನಿಷ್ಕಪಟ ರೀತಿಯದಾಗಿತ್ತು.

ರಾಮದೂಲಾಲನು ತನ್ನ ದೇಶೀಯ ಮತ್ತು ವಿದೇಶೀಯ ವ್ಯಾಪಾರಗಳಿಂದಾಗಿ ಕಲ್ಕತ್ತೆಯ ಅತ್ಯಂತ ಧನಿಕ ಭಾರತೀಯ ವರ್ತಕನಾದನು. ಅನೇಕ ಲಕ್ಷ ರೂಪಾಯಿಗಳನ್ನು ದಾನಧರ್ಮಕ್ಕಾಗಿಯೂ ಸತ್ಕಾರ್ಯಗಳಿಗಾಗಿಯೂ ವಿನಿಯೋಗಿಸಿ ಅವನು ನಗದು ರೂ. ೧,೨೩,೦೦,೦೦೦ ಬಿಟ್ಟು ಅಗಲಿದನು. ಅಲ್ಲದೆ ಕಲ್ಕತ್ತೆ, ಬನಾರಸು ಮತ್ತು ಇತರ ನಗರಗಳಲ್ಲಿ ಭೂಮಿ ಕಾಣಿಕೆಗಳೂ ಇದ್ದುವು.

೧೭೮೭ರ ಮತ್ತು ರಾಮದೂಲಾಲನ





ನಿನ್ನೆ ರಾತ್ರಿ ಕನಸಿನಲ್ಲಿ ನಿನ್ನ ಮಗನ ಕಾಗದ ಬಂದಿತ್ತು ಕಣೇ. ಕನ್ನಡಕ ತೆಗೆದಿಟ್ಟು ಮಲಗಿದ್ದರಿಂದ ಓದಲಾಗಲಿಲ್ಲ!

[illegible] ೧೮೫೦ರ ಅಂತರದಲ್ಲಿ ನೂರಂಗಟ್ಟಲೆ ಅಮೆರಿಕನ್ ಹಡಗಂಗಳು ಭಾರತದ ಬಂದರಂಗಳಿಗೆ ಸರಕು ತಂದವು. ಈ ಎರಡೂ ದೇಶಗಳ ನಡುವೆ ಕ್ರಮವಾದ ಮತ್ತು [illegible]ವಾದ ವ್ಯಾಪಾರವು ಬೆಳೆಯಿತು. ಕಲ್ಕತ್ತೆಯ ಬಂದರಿನಲ್ಲಿ ಅಮೆರಿಕನ್ ಹಡಗುಗಳು ಚಹದ ಎಲೆ, ಸಕ್ಕರೆ, ಶುಂಠಿ, ಮೆಣಸು, ರೇಷ್ಮೆ ತಟ್ಟು, ಕೆಂಪು ಸ್ಫಟಿಕದ ಹಾರಗಳು, [illegible] ಬಲೆಯಂತಹ ನುಣುಪಾದ ಮಸ್ಲಿನು ಬಟ್ಟೆ ಇತ್ಯಾದಿ ಸರಕುಗಳನ್ನು ತುಂಬಿಸಿಕೊಳ್ಳುತ್ತಿದ್ದುವು. ಸಂಸ್ಕೃತ ಧರ್ಮ ಗ್ರಂಥಗಳೂ ಈ ಹಡಗಂಗಳ ಮೂಲಕ ಅಮೇರಿಕದ ಯೇಲ್ ವಿಶ್ವವಿದ್ಯಾಲಯವನ್ನು ಸೇರಿ, ಅಮೆರಿಕದ ಮೊದಲನೆಯ ಸಂಸ್ಕೃತ ಪಂಡಿತನಾದ ಎಡ್ವರ್ಡ್ ಎಲ್ ಬ್ರಿಜ್ ಸ್ಯಾಲಿಸ್‌ಬರಿಯ ಹಸ್ತದಿಂದ ಸಂಸ್ಕೃತ ಅಧ್ಯಯನಕ್ಕೆ ಪ್ರೋತ್ಸಾಹ ಕೊಟ್ಟವು.

ಸಮುದ್ರ ಸಂಬಂಧದ ಕುತೂಹಲಕಾರಿ ಘಟನೆಯೊಂದು ೧೮೩೩ ರಲ್ಲಿ ನಡೆಯಿತು: ಹೊಸತಾದ ಮತ್ತು ವಿಸ್ಮಯಕಾರಕವಾದ ಸರಕೊಂದು ಆ ವರ್ಷ ಒಯ್ಯಲ್ಪಟ್ಟಿತು. ಇದೇ ಮೇಯಿನ್, ನ್ಯೂ ಹ್ಯಾಂಪ್‌ಶಯರ್, ವರ್ಮಾಂಟ್ ಮತ್ತು ಇತರ ನ್ಯೂ ಇಂಗ್ಲೆಂಡ್ ರಾಜ್ಯಗಳ ಸರೋವರ, ಕೊಳಗಳಿಂದ ಕಡಿಯಲ್ಪಟ್ಟ ನೂರಂಗಟ್ಟಲೆ ಟನ್ ಬರ್ಫ. ಸಾಧಾರಣ ೧೫,೦೦೦ ಮೈಲಿಯಷ್ಟು ದೂರ ಚಲಿಸಬೇಕಾಗಿದ್ದರೂ ಈ ಸರಕು ಕರಗಲಿಲ್ಲ! ಇದಕ್ಕಾಗಿ ಬರ್ಫವು ಸುವಾಸನೆಯುಳ್ಳ ದೇವದಾರು ಮರದ ಗರಗಸದ ಹೊಟ್ಟಿನಿಂದ ಆವರಿಸಲ್ಪಟ್ಟಿತ್ತು. ಹಡಗಂಗಳಿಗೆ ಇಮ್ಮಡಿ ಹೊದಿಕೆಗಳಿದ್ದುವು ಮತ್ತು ಬರ್ಫ ತುಂಬಿಸ್ಪಟ್ಟ ಕೆಳಗಿನ ಅಂತಸ್ತುಗಳು ಇಡೀ ಪ್ರಯಾಣಕಾಲದಲ್ಲಿ ಬಿಗಿಯಾಗಿ ಮುಚ್ಚಲ್ಪಟ್ಟಿದ್ದುವು. ೧೮೩೩ ರಲ್ಲಿ "ಟಸ್ಕನಿ" ಎಂಬ ಹಡಗವು ೧೮೦ ಟನ್ ಬರ್ಫವನ್ನು ಕಲ್ಕತ್ತೆಗೆ ಸಾಗಿಸಿತು. ಲಂಡನ್ನಿನ "ಟೈಮ್ಸ್" ಪತ್ರಿಕೆಯಿಂದ "ಬಂಗಾಳದ ರೊತ್‌ಚೈಲ್ಡ್ಸ್" ಎಂದು ನಾಮಾಂಕಿತರಾದ ರಾಮೂದುಲಾಲನ ಪುತ್ರರು ಈ ಬರ್ಫದಿಂದ ಒಳ್ಳೆಯ ಲಾಭ ಗಳಿಸಿದರು.

ಅಮೇರಿಕದ ದ್ವಿಶತಕಮಾನೋತ್ಸವದ ವರ್ಷದಲ್ಲಿ ನಾವು ನೆನೆಯಬಹುದಾದ ಕುತೂಹಲಕಾರಿ ಸಂಗತಿಯೆಂದರೆ ಭಾರತವನ್ನೂ ಆ ಹೊಸ ಜಗತ್ತನ್ನೂ ಅನ್ಯೋನ್ಯ ತಿಳುವಳಿಕೆಗಳ ಮೂಲಕವೂ ನ್ಯಾಯವಾದ ವ್ಯಾಪಾರದಿಂದಲೂ ಸಹಕಾರದಿಂದಲೂ ಹತ್ತಿರ ತಂದವನು ರಾಜನೀತಿ ನಿಪುಣನಾಗಿದ್ದಿಲ್ಲ, ಲೇಖಕನಾಗಿದ್ದಿಲ್ಲ, ತತ್ವಜ್ಞಾನಿಯಾಗಿದ್ದಿಲ್ಲ, ಕಾರ್ಮಿಕನಾಯಕನಾಗಿದ್ದಿಲ್ಲ; ಬರೇ ಒಬ್ಬ ವರ್ತಕನಾಗಿದ್ದನು. ಅವನು ಉಚ್ಚಕುಲದ ಸರದಾರನೂ ಆಗಿರದೆ ಸಾಮಾನ್ಯ ಮನುಷ್ಯನಾಗಿದ್ದನು. ಆದರೆ ಅವನು ತನ್ನ ಕಠಿಣ ಪರಿಶ್ರಮದಿಂದಲೂ ಭಾವಶುದ್ಧಿಯಿಂದಲೂ ಸಮೃದ್ಧಿಯ [illegible]ವನ್ನು ಪಡೆದನು. ಹೀಗಾಗಿ ಒಂದು ದೃಷ್ಟಿಯಲ್ಲಿ ಅವನು ಅಸಾಮಾನ್ಯ ಮನುಷ್ಯನೂ ಆಗಿದ್ದನು.

✡



[illegible]ನಲ್ಲಿ [illegible]ನೊಬ್ಬನು ತನ್ನ [illegible] ಗೆಳೆಯನಿಗೆ [illegible]ವಾಗಿ ವಿವರಿಸುತ್ತ,

"[illegible] ಎಲ್ಲ ಅಂಗಾಂಗಗಳ ಶಸ್ತ್ರಚಿಕಿತ್ಸೆ ನಡೆಸಿದ್ದೇನೆ. ಆದರೆ [illegible] ಎಲ್ಲಿಯೂ [illegible]?" ಎಂದ.

ಆತನ ಗೆಳೆಯ ಮರು ಪ್ರಶ್ನಿಸಿದ:

"[illegible] ತಲೆಗೂ ಶಸ್ತ್ರಚಿಕಿತ್ಸೆ [illegible]? ಅಲ್ಲಿಯೇನಾದರೂ [illegible] ಸಿಕ್ಕೀತು ಹತ್ತಿರ?"

ಡಾಕ್ಟರ್ ಮಿತ್ರ ನಕ್ಕಿದ.

ಪವಾಡ

ಮೋಹನ ಕಳಸದ

ಬಹುಶಃ ಇದನ್ನು ನಾಸ್ತಿಕರಾರೂ ನಂಬಲಿಕ್ಕಿಲ್ಲ. ಇಂಥ ಅಸಾಮಾನ್ಯ ಕೆಲಸವನ್ನು ಒಬ್ಬ ಸಾಧಕ ಸಾಧಿಸಿದರೆ, ಸಾಮಾನ್ಯರು ಪವಾಡ ಎನ್ನುತ್ತಾರೆ. ಇದಕ್ಕೆ ವಿಜ್ಞಾನ ಯುಗದಲ್ಲಿ ಸ್ಥಿರವಾದ ಅರ್ಥ ಸಿಗುವುದು ಕಷ್ಟ. ಇಂಥ ಪವಾಡ-ಗಿವಾಡಗಳು ಆಯಾಯವರ ಸಬಲ, ದುರ್ಬಲ ಮನಸ್ಸುಗಳ ಮೇಲೆ ಕಾರಣ ಮನುಷ್ಯ ನಂಬಿಕೆ, ಶ್ರದ್ಧೆಯಿಂದ ಮೇರೆಮೀರಿ ಗುರಿ ಮುಟ್ಟಲಿಲ್ಲ. ಪ್ರಕೃತಿ ಸಹಜಕ್ಕೆ ಮಣಿದವರಿಗೆ ಶಿವಜ್ಜನ ಶ್ರದ್ಧೆ ಪವಾಡವಾಯಿತು. ಗೊಡ್ಡು ವಿಚಾರ ನಂಬದವರಿಗೆ 'ಜನ ಮರುಳೋ ಜಾತ್ರೆ ಮರುಳೋ?' ಎನಿಸಿತು. ಪವಾಡವೋ ಸಹಜವೋ ನನಗೂ ಸಮಸ್ಯೆ. ಈ ಘಟನೆ ಕೆಲವು ತಿಂಗಳುಗಳ ಹಿಂದೆ ನಡೆದದ್ದಂತೂ ಸತ್ಯ.

*

ಶಿವಜ್ಜ ನಮ್ಮ ಊರಿಗೇ ಅಜ್ಜ. ನಾನು ಚಿಕ್ಕಂದಿನಿಂದ ನೋಡುತ್ತಿದ್ದೇನೆ. ಅವನಲ್ಲಿ ಯಾವ ಬದಲಾವಣೆಯೂ ಇಲ್ಲ. ಬೇಸಿಗೆಯಲ್ಲಿ ಒಣಗುವವನಲ್ಲ; ಚಳಿಗಾಲದಲ್ಲಿ ಚಿಗಿಯುವವನಲ್ಲ. ಅವನ ವಯಸ್ಸು ಅಂದಾಜು ಮಾಡುವುದೇ ಕಠಿಣ. ಗುಳಿ ಬಿದ್ದ ಕಣ್ಣುಗಳು, ಸುಕ್ಕುಗಟ್ಟಿದ ಮುಖ, ಹಣೆಯ ಮೇಲೆ ಹಲವು ಗೆರೆಗಳು, ಬಿಲ್ಲಿನಂತೆ ಬಾಗಿದ ದೇಹ, ಇವನ್ನೆಲ್ಲ ಗಮನಿಸಿದಾಗ ಎಪ್ಪತ್ತರ ಗಡಿಯನ್ನು ಮುಟ್ಟಿರಬಹುದು ಅನಿಸುತ್ತದೆ. ಜಡ್ಡು ಜಾಪತ್ರೆ ಅವನ ಬಳಿ ಸುಳಿದಿಲ್ಲ. ಮಾಸಲು ಹರಕು ಧೋತರ, ಅರ್ಧ ತೋಳಿನ ಅಂಗಿ; ಇವು ಅವನ ಮೈ ಮುಚ್ಚುವ ವಸ್ತ್ರಗಳು. ಶಿವಜ್ಜ ಎಲ್ಲಿದ್ದರೂ ಸರಿ, ಹುಡುಕಿ ತಂದು ಕ್ಷೌರ ಮಾಡುವುದು ಕೆಲಸಿಗರ ಶೇಷಣ್ಣನ ಕೆಲಸ. ಅವನ ಸೇವೆ ಮಾಡುವುದೆಂದರೆ ಶೇಷಣ್ಣನಿಗೆ ದೇವತಾ ಕಾರ್ಯ ಮಾಡಿದಷ್ಟು ಆತ್ಮಸಂತೋಷ. ದಾರಿಯಲ್ಲಿ ಹೊರಟಾಗ ತುಂಟ ಹುಡುಗರು 'ಮೀಸೆ ಅಜ್ಜ 'ಮೀಸೆ ಅಜ್ಜ' ಎಂದು ಕಾಡಿಸುತ್ತಾರೆ. ಮೀಸೆ ಅಜ್ಜ ಎಂದರೆ ಅವನಿಗೆ ಬಲು ಸಿಟ್ಟು. ಹಸಿವೆಯಾದಾಗ ಯಾವುದಾದರೂ ಒಂದು ಮನೆಯ ಮುಂದೆ ನಿಂತು, "ಜೈ ಶಂಕರ!" ಎಂದರೆ ಸಾಕು. ಶಿವಜ್ಜ ರೊಟ್ಟಿಗಾಗಿ ಬಂದ ಎಂದು ಗೊತ್ತಾಗಿ ಬಿಡುತ್ತದೆ. ಅವರು ಕೊಟ್ಟರೆ ತೆಗೆದುಕೊಳ್ಳುತ್ತಾನೆ; ಇಲ್ಲವಾದರೆ ಸುಮ್ಮನೆ ಮುಂದಿನ ಮನೆಗೆ ಹೋಗುತ್ತಾನೆ. ಅವನು ಮಾತನಾಡುವುದೇ ಬಹಳ ಕಡಿಮೆ. ಎಂದಾದರೂ ಒಂದು ಮಾತನಾಡಿದರೆ ಅದು ಕೆಲವರಿಗೆ ವೇದವಾಕ್ಯ. ನನ್ನ ದೃಷ್ಟಿಯಲ್ಲಿ ಮಾತ್ರ ಅವನೊಬ್ಬ ದುಡಿಯಲಾರದ ಮೈಗಳ್ಳ. ಊರೆಲ್ಲ ಸುತ್ತಿ, ಒಂದಷ್ಟು ರೊಟ್ಟಿಗಳಲ್ಲಿ ನಾಯಿಗಳನ್ನು ಕರೆದು ಅವುಗಳಿಗಿಷ್ಟು ಹಾಕಿ, ತಾನಷ್ಟು ತಿನ್ನುವನು; ಊರ ಮಧ್ಯದಲ್ಲಿರುವ ವೀರಭದ್ರದೇವರ ಗುಡಿಯಲ್ಲಿ ಮಲಗುವನು. ಹೀಗೆಯೇ ಸಾಗಿದೆ ಅವನ ಜೀವನ.

*

ಒಂದು ದಿನ ಮನೆಯ ಮುಂದಿನ ಕಟ್ಟೆಯ ಮೇಲೆ ನನ್ನ ಜೀವನದ ಬಗ್ಗೆ ಯೋಚಿಸುತ್ತ ಕುಳಿತಿದ್ದೆ...

ಪ್ರಕೃತಿಯ ಪ್ರಕೋಪ. ಶ್ರಾವಣ ಮಾಸದಲ್ಲೂ ತೊಟ್ಟು ಮಳೆ ಇಲ್ಲ. ಭೂಮಿ ಹಸಿವೆಯಿಂದ ಬಾಯಿ ಬಿಟ್ಟಿದೆ. ಅನಾವೃಷ್ಟಿಯು ಅವಾಂತರ ಸಂತ್ರಾಸ ಆವರಿಸಿದೆ. ಜನರ ಆರ್ಥಿಕ ಮಟ್ಟ ಕುಸಿದ ನೋವು ಹೆಚ್ಚುವೇಯು ನಿರಂತರ ನಡೆಯುತ್ತಿದ್ದ ವೀರಭದ್ರ ದೇವರ ಜಾತ್ರೆ ನಿಂತುಹೋಯಿತು. ಊರಿನ ಅರ್ಧಕ್ಕೂ ಜನ ಹೊಟ್ಟೆ ಹೊರೆಯುವುದಕ್ಕೆ ನಗರ ಸೇರಿದ್ದಾರೆ. ಪ್ರತಿ ವರ್ಷಕ್ಕಿಂತಲೂ ಈ ವರ್ಷ ಸಾಮಾನ್ಯರಿಗೆ ದೊಡ್ಡ ಬರ. ಹಳ್ಳ ಬಾವಿಗಳು ಬತ್ತಿಹೋಗಿವೆ. ನಮ್ಮ ಭಾಗದ ನೀರಿನ ಕೊರತೆಯ ಬಗ್ಗೆ ಸರಕಾರ ಕಣ್ಮುಚ್ಚಿತ್ತು. ಓಟು ಕೇಳಲು ಬಂದಾಗ ಮಂತ್ರಿಗಳ ಆಶ್ವಾಸನೆ ಕೇಳಿ ಉಬ್ಬಿದ ಜನರು ಈಗ ಗಾಳಿ ಹೋದ ಬಲೂನು ಆಗಿದ್ದಾರೆ. ಹುಲ್ಲು ನೀರಿಲ್ಲದೆ ದನಕರುಗಳು ಕಂಗಾಲಾಗಿವೆ. ಜನರು ಹಸಿವೆ ತೃಷೆಯಿಂದ ತಲ್ಲಣಿಸಿದ್ದಾರೆ. ಇಂಥ ಭೀಕರ ಪರಿಸ್ಥಿತಿ ಬಂದದ್ದು ನೋಡಿ ಕರುಳು ಕತ್ತರಿಸಿದಂತಾಗುತ್ತದೆ. ಕಣ್ಣು ತುಂಬುತ್ತದೆ...

ನಾನು ವಿದ್ಯಾವಂತ. ಉತ್ತಮ ಉದ್ಯೋಗ ದೊರಕಿಸಿಕೊಂಡು ಪಟ್ಟಣದಲ್ಲಿ ಸುಖವಾಗಿ ಕಾಲ ಕಳೆಯಬಹುದಿತ್ತು. ಆದರೆ ಬೇಸಾಯ ಮಾಡಿ ಆದರ್ಶ ಜೀವನ ಸಾಗಿಸಬೇಕೆಂದ ನನಗೆ ಇದೊಂದು ಭಾರೀ ಪೆಟ್ಟು...

ವಿಶ್ವವಿದ್ಯಾಲಯ ಯಾಂತ್ರಿಕವಾಗಿ ಪ್ರತಿ ವರ್ಷ ಪದವೀಧರರನ್ನು ಹೊರಬಿಡುತ್ತದೆ. ಅವರೆಲ್ಲರಿಗೂ ನೌಕರಿ ಒದಗಿಸಲಿಕ್ಕೆ ಸರಕಾರ ದೊಡ್ಡ ದೊಡ್ಡ ಯೋಜನೆಗಳನ್ನು ಕೈಕೊಳ್ಳುತ್ತಿದೆ. ಆದರೂ ಅಸಂಖ್ಯಾತ ಪದವೀಧರರು ಕೈಕಟ್ಟಿ ಕುಳಿತಿದ್ದಾರೆ. ಯೋಜನೆಯ ಮೂಲಕ ಉತ್ಪಾದನೆಯು ಗುರಿ. ಎಲ್ಲರೂ ಸಮಾನರಾಗಿ ತುತ್ತು ಎತ್ತುವ ಕಲ್ಪನೆ...

ನನ್ನ ಮನಸ್ಸು ಸಮಸ್ಯೆಗಳ ಸಂತೆಯಾಗಿತ್ತು. ಸಹನೆ ಕಳೆದುಕೊಂಡಿದ್ದೆ. ಯಾರಾದರೂ ಮಾತಾಡಿಸಿದರೆ ಕಸ್ಸು ಬುಸುಗುವಷ್ಟು ಸಿಟ್ಟು ಬರುತ್ತಿದೆ. ಈಗೀಗ ಏಕಾಂತವೇ ಬಹು ಪ್ರಿಯ.

“ಜೈ ಶಂಕರ!”



ಮುಖವೆತ್ತಿ ನೋಡಿದೆ; ಶಿವಜ್ಜ ರೊಟ್ಟಿಗಾಗಿ ಕೈಯೊಡ್ಡಿ ನಿಂತಿದ್ದಾನೆ. ದುಡಿಯುವ ಸಾಮರ್ಥ್ಯವಿದ್ದರೂ ನಿರುದ್ಯೋಗಿಯಾಗಿ ಅಲೆಯುತ್ತಿದ್ದ ಅವನ ಮೇಲೆ ಎಲ್ಲಿಲ್ಲದ ಸಿಟ್ಟು ಬಂತು.

"ನಿನಗೇನಾಗಿದೆ ಬ್ಯಾನಿ?... ಕುರುಡನೋ ಕುಂಟನೊ? ಎಲ್ಲರೆ ಹೋಗಿ ದುಡಿದು ತಿನ್ನು. ಮಳಿ ಇಲ್ಲಂತ ಗೋಳಾಡುವುದು ನಿನ್ನದೊಂದು..."

ಒಮ್ಮೆಲೆ ಶಿವಜ್ಜ ಹೊಟ್ಟೆ ಹುಣ್ಣಾಗುವಂತೆ ಗಹಗಹಿಸಿ ನಕ್ಕ! ಆತ ನಕ್ಕದ್ದೇ ನಾನು ನೋಡಿರಲಿಲ್ಲ. ಆ ನಗುವಿನ ಅರ್ಥವೇನು...? ನಾನು ಅವಾಕ್ ಆದೆ.

"ಮಳೀ ಬೇಕು ಮಳಿ!... ಬೇಕಾದಷ್ಟು ಐತಲ್ಲ— ಪಾಪದ ಮಳಿ!... ಇನ್ನೂ ಬೇಕು..." ಶಿವಜ್ಜ ವ್ಯಂಗ್ಯವಾಗಿ ಹೇಳಿದ. ಎಂದೂ ಕಾಣದ ತತ್ತ್ವಜ್ಞಾನಿಯ ಕಳೆ ಅವನ ಮುಖದಲ್ಲಿತ್ತು. ನಾನು ಹಾಗೇ ಗರಬಡಿದವನಂತೆ ಕುಳಿತಿದ್ದೆ.

"ತರ್ತೀನಿ, ಮಳಿ ತಂದss ರೊಟ್ಟಿ ಕೇಳ್ತೀನಿ... ಕೇಳ್ತೀನಿ..." ಇನ್ನೂ ಏನೇನೊ ಅನ್ನುತ್ತ ಶಿವಜ್ಜ ಮುಂದಿನ ಮನೆಗೆ ಹೋದ. ಅಂದಿನ ಅವನ ನಡತೆ ಬಹಳ ವಿಚಿತ್ರವೆನಿಸಿತು.

*

ಹೊಲದ ಬದುವಿನ ಮೇಲೆ ನಿಂತು ಸುತ್ತಲೂ ದೃಷ್ಟಿ ಹಾಯಿಸಿದೆ. ನಮ್ಮ ಜೀವನೋಪಾಯಕ್ಕೆ ತಂದೆ ತಾವು ಬಿಟ್ಟು ಹೋದ ಹತ್ತು ಎಕರೆ ಹೊಲವೇ ಅನ್ನದ ಪಾತ್ರೆ. ಬೆಳೆದು ನಿಂತ ಇಬ್ಬರು ತಂಗಿಯರು, ಓದುವ ಇಬ್ಬರು ತಮ್ಮಂದಿರು, ನನ್ನ ಮದುವೆಗಾಗಿ ಜೀವ ಹಿಡಿದ ತಾಯಿ, ಸಾಲದ್ದಕ್ಕೆ ವಿಧವೆ ಅಕ್ಕ— ಅವಳ ಎರಡು ಮಕ್ಕಳು. ನನ್ನನ್ನೂ ಸೇರಿ ಒಂಬತ್ತು ಜೀವ ಆ ಪಾತ್ರೆಯೊಳಗಿನ ಅನ್ನ ತಿಂದು ಬದುಕಬೇಕಾಗಿದೆ.

"ನಮ್ಮ ಹೊಲ ಅಂದ್ರ ಅಕ್ಷಯ ಪಾತ್ರೆ ಇದ್ದ್ಹಾಂಗಲೇ ನಿಂಗಾ... ಇನ್ನೂ ಹತ್ತು ಮಂದಿ ಬಂದ್ರೂ ಸಲಹುವಷ್ಟು ಶಕ್ತಿ ಐತೆ ನನ್ನ ರಟ್ಟಿಗ. ತಗೊ ಒಡಿ ರೊಟ್ಟೀನ... ನಿನ್ನ ಬುತ್ತಿ ಬರೂದ ತಡ ಐತಿನ್ನ..."

"ಹೌದೆಪ್ಪ... ಮುತ್ತು– ರತ್ನ ಬೆಳ್ಯೊವಂತ ಭೂಮಿ ನಿಮ್ದು." ಎಂದು ನಿಂಗ ಕೃತಜ್ಞತೆ ಸೂಚಿಸುತ್ತ ರೊಟ್ಟಿ ತೆಗೆದುಕೊಂಡಿದ್ದ.

ನಾನು ಚಿಕ್ಕವನಾಗಿದ್ದಾಗ ತನ್ನ ಬುತ್ತಿಗಾಗಿ ಕಾಯುತ್ತಿದ್ದ ಆಳು ಸಿಂಗನಿಗೆ ಅಪ್ಪ ಹೇಳಿದ ಮಾತು ನೆನಪಿಗೆ ಬಂತು. ಮುತ್ತು–ರತ್ನಗಳನ್ನು ಬೆಳೆಯುವ ನೆಲ ಇಂದು ಬರಡಾಗಿದೆ. ನಮ್ಮ ಹೊಲದ ಮಧ್ಯದಲ್ಲೊಂದು ಬನ್ನಿಯ ಗಿಡ; ಎಡಬಲದ ಹೊಲದವರಿಗೆ ವಿಶ್ರಾಂತಿಯ ತಾಣವಾಗಿತ್ತು. ಈಗ ಅದರ ಕೆಳಗೆ ನಿಂತರೆ ಬಟ್ಟೆ ಇಲ್ಲದ ಛತ್ರಿ ಹಿಡಿದಂತಾಗುತ್ತದೆ. ಹೊಲದ ಮಗ್ಗುಲಲ್ಲಿ ದೊಡ್ಡದೊಂದು ತೊರೆ. ಬೇಸಿಗೆಯಲ್ಲಿಯೂ ನೀರು ಹರಿಯುತ್ತಿತ್ತು. ಮೇಯಲ್ದು ಬಂದ ದನಕರುಗಳು ನೀರು ಕುಡಿದು ಚೆಲ್ಲಾಟವಾಡಿ ತಣಿಯುತ್ತಿದ್ದವು. ಈಗ ಅದರಲ್ಲೂ ಬರೀ ಕೆಸರು.

ಆ ಕಡೆಯಿಂದ ಕರು ಓಡುತ್ತ ಬಂತು. ಕುತೂಹಲಿಗನಾಗಿ ಅದರ ಕಡೆ ನೋಡಿದೆ. "ಅಂಬಾ... ಅಂಬಾ..." ಎನ್ನುತ್ತ ತೊರೆಯಲ್ಲಿ ಇಳಿಯಿತು. ನೀರಿಗಾಗಿ ಮುಖ ಕೆಳಗೆ ಮಾಡಿತು. ಅದರ ಬಾಯಿಗೆ ಕೆಸರು ಹತ್ತಿತು. ನನ್ನ ಅಂತರಾಳಕ್ಕೆ ಮುಳ್ಳು ಹಚ್ಚಿದಂತಾಯಿತು. ನೋಡುತ್ತಿರುವಂತೆ ಕರು ಕೆಸರಿನಲ್ಲಿ ಹೊರಳಾಡಿ, ಬಾಧೆ ಮೈಯನ್ನು ತಂಪು ಮಾಡಿಕೊಂಡಿತು. ಅದಕ್ಕೆ ಸ್ವರ್ಗ ಸುಖದ ಅನುಭವ ಆಗಿರಬೇಕು!

ನೆತ್ತಿಯ ಮೇಲೆ ಪ್ರಖರವಾದ ಸೂರ್ಯ ಕಿರಣಗಳು ಮಾನವನಿಗೆ ಬಿಸಿ ತಾಗಿಸಲಿಕ್ಕೆ ಸ್ಪರ್ಧೆ ನಡೆಸಿದ್ದವು.

*

ಮಹಾತ್ಮಾ ಗಾಂಧೀಜಿಯವರ ಆತ್ಮಕತೆಯನ್ನು ಓದುವುದರಲ್ಲಿ ಮಗ್ನನಾಗಿದ್ದ. ಅಸಹಕಾರ ಚಳವಳಿ... ಅಹಿಂಸೆಯ

[illegible]... [illegible] ಮಾಡಿದ ವಿಶ್ವಪ್ರಯತ್ನ... ಧರಣಿ [illegible]... [illegible] ದೀರ್ಘ ಉಪವಾಸ...

ಕಿಟಕಿಯಾಚೆ, ದಾರಿಯಲ್ಲಿ ನಡೆದ ಮಾತುಗಳು ನನ್ನ ಗಮನ ಸೆಳೆದವು. ಲಗುಬಗೆ [illegible] ಹಾಕಿ [illegible] ಮುಚ್ಚಿದೆ. [illegible] ವೀರಭದ್ರ ದೇವರ ಗುಡಿಯತ್ತ ಹೆಜ್ಜೆ ಹಾಕಿದೆ. ಕಾಲು ತೀವ್ರಗತಿಯಲ್ಲಿ ಮುಂದಡಿ ಇಟ್ಟರೂ ಮನಸ್ಸಿಗೆ ವೇಗ ಸಾಲದು. ಎದುರಿಗೆ ಬಂದ ದುರ್ತಿನವರಿಗೆ ಮುಗುಳು ನಗೆ ಸೂಸಿದೆ. ಮತ್ತೆ ವೇಗ ಹೆಚ್ಚಿಸಿದೆ "ಯಾವ ಚಾಂಡಾಲ ಹೇಳಿದ್ದಾನ ಅವಗ ಹಂಶ ಮಾಡಾಕ...?" ಕಿಟಕಿಯಾಚೆಯಿಂದ ಬಂದ ಮಾತುಗಳು ಸೂಜಿಯಂತೆ ಚುಚ್ಚಿದವು. ತಪ್ಪಿತಸ್ಥನಂತೆ ಅಂಜಿದೆ. ಸ್ವಲ್ಪ ನಡುಕವೂ ಹುಟ್ಟಿತು. ಸಣ್ಣದಾಗಿ ಮೈ [illegible]. ಅಪ್ಪರ ವೀರಭದ್ರ ದೇವರ ಗುಡಿ ತಲುಪಿದೆ. ಆಗಲೇ ಜನರು ಗುಂಪಾಗಿ ಸೇರಿದ್ದರು. ಗುಂಪಿನಲ್ಲಿ ದಾರಿ ಮಾಡಿಕೊಂಡು ಒಳ ಸೇರಿದೆ. ಹರಕು ಗೋಣಿ ಚೀಲದ ಮೇಲೆ ಅದೇ ಮಾಸಲು ಧೋತರ, ಬಕ್ಕತಲೆ, ಬರಿ-ಮೈಯುಳ್ಳ! ಚಿನ್ನ ಆಲದ ಮರಕ್ಕೆ ಆನಿಸಿ ಕುಳಿತಿದ್ದಾನೆ– ಶಿವಜ್ಜ! ಕಣ್ಣು ಎತ್ತಲೋ ನೋಡುತ್ತಿವೆ. ಮಹಾತ್ಮಾಜಿಯ ಸಾಧಿಸುವ ಛಲ ಮುಖದಲ್ಲಿ ಮೂಡಿದೆ. ಅವನ ಮುಂದೊಂದು ಮರದ ಫಲಕ. 'ಮುಳಿರಾಯ-ನಿಗಾಗಿ ಉಪವಾಸ'— ಎಂದು ಖಡುವಿನಿಂದ ಬರೆದ ದಪ್ಪಕ್ಷರಗಳು.

"ಯಾರು ಹೇಳಿದ್ರು ಶಿವಜ್ಜ... ನಿನಗ ಉಪವಾಸ ಕುಂದ್ರಾಕ?"— ಜನರಲ್ಲೊಬ್ಬ ಕೇಳುತ್ತಾನೆ. ಶಿವಜ್ಜ [illegible] ಹೇಳುವನೋ ಎಂದು ನಾನು ಕಿವಿ ಮುಂದೆ ಮಾಡುತ್ತೇನೆ. [illegible] ಶಿವಜ್ಜ [illegible]. ಶಿವಜ್ಜನಿಗೆ ಹೀಗೆ ಮಾಡಲಿಕ್ಕೆ ಯಾರು ಹೇಳಿದರು... ಮೊನ್ನೆ [illegible] ಮಾತುಗಳೆ?... ಅನಿರೀಕ್ಷಿತವಾಗಿ ಬಂದ ಮಾತುಗಳಿಗೆ ಶಿವಜ್ಜನ ಭೀಷ್ಮ [illegible]...? ನಾನು ಸಮಾಧಿಗೀಡಾದೆ.

[illegible] ನೆಮ್ಮದಿ ಕೆಡು[illegible], ಜನರು ಹೆಚ್ಚಾಗಿ ಸೇರಿದ್ದರಿಂದ ನಾನು ಹಿಂದೆ ಸರಿದೆ. ಜನ ಬರುವುದು, ಅನುಕಂಪ ತೋರುವುದು ನಡದೇ ಇತ್ತು.

*

ಶಿವಜ್ಜನ ಉಪವಾಸ ಕೆಲವರಿಗೆ ಆಶ್ಚರ್ಯವಾದರೆ, ಇನ್ನು ಕೆಲವರಿಗೆ ಚಿಂತೆಯಾಗಿದ್ದಿತು. ಎರಡನೆಯವರಲ್ಲಿ ನಾನೂ ಒಬ್ಬ.

ಬಾಪೂಜಿಯವರು ಐಕ್ಯ ಭಾವನೆಗೆ, ಅಹಿಂಸೆಗೆ ಉಪವಾಸ ಮಾಡಿದರು. ಅವರನ್ನು ಎಷ್ಟೋ ಜನ ಅನುಸರಿಸಿದರು. ಇಂದು ಶಿವಜ್ಜನೂ ಅದೇ ಹಾದಿಯಲ್ಲಿ ನಡೆದಿದ್ದಾನೆ. ಆದರೆ ಉದ್ದೇಶ ಅದೆಷ್ಟು ಭಿನ್ನ! ಇಪ್ಪತ್ತನೆಯ ಶತಮಾನದ ಕಲಿಕಾಲದಲ್ಲಿ ಮಾನವ ಅಂತರ್ಯಾಮಿಯಾದ ದೇವನೊಡನೆ ಸವಾಲು ಹಾಕುವದೆಂದರೆ ಎಂಥ ವಿಪರ್ಯಾಸ!! ಶಿವಜ್ಜ ಗುರಿ ಮುಟ್ಟಬಹುದೆ...? ಒಂದು ವೇಳೆ ಹಾಗೇ ಆದರೆ ಅವನೊಬ್ಬ ಪವಾಡ ಪುರುಷ.

ಕಾಲ ಉರುಳುವದೊಂದು ಗಂಗಾ ಪ್ರವಾಹದಂತೆ. ಶಿವಜ್ಜ ಉಪವಾಸ ಕುಳಿತು ಇಂದಿಗೆ ಹನ್ನೆರಡು ದಿನಗಳು ಸಂದಿವೆ. ಮುಖದಲ್ಲಿ ಕಳೆ ಮಾಯವಾಗಿದೆ. ತುಟಿಗಳು ಒಣಗಿವೆ. ಕಣ್ಣು ನಿಸ್ತೇಜವಾಗಿವೆ. ಭಕ್ತ ಮಂಡಳಿ ಭಜನೆ ಮಾಡುತ್ತಿದ್ದಾರೆ. ಇವರೊಂದಿಗೆ ಪ್ರಪಂಚದ ದ್ವಿ— ಪಾತ್ರಾಭಿನಯ ಹಗಲು –ರಾತ್ರಿ ಇವುಗಳೆಲ್ಲಿ ಬಿಡುವು?

*

ಮಂಗಳವಾರ...

ಹೆಸರು ಮಂಗಳವಾದರೂ ಇಂದು ಒಳ್ಳೆ ಕಾರ್ಯ ಮಾಡುವುದಿಲ್ಲ. ಅದೊಂದು ಮಾನವನ ಮೌಢ್ಯ. ಪ್ರತಿ ಮಂಗಳವಾರದಂತೆ ವೀರಭದ್ರದೇವರ ಪಾಲಕಿ ಉತ್ಸವ ನಡೆಯುತ್ತಿದೆ. 'ಶಿವಜ್ಜನ ಉಪವಾಸಕ್ಕೆ ಮಂಗಳ ಯಾವಾಗ?' ಎಂದು ಜನರು ಚಿಂತೆಗೀಡಾಗಿದ್ದಾರೆ. ಶಿವಜ್ಜ ಹರಕು ಗೋಣಿ ಚೀಲಕ್ಕೆ [illegible] ಶಿವಜ್ಜ [illegible]

ತೆರೆಯುತ್ತಾನೆ, ಮತ್ತೆ ಮುಚ್ಚುತ್ತಾನೆ. ಶಿವಜ್ಜ ಈಗ ಸಂಪೂರ್ಣ ಮೌನಿ. ಪ್ರಾಣ ಮಾತ್ರ ಯಾವುದೋ ಮೂಲೆಯಲ್ಲಿ ಅಡಗಿ ಕುಳಿತಿದೆ. ಊರಿನ ವೈದ್ಯ ಬಿಸ್ಸಣ್ಣನವರು ಪರೀಕ್ಷೆ ನಡೆಸಿದ್ದಾರೆ. ಶಿವಜ್ಜ ಉಪವಾಸ ಕುಳಿತು ಇಂದಿಗೆ ಹದಿನಾರು ದಿನಗಳು ಕಳೆದಿವೆ.

ಜನ ಸಮೂಹ ಮೌನವಾಗಿ ಇರುಳು ಸರಿಸಿತು. ಮರುದಿನ ಬೆಳಗಿನ ನಾಲ್ಕು ಗಂಟೆ. ಶಿವಜ್ಜನ ಸ್ಥಿತಿ ತೀರಾ ಚಿಂತಾಜನಕ. ವೈದ್ಯರು ನಿಟ್ಟುಸಿರು ಬಿಟ್ಟು ಮೇಲೆದ್ದರು. ಪಕ್ಕದಲ್ಲಿಯೇ ಕುಳಿತ ಕೆಲಸಿಗರ ಶೇಷಣ್ಣ ಶಿವಜ್ಜನ ಎದೆಯ ಮೇಲೆ ಕೈ ಇಟ್ಟಿದ್ದಾನೆ. ಸಾವಕಾಶವಾಗಿ ಏರಿಳಿತ ನಡೆದಿದೆ. ಊರಿನ ಯಜಮಾನ ವೈದ್ಯರನ್ನು ಕೇಳುತ್ತಾನೆ–

"ಯಾಕ್ರಿ ಶಿವಜ್ಜನ ವಿಚಾರ ಏನ್ ಮಾಡೂದು...ಆತ ಎಷ್ಟು ಒತ್ತಾಯ ತಂದ್ರೂ ಏಳವಲ್ಲ...ಈಗ ಮೈಯಾಗ ಹೆಂಗೈತಿ ?"

"ಶಿವಜ್ಜ ಈಗ ನಮ್ಮ ಕಡೆ ಇಲ್ಲ; ಆ ಕಡೆ! ಏನಾರ ಪ್ರಯತ್ನ ಮಾಡಾಕ ಹೋದ್ರ ನಮ್ದು ಹುಚ್ಚುತನ ಆದೀತು..."

"ಹಂಗಾರ ಇರಬದೇವ್ರ ತೀರ್ಥ ಬಿಟ್ಟು ರಿಣಾನ ತೀರ್ಸಾನು ಬರ್ರಿ..." ಎಂದಳು ಅಲ್ಲಿಯೇ ನಿಂತ ಒಬ್ಬ ಮುದುಕಿ.

"ಹ್ಯಾಂಗೇನಾದೂ, ನಾವು ಮಾಡಿದ್ರ ಶಿವಜ್ಜನ ಉಪವಾಸ ವ್ರತ ನಾವss ಮುರದಂಗ ಆಕ್ಕೈತಿ...ನಮಗ ಅದರ ಪಾಪ ತಟ್ಟಲಿಕ್ಕಿಲ್ಲನ? ದೇವರ ಮ್ಯಾಲೆ ಭಾರ ಹಾಕೂದ ಛೊಲೊ." ಮತ್ತೊಬ್ಬ ಹೆಂಗಸು ದನಿಗೂಡಿಸಿದಳು.

*

ಆಕಾಶದಲ್ಲಿ ಚುಕ್ಕೆಗಳು ಒಂದೊಂದಾಗಿ ಮಾಯವಾಗತೊಡಗಿದವು. ತಂಪು ಗಾಳಿ ಬೀಸಿತು. ಸುಮಾರು ಅರ್ಧ ಗಂಟೆಯಲ್ಲಿ ವಾತಾವರಣದಲ್ಲಿ ಪರಿವರ್ತನೆಯಾಯಿತು. ಮೂಡಣ ದಿಕ್ಕಿನಲ್ಲಿ ಸೂರ್ಯ ಉದಯಿಸಿದ; ಕಿರಣಗಳಲ್ಲಿ ಚೈತನ್ಯವಿರಲಿಲ್ಲ. ಮಬ್ಬು, ಮಂಜು, ಚಳಿ. ಅಷ್ಟರಲ್ಲಿ ತೇಲಾಡುವ ಬಿಳಿ ಮೋಡ ಕರಗಿದವು. ಸೂರ್ಯೋದಯವೋ! ಸೂರ್ಯಾಸ್ತವೋ! ಕಪ್ಪು ಮೋಡಗಳು ಬಂದವು. ಸೂರ್ಯನಿಗೆ ಮರೆಯಾಗಿ ನಿಂತವು. ಊರಜನರಿಗೆಲ್ಲ ಆನಂದ, ಆಶ್ಚರ್ಯ.

"ಶಿವಜ್ಜ, ಶಿವಜ್ಜ, ಅಲ್ನೋಡು ಮುಗಿಲ ತುಂಬಾ ಕರೆಮೋಡ। ಸದ್ದು ಮಳಿ ಆಕ್ಕೈತಿ ಕಣ್ಣ ತಗಿ..."

"ಶಿವಜ ನಮ್ಮ ಪಾಲಿನ ದೇವ್ರು!"

"ಅವಾ ಸಾಮಾನ್ಯ ಮನಸ್ಯಾ ಅಲ್ಲ..."

"ಗುಡ್ಯಾಗಿನ ನಗಾರಿ. ಜಾಗಟೆ ಬಾರಸರಿ..."

"ತಾಳಾ-ತಪ್ಪಡಿ ತೊಗೋರ್ರಿ...ಭಜನಿ ಮಾಡ್ರಿ."

"ಗಂಟಿ ಬಾರಸರಿ...!"

"ಕಾಳಿ ಹೊಡರಿ !!"

"ರೊಟ್ಟಿ ಕೇಳೂ ಶಿವಜ್ಜ ಮಳಿ ತಂದ..."

ಕಪ್ಪು ಮೋಡಗಳ ಚಲನೆಯಲ್ಲಿ ತೀವ್ರತೆ ಕಾಣಿಸಿತು. ಪ್ರಕೃತಿ ನಡುಗುವಂಥ ಗುಡುಗಿಲ್ಲ. ಎದೆ ಝಲ್ ಎನ್ನುವಂಥ ಸಿಡಿಲಿಲ್ಲ. ಕಣ್ ಕೋರೈಸುವ ಮಿಂಚಿಲ್ಲ, ಎಲ್ಲವೂ ಶಾಂತ ಮೌನ. ಶಿವಜ್ಜನ ನಿಶನ ಪ್ರಜ್ವಲಿಸುವ ಪಂಜಾಗಲಿಲ್ಲ; ತಂಪು ಬೆಳಕು ಬೀರುವ ನಂದಾದೀಪವಾಯಿತು. ಕರಿ ಮೋಡ ಕರಗಿತು! ಮಳೆ ಸುರಿಯಿತು !!

"ಹೋ...! ಹೋ...! ಶಿವಜ್ಜ ಮಳಿ ತಂದ...ಮಳಿ ತಂದ..."

"ರೊಟ್ಟಿ ಕೇಳೊ ಶಿವಜ್ಜ ಮಳಿ ತಂದ !..."

"ಶಿವಜ್ಜ, ಶಿವಜ್ಜ ಅಲ್ನೋಡು ಮಳೆ!..."

"ಕಣ್ಣ ತಗಿ..."

ಶಿವಜ್ಜ ನಿಧಾನವಾಗಿ ಎಚ್ಚರಗೊಂಡ. ಮಲಗಿದಂತೆಯೇ ಕಣ್ಣು ತೆರೆದ. ಮುಗಿಲು ನೋಡಿದ. ಬಾಯಿ ತೆರೆದ, ನೀರು ಕುಡಿದ! ಕಣ್ಣು ಮುಚ್ಚಿದ. ಮಳೆ ತಂದ ಶಿವಜ್ಜ, ರೊಟ್ಟಿ ಕೇಳಲಿಲ್ಲ.



ನೈನ ಭಟನಾಗರ

ವಿಜ್ಞಾನಿಗಳ ಎಚ್ಚರಿಕೆಗಳಿಂದ ಧೃತಿಗೆಡದಿರಿ

ಪೂರ್ವ ಕಾಲದಲ್ಲಿ ನಮ್ಮ ದೇಶದ ಋಷಿ ಮುನಿಗಳು ಮಾನವನ ಆಯುರ್ದಾಯ ನೂರು ವರ್ಷಗಳೆಂದು ನಿರ್ಧರಿಸಿ ಆ ದೀರ್ಘಾಯುಷ್ಯ ಸಾಧ್ಯವಾಗಲು ಒಂದು ಆಚಾರಸಂಹಿತೆಯನ್ನೇ ನಿರ್ಮಿಸಿದರು. ಅಲ್ಲದೆ 'ಶರೀರವನ್ನು ಚೆನ್ನಾಗಿ ದುಡಿಸು; ಹಾಗೆಯೇ ಅದಕ್ಕೆ ತಕ್ಕ ವಿಶ್ರಾಂತಿಯನ್ನೂ ಕೊಡು. ಚೆನ್ನಾಗಿ ನಿದ್ರಿಸು; ಆದರೆ ಸೂರ್ಯ ಉದಿಸುವ ಮೊದಲೆ ಎದ್ದೇಳು' ಎಂಬುದಾಗಿ ಉಪದೇಶಿಸಿದರು. ಬೇಗ ಮಲಗಿ ಬೇಗ ಏಳುವವ ಆರೋಗ್ಯವಂತನೂ ಬುದ್ಧಿವಂತನೂ ಸಿರಿವಂತನೂ ಆಗುತ್ತಾನೆಂದು ಹೇಳುವ ಇಂಗ್ಲಿಷ್ ಗಾದೆಯೂ ಇದೆ. ಆದರೆ ಇತ್ತಿತ್ತಲಾಗಿ ಕೆಲವು ವೈಜಾನಿಕರು ಈ 'ಸ್ವರ್ಣ ಸೂತ್ರದ' ಸತ್ಯವನ್ನೇ ಪ್ರಶ್ನಿಸಿದ್ದಾರೆ. ಓಝೋನ್ ವಾಯು ವಲಯವು ಹ್ರಾಸಗೊಳ್ಳುವಷ್ಟು ನಮ್ಮ ವಾತಾವರಣ ಮಲಿನವಾಗಿದೆ. ಇವು ಅವಾಂಛಿತ ಪ್ರಮಾಣದಲ್ಲಿ ಸೂರ್ಯನಿಂದ ಬರುವ ಅತಿನೇರಿಳೆ ಕಿರಣಗಳನ್ನು ತಡೆಯುತ್ತಿದ್ದುದರಿಂದ ಪ್ರಾತಃಕಾಲದ ಬಿಸಿಲಿನಲ್ಲಿ ಶರೀರಕ್ಕೆ ಅಗತ್ಯವಾದಷ್ಟೇ ಪ್ರಮಾಣದಲ್ಲಿ ಅತಿನೇರಿಳೆ ಕಿರಣಗಳಿರುತ್ತಿದ್ದುವು. ಈಗ ಓಝೋನ್ ವಲಯ ಹ್ರಾಸಗೊಂಡಿರುವುದರಿಂದ ಅತಿನೇರಿಳೆ ಕಿರಣಗಳು ಹೆಚ್ಚು ಪ್ರಮಾಣದಲ್ಲಿ ಪೃಥ್ವಿಯನ್ನು ತಲುಪುತ್ತಿವೆ; ಈ ಮಿತಿಮೀರಿದ ಪ್ರಮಾಣ ಚರ್ಮದ ಕ್ಯಾನ್ಸರನ್ನುಂಟುಮಾಡಬಲ್ಲದು. ಮಾನವನಿಗೆ ಪ್ರಾಣಘಾತಕವಾದ ರಾಸಾಯನಿಕ ದೂಷಕಗಳಷ್ಟೇ ಅಲ್ಲ, ಧ್ವನಿತರಂಗಗಳ ಆವರ್ತವೂ ಸಿಕ್ಕಾಪಟ್ಟೆಯಾಗಿ ಹೆಚ್ಚಿ ಒಂದು ರೀತಿಯಲ್ಲಿ ಆತ ಮಾಲಿನ್ಯದ ಸಾಗರದಲ್ಲಿ ತೇಲಾಡುತ್ತಿದ್ದಾನೆ. ನಾವು ದಿನನಿತ್ಯ ಸೇವಿಸುವ ಪದಾರ್ಥಗಳೂ ಅಪಾಯ ರಹಿತವಾಗಿಲ್ಲ. ಈ ಬಗ್ಗೆ ಆಗಾಗ ವೈಜ್ಞಾನಿಕ ವರದಿಗಳು ಹೊರಬಿದ್ದಾಗ ಎಲ್ಲೆಡೆಯೂ ಗೊಂದಲವೇಳುತ್ತದೆ

ಕೆಲ ಕಾಲದ ಹಿಂದೆ ಚಹ, ಕಾಫಿ ಹಾಗೂ ಹಾಲುಗಳು ಶರೀರದಲ್ಲಿ ಕೊಲೆಸ್ಟರಾಲ್‌ದ ಪ್ರಮಾಣವನ್ನು ಹೆಚ್ಚಿಸಿ ಹೃದಯರೋಗಕ್ಕೆ ಕಾರಣವಾಗುತ್ತವೆ ಹಾಗೂ ಇವುಗಳಿಂದ ಜಠರದ ಕ್ಯಾನ್ಸರೂ ಉಂಟಾಗಬಹುದು ಎಂಬ ಕೆಲ ತಜ್ಞರ ಹೇಳಿಕೆ ಪತ್ರಿಕೆಗಳಲ್ಲಿ ಬಂದಿತು. ಇದು ಕೇವಲ ಚಹ, ಕಾಫಿ ಹಾಗೂ ಹಾಲುಗಳಿಗೆ ಮಾತ್ರ ಸೀಮಿತವಾಗಿದ್ದರೆ ಒಂದು ಮಾತು. ಕಾಲ ಕಾಲಕ್ಕೆ ಪ್ರಕಟವಾಗುವ ವೈಜ್ಞಾನಿಕ ಫಲಿತಾಂಶಗಳು ಜೀವನವನ್ನು ಇನ್ನೂ ದುರ್ಭರಗೊಳಿಸಿವೆ. ಬೆಣ್ಣೆಯು ಆರೋಗ್ಯಕ್ಕೆ ಹಾನಿಕರವಾದದ್ದೆಂದು ಕೆಲವು ಡಾಕ್ಟರರು ಹೇಳಿದರೆ ಇನ್ನು ಕೆಲವು ಡಾಕ್ಟರರು ತತ್ತ್ರಿಯನ್ನೇ ಮತ್ತೆ ಕೆಲವು

ಡಾಕ್ಟರರು ಮಾಂಸವನ್ನೂ ಸಕ್ಕರೆಯನ್ನೂ ಹಾನಿಕರವೆಂದು ಹೇಳಿದ್ದಾರೆ. ಉಪ್ಪನ್ನು ಹೆಚ್ಚು ತಿನ್ನುವುದರಿಂದ ರಕ್ತದಲ್ಲಿ ಸೋಡಿಯಮ್ಮಿನ ಅಂಶ ಜಾಸ್ತಿಯಾಗಿ ಅದರಿಂದ ಆತ್ಮಹತ್ಯೆಯ ಪ್ರವೃತ್ತಿ ಹೆಚ್ಚಾಗಬಹುದೆಂದು ಬ್ರಿಟನ್ನಿನ ಒಬ್ಬ ಡಾಕ್ಟರರು ಕೆಲ ದಿನಗಳ ಹಿಂದೆ ಹೇಳಿದರು. ಆತ್ಮಹತ್ಯೆಗೊಳಗಾಗುವವರ ರಕ್ತದಲ್ಲಿ ಹೆಚ್ಚು ಪ್ರಮಾಣದಲ್ಲಿ ಸೋಡಿಯಮ್ ಇದ್ದುದನ್ನು ಆ ಡಾಕ್ಟರರು ತಮ್ಮ ಸಮೀಕ್ಷೆಯಲ್ಲಿ ಕಂಡುಕೊಂಡಿದ್ದೇ ಈ ಹೇಳಿಕೆಯನ್ನು ಹೊರಡಿಸಲು ಕಾರಣವಾಗಿತ್ತು.

ಕ್ಯಾನ್ಸರ್ ಹಾಗೂ ಹೃದಯರೋಗಗಳು ಎಷ್ಟು ಪ್ರಾಣಘಾತಕವಾಗಿವೆಯೆಂದರೆ ಅವು ತಮಗೆ ಬಂದಾವೆನ್ನುವ ಭಯದಿಂದಲೆ ಎಷ್ಟೋ ಜನರು ತಮ್ಮ ಆಯುಷ್ಯವನ್ನು ಹ್ರಾಸಗೊಳಿಸಿಕೊಳ್ಳುತ್ತಿದ್ದಾರೆ. ರೋಗ ಚೆನ್ನಾಗಿ ಬಲಿಯುವ ವರೆಗೆ ಈ ರೋಗಗಳ ಲಕ್ಷಣಗಳು ಪ್ರಕಟವಾಗುವುದಿಲ್ಲವೆನ್ನುವುದು ಒಂದು ವಿಶೇಷ. ಆದರೆ ಆ ವೇಳೆಗಾಗಲೆ ರೋಗಿ ಮೃತ್ಯುವಿನ ಬಾಗಿಲಿನಲ್ಲಿ ನಿಂತಿರುತ್ತಾನೆ. ನಾವು ಸೇವಿಸುವ ಎಷ್ಟೋ ಪದಾರ್ಥಗಳು ಈ ಮಹಾರೋಗದೊಂದಿಗೆ ನಿಕಟ ಸಂಪರ್ಕವನ್ನು ಪಡೆದಿವೆಯೆಂದು ಅನೇಕ ಸಂಶೋಧನೆಗಳು ಸೂಚಿಸುತ್ತದೆ.

ವೈಜ್ಞಾನಿಕರು ಕಂಪ್ಯೂಟರುಗಳನ್ನು ಬಳಸಿ ತಯಾರಿಸಿದ ಆರೋಗ್ಯಕ್ಕೆ ಸಾಧಕವಾದ ಹಾಗೂ ಬಾಧಕವಾದ ಪದಾರ್ಥಗಳ ಪಟ್ಟಿಯನ್ನು ನೋಡಿದರೆ ನಾವು ದಿನನಿತ್ಯ ಆಹಾರ ಸೇವಿಸುವುದೇ ಒಂದು ಸಮಸ್ಯೆಯಾಗುತ್ತದೆ. ಇನ್ನು ಯಾವುದೇ ವಸ್ತುವು ಆರೋಗ್ಯಕ್ಕೆ ಹಾನಿಕರವೆಂದು ಡಾಕ್ಟರರು ಹೇಗೆ ನಿರ್ಧರಿಸುತ್ತಾರೆಂಬುದನ್ನಿಷ್ಟು ನಾವು ಗಮನಿಸೋಣ.

ಒಬ್ಬ ಡಾಕ್ಟರರು ಐಸ್ ಕ್ರೀಮಿನಿಂದ ಕ್ಯಾನ್ಸರ್ ಉಂಟಾಗುತ್ತದೋ ಇಲ್ಲವೋ ಎಂಬುದನ್ನು ಸಂಶೋಧಿಸುವವರಿದ್ದಾರೆಂದು ಭಾವಿಸೋಣ. ಅದಕ್ಕಾಗಿ ಆ ಡಾಕ್ಟರರು ಮೊಟ್ಟಮೊದಲು ಕ್ಯಾನ್ಸರಿನ ಪ್ರವೃತ್ತಿ ಸುಲಭವಾಗಿ ಕಾಣಿಸಿಕೊಳ್ಳುವಂತಹ ವಿಶೇಷ ತಳಿಯ ಇಲಿಗಳನ್ನು ಖರೀದಿಸುತ್ತಾರೆ. ಅನಂತರ ಅವುಗಳನ್ನು ತೂಗಿ ನೋಡಿ ದಿನ ನಿತ್ಯ ಐಸ್‌ಕ್ರೀಮ್ ಕೊಡಲು ಪ್ರಾರಂಭಿಸುತ್ತಾರೆ. ಸಾಕಷ್ಟು ಸಮಯದವರೆಗೆ ಅವುಗಳಿಗೆ ಐಸ್‌ಕ್ರೀಮ್ ತಿನ್ನಿಸಿದ ಮೇಲೆ ಐಸ್-ಕ್ರೀಮಿನ ಪ್ರಭಾವ ಆ ಇಲಿಗಳ ಮೇಲೆ ಏನಾಗಿದೆಯೆಂಬುದನ್ನು ಪರಿಶೀಲಿಸಿ ಬಳಿಕ ಅದಕ್ಕೆ ಸಂಬಂಧಪಟ್ಟ ಅಂಕಿಸಂಖ್ಯೆಗಳನ್ನು ಸಂಗ್ರಹಿಸುತ್ತಾರೆ. ಇದಾದ ನಂತರ ಐಸ್ ಕ್ರೀಮಿನ ಘಟಕಗಳನ್ನು ಬಿಡಿಬಿಡಿಯಾಗಿ ಪರೀಕ್ಷಿಸುತ್ತಾರೆ. ಬೇರೆ ಬೇರೆ ಆಸ್ಪತ್ರೆಗಳಲ್ಲಿ ಎಷ್ಟು ಜನ ಕ್ಯಾನ್ಸರಿನ ರೋಗಿಗಳಿದ್ದಾರೆಂಬ ಬಗ್ಗೆ ಅಂಕಿ ಸಂಖ್ಯೆಗಳನ್ನು ಸಂಗ್ರಹಿಸಿ, ಐಸ್ ಕ್ರೀಮನ್ನು ತಿನ್ನುವ ಹಾಗೂ ಕ್ಯಾನ್ಸರಿಗೆ ಬಲಿಯಾದವರಿಗೆ ಒಂದು ಪ್ರಶ್ನಾವಳಿಯನ್ನು ಕಳಿಸಿಕೊಡುತ್ತಾರೆ. ಇವೆಲ್ಲ ಅಂಕಿಅಂಶಗಳನ್ನು ಕಂಪ್ಯೂಟರಿಗೆ ಒದಗಿಸಿ ಅದರಿಂದ ಹೊರಬಂದ ಫಲಿತಾಂಶವನ್ನಾಧರಿಸಿ, ಸ್ತನದ ಕ್ಯಾನ್ಸರಿಗೂ ಜಠರದ ಕ್ಯಾನ್ಸರಿಗೂ ಐಸ್ ಕ್ರೀಮಿಗೂ ಸಂಬಂಧ ಕಲ್ಪಿಸಿ ಹೇಳಿಕೆ ಹೊರಡಿಸುತ್ತಾರೆ.

ವೈಜ್ಞಾನಿಕರು ಮಾಡುವ ಈ ಅಂಕಿಸಂಖ್ಯೆಗಳ ಪವಾಡಕ್ಕೆ ಒಂದು ಉದಾಹರಣೆಯಾಗಿ 'ಹಾಸ್ಪಿಟಲ್ ಪ್ರಾಕ್ಟೀಸ್'ನಲ್ಲಿ ಕೆಲ ಕಾಲದ ಹಿಂದೆ ಪ್ರಕಟವಾದ ಡಾ. ಹ್ಯಾರೋಲ್ಡ್ ಮೋರೋವಿಟ್ಸರ ಲೇಖನದಲ್ಲಿ ಸಿಗುತ್ತದೆ. ಅಮೆರಿಕದ ಯೇಲ್ ವಿಶ್ವವಿದ್ಯಾಲಯದಲ್ಲಿ ಮಾಲಿಕ್ಯೂಲರ್ ಬಯೋಫಿಜಿಕ್ಸ್ ಹಾಗೂ ಬಯೋಕೆಮಿಸ್ಟ್ರಿಗಳ ಪ್ರಾಧ್ಯಾಪಕರಾಗಿರುವ ಅವರು ಕೆಲ ವರ್ಷಗಳ ಹಿಂದೆ ಧೂಮಪಾನಕ್ಕೂ ಮೃತ್ಯುವಿಗೂ ಸಂಬಂಧಿಸಿದಂತೆ ಕೆಲವು ಪರಿಶೀಲನೆಗಳನ್ನು ನಡೆಸಿದರು. ಪರಿಣಾಮವಾಗಿ ಅಮೆರಿಕದಲ್ಲಿಂದು ಸಿಗರೇಟು ತಯಾರಕರು ಪ್ರತಿಯೊಂದು ಪ್ಯಾಕಿನ ಮೇಲೂ, ಧೂಮಪಾನ ಆರೋಗ್ಯಕ್ಕೆ ಮಾರಕವೆನ್ನುವ ಎಚ್ಚರಿಕೆಯನ್ನು ಕಡ್ಡಾಯವಾಗಿ ಮುದ್ರಿಸುವಂತಾಯಿತು.

ಕೋಷ್ಟಕ ೧

	ಸಂಭವನೀಯ ಮೃತ್ಯುದರ
ಕರಿದ ಪದಾರ್ಥಗಳನ್ನು ತಿನ್ನದವರಲ್ಲಿ	೧೨೦೮
ಕರಿದ ಪದಾರ್ಥವನ್ನು ಒಂದು ವಾರದಲ್ಲಿ ೧–೨ ಬಾರಿ ತಿನ್ನುವವರಲ್ಲಿ	೧೦೦೪
,, ,, ೩–೪ ,,	೭೪೨
,, ,, ೫–೯ ,,	೭೫೧
,, ,, ೧೦–೧೪ ,,	೭೨೨
,, ,, ೧೫ಕ್ಕಿಂತಲೂ ಹೆಚ್ಚು ,,	೭೦೨

ಡಾ. ಮೋರೋವಿಟ್ಸ್‌ರು ಸಂಗ್ರಹಿಸಿದ ೭೦,೦೦೦ ಕ್ಕೂ ಹೆಚ್ಚು ಲಕ್ಷ ಜನರನ್ನು ಸಂದರ್ಶಿಸಿ ಪಡೆದಂತಹ ಬಗೆಯ ಅಂಕಿ ಸಂಖ್ಯೆಗಳನ್ನು ಕಲೆ ಹಾಕಿದರು. ಇವುಗಳ ಆಧಾರದ ಮೇಲೆ ಅವರು ನಮಗೆ ಆಶ್ಚರ್ಯಕರವೆನ್ನಿಸುವ ಇನ್ನೂ ಕೆಲವು ನಿಷ್ಕರ್ಷಕ್ಕೆ ಬಂದಿದ್ದಾರೆ.

ಡಾ. ಮೋರೋವಿಟ್ಸ್‌ರು ೪೦ ರಿಂದ ೬೯ ವರ್ಷಗಳೊಳಗಿನ ಜನರ ಅಭ್ಯಾಸಗಳನ್ನು ವಯಸ್ಸಿನ ಪ್ರಕಾರ ಲೆಕ್ಕಹಾಕಿ ಒಂದು ಕೋಷ್ಟಕವನ್ನು ತಯಾರಿಸಿದ್ದಾರೆ. ಉದಾಹರಣೆಗೆ ಹೇಳುವುದಾದರೆ ಒಂದು ನಿರ್ದಿಷ್ಟ ವಯಸ್ಸಿನ ಒಂದು ಲಕ್ಷ ವ್ಯಕ್ತಿಗಳ ಮೃತ್ಯುದರ ೭೩೫ ಎಂದು ಕೋಷ್ಟಕ ತೋರಿಸುತ್ತಿದ್ದರೆ ಆ ವಯಸ್ಸಿನ ಒಂದು ಲಕ್ಷ ಜನರಲ್ಲಿ ೭೩೫ ಜನರು ಮೃತ್ಯುವಶರಾಗುವ ಸಂಭವ ಜಾಸ್ತಿಯಾಗಿದೆ ಎಂದರ್ಥ.

ಅವರು ತಯಾರಿಸಿದ ಈ ಕೆಳಗಿನ ಕೋಷ್ಟಕ ಕರಿದ ಪದಾರ್ಥಗಳನ್ನು ತಿನ್ನುವವರ ಹಾಗೂ ತಿನ್ನದವರಲ್ಲಿನ ಮೃತ್ಯುವಿನ ಪ್ರಮಾಣವನ್ನು ಎತ್ತಿ ತೋರಿಸುತ್ತದೆ.

ಈ ಅಂಕಿಅಂಶಗಳ ಪ್ರಕಾರ ಕರಿದ ಪದಾರ್ಥಗಳನ್ನು ತಿನ್ನುವುದು ಒಳ್ಳೆಯದು.

ಮೃತ್ಯುವಿನ ಪ್ರಮಾಣಕ್ಕೂ ನಿದ್ದೆಗೂ ಸಂಬಂಧಿಸಿದಂತೆ ಅವರು ತಯಾರಿಸಿದ ಈ ಕೆಳಗಿನ ಕೋಷ್ಟಕ ಎಷ್ಟು ಮನರಂಜಕವಾಗಿದೆಯೆನ್ನುವುದನ್ನು ನೋಡಿ.

ಕೋಷ್ಟಕ ೨

ರಾತ್ರಿ ಹೊತ್ತು ನಿದ್ರಿಸುವ ಸರಾಸರಿ ಅವಧಿ	ಸಂಭವನೀಯ ಮೃತ್ಯುದರ
೫ ಗಂಟೆಗಿಂತಲೂ ಕಡಿಮೆ ನಿದ್ರಿಸುವವರಲ್ಲಿ	೨೦೨೯
೫ ಗಂಟೆ ನಿದ್ರಿಸುವವರಲ್ಲಿ	೧೧೨೧
೬ ,,	[illegible]
೭ ,,	[illegible]
೮ ,,	[illegible]
೯ ,,	೯೬೭
೧೦ ಗಂಟೆ ಅಥವಾ ಅದಕ್ಕೂ ಹೆಚ್ಚು ಸಮಯ ನಿದ್ರಿಸುವವರಲ್ಲಿ	೧೮೯೮

ಇದರ ಪ್ರಕಾರ ರಾತ್ರಿ ಆರು ಗಂಟೆಗಳಿಗಿಂತ ಕಡಿಮೆ ಹಾಗೂ ಒಂಬತ್ತು ಗಂಟೆಗಳಿಗಿಂತ ಹೆಚ್ಚು ನಿದ್ರಿಸುವುದು ಹಾನಿಕರ.

ಈಗ ಶಿಕ್ಷಣದ ಬಗೆಗೆ ಡಾ. ಮೋರೋವಿಟ್ಸ್‌ರು ಸಂಗ್ರಹಿಸಿದ ಅಂಕಿಸಂಖ್ಯೆಗಳು ಏನು ಹೇಳುತ್ತವೆಂಬುದನ್ನು ನೋಡುವಾ.

ಕೋಷ್ಟಕ ೩

ಶಿಕ್ಷಣ	ಸಂಭವನೀಯ ಮೃತ್ಯುದರ
ಪ್ರಾಥಮಿಕ ಶಿಕ್ಷಣ ಅಥವಾ ಇದಕ್ಕೂ ಕಡಿಮೆ	೯೪೫

ಶಿಕ್ಷಣ	ಸಂಭವನೀಯ ಮೃತ್ಯುದರ
ಹೈಸ್ಕೂಲು	೮೬೪
ಹೈಸ್ಕೂಲಿಗಿಂತ ಹೆಚ್ಚು	೭೬೬
ಕಾಲೇಜು	೭೫೫
ಸ್ನಾತಕೋತ್ತರ	೬೭೬

ಇದರ ಪ್ರಕಾರ ಹೆಚ್ಚು ಓದುವವರು ಹೆಚ್ಚು ಕಾಲ ಬದುಕುತ್ತಾರೆ.

ಒಬ್ಬ ಮನುಷ್ಯ ಎಷ್ಟು ಎತ್ತರವಾಗಿದ್ದಾನೆನ್ನುವುದನ್ನು ಆಧರಿಸಿ ಆತ ಎಷ್ಟು ಕಾಲ ಬದುಕುತ್ತಾನೆನ್ನುವುದನ್ನು ನಿರ್ಧರಿಸಬಹುದೆಂಬ ವಿಚಾರ ನಿಮಗೆ ಎಂದಾದರೂ ಬಂದಿದೆಯೆ? ನಿಮಗೆ ಬಂದಿದೆಯೋ ಇಲ್ಲವೋ ಡಾ. ಮೋರೋವಿಟ್ಸರಿಗಂತೂ ಆ ವಿಚಾರ ಬಹು ಕಾಲದ ಹಿಂದೆಯೇ ಬಂದು ಅವರು ಆ ಬಗ್ಗೆ ಅಂಕಿಅಂಶಗಳನ್ನು ಸಂಗ್ರಹಿಸುವಂತಾಯಿತು. ಆ ಪ್ರಕಾರ ಐದೂವರೆ ಅಡಿಗಳಿಗಿಂತ ಹೆಚ್ಚು ಎತ್ತರವಾಗಿದ್ದವರ ಆಯುರ್ದಾಯ ಹೆಚ್ಚು. ಇದು ಆರು ಅಡಿ ಒಂದು ಇಂಚಿನವರೆಗೆ ಕ್ರಮವಾಗಿ ಹೆಚ್ಚಾಗುತ್ತಾ ಹೋಗುತ್ತದೆ.

ಕೊನೆಗೆ ವೈವಾಹಿಕ ಜೀವನಕ್ಕೂ ಮೃತ್ಯುವಿಗೂ ಸಂಬಂಧಿಸಿದಂತೆ ಡಾ. ಮೋರೋವಿಟ್ಸರ ಅಂಕಿಸಂಖ್ಯೆಗಳು ಏನು ಹೇಳುತ್ತದೆಂಬುದನ್ನು ನೋಡೋಣ.

ಕೋಷ್ಟಕ ೪

	ಸಿಗರೇಟು ಸೇದದಿರುವವರಲ್ಲಿ	ಒಂದು ದಿನಕ್ಕೆ ೨೦ ಸಿಗರೇಟು ಸೇದುವವರಲ್ಲಿ
		ಸಂಭವನೀಯ ಮೃತ್ಯುದರ
ಅವಿವಾಹಿತರು	೧೦೭೪	೨೫೭೭
ವಿವಾಹಿತರು	೭೯೬	೧೫೬೦
ವಿಧುರರು	೧೩೯೬	೨೫೭೦
ವಿವಾಹ ವಿಚ್ಛೇದಿತರು	೧೪೨೦	೨೬೭೫


ನೀವು ದೀರ್ಘಾಯುಷಿಗಳಾಗಬೇಕಿದ್ದರೆ ಒಳ್ಳೆಯ ಪತಿಗಳಾಗಲೇಬೇಕೆಂಬುದು ಇದರಿಂದ ಸ್ಪಷ್ಟವೇ ಇದೆ. ಆಕಸ್ಮಾತ್ತಾಗಿ ನಿಮ್ಮ ಪತ್ನಿ ತೀರಿ ಹೋಗಿದ್ದರೆ ಅಥವಾ ಬಿಡುಗಡೆ ಪಡೆದಿದ್ದರೆ ಕೂಡಲೆ ಇನ್ನೊಬ್ಬಳನ್ನು ತನ್ನಿರಿ. ಧೂಮಪಾನಿಗಳ ಬಗೆಗೆ ಹೇಳುವುದಾದರೆ ದಿನಕ್ಕೆ ಒಂದು ಪಾಕೀಟಿಗಿಂತ ಹೆಚ್ಚು ಸಿಗರೇಟು ಸೇದುವವರಿಗಿಂತ ಸಿಗರೇಟು ಸೇದದೆ ಇರುವ ವಿವಾಹ ವಿಚ್ಛೇದಿತ ವ್ಯಕ್ತಿಗಳಿಗೆ ಮೃತ್ಯುವೊದಗುವ ಸಂಭವ ಕಡಿಮೆ.

ಇದೆಲ್ಲವನ್ನು ಓದಿದವರಲ್ಲಿ ಡಾ. ಮೋರೋವಿಟ್ಸರ ಸಲಹೆಗಳನ್ನು ಗಂಭೀರವಾಗಿ ಪರಿಗಣಿಸಬೇಕೋ ಬೇಡವೋ ಎಂಬ ಪ್ರಶ್ನೆ ಏಳುವುದು ಸಹಜ.

ನನ್ನ ಮಟ್ಟಿಗೆ ಹೇಳುವುದಾದರೆ ಇವುಗಳನ್ನು ಗಮನಕ್ಕೇ ತೆಗೆದುಕೊಳ್ಳಬಾರದು. ಏಕೆಂದರೆ ಯಾರಾದರೂ ಇವುಗಳನ್ನು ಗಂಭೀರವಾಗಿ ಪರಿಗಣಿಸಿದರೆ ಅವರ ಪಾಲಿಗೆ ಜೀವನವೇ ದುರ್ಭರವಾಗುವುದು. ಆದ್ದರಿಂದ ನಿಜವಾದ ಅರ್ಥದಲ್ಲಿ ಜೀವಿಸಬೇಕಿದ್ದರೆ ಬೇಕಾದ್ದನ್ನು ತಿಂದು ನಿಮಗೆ ಬೇಕಾದ ರೀತಿಯಲ್ಲಿ ಸಂತೋಷಕರವಾಗಿ ದಿನಗಳನ್ನು ಕಳೆಯಿರಿ. ✡



ಅವರು ದೇಶಕ್ಕಾಗಿ
ಆತ್ಮಾರ್ಪಣೆ ಮಾಡಿದರು



ನರಹರ ಗೋವಿಂದ ಗಣಪುಲೆ

ರಂಗನಾಥ ದಿವಾಕರ

ನರಹರ ಗೋವಿಂದ ಗಣಪುಲೆ ೧೮೯೫ರ ಎಪ್ರಿಲ್ ತಿಂಗಳಲ್ಲಿ ಜನಿಸಿದರು. ತಂದೆ ತಾಯಿಗಳನ್ನು ಬಹು ಬೇಗ ಕಳೆದುಕೊಂಡದ್ದರಿಂದ ಹುಬ್ಬಳ್ಳಿಯಲ್ಲಿ ಚಿಕ್ಕಪ್ಪನ ಮನೆಯಲ್ಲಿದ್ದು ಅವರು ಬೆಳೆಯಬೇಕಾಯಿತು, ಕಲಿಯಬೇಕಾಯಿತು. ಅವರು ನನ್ನ ಸಹಪಾಠಿ, ಅನೇಕ ವರ್ಷಗಳ ವರೆಗೆ ನಾವಿಬ್ಬರೂ ಜೊತೆಯಾಗಿಯೇ ಹುಬ್ಬಳ್ಳಿಯ ಲ್ಯಾಮಿಂಗ್ಟನ್ ಹೈಸ್ಕೂಲಿನಲ್ಲಿ ಕಲಿತಿದ್ದೇವೆ, ಕೂಡಿ ಆಡಿದ್ದೇವೆ, ಒಂದೇ ಕಡೆಗೆ ವಾಸವಾಗಿದ್ದೇವೆ.

ಅವರು ಶ್ರೇಷ್ಠ ದರ್ಜೆಯ ವಿದ್ಯಾರ್ಥಿಯಾಗಿದ್ದಂತೆಯೇ ಉತ್ತಮ ಆಟಗಾರರೂ ಆಗಿದ್ದರು. ದೇಶಪ್ರೇಮ ಅವರಿಗೆ ಹುಟ್ಟುಗುಣ. ೧೯೧೨ರಲ್ಲಿ ಮ್ಯಾಟ್ರಿಕ್ ಪಾಸಾದ ನಂತರ ಸರಕಾರಿ ನೌಕರಿ ಮಾಡುವುದಿಲ್ಲವೆಂದು ಪಣ ತೊಟ್ಟು ಅವರು ಮುಂಬಯಿಯಲ್ಲಿ ಒಂದು ಭಾರತೀಯ ಸಂಸ್ಥೆಯನ್ನು ಸೇರಿ ವ್ಯವಹಾರಕ್ಕೆ ತೊಡಗಿದರು. 'ಜಾವರ್‌ಮಿಸ್ತ್ರಿ' ಎಂಬ ಹೆಸರಿನ ಬ್ಯಾಲರೆಂಚಿನ Advance Manager ಎಂದು ಹಾಂಗ್‌ಕಾಂಗ್ ಮತ್ತು ಚೀನಕ್ಕೆ ಹೋಗಿ ಬಂದದ್ದು ಅವರ ಪ್ರಾರಂಭದ ಸಾಹಸಗಳಲ್ಲೊಂದು. ೧೯೧೮ರಲ್ಲಿ ನಾನು ಮುಂಬಯಿಯಲ್ಲಿ ಎಲ್‌ಎಲ್. ಬಿ. ಮತ್ತು ಎಂ. ಎ. ಗಳಿಗಾಗಿ ಅಭ್ಯಾಸ ಮಾಡುತ್ತಿದ್ದಾಗ ಪುನಃ ಇಬ್ಬರೂ ಜೊತೆಯಾಗಿಯೇ ವಾಸ ಮಾಡುವ ಅವಕಾಶ ನಮಗಿಬ್ಬರಿಗೂ ದೊರೆಯಿತು. ಆಗೆಲ್ಲ ದೇಶಸೇವೆಯ ಕುರಿತು, ಬ್ರಿಟಿಶ್ ದಾಸ್ಯದಿಂದ ದೇಶವನ್ನು ವಿಮೋಚಿಸುವ ಕುರಿತು ಏನೆಲ್ಲ ಕನಸುಗಳನ್ನು ಕಟ್ಟುತ್ತಿದ್ದೆವು.

೧೯೨೧-೨೨ರಲ್ಲಿ ದೇಶಸೇವಾರ್ಥವಾಗಿ ಜರ್ಮನಿಗೆ ಹೋಗುವ ಅವಕಾಶ ಗಣಪುಲೆಯವರಿಗೆ ದೊರೆಯಿತು. ಮಹಾತ್ಮಾ ಗಾಂಧಿಯವರ 'ನವಜೀವನ' ಮುದ್ರಣಾಲಯಕ್ಕೆ ಮುದ್ರಣ ಯಂತ್ರವೊಂದನ್ನು ಕೊಳ್ಳುವ ಉದ್ದೇಶದಿಂದ ಅವರು ಜರ್ಮನಿಗೆ ಪ್ರಯಾಣ ಕೈಕೊಳ್ಳಬೇಕಾಯಿತು. ಅದೇ ಸುಮಾರಿಗೆ ನಾನು ಗಾಂಧೀಪ್ರಣೀತ ಸ್ವಾತಂತ್ರ್ಯಾಂದೋಲನದಲ್ಲಿ ಧುಮುಕಿದ್ದೆ. ಅವರು ಜರ್ಮನಿಗೆ ಹೋದವರು ಅಲ್ಲಿಯೇ ಬರ್ಲಿನ್ನಿನಲ್ಲಿ ಉಳಿದು ಯಂತ್ರ, ಯಂತ್ರೋಪಕರಣ ಮುಂತಾದವುಗಳ ವ್ಯಾಪಾರ ವ್ಯವಹಾರದಲ್ಲಿ ತೊಡಗಿದರು. ಅಲ್ಲಿರುತ್ತಲೇ ಜರ್ಮನ್ ಭಾಷೆಯನ್ನು ಕಲಿತು ನೈಪುಣ್ಯ ಸಂಪಾದಿಸಿದ್ದಲ್ಲದೆ ಆಗೀಗ ಜರ್ಮನ್ ಪತ್ರಿಕೆಗಳಲ್ಲಿ ಭಾರತದ ಬಗೆಗೆ ಬರೆಯುತ್ತಿದ್ದರು ಕೂಡ. ಅಲ್ಲಿ ಅನೇಕಾನೇಕ ಜರ್ಮನ್ ಮಿತ್ರರನ್ನು ಸಂಪಾದಿಸುವುದರ ಜೊತೆಗೆಯೇ ಹಲವಾರು ದೇಶಪ್ರೇಮಿ ಭಾರತೀಯ ಮಿತ್ರರೂ ಅವರಿಗೆ ದೊರೆತರು. ಮುಂದೆ ನಮ್ಮ ರಾಷ್ಟ್ರಪತಿಯಾದ ಡಾ. ಝಾಕೀರ ಹುಸೇನರು ಅವರ ಇಂಥ ಅಮೂಲ್ಯ ಮಿತ್ರರಲ್ಲೊಬ್ಬರು. ಆ

ಅನಧಿಕೃತ ಒಂದೇ ಬಾರಿ ಮಾತ್ರವೇ ಅವರು ಭಾರತಕ್ಕೆ ಬಂದುಹೋದರು. ಆದರೂ ನಮ್ಮಿಬ್ಬರ ಸ್ನೇಹ ಮಾತ್ರ ಹಿಂದಿನಂತೆ ವಿಶುದ್ಧವಾಗಿಯೇ ಉಳಿದು ಬಂತು.

ಎರಡನೆಯ ಜಾಗತಿಕ ಮಹಾಯುದ್ಧ ಕಾಲ ಗಣಪುಲೆಯವರ ದೇಶಭಕ್ತಿಯ ಅಭಿವ್ಯಕ್ತಿಗೆ ಒಳ್ಳೆಯ ಅವಕಾಶವನ್ನು ಒದಗಿಸಿತು. ನೇತಾಜಿ ಸುಭಾಷಚಂದ್ರ ಬೋಸರು ಭಾರತದಿಂದ ಕಣ್ಮರೆಯಾಗಿ ಹಿಟ್ಲರನ ಜರ್ಮನಿಯನ್ನು ತಲುಪಿದ ನಂತರ ಅಂದಿನ ಜರ್ಮನ್ ಸರಕಾರಕ್ಕೂ ಆಗಲೆ ಅಲ್ಲಿ ಕೆಲಸ ಮಾಡುತ್ತಿದ್ದ ಸ್ವತಂತ್ರ ಭಾರತದ ತಾತ್ಕಾಲಿಕ ಸರಕಾರಕ್ಕೂ ಒಂದು ಒಪ್ಪಂದವಾಯಿತು. ಗಣಪುಲೆಯವರು ನೇತಾಜಿಗೆ ಪೂರ್ಣ ನಿಷ್ಠರಾಗಿರುವ ಪ್ರತಿಜ್ಞೆಗೈದರು. ಗಿರಿಜಾ ಮುಕರ್ಜಿಯವರೊಂದಿಗೆ ಗಣಪುಲೆಯವರು ಬರ್ಲಿನ್ನಿನಲ್ಲಿ ಸ್ಥಾಪನೆಗೊಂಡಿದ್ದ ಆಜಾದ್ ಹಿಂದ್ ಆಕಾಶವಾಣಿಯ ನೇತೃತ್ವ ವಹಿಸಿದ್ದರು. ಆಗ ನಂಬಿಯಾರ್ ಮುಂತಾದವರು ಸಹ ಇವರ ಸಹಕಾರಿಗಳು. ಮೇಜರ್ ಸೀಫ್ರಿಜ್ ಎಂಬೊಬ್ಬ ಜರ್ಮನ್ ಅಧಿಕಾರಿ ಜರ್ಮನಿಯಲ್ಲಿ ಸ್ಥಾಪಿತವಾಗಿದ್ದ ರಾಷ್ಟ್ರೀಯ (ಭಾರತೀಯ) ಸೇನೆಗೆ ತರಬೇತಿ ಕೊಡುತ್ತಿದ್ದರು. ಜರ್ಮನಿಯಲ್ಲಾಗ ಬಂಧಿತರಾಗಿದ್ದ ಅನೇಕ ಭಾರತೀಯ ಯೋಧರು ರಾಷ್ಟ್ರೀಯ ಸೇನೆಯನ್ನು ಸೇರುವಂತೆ ಅವರ ಮನವೊಲಿಸುವ ಮುಖ್ಯ ಕಾರ್ಯವನ್ನು ಗಣಪುಲೆಯವರಿಗೆ ವಹಿಸಿಕೊಡಲಾಗಿತ್ತು. ಅದೇ ಕಾಲಕ್ಕೆ ಸ್ವತಂತ್ರ ಭಾರತದ ಆರ್ಥಿಕ ಅಭಿವೃದ್ಧಿಗಾಗಿ ವಿಷಯ ಸಂಗ್ರಹವನ್ನು ಕೈಕೊಂಡಿದ್ದರು.

ಆದರೆ ಯುದ್ಧದಲ್ಲಿ ಹಿಟ್ಲರ್ ಸೋತದ್ದರಿಂದ ಅದುವರೆಗಿನ ಅವರ ಯೋಜನೆಗಳೆಲ್ಲ ತಲೆಕೆಳಗಾದುವು. ಮಿತ್ರರಾಷ್ಟ್ರಗಳ ಸೈನ್ಯ ಬರ್ಲಿನ್ನನ್ನು ಪ್ರವೇಶಿಸುತ್ತಿದ್ದಂತೆಯೆ ಅನೇಕ ಭಾರತೀಯ ಸೈನಿಕರೂ ಗಣಪುಲೆಯವರೂ ಸುರಕ್ಷಿತತೆಯ ಆಸೆಯಿಂದ ಹಾಲೆಂಡಿಗೆ ಓಡಿ ಹೋದರು.

ಯುದ್ಧಸಮಾಪ್ತಿಯ ನಂತರ ಶತ್ರುವಿನೊಂದಿಗೆ ಸಹಕರಿಸಿದ್ದಕ್ಕಾಗಿ ಬ್ರಿಟಿಶ್ ಸರಕಾರ ಗಣಪುಲೆಯವರಿಗೆ ಒಂದು ವರ್ಷ ಕಾರಾವಾಸವನ್ನು ವಿಧಿಸಿತು. ಬರ್ಲಿನ್ನಿನಲ್ಲಿಯ ಅವರ ಮನೆ, ಅವರ ಉದ್ಯೋಗ ವ್ಯವಹಾರ ಎಲ್ಲವನ್ನೂ ಸರಕಾರ ತನ್ನ ವಶಕ್ಕೆ ತೆಗೆದುಕೊಂಡಿತು. ನಂತರ ಗಣಪುಲೆಯವರನ್ನು ಲಂಡನ್ನಿಗೆ ತಂದು ಬಿಡಲಾಯಿತು. ಆದರೆ ಅವರನ್ನು ಮರಳಿ ಭಾರತಕ್ಕೆ ಕರೆದೊಯ್ಯಲು ಯಾವುದೇ ವ್ಯವಸ್ಥೆ ಮಾಡುವ ವಿಚಾರ ಸಹ ಬ್ರಿಟಿಶ್ ಸರಕಾರಕ್ಕೆ ಇರಲಿಲ್ಲ.

ಗಣಪುಲೆಯವರು ಇಂತು ಪೇಚಾಡುತ್ತಿರುವುದು ನನಗೆ ತಿಳಿದೊಡನೆಯೇ ನಾನು ಮುಂಬಯಿಯ ಪ್ರಸಿದ್ಧ ಉದ್ಯಮಕಾರ ಕಬ್ಬೂರ ಕೃಷ್ಣರಾಯರಿಗೆ, ಗಣಪುಲೆಯವರನ್ನು ಭಾರತಕ್ಕೆ ಕರೆಸಿಕೊಳ್ಳಲು ಅನುಕೂಲವಾಗುವಂತೆ ಹಣಕಾಸಿನ ವ್ಯವಸ್ಥೆ ಮಾಡುವಂತೆ ದುಂಬಾಲು ಬಿದ್ದೆನು. ಅವರು ಸ್ವದೇಶಕ್ಕೆ ಮರಳಿ ಬರಲು ಸಾಧ್ಯವಾಗುವಂತೆ ಸೌಕರ್ಯಗಳನ್ನು ಒದಗಿಸುವಂತೆ ಭಾರತ ಸರಕಾರದ ಮೇಲೂ ಒತ್ತಾಯ ತಂದೆನು. ಅನಂತರ ಅವರು ಕೆಲವು ವರ್ಷಗಳವರೆಗೆ ಎಸ್. ಕೆ. ಕಬ್ಬೂರ ಲಿಮಿಟೆಡ್ ಸಂಸ್ಥೆಯಲ್ಲಿ ಕೆಲಸ ಮಾಡಿದರು. ಮುಂದೆ ನಮ್ಮ ಪ್ರಧಾನಿಯಾಗಿದ್ದ ಜವಾಹರಲಾಲರಿಗೆ ಪರಿಚಯ ಮಾಡಿಕೊಟ್ಟಾಗ ಗಣಪುಲೆಯವರ ಬಗ್ಗೆ ಸದಭಿಪ್ರಾಯ ಹೊಂದಿದ ಅವರು ಇವರನ್ನು ಮಧ್ಯ ಯುರೋಪಿನಲ್ಲಿ ಭಾರತದ ಕಮರ್ಶಿಯಲ್ ಅಟ್ಯಾಚೆ ಎಂದು ನೇಮಿಸಿದರು. ಆ ಹುದ್ದೆಯಲ್ಲಿ ಹಲವು ವರ್ಷ ಉಪಯುಕ್ತ ಕಾರ್ಯ ಮಾಡಿ ಭಾರತಕ್ಕೆ ಮರಳಿದ ನಂತರ ಮೂರು ವರ್ಷ ಕಾಲ ಉತ್ತರಪ್ರದೇಶ ಸರಕಾರಕ್ಕೆ ಔದ್ಯಮಿಕ ಸಲಹೆಗಾರರಾಗಿದ್ದರು. ಇಲ್ಲಿರುವಾಗ ಈಗ ಭಾರತ ಸರಕಾರದ ಎಣ್ಣೆ ಮಂತ್ರಿಯಾಗಿರುವ ಕೇಶವದೇವ ಮಾಳವೀಯರು ಇವರ ಸಹಕಾರಿಯಾಗಿದ್ದರು.

ಆಜನ್ಮ ಅವಿವಾಹಿತರಾಗಿಯೇ ಉಳಿದ ಗಣಪುಲೆಯವರು ಭಾರತದ ಅಭಿವೃದ್ಧಿಯಲ್ಲಿ–

[illegible] ದೇಶಗಳಲ್ಲಿ ಬಹು ದಿನ ಕಾಲ, ವಾಸ ಮಾಡಿದ್ದರು. ಅದೇ ಉದ್ದೇಶದಿಂದ ಅವರು ಪುನಃ ಜರ್ಮನಿಗೆ ಹೋಗಿ ನೆಲೆಸಿದ್ದರು–ಈ ಸಲ ಹ್ಯಾಂಬರ್ಗಿನಲ್ಲಿ. ೧೯೭೦ರಲ್ಲಿ ನಾನು ಪಶ್ಚಿಮ ಜರ್ಮನಿಯನ್ನು ಸಂದರ್ಶಿಸಿದಾಗ ಅಲ್ಲಿಯ ಸರಕಾರದಲ್ಲಿ ಅವರ ವರ್ಚಸ್ಸು ಎಷ್ಟಿತ್ತೆಂಬ ಕಲ್ಪನೆ ನನಗೆ ಬಂತು. ಅವರಿಂದಾಗಿಯೇ ಪಶ್ಚಿಮ ಜರ್ಮನಿಯ ಸರಕಾರ ನನ್ನನ್ನು ತನ್ನ ಅತಿಥಿಯಾಗಿ ಪರಿಗಣಿಸಿ ವಿಭಿನ್ನ ಸ್ಥಳಗಳನ್ನು ಸಂದರ್ಶಿಸುವ ವ್ಯವಸ್ಥೆ ಮಾಡಿತು. ಈ ಕಾರ್ಯಕ್ರಮದ ಅಂಗವಾಗಿಯೇ ಬಾನ್‌ದಲ್ಲಿ ನಮ್ಮ ದೇಶದ ರಾಯಭಾರಿಯಾಗಿದ್ದ ಖುಬ್‌ಚಂದರನ್ನು ಕಂಡೆನು.

ಮುಂದೆ ಭಾರತದಲ್ಲೇ ನೆಲಸುವಂತೆ ಗಣಪುಲೆಯವರ ಮನಸ್ಸನ್ನು ಒಲಿಸಲು ನನಗೆ ಸಾಧ್ಯವಾಯಿತು. ಅಲ್ಲಿಂದ ಬಂದ ನಂತರ ಅವರು ಬೆಂಗಳೂರು ಬಳಿ ವೈಟ್‌ಫೀಲ್ಡಿನಲ್ಲಿರುವ ಅವರ ಬಂಗಲೆ 'ಫೇರ್‌ಲ್ಯಾಂಡ್ಸ್'ನಲ್ಲಿ ವಾಸವಾದರು. ಕಲಕತ್ತೆಯ ಇಂಗ್ಲಿಷ್ ದೈನಿಕ 'ಹಿಂದೂಸ್ಥಾನ ಸ್ಟ್ಯಾಂಡರ್ಡ್' ಮತ್ತು ಬಂಗಾಲಿ ದೈನಿಕ 'ಆನಂದ ಬಜಾರ್ ಪತ್ರಿಕಾ'ಗಳಲ್ಲಿ ನೇತಾಜಿಯ ಬರ್ಲಿನ್ ವಾಸ್ತವ್ಯದ ಕುರಿತು ೧೫ ಲೇಖನಗಳನ್ನು ಧಾರಾವಾಹಿಯಾಗಿ ಬರೆದು ಪ್ರಕಟಿಸಿದರು. ಇದು ನೇತಾಜಿಯ ನಿಕಟವರ್ತಿಗಳಾಗಿದ್ದವರೊಬ್ಬರು ಪ್ರಪ್ರಥಮವಾಗಿ ಅವರ ಈ ಸಾಹಸದ ಬಗ್ಗೆ ಹೊರಗೆಡಹಿದ ಮಾಹಿತಿಯಾಗಿತ್ತು. ಈ ಕಾರಣದಿಂದಾಗಿಯೇ ಈ ಲೇಖನಗಳನ್ನೆಲ್ಲ ಸೇರಿಸಿ ಸಂಪಾದಿಸಿ ಯೋಗ್ಯ ಚಿತ್ರಗಳೊಂದಿಗೆ ಪುಸ್ತಕ ರೂಪದಲ್ಲಿ ಪ್ರಕಟಿಸಬಹುದೆಂದು ನನಗನಿಸಿತು. ಆ ಕಾರ್ಯವನ್ನು ನಾನೇ ವಹಿಸಿಕೊಂಡೆ. ಅನಂತರ 'ಜರ್ಮನಿಯಲ್ಲಿ ನೇತಾಜಿ' ಎಂಬ ಹೆಸರಿನ ಪುಸ್ತಕವನ್ನು ಮುಂಬಯಿಯ ಭಾರತೀಯ ವಿದ್ಯಾಭವನವು ಪ್ರಕಟಿಸಿತು. ಅದರ ಪ್ರಥಮ ಆವೃತ್ತಿಯ ಐದು ಸಾವಿರ ಪ್ರತಿಗಳು ಬಲುಬೇಗ ಮಾರಾಟವಾದುವು. ಅದರ ಎರಡನೆಯ ಆವೃತ್ತಿಯೂ ಬಂದಿದೆಯೆಂದೆನಿಸುತ್ತದೆ. 'ಜೈ ಹಿಂದ್' 'ದಿಲ್ಲೀ ಚಲೋ' ಘೋಷಣೆಗಳನ್ನು ನೇತಾಜಿ ಮೊಟ್ಟಮೊದಲು ಕೂಗಿದ್ದು ಜರ್ಮನಿಯಲ್ಲೇ ಎಂದು ಗಣಪುಲೆ ನನಗೆ ಹೇಳಿದ್ದರು. ಅಲ್ಲದೆ 'ಜನಗಣಮನ' ರಾಷ್ಟ್ರಗೀತವನ್ನು ಸಹ ಬ್ಯಾಂಡಿನಲ್ಲಿ ಮೊದಲು ಅಳವಡಿಸಿದ್ದು ಜರ್ಮನಿಯಲ್ಲಿಯೇ ಎಂದವರು ಹೇಳುತ್ತಿದ್ದರು. ಗಣಪುಲೆಯವರು ತಮ್ಮ ಹಿಂದೆ ಬಿಟ್ಟುಹೋದ ವಸ್ತುಗಳನ್ನು ಶೋಧಿಸಿದರೆ ಬಹುಶಃ ರಾಷ್ಟ್ರಗೀತದ ಧ್ವನಿಮುದ್ರಿತ ಟೇಪ್ ಕೂಡ ಸಿಕ್ಕಬಹುದು.

ಗಣಪುಲೆಯವರ ಒಂದು ವೈಶಿಷ್ಟ್ಯವೆಂದರೆ ಅವರು ತಮ್ಮ ಭವಿಷ್ಯವನ್ನು, ಜೀವನವನ್ನು ತಾವೇ ರೂಪಿಸಿಕೊಂಡವರು. ದೇಶಪ್ರೇಮ, ಮಿತ್ರರ ಬಗ್ಗೆ ಔದಾರ್ಯ ಹಾಗೂ ಸಾರ್ವಜನಿಕ ಕಾರ್ಯಗಳಲ್ಲಿ ಅವರು ತಮಗಾಗಿ ಹಾಕಿಕೊಂಡಿದ್ದ ಮೇಲ್ಪಟ್ಟವನ್ನು ತಲಪುವುದು ಕೂಡ ಧೀರ ಕೆಲವರಿಗೆ ಮಾತ್ರ ಶಕ್ಯ. ತಮ್ಮ ದೇಶ ಬಾಂಧವರ ಸೇವೆಗೆಂದು ಅವರು ತಮ್ಮ ಬಂಗಲೆಯಲ್ಲೇ ಧರ್ಮಾರ್ಥ ದವಾಖಾನೆ ಪ್ರಾರಂಭಿಸಿದ್ದರು. ಮುಂದೆ ಇದೇ ಉದ್ದೇಶಾರ್ಥ ಅವರು ಆರು ಎಕರೆ ಸ್ಥಳವನ್ನು ಸತ್ಯಸಾಯಿಬಾಬಾರಿಗೆ ದಾನವಾಗಿತ್ತರು. ಈಗ ಅಲ್ಲೊಂದು ಆಸ್ಪತ್ರೆ ನಡೆದಿರಬೇಕು. ವ್ಯವಹಾರೋದ್ಯಮಗಳಲ್ಲಿ ಅವರಿಂದ ಸಹಾಯ ಪಡೆದವರು ಅಸಂಖ್ಯ ಜನ. ಜೀವನದ ಕೊನೆಯ ದಿನಗಳನ್ನು ಅವರು ಘಟಪ್ರಭೆಯ ಕರ್ನಾಟಕ ಆರೋಗ್ಯ ಧಾಮದಲ್ಲಿ ಕಳೆದರಲ್ಲದೆ ಅಲ್ಲಿಯೇ (ಇದೇ ಜನವರಿ ೨ ರಂದು) ಕೊನೆಯುಸಿರೆಳೆದರು. ಈ ಆರೋಗ್ಯಧಾಮದಲ್ಲಿ ಒಂದು ವೈದ್ಯಕೀಯ ವಸ್ತುಸಂಗ್ರಹಾಲಯವನ್ನು ಪ್ರಾರಂಭಿಸುವ ಮನೀಷೆ ಅವರದಾಗಿತ್ತು. ತಮ್ಮ ೮೨ ನೆಯ ವಯಸ್ಸಿನಲ್ಲೂ ಅವರ ಮನಸ್ಸು ಅಷ್ಟೇ ತೀಯಯಾಗಿತ್ತು. ಉತ್ಸಾಹಿಯಾಗಿತ್ತು. ಯಾರಿಗೂ ಒಳಿತನ್ನು ಮಾಡಲು ಅವರು ಸದಾ ಸಿದ್ಧರಿರುತ್ತಿದ್ದರು. ✿

ಇದುವೆ ಜೀವ ಇದು ಜೀವನ

ಎಂಥ ಸ್ವಭಾವ!

ನನ್ನ ಮಗಳು ಆ ತಾಲೂಕಿನ ಸ್ಥಳದ ಆಸ್ಪತ್ರೆಯಲ್ಲಿ ಲೇಡಿ ಡಾಕ್ಟರ್ ಆಗಿ ಕೆಲಸ ಮಾಡುತ್ತಿದ್ದಳು. ತನ್ನ ಸೌಜನ್ಯದಿಂದ ಹಳ್ಳಿ ಪ್ರಾಂತ್ಯದ ರೈತ ಹೆಂಗಸರಿಗೆ ಬೇಕಾದವಳಾಗಿದ್ದಳು.

ಒಂದು ದಿವಸ ಹತ್ತಿರದ ಹಳ್ಳಿಯಿಂದ ಇಬ್ಬರು ಹರಯದ ಹೆಣ್ಣುಮಕ್ಕಳು ಆಸ್ಪತ್ರೆಗೆ ಬಂದರು. ಅವರನ್ನು ನನ್ನ ಮಗಳು ಪರೀಕ್ಷಿಸಿ, ಅವರ ಕಾಯಿಲೆಗೆ ಬೇಕಾದ ಚುಚ್ಚುಮದ್ದನ್ನು ಕೊಟ್ಟಳು. ಅವರು ತಾವು ಪಡೆದ ಈ ಚಿಕಿತ್ಸೆಗೆ ಡಾಕ್ಟರಿಗೆ ಏನಾದರೂ ಮರ್ಯಾದೆ ಮಾಡಬೇಕೆಂದು ಯೋಚಿಸಿಕೊಂಡರು. ನನ್ನ ಮಗಳನ್ನು ಈ ವಿಷಯದಲ್ಲಿ ಪ್ರಶ್ನಿಸಿದಾಗ, ಅವಳು, "ಇದು ಸರಕಾರೀ ಆಸ್ಪತ್ರೆ. ಇಲ್ಲಿ ಕೊಡುವ ಔಷಧ ಸೂಜಿ ಮದ್ದು ಮುಂತಾದ್ದಕ್ಕೆ ಏನೂ ಕೊಡಬೇಕಾಗಿದ್ದಿಲ್ಲ" ಎಂದು ಹೇಳಿದಳು.

ಅವರಿಗೆ ಈ ಉತ್ತರದಿಂದ ತೃಪ್ತಿ ಆದಂತೆ ಕಾಣಲಿಲ್ಲ. "ನಿಮ್ಮ ಮನೆ ಎಲ್ಲಿ?" ಎಂದು ಅವರು ಕೇಳಿದಾಗ, ನನ್ನ ಮಗಳು, ಆಗಲೇ ತಾನು ಆಸ್ಪತ್ರೆಯ ಕಾಂಪೌಂಡಿನಲ್ಲಿ ಲೇಡಿ ಡಾಕ್ಟರಿಗೆ ಕಟ್ಟಿಸಿ, ತನಗೆ ವಾಸಕ್ಕೆ ಕೊಟ್ಟಿದ್ದ ಮನೆಯನ್ನು ತೋರಿಸಿದಳು. ಆ ಮನೆಗೆ ಬೇಲಿ ಹಾಕಿರಲಿಲ್ಲ. ಹೂವಿನ ಗಿಡವೇ ಮುಂತಾದ ಯಾವುದನ್ನೂ ಬೆಳೆಸಿರಲಿಲ್ಲ. ಇದನ್ನು ನೋಡಿದ ಅವರು, ಊರ ಹತ್ತಿರದ ಕಾಡಿನಿಂದ ಎರಡು ಹೊರೆ ಮುಳ್ಳು ಕಡಿದು ತಂದು, ಡಾಕ್ಟರ ಮನೆಗೆ ಬೇಲಿ ಕಟ್ಟಿದರು. ನೆಲವನ್ನು ಅಗೆದು ತರಕಾರಿ,- ಹೂವಿನ ಗಿಡಗಳನ್ನು ನೆಟ್ಟು ಹೊರಟು ಹೋದರು. ನನ್ನ ಮತ್ತು ನನ್ನ ಮಗಳ ಮನಸ್ಸಿನಲ್ಲಿ, ಈ ಅವಿದ್ಯಾವಂತರಾದ ಹೆಣ್ಣುಮಕ್ಕಳ ಕೃತಜ್ಞತಾಭಾವವನ್ನು ಕಂಡು ನಿಜಕ್ಕೂ ಈ ಹಳ್ಳಿಯ ಜನರು ಯಾವ ಕಾರಣದಿಂದಲೂ ಇನ್ನೊಬ್ಬರ ಋಣವನ್ನು ಇಟ್ಟುಕೊಳ್ಳುವುದಿಲ್ಲ ಎಂಬುದನ್ನು ನೋಡಿ ಆಶ್ಚರ್ಯವಾಯಿತು.

—'ಆತ್ರೇಯ'

ಈ ನೆಲೆ......

ಬಸ್ಸಿಗಾಗಿ ಕಾದು ನಿಂತಿದ್ದೆ. ಬಸ್ಸು ಬಂತೊಡನೆ ನಾನೇ ಮೊದಲು ಏರಿದೆ; ಕಂಡಕ್ಟರನ ನಾಮಾರ್ಚನೆ ಆರಂಭವಾಯಿತು. "ಮುಂದೆ ಸರಿಯಿರಿ, ಮುಂದೆ ಸರಿಯಿರಿ" ಎಂದ. ನಾನೇ ಮುಂದೊತ್ತಬೇಕಾಯಿತು. ಅಬ್ಬ ಆ ಜನ ಸಂಮರ್ದವೇ! ಕಾಲೂರಿ ನಿಲ್ಲಲು ಅಸಾಧ್ಯವೆನಿಸಿದ ಸ್ಥಿತಿ!

ಥಟ್ಟನೆ, "ನಮಸ್ಕಾರ ಸರ್. ಕುಳಿತು ಕೊಳ್ಳಿರಿ" ಎಂದೊಬ್ಬ ಪ್ಯಾಂಟ್‌ಧಾರಿ ನನ್ನನ್ನು ಎಚ್ಚರಗೊಳಿಸಬೇಕೆ? ಮುಖ ನೋಡಿದೆ. ಪರಿಚಯವಿಲ್ಲ. ಆತ ನಸುನಗುತ್ತ ಮೂರು ಜನರು ಕುಳ್ಳಿರಬಹುದಾದ ಆ ಆಸನದ ತುದಿಯಲ್ಲಿದ್ದ ತನ್ನ ಬಂಧುವನ್ನೆಬ್ಬಿಸಿ, ಬಳಿ ಕುಳಿತಿದ್ದ ಪತ್ನಿಯನ್ನು ಆ ಸ್ಥಳಕ್ಕೆ ಸರಿಸಿ, ಪತ್ನಿಯಿದ್ದ ಸ್ಥಳದಲ್ಲಿ ಬಂಧುವನ್ನು ಕುಳ್ಳಿರಿಸಿ, ತಾನೂ ನಿಂತುಕೊಂಡು ನನಗೆ ಆತಿಥ್ಯವೆಸಗುವ ಕಾರ್ಯದಲ್ಲಿ ಮಗ್ನನಾಗಿದ್ದ. "ಕುಳಿತವರನ್ನೆಬ್ಬಿಸಿ ಕುಳಿತುಕೊಳ್ಳುವ ಸ್ಥಿತಿಯಲ್ಲಿ ನಾನಿಲ್ಲ. ಸದ್ಭಾವನೆಯಿಂದ ಹೇಳಿದಿರಿ. ಅದಕ್ಕೆ ಕೃತಜ್ಞ" ನಾನೆಂದೆ.

"ಏನ್ ಸಾರ್, ಹಾಗೆ ಹೇಳಬಾರದು. ನನಗೆ ಕನ್ನಡವನ್ನು ಕಲಿಸಿದವರು. [illegible] ಮುಂದೆ ದಾಟಿದ ಮೂರು ವರ್ಷಗಳ — ಆ ಹೈಸ್ಕೂಲು ಜೀವನದ — ಕನ್ನಡ ಪಾಠದ ಸವಿಯನ್ನು ಮರೆಯಲಾರೆ.

ಕುಳಿತುಕೊಳ್ಳಬೇಕೇ?" ಎಂದ. ನಾನು ಕುಳಿತುಕೊಳ್ಳಬೇಕಾಯಿತು.

ಹರಿದ್ವಾರದ ದೇವಾಲಯ ಹಾಗೂ ಆ ವ್ಯಕ್ತಿ ಸಂಪರ್ಕದಲ್ಲಿ [illegible] ಸಾವಿರಾರು ರೂಪಾಯಿ ಸಂಪಾದಿಸುವ ಡಾಕ್ಟರ್. [illegible] ಸಂಪರ್ಕ ದೊರಕಿದ್ದು ಈ [illegible] ಸೀಟಿನ ಸಂಪರ್ಕದಿಂದ!

ಮುಂದಿನ ಕೆಲವು ನಿಮಿಷಗಳು ಕಳೆದವು, [illegible] ಸಂಬಂಧದ ಮಾತುಗಳಲ್ಲಿ!

— ಶ್ರೀನಿಲಯ

ಎಂಥ ಮುಂಜಾಗ್ರತೆ

ಒಂದು ಸಲ ರೈಲಿನಲ್ಲಿ ಫಸ್ಟ್ ಕ್ಲಾಸ್ ಕಂಪಾರ್ಟ್‌ಮೆಂಟಿನಲ್ಲಿ ಪ್ರೊಫೆಸರ್ ಮತ್ತು ಅವರ ಸುಮಾರು ೧೨ ವರ್ಷದ ಮಗ ಪ್ರಯಾಣ ಮಾಡುತ್ತಿದ್ದರು. ಆ ಕಂಪಾರ್ಟ್‌ಮೆಂಟಿನಲ್ಲಿ ಬೇರೆ ಯಾರೂ ಇರಲಿಲ್ಲ- ಪ್ರೊಫೆಸರ್ ಸಾಹೇಬರು ಅವರ ಮಗನೊಂದಿಗೆ ಚದುರಂಗ ಆಡುತ್ತಿದ್ದರು. ಇದ್ದಕ್ಕಿದ್ದಂತೆಯೇ ಏನನ್ನೋ ಯೋಚಿಸಿಕೊಂಡು ಸರಕ್ಕನೆ ಎದ್ದು ಸರಪಳಿ ಎಳೆದು ರೈಲು ಗಾಡಿ ನಿಲ್ಲಿಸಿಬಿಟ್ಟರು. ಇದ್ದಕ್ಕಿದ್ದಂತೆಯೇ ರೈಲುಗಾಡಿ ನಿಂತದ್ದು ನೋಡಿ, ಗಾರ್ಡ್ ಮತ್ತು ಇತರರು ಪ್ರೊಫೆಸರ್ ಮತ್ತು ಅವರ ಮಗ ಇದ್ದ ಕಂಪಾರ್ಟ್‌ಮೆಂಟಿಗೆ ಬಂದರು — ಆರಾಮವಾಗಿ ಚದುರಂಗ ಆಡುತ್ತಿದ್ದ ಪ್ರೊಫೆಸರರನ್ನು ಕಂಡು ಗಾರ್ಡ್‌ನಿಗೆ ಆಶ್ಚರ್ಯವಾಗಿ, "ಸ್ವಾಮೀ— ನಿಮಗೆ ಏನಾಯಿತು? ಏತಕ್ಕಾಗಿ ರೈಲು ನಿಲ್ಲಿಸಿದಿರಿ?" ಎಂದು ಕೇಳಿದನು

ಅದಕ್ಕೆ ಉತ್ತರವಾಗಿ ಪ್ರೊಫೆಸರರು ಹೇಳಿದ ಮಾತು ಹೀಗಿತ್ತು— "ನೋಡಿ, ಈ ಕ್ಷಣದಿಂದ ನನ್ನ ಮಗನ ವಯಸ್ಸು ೧೨ ದಾಟುತ್ತದೆ. ಕಾಯಿದೆಯ ಪ್ರಕಾರ ಅವನ ಟಿಕೆಟ್ಟನ್ನು ಫುಲ್ ಮಾಡುವುದು ಅಗತ್ಯ. ಮುಂದೆ ಹೋದರೆ ಬಗೆಹರಿಯಲಾರದು ಸರಪಣಿ ಎಳೆದು ಗಾಡಿ ನಿಲ್ಲಿಸಿದೆ." ಈ ಉತ್ತರ ಕೇಳಿ, ಗಾರ್ಡ್ ಮತ್ತು ಇತರರು ನಿಬ್ಬೆರಗಾದರು.

— ಬಿ. ಎನ್. ರಘುರಾಮ

ಬಯಲಾದ ಗುಟ್ಟು

ಬಿ ಟಿ ಎಸ್ ಬಸ್ಸು ಸ್ಟಾಪಿಗೆ ಬಂದ ಕೂಡಲೇ ಕಾದಿದ್ದ ಪ್ರಯಾಣಿಕರು ಹತ್ತು ಹದಿನೈದು ಜನ ಬಸ್ಸು ಏರಿ ಕುಳಿತುಕೊಂಡರು. ಬಸ್ಸು ಹೊರಡಲು ಇನ್ನೂ ಹತ್ತು ನಿಮಿಷ ಇದ್ದುದರಿಂದ ಡ್ರೈವರ್ ಹಾಗೂ ಕಂಡಕ್ಟರ್ ಕಾಫಿ ಸೇವಿಸಲು ಹೋದರು. ನಾವು ಬಸ್ಸಿನಲ್ಲಿ ಕುಳಿತಿರಬೇಕಾದರೆ ಸೂಟುಧಾರಿಯೊಬ್ಬರು ಸಪತ್ನೀಕರಾಗಿ ತಮ್ಮ ಐದು ವರ್ಷದ ಏಕೈಕ ಪುತ್ರನೊಡನೆ ಬಸ್ಸನ್ನು ಹತ್ತಿ, ಹಿಂದಿನ ಸೀಟಿನಲ್ಲಿ ಕುಳಿತುಕೊಂಡರು

ಬಸ್ ಸ್ಟಾಪ್ ಬದಿಯಲ್ಲಿನ ಒಂದು 'ಟೀ ಅಂಗಡಿ'ಯಿಂದ ಆಗ ತಾನೆ ಮಾಡುತ್ತಿದ್ದ ವಡೆಗಳ ವಾಸನೆ ಬರುತ್ತಿತ್ತು. ಸೂಟುಧಾರಿಯ [illegible] ಸೆಂದು ಮೆಲ್ಲಗೆ [illegible]. ಸೂಟುಧಾರಿಯು :

"ನೋಡು ಮರಿ ಹಾಗೆಲ್ಲಾ ಹಾದಿ ಬದಿಯಲ್ಲಿ ಮಾಡಿದ್ದನ್ನ ತಿನ್ನಬಾರದು. ಅದರ ಮೇಲೆ ನೊಣ, ಧೂಳು ಎಲ್ಲಾ ಕೂತುಕೊಳ್ಳೋದರಿಂದ ನಾನಾ ವಿಧವಾದ ಕಾಯಿಲೆಗಳು ಬರುತ್ತೆ" ಎಂದು ಬಸ್ಸಿನಲ್ಲಿದ್ದವರಿಗೆಲ್ಲಾ ಕೇಳುವ ಹಾಗೆ ಮಗನಿಗೆ ಉಪದೇಶಿಸುತ್ತಿದ್ದ. ಆದರೆ ಆ ಮಗು,

"ಹಾಗಾದರೆ ನಾನು, ನೀನು, ಅಮ್ಮ ದಿನಾಲು ರಾತ್ರಿ ವಾಕಿಂಗ್ ಬಂದಾಗ ಇಲ್ಲೇ ವಡೆ ತಗೊಂಡು ತಿಂತೀವಲ್ಲಾ ಅದು ಹಾಗಿಲ್ವಾ?" ಎಂದು ಮುಗ್ಧವಾಗಿ ಪ್ರಶ್ನಿಸಿದಾಗ ಆ ಸೂಟುಧಾರಿಯ ಮುಖ ಹರಳೆಣ್ಣೆ ಕುಡಿದಂತಾಗಿತ್ತು.

— ಡಾ. ವಿ. ಆರ್. ಪದ್ಮನಾಭರಾವ

ನಕ್ಕರೆ ನಗಲಿವ್ವ

ಎಂ. ನಟರಾಜ

ಗರತಿಯರು ನಮ್ಮ ದೇಶದ ಸ್ತ್ರೀ ಜೀವನದ ಒಳಗನ್ನಡಿ. ಗರತಿಯರ ಹಾಡು ನಮ್ಮ ಹೆಣ್ಣು ಮಕ್ಕಳ ಹೃದಯದ ಪಡಿನುಡಿ. ಅದರಲ್ಲಿ ಮಮತೆಯ ಮಾಧುರ್ಯ ಮೈವೆತ್ತಿದೆ. ಪ್ರೇಮದ ಸತ್ವ ಅಳವಟ್ಟಿದೆ. ಹೆಣ್ಣಿನ ತ್ಯಾಗಬುದ್ಧಿ ತುಳುಕುತ್ತಿದೆ. ಕೌಟುಂಬಿಕ ಬಾಳಿನ ರಸವು ಪರಿಪೂರ್ಣಗೊಂಡಿದೆ. ಅದು ಸುಖದ ಸೆಲೆಯಾಗಿದೆ. ಗರತಿ ತ್ಯಾಗದ ಪುತ್ಥಳಿಯಾಗಿ ಕಾಣಿಸಿಕೊಳ್ಳುತ್ತಾಳೆ.

ಪ್ರಣಯವು ಹರೆಯದ ಜೀವಿಗೆ ಸ್ವಾಭಾವಿಕ. ರಸನಿಮಿಷಗಳ ರಸಿಕರೂ ರಸಾವೇಶಗಳ ಬಂಟರೂ ಆದ ನಮ್ಮ ಹಳ್ಳಿಗರಲ್ಲಿ ಪ್ರಣಯ ಒಂದು ರಸೋನ್ಮತ್ತವಾದ ಲೀಲೆಯಾಗಿದೆ. ಅಲ್ಲಿ ಮೋಸ ಮುಚ್ಚುಮರೆಗಳಿಲ್ಲ. ಅದರ ಬರುವಿಕೆ ಸಹಜವಾಗಿದೆ. ಮದುವೆಯಾಗಿ ಹೆಣ್ಣು ಮೊದಲ ಸಲ ಗಂಡನ ಮನೆಗೆ ಹೋದಾಗ ಅವಳಿಗೆ ಎಲ್ಲವೂ ಹೊಸದು. ಪ್ರಯತ್ನ ಮಾಡಿ ಇದ್ದ ಸ್ಥಿತಿಗೆ ಹೊಂದಿಕೊಳ್ಳುವಳು. ಬೆಳಗ್ಗೆಯಿಂದ ಸಂಜೆಯವರೆಗೆ ಕೈ ಬಿಡುವಿಲ್ಲದ ಕೆಲಸವಿದ್ದರೂ ತನ್ನ ಗಂಡನನ್ನು ಮೆಚ್ಚಿಸಲು ಎಲ್ಲವನ್ನೂ ಸರಾಗವಾಗಿ ಮಾಡುವಳು. ಆಕೆ ಪ್ರೇಮದ ಕಣಿಯಾಗಿ ಜೀವಿಸುವಳು. ಕೂಲಿ ಮಾಡಿದರೂ ತನ್ನ ಪತಿಯೇ ಸರದಾರ. ಅವನಿಂದ ಅವಳು ತವರು ಮರೆಯುವಳು. ಅವಳಿಗೆ ಯಾವಾಗಲೂ ಗಂಡನ ರೂಪ ಲಾವಣ್ಯಗಳೇ ಸರ್ವಸ್ವ. ಅವನು ಸರದೊಳಗೆ ಇರುವ ಗುಳದಾಳಿಯಂತೆ ಶ್ರೇಷ್ಠನು. ಅವನ ನಗೆ ಮುಟ್ಟದೊಳಗಿನ ಅಚ್ಚ ಮಲ್ಲಿಗೆಯ ಮಾಲೆ. ಅವನ ಬಣ್ಣ ಕಾಣಿಸುತ್ತಿದ್ದರೂ ಅದರಲ್ಲೂ ಸೌಂದರ್ಯ ಅಡಗಿದೆ.

ಹೋಗುವ ರಾಯರ ಹೋಲಿಕೆ
ನೋಡೀನ
ಕಾಲ ಹಿಂಬಡಕ ಕಮೋಕು ಛೇಜೀಯ
ಚಂದರನಕಿಂತ ಬಲುಚೆಲುವ

ಅಂತಹ ಗಂಡ ಅಕಸ್ಮಾತ್ ಪರ ಊರಿಗೆ ಹೊರಟಾಗ ಹನಿಗಣ್ಣಾಗಿ ಗಂಡನನ್ನು ಕೇಳುತ್ತಾಳೆ.

ಎಂದ ಬರುತೀರಿ ನನ್ನ ಗಂಧದ ಕಡಿಗಾರ
ರುಮಾಲ ಎಳಿ ಹರಿವಾಳ ಛನ ನಲ್ಲ
ಎಂದ ಬರತೀರಿ ನನಗ್ಹೇಳ

ನಲ್ಲೆಯ ಮನಸ್ಸನ್ನು ಆತ ಅರಿತಿದ್ದಾನೆ. ಅವನ ಮನಸ್ಸೂ ಬಾಡಿದೆ. ಆದರೆ ಕರ್ತವ್ಯ ಕೈ ಬೀಸಿ ಕರೆಯುತ್ತಿದೆ. ಆಕೆಯನ್ನು ಬಿಟ್ಟು ತಾನೂ ಇರಲಾರನೆಂದು ಹೀಗನ್ನುತ್ತಾನೆ

ಕಮಲದ ಹೂ ನಿನ್ನ ಕಾಣದೆ ಇರಲಾರೆ
ಹಕ್ಕೀಗೆ ಪಾರಾಟ ಬಿಡಲಾರೆ ಕೇಡಿಗೆ
ಗರಿ ನಿನ್ನನಗಲಿ ಇರಲಾರೆ

ಇಷ್ಟು ನುಡಿದು ಆತ ಹೋಗಿದ್ದರೆ ಇವಳಲ್ಲೇನೂ ಸಂಶಯ ಉದಯವಾಗುತ್ತಿರಲಿಲ್ಲ. ಆದರೆ,

ಊರೀಗೆ ಹೋಗವಾಗ ಮೋರ್ಯಾಕ ಬಾಡ್ಯಾವ
ಗೀರ ಗಂಧ್ಯಾಕ ಬೆವತಾವ ಮಡದೀನ
ಬಿಟ್ಟ ಹೋಗಟಾಗ ಪರವಾಡ

ಅವನ ಮುಖವನ್ನು ಗಮನಿಸಿದಾಗ ಅಲ್ಲಿ ಯಾವುದೋ ಚಿಂತೆ ಆವರಿಸಿಕೊಂಡಂತೆ ಕಾಣುತ್ತದೆ. ಚಿಂತೆಗಿಂತ ತನ್ನ ಮುಗ್ಧ ಪತ್ನಿಯನ್ನು ವಂಚಿಸುತ್ತಿದ್ದೇನೆ ಎನ್ನುವ ಭಯವಿದೆ. ಆ ಭಯದಿಂದ ಮುಖ ಬೆವೆತಿದೆ. ನೋಡು

ನವರಿಗೆ ಪಾಪ ವಿರಹ ಸಹಿಸಲಾಗುತ್ತಿಲ್ಲ ಅನ್ನಿಸಬಹುದು. ಆದರೆ ಅದರ ಹಿಂದೆ ಬೇರೆಯೇ ಒಂದು ಕಾರಣವಿದೆ.


ಜಾಣ ಹೆಂಡತಿಗೆ, ಗಂಡ-ಹೆಂಡಿರ ಜಗಳ ಕಲ್ಲಿಗೆ ಕಲ್ಲು ತಾಗಿ ಕಿಡಿ ಹಾರುವಂಥದಲ್ಲ, ಗಂಧವನ್ನು ತೀಡಿದ ಹಾಗೆ ಪರಿಮಳ ಬರುತ್ತೆ. ಗಂಡನ ದೃಗಂದ ಸುರಿಮಳೆಯನ್ನು ಸಮಾಧಾನವಾಗಿ ಕೊರಳಿಗೆ ಹಾಕಿಕೊಂಡು ಸಂತಸದಿಂದ, ತಾಳ್ಮೆಯಿಂದ ಜೀವನಕ್ಕೆ ಗೆಲುವನ್ನು ತರುತ್ತಾಳೆ. ಇಂತಹ ತಾಳ್ಮೆಯು ಹೆಂಗಸಿಗೆ ಗಂಡನ ಸ್ವೈರಪ್ರವೃತ್ತಿ ತಲೆ ಕೆಡಿಸುವಂತಹದಲ್ಲ. ಆದರೂ ಕೆಲವು ವಿಚಾರ ಮನಸ್ಸನ್ನು ಕಾಡುತ್ತವೆ. ರಾತ್ರಿ ಮನೆಗೆ ಹಿಂದಿರುಗಿದಾಗ ಸ್ನಾನಕ್ಕೆ ಅಣಿ ಮಾಡಿ ಅಲ್ಲಿ ಪ್ರಶ್ನಿಸುತ್ತಾಳೆ.

ರಾಜು ಬರತಾರಂತ ರಾತ್ರೇಲಿ ನೀರಿಟ್ಟ
ರನ್ನ ಬಚ್ಚಲ ಮಣೆ ಹಾಕಿ ಕೇಳೀನ
ಸಣ್ಣವಳ ಮೇಲೆ ಸನತ್ಯಾಕ
ಅಂಗೀಯ ಮ್ಯಾಲಿಂಗಿ ಛಂದೇನೊ
ನನಗಾಯು

ರಂಬಿ ಹ್ಯಾಲ ರಂಬಿ ಪ್ರತಿರಂಬಿ [illegible]
ಛಂದೇನೊ ರಾಜು ಮನೆಯಾಗ

ಅವನು ಯಾವುದೇ ಉತ್ತರ ನೀಡದಿದ್ದಾಗ, ಪುನರ್ವಿವಾಹಕ್ಕೆ ಇರಬಹುದಾದ ಎರಡೂ ಕಾರಣಗಳನ್ನು ಯೋಚಿಸುತ್ತಾಳೆ. ನನಗೆ ಮಕ್ಕಳಾಗಲಿಲ್ಲವೆಂದು ಬೇರೊಂದು ಲಗ್ನವೆ? ನಾನು ಚೆಲುವೆಯಲ್ಲವೆಂದು ಬೇರೊಂದು ವಿವಾಹವೆ? ಎಂದು ಕೇಳುತ್ತಾಳೆ. ಅದಕ್ಕೂ ಅವನು ಉತ್ತರಿಸದಿದ್ದಾಗ ತಾನೇ ಉತ್ತರಿಸುತ್ತಾಳೆ. ಮಕ್ಕಳಾಗದಿರುವುದಕ್ಕೆ ನಾನಿನ್ನೂ ಚಿಕ್ಕವಳು, ಅವಕಾಶ ಮೀರಿಲ್ಲ. ತಾನು ಕುರೂಪಿಯೆ? ಅಲ್ಲ. ರಂಭೆಯ ಮೇಲೆ ಪ್ರತಿರಂಭೆ ಬರುವುದು ಛಂದವಲ್ಲ ಎನ್ನುತ್ತಾಳೆ. ತನ್ನ ಮನೆಯ ಗುಟ್ಟನ್ನು ಇತರರಿಗೆ ತಿಳಿಸಬಾರದು ಎನ್ನುವ ಪ್ರಜ್ಞೆ ಅವಳಲ್ಲಡಗಿದೆ.

ಹರಿನಂಥ ಜರಪೆರು ಪರನಾರಿಗೊಲಿದರ
ಮನಿ ಮಡದಿ ಬಾಯಿ ಬಿಡಬ್ಯಾಡ
ಕಾವ್ವವ್ವ
ಮನ ಹೇಸಿ ಮನೆಗೆ ಬರತಾರ



ಎಂಬ ಧೈರ್ಯ ಅವಳಲ್ಲಿದೆ. ಅಷ್ಟಾದರೂ ಹಿರಿಯ ಸ್ತ್ರೀಯು ಆವಶ್ಯಕತೆಯಿದೆ ಎಂದಾಗ ಅದಕ್ಕೆ ತನ್ನ ಒಪ್ಪಿಗೆ ನೀಡುವಳು.

[illegible] ಹಾಡಿದರ
ಭಂಡ [illegible] ಗಳಲ್ಲ [illegible]
ಗಂಡು ಬೇಡಿದರ ಕೊಡುವೇನ.

ಬಾಳಿನಲ್ಲಿ ಕೇವಲ ಸುಖವೇ ಇದ್ದರೂ ಅದು ಹಳಸುವುದು. ಗಂಡು ಪರ ಹೆಣ್ಣಿನ ಸುಖವನ್ನು ಬಯಸುತ್ತದೆ. ಇಲ್ಲವಾದರೆ ಸಮಾಜದ ರೀತಿಯಲ್ಲಿದ್ದ ಸೂಳೆಯ ಬೆನ್ನು ಹತ್ತಿ ಮನೆಯವಳನ್ನು ಬಿಟ್ಟು ಪ್ರಣಯಕ್ಕೆ ಬೀಳುತ್ತದೆ. ಇಂತಹ ದೃಶ್ಯಗಳು ಹಳ್ಳಿಗಳಲ್ಲಿ ಬಹಳ ಕಂಡುಬರುವುದು. ಗಂಡು ಪರ ಹೆಣ್ಣಿಗೆ ಮನಸೋತು [illegible] ಕಾತ್ರಿಯನ್ನದೆ ಅಡ್ಡಾಡಿ ತನ್ನ ತಲೆ ಕೊಟ್ಟದ್ದು ಉಂಟು.

[illegible]
ಜಾಣ

ಗಿಡದ ಮಲ್ಲಿಗೆರಡು ಗಿಣಿ ಕೂತು
ಮುಡಿದಾವ
ಎರವನ್ನೋ ರಾಯ ನಿನ ಜೀವ

ನನ್ನಲ್ಲಿ ಕಾಣದ ಯಾವ ಸೌಂದರ್ಯವನ್ನು ಬೇರೆ ಹೆಣ್ಣಿನಲ್ಲಿ ಕಂಡೆ, ಇದು ತರವಲ್ಲ ಎನ್ನುತ್ತಾಳೆ. ಹೀಗೆ ಮಾತನಾಡುವಾಗ ಹೃದಯದ ಮಾತು ಹೃದಯಕ್ಕೆ ಅರ್ಥವಾಗುತ್ತದೆ.

ಹೆಣ್ಣು ಎಲ್ಲವನ್ನೂ ಸಹಿಸಬಲ್ಲಳು. ಆದರೆ ಅಕ್ಕಪಕ್ಕದವರ ದೂಷಣೆ, ಅದೂ ತನ್ನ ಪತಿಯ ವಿಚಾರವಾಗಿ ಕೇಳಿದರೆ ಅವಳು ಚಂಡಿಯಾಗುತ್ತಾಳೆ. ಕಿಡಿ ಕಾರುತ್ತಾಳೆ. ಯಾರೋ ಚಾಡಿಕೋರರು ಅವಳ ಪತಿಯ ಶೀಲವನ್ನು ಕೆಡಿಸುವ ರೀತಿಯಲ್ಲಿ ನುಡಿದಾಗ ಪತಿ ಬಂದ ಕೂಡಲೇ ಕಾಳಿಯಾಗಿ ರೌದ್ರಾವತಾರ ತಾಳಿ ವಿಚಾರಿಸಿಕೊಳ್ಳುತ್ತಾಳೆ.

ಎಲ್ಲಿ ಹೋಗಿದ್ದಿ ರಾಯ ಶೆಲ್ಯಾಕೆ
ಮಾಸಾದೆ
ಅಲ್ಲೊಬ್ಬಳ ಕೂಡ ಸಲಿಗೀಯ
ಕೀವ್ ಮಾಡಿ
ಇಲ್ಲಿಂಬಂದೇನ ನನ ಮುಂದೆ

ಎಂದು ಪ್ರಶ್ನಿಸುತ್ತಾಳೆ. ಅವನು ಉತ್ತರ ಕೊಡದಿದ್ದಾಗ ಗಂಡ ಹೆಂಡಿರ ಮನಸ್ಸು ಎರಡಾಗುತ್ತದೆ. ಆದರೂ ಅಕ್ಕಪಕ್ಕದವರ ಮುಂದೆ ತನ್ನ ಪತಿಯನ್ನು ಬಿಟ್ಟುಕೊಡುವುದಿಲ್ಲ.

ಪಕ್ಕದ ಮನೆಯ ಗರತಿ ಇವರು ಜಗಳ ಮಾಡದೆ ಇರುವುದನ್ನು ನೋಡಿ ಸಿರಾಕಳಾಗುತ್ತಾಳೆ. ಕೊನೆಗೆ ತನ್ನ ಪ್ರಬಲ ಅಸ್ತ್ರವನ್ನು ಬಳಸಬೇಕೆಂದು ತೀರ್ಮಾನಿಸಿ,

ಚಿಂತಾಕು ಇಟಕೊಂಡು ಚಿಪ್ಪಿಟ
ಬಳೆವಾಕೆ
ಚಿಂತಿಲ್ಲವೇನ ನಿನಗಿಷ್ಟು ಖರಾಬು
ಅಲ್ಲೊಬ್ಬಳ ಕೂಡ ನಗತಿದ್ದಿ

ಎಂದು ಹೀಯಾಳಿಸುತ್ತಾಳೆ. ಇದು ಅವಳ ಸತ್ವಪರೀಕ್ಷೆಯ ಸಮಯ. ತನ್ನ, ಗಂಡನ ಮನೆಯ ಮಾನವನ್ನು ಕಾಪಾಡಬೇಕಾದ ವಿಚಾರ ತನ್ನ ಮನಸ್ಸಿಗೆ 'ತಂದರ ತರಲವ್ವ, ತಂಗಿಯಾಗೆ ಇರಲವ್ವ' ಎಂದು ಸಮಾಧಾನ ಮಾಡಿಕೊಂಡು ಚಾಡಿಕೋರರ ಮೂಗು ಕೊಯ್ದಂತೆ ಹೀಗೆ ಹೇಳುತ್ತಾಳೆ–

ಸಕ್ಕರೆ ನಗಲೆವ್ವ ನಗೆಮುಖದ ಕ್ಯಾದೀಗಿ
ನಾ ಮುಚ್ಚಿ ಮುಡಿದ ಪರಿಮಳವಾ
ಹೂವ
ಅವಳೊಂದು ಗಳಿಗೆ ಮುಡಿಯಲಿ

ತನ್ನ ಸಹನೆಯನ್ನು ವ್ಯಕ್ತಪಡಿಸಿ, ತನ್ನ ಬಾಳಿನ ಸುಮರಸವನ್ನು ಕಾಪಾಡುತ್ತಾಳೆ. ಅವಳು ತೋರಿಸುವ ಗುಣ, ಸಹನೆ, ಸರಳಗಳು, ಹೃದಯ ವೈಶಾಲ್ಯ ಬಾಳ ಸಂಜೀವಿನಿ. ಇವೆಲ್ಲವೂ ಆದರ್ಶ ದಾಂಪತ್ಯ ಜೀವನದ ತಿರುಳಾಗಿದೆ. ಹೀಗೆ ಹಳ್ಳಿಗರ ಹಾಡಿನಲ್ಲಿ ಅವರ ಪ್ರಣಯ ಹಾಗೂ ದಾಂಪತ್ಯ ಜೀವನವನ್ನು ಕಾಣಬಹುದು.

ಡಾ. ವಸಂತ ಮಾಧವ ಹೆಡೆಕರ್

ಜೀವರಸಾಯನಶಾಸ್ತ್ರದ ಅಡಿಗಲ್ಲು

ಕ್ರೊಮಾಟೋಗ್ರಫಿ

ಈಚಿನ ದಿನಗಳಲ್ಲಿ ಊಹಾತೀತವಾಗಿ ಬೆಳೆಯುತ್ತಿರುವ ವಿಜ್ಞಾನ ಕೆಲಸಲ ವಿಜ್ಞಾನಿಗಳಿಗೆ ಸಂಶೋಧನೆಗಳನ್ನು ಸರಿಯಾಗಿ ಮುಂದುವರಿಸುವ ವಿಧಾನಗಳು ತಿಳಿಯದೆ ಪ್ರಗತಿಹೀನವಾಗಿ ಬಿಡಬಹುದು. ಆಗ ಅಕಸ್ಮಾತ್ತಾಗಿ ಗಮನಕ್ಕೆ ಬರುವ ಒಂದು ತೀರ ಸಾಧಾರಣವೆನಿಸುವ ವಿಧಾನವೂ ಸಹ ವಿಜ್ಞಾನದ ಮುನ್ನಡೆಯಲ್ಲಿ ಮಹತ್ವದ ಮೈಲಿಗಲ್ಲಾಗಿ ನಿಲ್ಲುವುದೂ ಇದೆ. ಕ್ರೊಮಾಟೋಗ್ರಫಿಯು ಶೋಧಪೂರ್ವದಲ್ಲಿ ಜೀವರಸಾಯನ ಶಾಸ್ತ್ರವೂ ಇದೇ ತೊಂದರೆಯನ್ನು ಎದುರಿಸುತ್ತಿತ್ತು. ಅಸಂಖ್ಯಾತ ರಾಸಾಯನಿಕಗಳ ಆಗರವಾದ ಶರೀರವಲ್ಲಿರುವ ರಸಾಯನಿಕಗಳನ್ನೆಲ್ಲ ಗುರುತಿಸಿ ವಿಶ್ಲೇಷಿಸಿ, ಅಭ್ಯಸಿಸುವ ದಾರಿಗಾಣದೇ ವಿಜ್ಞಾನಿಗಳು ಪರದಾಡುತ್ತಿದ್ದಾಗ ಅವರ ನೆರವಿಗೆ ಬಂದ ಕ್ರೊಮಾಟೋಗ್ರಫಿ ಒಂದು ಸುಲಭ ವಿಧಾನ.

೧೯೦೬ರಲ್ಲಿ ರಶಿಯನ್ ಸಸ್ಯಶಾಸ್ತ್ರಜ್ಞ ತ್ಸ್ವೆಟ್ ಸಸ್ಯಗಳಲ್ಲಿನ ವರ್ಣ ಸಂಯೋಜನೆ ಕುರಿತು ಪ್ರಯೋಗಗಳನ್ನು ನಡೆಸುತ್ತಿದ್ದ. ಪ್ರಯೋಗ ನಡೆಸುವಾಗ ಆತ ಹಸಿರು ಎಲೆಗಳ ಸಾರವನ್ನೆಲ್ಲ ತೆಗೆದು ಒಂದು ಗಾಜಿನ ನಾಳದಲ್ಲಿ ಒತ್ತಿ-ತುಂಬಿದ ಸೀಮೆ ಸುಣ್ಣದ ಮೇಲೆ ಸುರಿದ. ನಿಧಾನವಾಗಿ ಇಳಿವ ಗಾಢ ಸಸ್ಯದ್ರವ ಹರಿಯುತ್ತಿದ್ದಂತೆ ಕೆಲ ಹೊತ್ತಿನವೇಳೆ ಅದು ಬೇರೆ ಬೇರೆಯಾಗಿ ವಿವಿಧ ಬಣ್ಣದ ಸ್ತರಗಳಾಗಿ ನಿಂತಿತು. ತ್ಸ್ವೆಟ್ ಸೀಮೆಸುಣ್ಣದ ಸಿಲಿಂಡರನ್ನು ಹೊರತೆಗೆದು ಎಲ್ಲ ಬಣ್ಣದ ದ್ರವಗಳನ್ನು ವಿಂಗಡಿಸಿದ. ಹೀಗೆ ಬೇರೆ ಬೇರೆ ವರ್ಣ

ದ್ರವ್ಯಗಳ ಹಿಂಗಡಣೆಗೆ ನೆರವಾದ ವಿಧಾನವನ್ನು "ಕ್ರೊಮಾಟೋಗ್ರಫಿ" ಎಂದು ಹೆಸರಿಸಲಾಯಿತು.

ಗ್ರೀಕ್ ಭಾಷೆಯಲ್ಲಿ "ಕ್ರೋಮಾ" ಎಂದರೆ 'ವರ್ಣಗಳು' ಎಂದು ಗ್ರಾಫೈನ್ ಎಂದರೆ 'ಲೇಖನ' ಎಂದೂ ಅರ್ಥ. ಮೊದಮೊದಲು ಕೇವಲ ವರ್ಣದ್ರವ್ಯಗಳ ವಿಶ್ಲೇಷಣೆಗೆ ಉಪಯೋಗಿಸಲ್ಪಡುತ್ತಿದ್ದ ಈ ಪದ್ಧತಿಯಿಂದು ಆಧುನಿಕ ರಸಾಯನಶಾಸ್ತ್ರದಲ್ಲಿ ವರ್ಣರಹಿತ ಪದಾರ್ಥಗಳ ವಿಶ್ಲೇಷಣೆಯಲ್ಲೂ ಅತಿಯಾಗಿ ಉಪಯೋಗಿಸಲ್ಪಟ್ಟರೂ ತನ್ನ ಮೂಲ ಹೆಸರು 'ವರ್ಣಲೇಖನ' (Chromatography) ವನ್ನು ಹಾಗೇ ಉಳಿಸಿಕೊಂಡಿದೆ.

ತೀರ ಪ್ರಾಚೀನ ಕಾಲದಿಂದಲೂ ಪದಾರ್ಥಗಳ ಮೂಲ ವಸ್ತುಗಳನ್ನು ವಿಶ್ಲೇಷಿಸಿ ಅಭ್ಯಸಿಸುವದು ರಸಾಯನಶಾಸ್ತ್ರಜ್ಞರ ಹವ್ಯಾಸ. ಇದಕ್ಕಾಗಿ ಅವರು ಮೊದಲಿಗೆ ಬೇರೆ ಬೇರೆ ರೀತಿಯ ದ್ರಾವಕಗಳಲ್ಲಿ ಪದಾರ್ಥಗಳನ್ನು ಕರಗಿಸಿ ಅಭ್ಯಸಿಸುತ್ತಿದ್ದರು. ಕೆಲ ವಸ್ತುಗಳು ಕೆಲ ವಿಶಿಷ್ಟ ದ್ರಾವಕಗಳಲ್ಲಿ ಮಾತ್ರ ಕರಗುತ್ತವೆ. ಆದರೆ ಈ ವಿಧಾನದಿಂದ ಕೇವಲ ಬೆರಳೆಣಿಸುವಷ್ಟು ವಸ್ತುಗಳ ವಿಶ್ಲೇಷಣೆ ಮಾತ್ರ ಸಾಧ್ಯವಾಗಿತ್ತಷ್ಟೇ ಅಲ್ಲದೆ ಅಭ್ಯಾಸಕ್ಕೆ ಬೇಕಾದ ಪದಾರ್ಥಗಳ ಪ್ರಮಾಣವೂ ಅತಿಯಾಗಿತ್ತು. ಆದರೆ ಕ್ರೊಮಾಟೋಗ್ರಫಿ ಶೋಧದ ನಂತರ ರಸಾಯನಶಾಸ್ತ್ರದಲ್ಲಿ ಆದ ಪ್ರಗತಿ ಕಲ್ಪನಾತೀತ.

ಕೆಲ ವಸ್ತುಗಳು ಉದಾ– ಸೀಮೆಸುಣ್ಣ ಸಹಜವಾಗಿಯೇ ದ್ರವಪದಾರ್ಥಗಳನ್ನು (ಬ್ಲಾಟಿಂಗ್ ಪೇಪರಿನಂತೆ) "ಹೀರುವ" ಗುಣ ಹೊಂದಿವೆ. ಇದಕ್ಕೆ ಕಾರಣ ಅದರಲ್ಲಿರುವ ಅಸಂಖ್ಯಾತ ರಂಧ್ರಗಳು. ಕೇಶಾಕರ್ಷಣ ಶಕ್ತಿಯಿಂದ ದ್ರವ ವಸ್ತುಗಳು ಈ ರಂಧ್ರಗಳಲ್ಲಿ ಹೀರಲ್ಪಡುತ್ತವೆ. ಅದರೊಡನೆಯೇ ಅವುಗಳಲ್ಲಿ ಕರಗಿದ ಘನವಸ್ತುಗಳೂ ಸಹ. ಹೀಗೆ ಹೀರಲ್ಪಟ್ಟ ಪದಾರ್ಥಗಳು ಆ 'ಹೀರುವಸ್ತು' ವಿನಲ್ಲಿ ಒಂದು ರೀತಿಯ ಸ್ಥಗಿತ ಸ್ಥಿತಿಯಲ್ಲಿರುತ್ತವೆ. ಆಗ ಆ ವಸ್ತುವಿನ ಮೇಲೆ ಇನ್ನಷ್ಟು ದ್ರವಪದಾರ್ಥವನ್ನು ಹರಿಯ ಬಿಟ್ಟರೆ ಅದರ ಪ್ರವಾಹದ ಮೂಲಕ ಸ್ಥಗಿತ ವಸ್ತುವಿಗೂ ಚಾಲನೆ ದೊರೆಯುತ್ತದೆ. ತಿರುಗಿ ಅವು ಹೀರುವಸ್ತುವಿನ ರಂಧ್ರಗಳ ಗುಂಟ ಪ್ರಯಾಣಿಸ ತೊಡಗುತ್ತವೆ.

ಆದರೆ ಹೀಗೆ ದೊರೆತ ಚಾಲನಶಕ್ತಿ ದ್ರವದಲ್ಲಿ ಕರಗಿದ ಎಲ್ಲ ವಸ್ತುಗಳಿಗೂ ಸಮಾನವಾಗಿರುವದಿಲ್ಲ. ಹೆಚ್ಚಿನ ಕರಗುವಿಕೆಯುಳ್ಳ ಪದಾರ್ಥ ವೇಗವಾಗಿಯೂ ಚಲಿಸುತ್ತವೆ. ಇದರಿಂದ ಕೆಲ ಸಮಯದ ನಂತರ ದ್ರಾವಣದಲ್ಲಿಯ ಬೇರೆ ಬೇರೆ ಪದಾರ್ಥಗಳು ತಮ್ಮ ಕರಗುವಿಕೆ ಹಾಗೂ ವಸ್ತುವಿನ ಗುಣಕ್ಕನುಗುಣವಾಗಿ ಬೇರೆ ಬೇರೆ ಸ್ತರಗಳಾಗಿ ನಿಲ್ಲುತ್ತವೆ. ಆಗ ಅವುಗಳ ವಿಶ್ಲೇಷಣೆ ಸುಲಭ. ಇದು ಕ್ರೊಮಾಟೋಗ್ರಫಿಯ ಮೂಲತತ್ವ, ಅಥವಾ "ಹೀರುವರ್ಣಲೇಖನ" ವಿಧಾನ (ಚಿತ್ರ ೧) (೧೯೫೨ರಲ್ಲಿ ಮಾರ್ಟಿನ್ ಮತ್ತು ಸಿಂಜ್ ಎಂಬ ಇಂಗ್ಲೆಂಡಿನ ಇಬ್ಬರು ವಿಜ್ಞಾನಿಗಳಿಗೆ ಕ್ರೊಮಾಟೋಗ್ರಫಿಯ ಸಲುವಾಗಿ ರಸಾಯನಶಾಸ್ತ್ರದ ನೋಬೆಲ್ ಪಾರಿತೋಷಕ ನೀಡಲಾಯಿತು).

ಈ ವಿಧಾನದಲ್ಲಿ ಕೆಲವೊಂದು ಎಚ್ಚರಿಕೆಯನ್ನು ಗಮನಿಸುವದಗತ್ಯ. 'ಹೀರು ವಸ್ತು' ಹಾಗೂ ದ್ರಾವಣಗಳ ಆಯ್ಕೆಯೇ ಇಲ್ಲಿನ ಮುಖ್ಯ ಸಮಸ್ಯೆ. ಹೀರುವಿಕೆಯ ಶಕ್ತಿ ಕಡಿಮೆಯಾದಂತೆ ವಿಶ್ಲೇಷಣ ಶಕ್ತಿಯೂ ಕಡಿಮೆ. ಅದೇ ಹೀರುವಿಕೆ ಅತಿಯಾಗಿದ್ದರೆ ಪದಾರ್ಥಗಳು ಹೀರುವಸ್ತುವಿನ ಗುಂಟ ಕ್ರಮಿಸುವದು ತೀರ ನಿಧಾನ. ಅಲ್ಲದೆ ಹೀರು ವಸ್ತುವು ದ್ರಾವಣದಲ್ಲಿ ಕರಗಬಾರದು, ಅದರೊಡನೆ ಯಾವುದೇ ರೀತಿಯ ರಾಸಾಯನಿಕ ಕ್ರಿಯೆಗೊಳಗಾಗಬಾರದು. ಹಾಗೇನಾದರೂ ಆದರೆ ವಿಶ್ಲೇಷಣೆಯ ಉದ್ದೇಶವೇ ಕೆಟ್ಟು ಹೋಗುತ್ತದೆ. ಹೀರುವಸ್ತುವಾಗಿ ಸುಣ್ಣ, ಕ್ಯಾಲ್ಸಿಯಂ ಕಾರ್ಬೋನೇಟ್, ಸುಕ್ರೋಜ್, ಪಿಷ್ಟ ಇದ್ದಲು ಮುಂತಾದವುಗಳನ್ನೂ

"ಜಾರುವಿಕೆ" ವಿಧಾನದಿಂದ ಎರಡು ವಸ್ತುಗಳ ವಿಶ್ರಣವನ್ನು ಬೇರ್ಪಡಿಸುವಿಕೆ. (ELUTION CHROMATOGRAPHY)

I ಒತ್ತಾಗಿ ತುಂಬಿದ ಪಂಕ್ತಿಯ ಮೇಲ್ತುದಿಗೆ ಮಿಶ್ರಣವನ್ನು ಸೇರಿಸಿದೆ.

II ದ್ರಾವಕವನ್ನು ಹರಿಸಿದಾಗ ಉಂಟಾದ ಅಪೂರ್ಣ ವಿಂಗಡಣೆ ಮಿಶ್ರಣದ ಒಂದು ಅಂಶ ಇನ್ನೊಂದಕ್ಕಿಂತ ಮುಂದಿರುವದನ್ನು ಗಮನಿಸಿ.

III ಪೂರ್ಣ ವಿಂಗಡಣೆ.

Iv ವೇಗವಾಗಿ ಕ್ರಮಿಸುವ ವಸ್ತು ದ್ರಾವಕದೊಡನೆ ಮೊದಲು ಪಂಕ್ತಿಯಿಂದ ಹೊರ ಬರುತ್ತದೆ.

ದ್ರಾವಕಗಳಾಗಿ ಪೆಟ್ರೋಲಿಯಂ, ಈಥರ್, ಬೆಂಝೀನ್, ಕ್ಲೋರೋಫಾರ್ಮ್, ಎಸಿಟೋನ್, ಆಲ್ಕೋಹಾಲ್, ನೀರು, ಪೈರಿಡಿನ್ (ಅತೀ ಮುಖ್ಯವಾದುದು) ಮುಂತಾದವುಗಳನ್ನು ಉಪಯೋಗಿಸಲಾಗುತ್ತದೆ.

ಬೇರೆ ಬೇರೆ ಸ್ತರಗಳಾಗಿ ರೂಪುಗೊಂಡ ದ್ರಾವಕದಲ್ಲಿಯ ಪದಾರ್ಥಗಳ ಅಭ್ಯಾಸಕ್ಕೆ ಅನೇಕ ಆಧುನಿಕ ವಿಧಾನಗಳು ಲಭ್ಯವಿವೆ. ಉದಾ– ಅತಿ ನೇರಳೆ ಅಥವಾ ಕ್ಷ ಕಿರಣ ಪರೀಕ್ಷೆ, ವರ್ಣ ಸೂಚಕಗಳು, ವಿದ್ಯುತ್ ವಿಶ್ಲೇಷಣೆ, ರಶ್ಮಿಭಂಗ ಸೂಚಕ (Refractive index) ಮುಂತಾದವು.

ಇಂದು ಕ್ರೊಮಟೋಗ್ರಫಿಯಲ್ಲಿ ಅನೇಕ ರೀತಿಯ ವಿಧಾನಗಳು ಲಭ್ಯವಿವೆ. ಅವುಗಳಲ್ಲಿ ಮುಖ್ಯವಾದುದು ಪೇಪರ್ ಕ್ರೊಮಟೋಗ್ರಫಿ.

೧೯೪೪ ರಲ್ಲಿ ಕನ್ಸಡೇನ್, ಗೋರ್ಡಾನ್ ಮತ್ತು ಮಾರ್ಟಿನ್ ಎಂಬ ವಿಜ್ಞಾನಿಗಳು ಒಂದು ದೊಡ್ಡ ಫಿಲ್ಟರ್ ಪೇಪರ್ ಮೇಲೆ ವಿಶ್ಲೇಷಿಸಬೇಕಾದ ದ್ರಾವಣದ ಒಂದು ಚುಕ್ಕೆಯನ್ನಿಟ್ಟು ಫಿಲ್ಟರ್ ಪೇಪರನ್ನು ದ್ರಾವಕದಲ್ಲಿ ಅದ್ದಿ ಇಟ್ಟರು. ಆಗ ಕೇಶಾಕರ್ಷಣ ಶಕ್ತಿಯಿಂದ ದ್ರಾವಕ ಫಿಲ್ಟರ್ ಪೇಪರ್ ಗುಂಟ ಏರಿದಂತೆ ಚುಕ್ಕೆಯಲ್ಲಿನ ಬೇರೆ ಬೇರೆ ಪದಾರ್ಥಗಳೂ ಅದರೊಡನೆ ಚಲಿಸತೊಡಗಿದವು. ತಮ್ಮ ತಮ್ಮ 'ಗುಣ'ಗಳಿಗೆ ಅನುಗುಣವಾಗಿ ಅವು ಪೇಪರಿನ ಬೇರೆ ಜಾಗದಲ್ಲಿ ಹೋಗಿ ನೆಲೆಸಿದವು.

ದ್ರಾವಣವು ಫಿಲ್ಟರ್ ಪೇಪರ್ ಗುಂಟ ಏರುವ ಬದಲು ಅದರ ಮೇಲ್ಬದಿಯಿಂದ ಸತತವಾಗಿ ಇಳಿಯುವಂತೆ ಮಾಡುವದು ಇನ್ನೂ ಅನುಕೂಲ ವಿಧಾನ. ವಿಂಗಡಣೆಗೊಂಡ ಪ್ರತಿ ಪದಾರ್ಥವೂ ವಿಶಿಷ್ಟ ಸ್ಥಾನಗಳನ್ನು ಆಕ್ರಮಿಸುವದರಿಂದ ಅವುಗಳನ್ನು ಗುರುತಿಸುವದು ಸುಲಭ (ಚಿತ್ರ ೨ ರಲ್ಲಿ I, II ನೋಡಿ)


ಇನ್ನೂ ಸುಧಾರಿಸಿದ ವಿಧಾನಗಳಲ್ಲಿ ಫಿಲ್ಟರ್ ಪೇಪರ್‌ನ್ನು ಬೇರೆ ಬೇರೆ ಉಷ್ಣತಾಮಾನಗಳಿಗೆ ಒಳಪಡಿಸಿ ಇನ್ನೂ ಹೆಚ್ಚಿನ ನಿಖರವಾದ ಪರಿಣಾಮಗಳನ್ನು ಪಡೆಯಬಹುದು. ಪ್ರಯೋಗ ನಡೆದಾಗ ಪೇಪರ್ ಒಣಗುವದನ್ನು ತಪ್ಪಿಸಲು ದ್ರಾವಕದ ಆವಿ ತುಂಬಿದ ವಾತಾವರಣದಲ್ಲಿ ಅದನ್ನು ಇಡುವದೂ ಇದೆ. ಕೆಲ ಸಲ ಎರಡು ಬೇರೆ ಬೇರೆ ವಸ್ತುಗಳು ಒಂದೇ ಸ್ಥಾನ ಆಕ್ರಮಿಸಿದಾಗ ಪೇಪರನ್ನು ೯೦° ಗೆ ತಿರುಗಿಸಿ ದ್ರಾವಕವನ್ನು ಹರಿಸುವದರಿಂದ ಅದನ್ನು ಬೇರೆ ಬೇರೆ ಮಾಡಬಹುದು (ಚಿತ್ರ ೨). ಈ ಸುಲಭ ವಿಧಾನದಿಂದ ಕೆಲಸಲ ೧೬ರಷ್ಟು ಬೇರೆ ಬೇರೆ ಪದಾರ್ಥಗಳನ್ನೊಳಗೊಂಡ ಮಿಶ್ರಣಗಳನ್ನು ವಿಶ್ಲೇಷಿಸಬಹುದು.

ಇನ್ನೊಂದು ವಿಧಾನಕ್ಕೆ ಅಣು ವಿನಿಮಯ ವರ್ಣಲೇಖನ (ion exchange chromatography) ಎಂದು ಹೆಸರು. ಇದರಲ್ಲಿ ವಿದ್ಯುತ್ ಧ್ರುವಗಳನ್ನು ಹೊತ್ತ ಅಣುಗಳನ್ನು ಬೇರೆ ಬೇರೆ ಅಂಟುವಂಥ ಪದಾರ್ಥಗಳೊಡನೆ ಸಂಯೋಜನೆಗೊಳಿಸಿ ವಿಂಗಡಿಸುತ್ತಾರೆ.

ಹೀರುವಸ್ತುವಿನ ಸ್ಥಾನದಲ್ಲಿ ಇಂದು ಬೇರೆ ಬೇರೆ ವಾಯು, ದ್ರವ ಹಾಗೂ ಘನ ಪದಾರ್ಥಗಳೆಲ್ಲವನ್ನೂ ಉಪಯೋಗಿಸುತ್ತಾರೆ.

ಪೇಪರ್ ವಿಧಾನದಲ್ಲಿ ದ್ರಾವಣ ಹರಿಯುವ ದಿಕ್ಕಿಗೆ ೯೦° ಕೋನದಲ್ಲಿ ವಿದ್ಯುತ್ತನ್ನು ಹರಿಯಿಸುವದರಿಂದ ಇನ್ನೂ ನಿಖರವಾಗಿ ವಿಶ್ಲೇಷಣೆ ಸಾಧ್ಯ. ಇದಕ್ಕೆ 'ವಿದ್ಯುದ್ವಿಶ್ಲೇಷಣೆ' (Electrophoresis) ಎಂದು ಹೆಸರು. ಅತ್ಯಂತ ಕ್ಲಿಷ್ಟವಾದ ಜೀವರಸಾಯನ ಶಾಸ್ತ್ರದ ಪ್ರಯೋಗಗಳಲ್ಲದೆ ಕೆಲವೊಂದು ಪ್ರಕಾರದ ರೋಗಗಳನ್ನು (metabolic diseases) ಗುರುತಿಸಲು ಈ ವಿಧಾನ ಅತೀ ಮುಖ್ಯ. ಕೆಲ ರೋಗಗಳನ್ನು ಬೇರಾವ ರೀತಿಯಿಂದಲೂ ನಿಖರವಾಗಿ ಪತ್ತೆ ಹಚ್ಚುವದು ಅಸಾಧ್ಯ.

ಆಧುನಿಕ ಜೀವರಸಾಯನ ಹಾಗೂ ವೈದ್ಯ ವಿಜ್ಞಾನಕ್ಕೆ ಕ್ರೊಮಾಟೋಗ್ರಫಿ ಇತ್ತ ಕೊಡುಗೆ ಅಪಾರ. ಮಾನವ ಶರೀರದಲ್ಲಿರುವ ರಾಸಾಯನಿಕಗಳ ಸಂಖ್ಯೆ ಅಗಣಿತ. ಆದರೂ ಪ್ರತಿಯೊಂದೂ ವಿಶಿಷ್ಟವಾದುದು. ವಿಶಿಷ್ಟ



(ಚಿ. ೨) ಆರು ವಸ್ತುಗಳ ಮಿಶ್ರಣವನ್ನು ಬೇರ್ಪಡಿಸುವ ಪೇಪರ್ ಕ್ರೊಮಾಟೋಗ್ರಫಿ

I ಮೊದಲನೇ ದ್ರಾವಕ ತಾನು ಹರಿಯುವ ದಿಕ್ಕಿನಲ್ಲಿ ಮಿಶ್ರಣದ ಬೇರೆ ಬೇರೆ ವಸ್ತುಗಳನ್ನು ಬೇರ್ಪಡಿಸಿ ಎಳೆದೊಯ್ಯುತ್ತಿದೆ.

II ಅಪೂರ್ಣ ವಿಂಗಡಣೆ. ಪದಾರ್ಥಗಳು C ಮತ್ತು D ಒಂದೇ ಸ್ಥಾನವನ್ನು ಆಕ್ರಮಿಸಿದುದನ್ನು ಗಮನಿಸಿ.

III ಎರಡನೇ ದ್ರಾವಕ ಹರಿಯುವದರ ದಿಕ್ಕು ಮೊದಲನೇ ದ್ರಾವಕದ ದಿಕ್ಕಿಗೆ 90° ಗಳಷ್ಟು. C ಮತ್ತು D ನಿಧಾನವಾಗಿ ಎರಡನೇ ದ್ರಾವಕದಿಂದ ಬೇರ್ಪಡಿಸಲ್ಪಡುವುದನ್ನು ಗಮನಿಸಿ.

IV ಬೇರೆ ಬೇರೆಯಾದ ಎಲ್ಲ ಪದಾರ್ಥಗಳೂ ತಮ್ಮ ತಮ್ಮ ವಿಶಿಷ್ಟ ಸ್ಥಾನದಲ್ಲಿವೆ. ಇನ್ನು ಅವುಗಳನ್ನು ಯಾವುದಾದರೂ ವಿಧಾನದಿಂದ (ಅತಿನೇರಳೆ ಅಥವಾ ಎಕ್ಸರೇ ಪರೀಕ್ಷೆ, ಅಥವಾ ವರ್ಣ ಸೂಚಕಗಳು ಮುಂತಾದವುಗಳನ್ನು ಬಳಸಿ) ಗುರುತಿಸುವದು ಸುಲಭ

ಕಾರ್ಯಗಳನ್ನು ನಿರ್ವಹಿಸಲು ಅವಶ್ಯಕವಾದುವು. ಇವುಗಳಲ್ಲಿ ಯಾವುದೊಂದರ ಕೊರತೆಯಾದರೂ ಅಥವಾ ಯಾವುದೊಂದೂ ನಿರ್ದಿಷ್ಟ ಮಿತಿಗಿಂತ ಹೆಚ್ಚಾದರೂ ರೋಗಕ್ಕೆ ಹಾದಿ. ಬಹಳಷ್ಟು ರಾಸಾಯನಿಕಗಳು ಅದರಲ್ಲೂ ರಸದೂತ (Hormones) ಶರೀರದಲ್ಲಿರುವ ಪ್ರಮಾಣ ಬಲು ಚಿಕ್ಕದು (ಕೆಲ ಸಲ ಒಂದು ಮಿಲಿಗ್ರಾಮಿನ ಕೆಲ ಸಹಸ್ರಾಂಶದಷ್ಟು). ಹೀಗಿರುವಾಗ ಅವುಗಳನ್ನು ಗುರುತಿಸಿ ಶರೀರದಲ್ಲಿಯ ಅವುಗಳ ಕಾರ್ಯನಿರ್ವಹಣೆಯ ಅಭ್ಯಾಸ ಅತಿ ಕ್ಲಿಷ್ಟ. ಪರೀಕ್ಷೆಗೆ ದೊರೆಯುವ ಅತ್ಯಲ್ಪ ಪ್ರಮಾಣದ ಪದಾರ್ಥದಲ್ಲೇ ಎಲ್ಲ ಪ್ರಯೋಗಗಳೂ ನಡೆಯಬೇಕು. ಆದರೆ ಪೇಪರ್ ಕ್ರೊಮಾಟೊಗ್ರಫಿ, ಮತ್ತು ವಿದ್ಯುದ್ವಿಶ್ಲೇಷಣ ಪದ್ಧತಿಗಳಿಂದ ಅವುಗಳ ಅಭ್ಯಾಸಕ್ಕೆ ಅನುಕೂಲ.

ಶರೀರದಲ್ಲಿರುವ ಪ್ರೋಟೀನುಗಳನ್ನೆಲ್ಲ ಅಮೈನೋ ಆಸಿಡ್ ಎಂಬ ಮೂಲ ಪದಾರ್ಥಗಳಾಗಿ ವಿಭಜಿಸಬಹುದು. ಮೊದಲು ಕಿಣ್ವಗಳಿಂದ ಪ್ರೋಟೀನ್‌ಗಳನ್ನು ಪಚನಗೊಳಿಸಿ ನಂತರ ಪೇಪರ್ ಅಥವಾ ಅಣು ವಿನಿಮಯ ಪದ್ಧತಿಯಿಂದ ಅವನ್ನೆಲ್ಲ ವಿಶ್ಲೇಷಣೆಗೊಳಿಸಲಾಗಿದೆ.

ಉದಾಹರಣೆಗೆ- ಡಾ. ಸಂಗರ್ ಮೊತ್ತಮೊದಲಿಗೆ ಇನ್ಸುಲಿನ್ ಅನ್ನು ಈ ವಿಧಾನದಿಂದ ಅದರಲ್ಲಿರುವ ಅಮೈನೋ ಆಸಿಡ್‌ಗಳಿಗೆ ಪರಿವರ್ತಿಸಿ ತೋರಿಸಿದ. ಇದರಿಂದ ಎರಡು ವಿಧದ ಅನುಕೂಲ. ಮೊದಲನೆಯದಾಗಿ ಇಂದು ಶರೀರದಲ್ಲಿಯ ಇನ್ಸುಲಿನ್ನಿನ ಕಾರ್ಯನಿರ್ವಹಣೆ ನಮಗೆ ಪರಿಚಿತ. ಜೀವಕೋಶದ ಹೊದಿಕೆಯ ಮೇಲೆ ಪರಿಣಾಮ ಮಾಡುವ ಅದು ಹೆಚ್ಚಿನ ಗ್ಲುಕೋಸ್ ಕೋಶಿಕೆಯೊಳಗೆ ಹೋಗುವಂತೆ ಮಾಡುತ್ತದೆ. ಇದರಿಂದ ಮಧುಮೇಹದಲ್ಲಿ ಇನ್ಸುಲಿನ್ ಕೊರತೆ ನಿರ್ವಹಿಸುವ ಪಾತ್ರ ನಮಗಿಂದು ಗೊತ್ತು.

ಎರಡನೆಯದಾಗಿ ಪ್ರಯೋಗ ಶಾಲೆಯಲ್ಲಿ ಇನ್ಸುಲಿನ್ ತಯಾರಿಸಲು ಪ್ರಯತ್ನಗಳು ನಡೆದಿವೆ. ಸದ್ಯಕ್ಕೆ ಪ್ರಾಣಿಗಳಿಂದ ದೊರಕಿಸುವ ಇನ್ಸುಲಿನ್ ತೀರ ದುಬಾರಿ ಮತ್ತು ವಿಧಾನವೂ ಜಟಿಲ. ಪ್ರಯೋಗಶಾಲೆಯಲ್ಲಿ ಇದನ್ನು ತಯಾರಿಸಲು ಶಕ್ಯವಾದರೆ ಅದು ಕೋಟಿಗಟ್ಟಳೆ ಮಧುಮೇಹಿಗಳಿಗೆ ವರಪ್ರಸಾದ

ಕೆಲಸಲ ಪಿತ್ತಜನಕಾಂಗದಲ್ಲಿಯ ವಿಶಿಷ್ಟ ಕಿಣ್ವ (enzyme) ಗಳ ಕೊರತೆಯಿಂದ ಕೆಲ ಅಮೈನೋ ಆಸಿಡ್‌ಗಳು ಸರಿಯಾಗಿ ಪರಿವರ್ತಿತವಾಗುವುದಿಲ್ಲ. ಆಗ ಅವು ವಿಷವಸ್ತುಗಳಂತೆ ಶರೀರದಲ್ಲಿ ವರ್ತಿಸುವದರಿಂದ ಮಿದುಳಿನ ಬೆಳವಣಿಗೆ ಕುಂಠಿತವಾಗುತ್ತದೆ. ಕ್ರೊಮಾಟೋಗ್ರಫಿ ವಿಧಾನದಿಂದ ಇಂಥ ರೋಗಗಳನ್ನು ಚಿಕ್ಕಂದಿನಲ್ಲೇ ಗುರುತಿಸಿ ಮಗುವಿನ ಆಹಾರದಲ್ಲಿ ಆ ಅಮೈನೋ ಆಸಿಡ್ ಯುಕ್ತ ಪದಾರ್ಥಗಳನ್ನು ಬಿಟ್ಟು ಬಿಡುವದರಿಂದ ಈ ಅಪಾಯವನ್ನು ತಪ್ಪಿಸಬಹುದು.

ಅಡ್ರೆನಲ್ ಗ್ರಂಥಿಗಳ ಸ್ರಾವನೆಯ ಅಭ್ಯಾಸದಲ್ಲೂ ಕ್ರೋಮಾಟೋಗ್ರಫಿ ತುಂಬ ನೆರವಾಗಿವೆ. ಶರೀರದ ಎರಡೂ ಮೂತ್ರಪಿಂಡಗಳ ತಲೆಯ ತುದಿಗಿರುವ, ಚಿಕ್ಕ ನಾಣ್ಯದ ಗಾತ್ರದ, ಹಳದೀ ವರ್ಣದ ಈ ನಿರ್ನಾಳ ಗ್ರಂಥಿಗಳು ಶರೀರದ ದೈನಂದಿನ ವ್ಯಾಪಾರಗಳಿಗೆ ಅಗತ್ಯ. ಈ ಗ್ರಂಥಿಗಳ ಕೇಂದ್ರ ಭಾಗದಿಂದ ಒಸರುವ ಅಡ್ರೆನಾಲಿನ್ ಹೃದಯ ಬಡಿತ ಹಾಗೂ ರಕ್ತದಲ್ಲಿಯ ಸಕ್ಕರೆ ಪ್ರಮಾಣವನ್ನು ನಿಯಂತ್ರಿಸಲು ಸಹಾಯಕ. ಹೊರಗಣ ತೊಗಟೆ (cortex) ಅನೇಕ ರಸದೂತಗಳ ಚಿಲುಮೆ. ಇದು ಶರೀರದಲ್ಲಿಯ ಪ್ರೋಟೀನ್ ಮತ್ತು ಪಿಷ್ಟಗಳ ರಾಸಾಯನಿಕ ಕ್ರಿಯೆಗಳಿಂದ ಹಿಡಿದು ಶರೀರದ ಲವಣ ಮತ್ತು ನೀರಿನ ಪ್ರಮಾಣಗಳನ್ನು ನಿರ್ಧರಿಸುವ ವರೆಗೆ ಅನೇಕ ಮಹತ್ವದ ಕಾರ್ಯಗಳನ್ನು ಮಾಡುತ್ತದೆ.

ಈ ರಸದೂತಗಳ ನಿಯಂತ್ರಣ ಮಿದುಳಿನ ಬುಡದಲ್ಲಿರುವ ಪಿಚ್ಯೂಟರಿ ಎಂಬ ಇನ್ನೊಂದು ನಿರ್ನಾಳಗ್ರಂಥಿಯಿಂದ ಎಂದು ವಿಜ್ಞಾನಿಗಳು ಮೊದಲೇ ಊಹಿಸಿದ್ದರು. ಆದರೆ ನಿಖರವಾದ

ಕಾಲ್ಗೇಟ್ ಡೆಂಟಲ್ ಕ್ರೀಮ್‌ನಿಂದ ಉಸಿರಿನ ದುರ್ವಾಸನೆಯನ್ನು ನಿವಾರಿಸಿರಿ... ದಿನವಿಡೀ ದಂತಕ್ಷಯವನ್ನು ಎದುರಿಸಿರಿ!

ವೈಜ್ಞಾನಿಕ ಪರೀಕ್ಷೆಗಳು ಪ್ರತಿ 10 ಮಂದಿ ಜನರಲ್ಲಿ 7 ಜನರ ಉಸಿರಿನ ದುರ್ಗಂಧವನ್ನು ಕಾಲ್ಗೇಟ್ ಕೂಡಲೇ ನಿಲ್ಲಿಸುತ್ತದೆಂದು ಸಿದ್ಧಗೊಳಿಸಿವೆ. ಏಕೆಂದರೆ : ಕಾಲ್ಗೇಟ್ ಡೆಂಟಲ್ ಕ್ರೀಮ್‌ನಿಂದ ಒಮ್ಮೆ ಹಲ್ಲುಜ್ಜಿದರೆ, ದುರ್ವಾಸನೆ ಮತ್ತು ದಂತಕ್ಷಯವನ್ನು ಉಂಟುಮಾಡುವ ಶೇಕಡಾ 85ರಷ್ಟು ರೋಗಾಣುಗಳ ನಿವಾರಣೆಯಾಗುತ್ತದೆ. ಮಕ್ಕಳಿಗೂ ಅದರ ಪೆಪ್ಪರ್‌ಮಿಂಟ್‌ನ ರುಚಿಯಿಂದ ಆನಂದ.



ಅಧಿಕ ಬಿಳುಪಾದ ಹಲ್ಲುಗಳು, ಆರೋಗ್ಯ [illegible] ಸ್ವಚ್ಛವಾದ ಬಾಯಿ—ಇವುಗಳಿಗಾಗಿ ಕಾಲ್ಗೇಟ್ ಟೂಥ್ ಬ್ರಶ್ ಬಳಸಿರಿ! 16 ಮಾದರಿಗಳಿವೆ—ನಿಮ್ಮ ಕುಟುಂಬದ ಪ್ರತಿಯೊಬ್ಬರಿಗೂ ಅನುಕೂಲ!

ಅಧಿಕ ಶುಚಿಯಾದ, ದುರ್ಗಂಧರಹಿತವಾದ ಉಸಿರಿಗಾಗಿ ಮತ್ತು ಅಧಿಕ ಬಿಳುಪಾದ ಹಲ್ಲುಗಳಿಗಾಗಿ...ಕಾಲ್ಗೇಟನ್ನು ಕೊಳ್ಳಿ

ಕ್ರಿಯಾವಿಧಾನ ಮಾತ್ರ ತಿಳಿದಿರಲಿಲ್ಲ.

ಪಿಟ್ಯೂಟರಿಯು ಅಡ್ರೆನಲ್ ಅಲ್ಲದೆ ಶರೀರದಲ್ಲಿಯ ಇನ್ನೂ ಅನೇಕ ನಿರ್ನಾಳಗ್ರಂಥಿಗಳನ್ನು ವಿಶಿಷ್ಟವಾದ ಬೇರೆ ಬೇರೆ ರೀತಿಯ ರಾಸಾಯನಿಕ ಪ್ರಚೋದಕಗಳನ್ನು (Trophic hormones) ಸ್ರವಿಸಿ ನಿಯಂತ್ರಿಸುತ್ತದೆ. ಇವುಗಳಲ್ಲಿ ACTH ಅಥವಾ "ಅಡ್ರೆನಲ್ ಪ್ರಚೋದಕ ರಸದೂತ" ಎಂಬುದು ಅಡ್ರೆನಲ್ ಗ್ರಂಥಿಯನ್ನು ನಿಯಂತ್ರಿಸುತ್ತದೆ. ಪ್ರಾಣಿಗಳ ಶರೀರದಲ್ಲಿ ಈ ಪ್ರಚೋದಕವನ್ನು ಕೃತಕವಾಗಿ ಸೇರಿಸಿ, ಅಡ್ರೆನಲ್ ಗ್ರಂಥಿಯಿಂದ ಹೊರಹೋಗುವ ರಕ್ತವನ್ನು ತೆಗೆದು ಕ್ರೊಮಾಟೋಗ್ರಫಿಗೊಳಪಡಿಸಿದಾಗ ಅನೇಕ ಹೊಸ ರಸದೂತಗಳನ್ನು ಕಂಡು ಹಿಡಿಯಲಾಯಿತು. ಇವೆಲ್ಲವುಗಳನ್ನೂ ಈಗ ಕೃತಕವಾಗಿ ತಯಾರಿಸಲು ಶಕ್ಯವಾದಾಗಿನಿಂದ ವೈದ್ಯ ಪ್ರಪಂಚದಲ್ಲೇ ದೊಡ್ಡ ಕ್ರಾಂತಿಯಾಗಿದೆ. ಅಸ್ತಮಾದಿಂದ ಹಿಡಿದು ಕ್ಯಾನ್ಸರ್ ವರೆಗೆ ಸಾವಿರಾರು ರೋಗಗಳ ಚಿಕಿತ್ಸೆಯಲ್ಲಿ ಇವುಗಳನ್ನು ಬಳಸಲಾಗಿದೆ.

ಇವಲ್ಲದೇ ಕ್ರೊಮಾಟೋಗ್ರಫಿ ಅನುವಂಶಿಕ ಶಾಸ್ತ್ರದ ಅಭ್ಯಾಸಕ್ಕೂ ನೀಡಿದ ಸಹಾಯ ಅಮೂಲ್ಯ. ಪ್ರತಿ ಜೀವಕೋಶದ ಕೇಂದ್ರದಲ್ಲೂ 'ವರ್ಣದಂಡ' (chromosome) ಎಂಬ ಚಿಕ್ಕ ಚಿಕ್ಕ ದಾರದ ಎಳೆಯಂತಹ ಪದಾರ್ಥಗಳಿರುತ್ತವೆ ಅವು 'ಜನಿಕ' (genes) ಎಂಬ ಕಣಗಳಿಂದ ಉಂಟಾದವು. ಈ ಜನಿಕಗಳು ಅನುವಂಶೀಯತೆಯ ಮೂಲ ರಹಸ್ಯ. ತಾಯಿಕೋಶದ ಗುಣಧರ್ಮಗಳೆಲ್ಲ ಮರಿಕೋಶಕ್ಕೆ ಸಾಗಿಸಲ್ಪಡುವುದು ಈ ಜನಿಕಗಳಿಂದಲೇ. ಇದರಿಂದ ಪ್ರತಿ ಮರಿಕೋಶವೂ ಎಲ್ಲ ವಿಧಗಳಲ್ಲೂ ತನ್ನ ತಾಯಿಯನ್ನು ಹೋಲುವದು.

ರಾಸಾಯನಿಕವಾಗಿ ಈ ಜನಿಕಗಳು ನ್ಯೂಕ್ಲಿಯಿಕ್ ಆಸಿಡ್ ಎಂಬುವು. ಇವುಗಳಲ್ಲಿ DNA ಎಂಬುದು ಒಂದು ವಿಧ. ಈಚಿನ ವರ್ಷಗಳಲ್ಲಿ ಈ DNA ಮಾಶವಾಹಿಸುಯನ್ನು ಕುರಿತು ಅನೇಕ ಪ್ರಯೋಗಗಳು ನಡೆದಿವೆ. ಪ್ರತಿ DNA ಕಣವೂ ಹಗ್ಗದಂತೆ ಎರಡು ಎಳೆಗಳ ಸುರುಳಿಯಿಂದ ಆಗಿದೆ. ಈ ಎಳೆಗಳು ರಾಸಾಯನಿಕವಾಗಿ ಪ್ಯೂರಿನ್ ಮತ್ತು ಪಿರಿಮಿಡಿನ್ ಎಂಬ ಪದಾರ್ಥಗಳು. ಎಷ್ಟೋ ವರ್ಷಗಳ ವರೆಗೆ DNA ಸ್ವರೂಪ ಹಾಗೂ ವರ್ಣದಂಡಗಳಲ್ಲಿ ಅವುಗಳ ಸ್ಥಾನ ಜೀವರಸಾಯನಶಾಸ್ತ್ರಜ್ಞರಿಗೊಂದು ಒಗಟಾಗಿತ್ತು. ಕೊನೆಗೆ ಅಣು ವಿನಿಮಯ ಮತ್ತು ಪೇಪರ್ ಕ್ರೊಮಾಟೋಗ್ರಫಿ ವಿಧಾನಗಳಿಂದ ಅದನ್ನು ಬಿಡಿಸಲಾಯಿತು. (ಈ ಬಗ್ಗೆ ಈಚಿನ ವರ್ಷಗಳಲ್ಲಿ ಅನೇಕರಿಗೆ ೧೯೬೨ ರಲ್ಲಿ ಕ್ರಿಕ್, ವಾಟ್ಸನ್ ಮತ್ತು ವಿಲ್ಕಿನ್ಸ್, ೧೯೪೯ ರಲ್ಲಿ ಆರ್ಥರ್ ಕಾರ್ನಬರ್ಗ್ ಮುಂತಾದವರಿಗೆ ನೋಬೆಲ್ ಪಾರಿತೋಷಕಗಳನ್ನು ಕೊಡಲಾಗಿದೆ. ಖೊರಾನಾಗೆ ಸಿಕ್ಕ ನೋಬೆಲ್ ಬಹುಮಾನ ಕೂಡ ಇದೇ ರಂಗದಲ್ಲಿಯೇ) ಈಗ ಮಾನವನ ಕೋಶದಲ್ಲಿಯ ಎಲ್ಲ ವರ್ಣದಂಡಗಳ ವ್ಯವಸ್ಥೆಯನ್ನು ನಿಖರವಾಗಿ ಗೊತ್ತು ಹಚ್ಚಲಾಗಿದೆ. ಇದರಿಂದ ಅನುವಂಶಿಕತೆ, ಅನುವಂಶಿಕ ರೋಗಗಳೇ ಅಲ್ಲದೆ ಕೆಲ ಮಟ್ಟಿಗೆ ಕ್ಯಾನ್ಸರ್‌ನ ಉತ್ಪತ್ತಿ ಕುರಿತೂ ಎಷ್ಟೋ ಸಮಸ್ಯೆಗಳಿಗೆ ಬೆಳಕು ಚೆಲ್ಲಿದೆ.

ಇವು ಕ್ರೊಮಾಟೋಗ್ರಫಿ ಸಾಧಿಸಿದ ಅನೇಕ ಕಾರ್ಯಗಳಲ್ಲಿ ಕೇವಲ ಕೆಲ ಉದಾಹರಣೆಗಳು ಮಾತ್ರ. ಇಷ್ಟೇ ಅಲ್ಲದೆ ಈಗೀಗ ವೈದ್ಯಕೀಯ ರಂಗದಲ್ಲಿ ಹೆಚ್ಚಾಗಿ ಬಳಕೆಗೊಳ್ಳುತ್ತಿರುವ ರೇಡಿಯೋ ಐಸೋಟೋಪ್‌ಗಳನ್ನು ಕ್ರೊಮಾಟೋಗ್ರಫಿಯೊಡನೆ ಕೂಡಿ ಉಪಯೋಗಿಸತೊಡಗಿದಾಗಿನಿಂದ ಸಾಧಿಸಿದ ಪ್ರಗತಿ ಸಾಮಾನ್ಯನ ಅರಿವಿಗೆ ನಿಲುಕದು.

ಇದು ಕ್ರೊಮಾಟೋಗ್ರಫಿಯ ಕಥೆ. ಸುಲಭವಾದ ಶೋಧ ವಿಧಾನವೊಂದು ಹೇಗೆ ಮಾನವನ ಪ್ರಗತಿಯ ಮುಖ್ಯ ಸೋಪಾನಗಳಲ್ಲಿ ಒಂದಾಗಿ ನಿಲ್ಲಬಹುದೆಂಬುದನ್ನು ತಿಳಿಸುವ ಸುಲಭ ಉದಾಹರಣೆ. ✡

ಕಲಾಕೃತಿಗಳು

ಮೂಲ: ಸ್ಟೀಫಾನ್ ಜ್ವೈಗ್
ಅನುವಾದ: ಶ್ರೀಹರಿವಂಶ

ಡ್ರೆಸ್ಡನ್ನಿನ ನಂತರ ಸಿಗುವ ಮೊದಲನೆ ಜಂಕ್ಷನ್ನಿನಲ್ಲಿ ರೈಲು ನಿಂತಿತು. ಮಧ್ಯ ವಯಸ್ಸಿನ ನಗುಮೊಗದ ವ್ಯಕ್ತಿಯೊಬ್ಬ ನಾನಿದ್ದ ಕಂಪಾರ್ಟ್‌ಮೆಂಟಿನಲ್ಲಿ ಬಂದು ಕುಳಿತ. ಅವನ ಲಕ್ಷ್ಯ ನನ್ನತ್ತ ಹರಿದಾಗ ಆತ ಹಳೆಯ ಗೆಳೆಯನಂತೆ ಮುಗುಳ್ನಕ್ಕ. ಅವನೊಡನೆ ಯಾವುದೇ ಸಂಬಂಧ ಕಲ್ಪಿಸದ ನನಗೆ ಆಶ್ಚರ್ಯವಾಯಿತು. ಆದರೆ ಕೂಡಲೇ ನನ್ನ ಪರಿಸ್ಥಿತಿಯನ್ನರ್ಥಮಾಡಿಕೊಂಡ ಆತ ತನ್ನ ಪರಿಚಯ ಹೇಳಿದ. ಅವನೊಬ್ಬ ಐತಿಹಾಸಿಕ ವಸ್ತುಗಳ ವ್ಯಾಪಾರ ನಡೆಸುತ್ತಿದ್ದ ಬರ್ಲಿನ್ನಿನ ವಿಖ್ಯಾತ ಕಲಾವಿದನಾಗಿದ್ದ. ಮಹಾಯುದ್ಧದ ಮೊದಲು ನಾನು ಕೂಡ ಕೆಲವು ಸಂಗ್ರಹಣೀಯ ವಸ್ತುಗಳನ್ನು ಕೊಂಡುಕೊಂಡಿದ್ದೆ.

ನನ್ನ ಸೀಟಿನ ಪಕ್ಕದಲ್ಲೇ ಬಂದು ಕುಳಿತ ಆತ ಮಾತಿನ ಮಧ್ಯೆ ತನ್ನ ಪ್ರವಾಸದ ಉದ್ದೇಶವನ್ನು ವಿವರಿಸುತ್ತ—

"ಈ ಪ್ರವಾಸ ವ್ಯಾಪಾರದ ದೃಷ್ಟಿಯಲ್ಲಿ ಈವರೆಗೆ ಮಾಡಿದ ಪ್ರವಾಸಗಳಿಗಿಂತ ತೀರ ಭಿನ್ನವಾದದ್ದು..." ಎಂದ. ನಾನು ಉತ್ಸುಕನಾಗಿ ಅವನ ಮಾತುಗಳನ್ನು ಕೇಳುತ್ತ ಕುಳಿತೆ,

"ಹಣದ ಅಪಮೌಲ್ಯವಾದಾಗಿನಿಂದ ನಮ್ಮ ವ್ಯವಸಾಯದಲ್ಲಿ ಅದ್ವಿತೀಯ ಪರಿವರ್ತನೆಯಾಗಿದೆ. ಯುದ್ಧದ ಸಮಯದಲ್ಲಿ ದುರಾಸೆಯಿಂದ ಒಮ್ಮೆಲೇ ಶ್ರೀಮಂತರಾದ ಜನರಿಗೆ ಪುರಾತನ ಮತ್ತು ಐತಿಹಾಸಿಕ ಸಂಗ್ರಹಣೀಯ ವಸ್ತುಗಳಿಂದ ಮನೆಯನ್ನು ಸಿಂಗರಿಸುವದೊಂದು ಹವ್ಯಾಸವಾಗಿ ಬಿಟ್ಟಿದೆ. ನಾನೂ ಸಹ ಇಂತಹ ವಸ್ತುಗಳು ಕ್ರಮೇಣ ಕಾಣೆಯಾಗಬಾರದಲ್ಲ ಎಂದು ಶ್ರಮಿಸುತ್ತಿದ್ದೇವೆ. ಆದರೆ ಈ ಹೊಸ ಶ್ರೀಮಂತರ ಹುಚ್ಚುತನ ಎಷ್ಟು ಮುಂದುವರಿದಿದೆ ಎಂದರೆ ಈ ನನ್ನ ಕೋಟಿನ ಗುಂಡಿಗಳು ಐತಿಹಾಸಿಕ ಕಾಲದವೆಂದರೂ ಹೇಳಿದಷ್ಟು ಕೊಟ್ಟು ಅವರು ಖುಷಿಯಿಂದ ಖರೀದಿಸಿಬಿಡುತ್ತಾರೆ! ಹೀಗಾಗಿ ಪುರಾತನ ಅಮೂಲ್ಯ ವಸ್ತುಗಳೆಲ್ಲ ಒಮ್ಮೆಲೇ ಅಲಭ್ಯವಾಗುತ್ತ ಹೋಗುತ್ತಿವೆ. ನನ್ನ ಸಂಗ್ರಹಾಲಯದಲ್ಲಿ ಉಳಿದಿರುವದು ಕೇವಲ ಕಡಿಮೆ ದರ್ಜೆಯ ವಸ್ತುಗಳೇ.

ಇಂತಹ ಅಲಭ್ಯ, ಅಮೂಲ್ಯ ವಸ್ತುಗಳನ್ನು ಸಂಗ್ರಹಿಸಲು ಮೊದಲಿನಿಂದಲೂ ಉತ್ಸುಕನಾಗಿದ್ದೆ. ನಾನು ಅವುಗಳನ್ನು ದೊರಕಿಸುವ ಉಪಾಯವನ್ನು ಹುಡುಕುತ್ತಿದ್ದೆ ಹೀಗೆಯೇ ಒಂದು ದಿನ ನನ್ನ ಹಳೆಯ ರಜಿಸ್ಟರುಗಳನ್ನೆಲ್ಲ ತಿರುವಿ ಹಾಕುತ್ತಿದ್ದಾಗ ನನ್ನ ಹಳೆಯ ಗ್ರಾಹಕರೊಂದಿಗೇಕೆ ಈ ಸಂಪರ್ಕ ಬೆಳೆಸಬಾರದು ಎಂದು ಯೋಚಿಸಿದೆ. ಯುದ್ಧದ ಈ ವಿಷಮ ಪರಿಸ್ಥಿತಿಯಲ್ಲಿ ಕೆಲವರಿಗೆ ಕಾಯ್ದಿಟ್ಟ ಪುರಾತನ ವಸ್ತುಗಳನ್ನೂ ಮಾರುವ ದಯನೀಯ ಪರಿಸ್ಥಿತಿ ಬಂದಿದೆ. ಕಾಗದ ಪತ್ರಗಳನ್ನೆಲ್ಲ ಶೋಧಿಸಿದಾಗ ನನ್ನಿಂದ ಬಹಳಷ್ಟು ವಸ್ತುಗಳನ್ನು ಖರೀದಿಸಿದ ಗ್ರಾಹಕನೋರ್ವನ

ಪತ್ರ ಸಿಕ್ಕಿತು. ಅವನು ಕೊಂಡ ಪ್ರತ್ಯೇಕ ವಸ್ತುವಿನ ಬೆಲೆಯೂ ಅದರಲ್ಲಿತ್ತು. ಅವನ ಕೊನೆಯ ಪತ್ರ ಇಪ್ಪತ್ತೇಳು ವರ್ಷ ಹಿಂದಿನದಾಗಿತ್ತು. ಅವನ ಮೊದಲಿನ ಪತ್ರದ ಮೇಲೆ ಸುಮಾರು ಅರ್ಧ ಶತಮಾನದ ಹಿಂದಿನ ದಿನಾಂಕವಿತ್ತು. ೧೯೧೪ರ ಬೇಸಿಗೆಯ ನಂತರ ಆತ ಏನನ್ನೂ ಖರೀದಿಸಿರಲಿಲ್ಲ. ಅವನ ಪತ್ರಗಳಿಂದಲೇ ಅವನ ವ್ಯಕ್ತಿತ್ವವನ್ನರಿಯತೊಡಗಿದೆ. ಪತ್ರಗಳ ಕೊನೆಯಲ್ಲಿ ಹಸ್ತಾಕ್ಷರದ ಜೊತೆಗೆ 'ಇನ್‌ಚಾರ್ಜ್ ಫಾರೆಸ್ಟ್ ರೇಂಜರ್,' 'ಎಕಾನಾಮಿಕ್ ಕೌನ್ಸಿಲರ್,' 'ಇನ್‌ಚಾರ್ಜ್ ಲೆಫ್ಟಿನೆಂಟ್' ಮುಂತಾದ ಹುದ್ದೆಯ ವಿವರಣೆಯೂ ಇತ್ತು. ಬಹುಶಃ ಆತ ೧೯೧೪–೧೮ರ ಯುದ್ಧದಲ್ಲಿ ಹೋರಾಡಿರಬೇಕಲ್ಲದೆ, ಈಗ ಸುಮಾರು ಎಂಬತ್ತಕ್ಕೂ ಹೆಚ್ಚು ವಯಸ್ಸಾಗಿರಬೇಕೆಂದುಕೊಂಡೆ. ಆತ ಪ್ರಾಂತೀಯ ನಗರಗಳಲ್ಲಿದ್ದರೂ ತಮ್ಮ ಉತ್ಸಾಹ, ಅಭಿರುಚಿಗಳ ರಕ್ಷಣೆ ಮಾಡಿಕೊಳ್ಳುವ ವ್ಯಕ್ತಿಗಳ ಸಾಲಿಗೆ ಸೇರುತ್ತಿದ್ದ. ನನ್ನ ಸಂಗ್ರಹಾಲಯದಿಂದ ಅವನು ಪುರಾತನ ಚಿತ್ರ, ಲೇಖ ಮತ್ತು ಶಿಲ್ಪದ ಸಾಮಾನುಗಳನ್ನು ಖರೀದಿಸಿದ್ದ. ಆತ ಎಷ್ಟು ಕಡಿಮೆ ಬೆಲೆಗೆ ಇವುಗಳನ್ನೆಲ್ಲ ಕೊಂಡುಕೊಂಡಿದ್ದ ಎಂದರೆ ಈಗ ಅದು ತಮಾಷೆಯ ಮಾತಾಗುತ್ತದೆ. ಆ ವ್ಯಕ್ತಿ ಇನ್ನೂ ಜೀವಿಸಿದ್ದರೆ, ಅಲ್ಲದೆ ಅವನು ಒಪ್ಪಿದರೆ ಅವನ ಸಂಗ್ರಹಾಲಯದಿಂದ ಕೆಲವು ವಸ್ತುಗಳನ್ನು ಕೊಂಡುಕೊಳ್ಳಲು ನಿಶ್ಚಯಿಸಿದೆ. ಒಮ್ಮೆ ಆತ ಬದುಕಿರದಿದ್ದರೂ ಅವನ ಉತ್ತರಾಧಿಕಾರಿಗಳು ಅದನ್ನು ಜೋಪಾನವಾಗಿಟ್ಟಿರಲೇಬೇಕೆಂಬ ಭರವಸೆ ನನಗಿತ್ತು.

ಮರುದಿನ ಬೆಳಿಗ್ಗೆ ಉಪಾಹಾರ ಮುಗಿಸಿ ಹೊರಟೆ. ಚಿಕ್ಕ ಸ್ಟೇಶನ್ ಒಂದರಲ್ಲಿಳಿದು ಊರಿಗೆ ಹೋದಾಗ ನನಗೆ ತುಂಬಾ ನಿರಾಶೆಯಾಯಿತು. ಅಧಿಕಾಂಶ ಮನೆಗಳು ಅತಿ ಹಳೆಯ ರೀತಿಯಲ್ಲಿದ್ದು ಹರುಕು ಮುರುಕಾಗಿದ್ದವು. ಇದರ ಹೊರತಾಗಿ ಆಧುನಿಕ ಜಗತ್ತಿನೊಂದಿಗೆ ಆ ಊರಿನ ಸಂಬಂಧವಿದ್ದಂತೆ ತೋರಲಿಲ್ಲ. ಕೋಪೆಯಲ್ಲಿ ನನ್ನ ಆಸಾಮಿಯನ್ನು ಹುಡುಕುವದರಲ್ಲಿ ಅಸಫಲನಾದ ನಾನು ನಿರಾಶನಾಗಿ ಪೋಸ್ಟ್ ಆಫೀಸಿಗೆ ಹೋದೆ. ಆ ವ್ಯಕ್ತಿ ಇನ್ನೂ ಬದುಕಿದ್ದಾ



ನೋವು ಕಳೆದು ಆತ್ಮಾನಂದವಾಯಿತು. ಅವನ ಮನೆಗೆ ಹೋಗುವ ನೇರವಾದ ದಾರಿಯನ್ನೂ ಅವರು ತಿಳಿಸಿದರು.

*

ಆತ ಮಹಡಿಮನೆಯೊಂದರಲ್ಲಿ ವಾಸಿಸುತ್ತಿದ್ದ. ಮೊದಲನೆಯ ಅಂತಸ್ತಿನಲ್ಲಿ ದರ್ಜಿಯೊಬ್ಬನ ಅಂಗಡಿ. ಎರಡನೆಯ ಅಂತಸ್ತಿನಲ್ಲಿ ಒಂದು ಭಾಗದಲ್ಲಿ ಪೋಸ್ಟ್ ಮ್ಯಾನೇಜರರ ವಾಸ, ಇನ್ನೊಂದು ಭಾಗದಲ್ಲಿ ಈತ. ಹೊರಗಡೆ ಇದ್ದ ಅವನ ನಾಮಫಲಕವನ್ನು ಕಂಡೊಡನೆ ನನ್ನ ಎದೆ ಜೋರಾಗಿ ಹೊಡೆದುಕೊಳ್ಳಲು ಪ್ರಾರಂಭಿಸಿತು. ನಡುಗುವ ಕೈಗಳಿಂದ ಬೆಲ್ ಒತ್ತಿದೆ. ಸ್ವಲ್ಪ ಹೊತ್ತಿನಲ್ಲಿ ಬಿಳಿಗೂದಲಿನ ಮುದುಕಿಯೊಬ್ಬಳು ಹೊರಬಂದಳು. ಸತರ್ಕವಾಗಿ ಅತ್ತಿತ್ತ ನೋಡಿದ ಅವಳು ಸಂದೇಹದ ದೃಷ್ಟಿಯಿಂದ ನನ್ನನ್ನು ಆಪಾದಮಸ್ತಕ ನೋಡಿದಳು. ನಾನು ನನ್ನ ಕಾರ್ಡನ್ನು ಅವಳಿಗೆ ಕೊಟ್ಟೆ. ಅದನ್ನು ನೋಡಿದ ಅವಳು ಇನ್ನಷ್ಟು ವಿವಶಳಾದಂತೆ ಕಂಡಿತು. ತುಸು ಹೊತ್ತು ಕಾಯ್ದಿರಲು ಹೇಳಿ ಒಳಹೋದಳು. ನಾನು ಬಾಗಿಲಿಗೆ ಒರಗಿ ನಿಂತೆ. ಒಳಗಿನಿಂದ ಕೇಳಿಬರುವ ಪಿಸುಮಾತಿನಿಂದ ನನ್ನ ಕುತೂಹಲ ಕೆರಳಿತು. ಅಷ್ಟರಲ್ಲಿ ಆತ್ಮೀಯವಾದ ಗಂಭೀರ ಧ್ವನಿಯೊಂದು ನನ್ನನ್ನು ಚೇತರಿಸಿತು.

"ಓಹ್! ಹರ್ ರೈಕ್ನರ್ ಬರ್ಲಿನ್ನಿನಿಂದ ಇಲ್ಲಿಗೆ ಬಂದಿದ್ದಾರೆಯೆ! ಐತಿಹಾಸಿಕ ವಸ್ತುಗಳ ಪ್ರಸಿದ್ಧ ವ್ಯಾಪಾರಿಯಲ್ಲವೇ ನೀನು ಹೇಳುವದು? ಅವರ ಆಗಮನ ನನ್ನ ಪುಣ್ಯ. ಕೂಡಲೇ ಒಳಗೆ ಕಳಿಸು."

ತನ್ನ ಜೀವನದ ಎಷ್ಟೋ ವರ್ಷಗಳನ್ನು ಸವೆಸಿದ್ದ ಅವನ ಕೋಣೆಯನ್ನು ನೋಡಿದ ನಾನು ದಂಗಾದೆ. ಅದೊಂದು ಅವ್ಯವಸ್ಥೆಯ ಅತಿಪ್ರಾಚೀನ ಕೋಣೆ. ಅದರ ಪ್ಲಾಸ್ಟರ್ ಎಷ್ಟೋ ಕಡೆ ಕಿತ್ತುಹೋಗಿತ್ತು. ಇದನ್ನೆಲ್ಲ ನೋಡುತ್ತ ಮುಂದೆ ದೃಷ್ಟಿಹರಿಸಿದಾಗ ಎತ್ತರ ನಿಲುವಿನ ಮುದುಕನೊಬ್ಬ ಕೋಣೆಯ ಮಧ್ಯೆ ನಿಂತಿದ್ದ. ದಪ್ಪವಾದ ಮೀಸೆ, ದಟ್ಟವಾಗಿ ಬೆಳೆದ ಗಡ್ಡ ಅವನ ಮುಖ ಮುಚ್ಚಿದ್ದವು. ಸೈನಿಕರು ತೊಡುವಂತಹ ಒಂದು ತರದ ಜಾಕೀಟು ಧರಿಸಿದ ಆತ ಸಹೃದಯತೆಯಿಂದ ನನ್ನತ್ತ ಕೈನೀಡಿದ. ಅವರ ಸ್ವಾಗತಕ್ಕೆ ಹಾತೊರೆಯುತ್ತಿರುವ ಈತ ಒಂದು ಹೆಜ್ಜೆ ಕೂಡ ಮುಂದೆ ಬರಬೇಡವೇ? ನನಗೆ ಆಶ್ಚರ್ಯವಾಯಿತು. ನಾನು ಮುಂದರಿದು ಅತಿ ಸಮೀಪಕ್ಕೆ ಹೋಗಿ ನಿಂತರೂ ಆತ ಕೈ-ಕುಲುಕಲಿಲ್ಲ! ಈಗ ನನ್ನ ಅನುಮಾನ ದೃಢವಾಯಿತು. ಆದ್ದರಿಂದ ನಾನೇ ಕೈಚಾಚಿ ಹಸ್ತಲಾಘವದಿಂದ ನನ್ನ ಉಪಸ್ಥಿತಿಯನ್ನು ಸೂಚಿಸಿದೆ.

ನನಗೆ ಚಿಕ್ಕಂದಿನಿಂದಲೂ ಕುರುಡರೆಂದರೆ ಜಿಗುಪ್ಸೆ. ಅವರ ಬಿಳುಪು, ಸ್ಥಿರವಾದ ಕಣ್ಣುಗೊಂಬೆಗಳನ್ನು ನೋಡಿದಾಗ ಅಸಹ್ಯವೆನಿಸುತ್ತಿತ್ತು. ಆದರೆ ಬೇಸರಕ್ಕೆ ಎಡೆಗೊಡದ ಈ ಕುರುಡು ಮನುಷ್ಯನನ್ನು ನಾನು ಹೊಗಳಲೇಬೇಕು. ಹಾರ್ದಿಕ ಸ್ವಾಗತ ಬಯಸುತ್ತ ಹರ್ಷಚಿತ್ತನಾದ ಆತ.

"ಇಂದಿನ ದಿನವನ್ನು ಏನೆಂದು ಹೇಳಲಿ! ಬರ್ಲಿನ್ನಿನ ಪ್ರಮುಖ ವ್ಯಕ್ತಿಯೊಬ್ಬ ಇಲ್ಲಿಗೆ ದಯಮಾಡಿಸಿರುವುದು ನಿಜವಾಗಿಯೂ ಒಂದು ಅಪೂರ್ವ ಘಟನೆಯೇ!"

ತಿಳಿಹಾಸ್ಯ ಬೆರೆಸಿ ಆತ ಮತ್ತೆ ಹೇಳಿದ.

"ನಾವು ಒಳನಾಡಿನ ನಗರವಾಸಿಗಳು ಎಚ್ಚರಿಕೆಯಿಂದಲೇ ಇರಬೇಕಾಗುತ್ತದೆ. ಏಕೆಂದರೆ ತಮ್ಮಂತಹ ಸುಪ್ರಸಿದ್ಧ ವ್ಯಾಪಾರಿಗಳು ಇಂತಹ ಸ್ಥಳಕ್ಕೆ ಅಕಾರಣವಾಗಿ ಎಂದೂ ಬರುವದಿಲ್ಲ. ನಮ್ಮಲ್ಲಿ ಒಂದು ಗಾದೆಯಿದೆ. 'ಜಿಪ್ಸಿ ಬಂದರೆ ಜೇಬು ಮುಚ್ಚು, ಬಾಗಿಲು ಹಾಕು!' ಎಂದು. ಬಹುಶಃ ನೀವು ಇಲ್ಲಿಗೆ ಯಾವುದೋ ವ್ಯವಹಾರದ ನಿಮಿತ್ತ ಬಂದಿರಬೇಕು. ಹಾಗಿದ್ದಲ್ಲಿ ನಿಮಗೆ ನಿರಾಶೆಯೇ ಕಾದಿದೆ ಎನ್ನಬಹುದು. ಏಕೆಂದರೆ ನಾನೀಗ ಪೆನ್ಷನ್ ಯುಗಕ್ಕೆ ಬಂದು ಮುಟ್ಟಿದ್ದೇನೆ. ತಿನ್ನಲು ತುಂಡು ರೊಟ್ಟಿ ಸಿಕ್ಕರೆ ಅದೇ ಧಾರಾಳವಾಗಿದೆ ನನಗೆ!"

ಅವನ ಮುಖ ನಿಸ್ತೇಜವಾಯಿತು. "ನಾನು

ವ್ಯವಹಾರದ ನಿಮಿತ್ತ ಬಂದವನಲ್ಲ. ನಿಜಸ್ಥಿತಿಯೆಂದರೆ ಈ ದಾರಿಯಲ್ಲಿ ಹೋಗುವಾಗ ಇಂತಹ ಪ್ರತಿಷ್ಠಿತ ಸಂಗ್ರಾಹಕನನ್ನು ಸಂಧಿಸುವ ಸಂದರ್ಭವನ್ನು ಕಳೆದುಕೊಳ್ಳಬಾರದೆಂದು ಬಂದೆ ಅಷ್ಟೇ." ಎಂದು ತಿಳಿಸಿ ಸಮಾಧಾನ ಪಡಿಸಿದೆ. ಖಿನ್ನಗೊಂಡ ಆತನ ಮುಖ ಸ್ವಲ್ಪ ಅರಳಿತು. ಸಂತೋಷ ಮತ್ತು ಹೆಮ್ಮೆಯಿಂದ ಹೆಂಡತಿಯತ್ತ ತಿರುಗಿ-

"ಹರ್ ರೈಕ್ನರ್ ಮಹಾಶಯರ ಮಾತುಗಳನ್ನು ಕೇಳಿದೆಯಾ?" ಎಂದ ನಂತರ ಪುನಃ ನನ್ನ ಕಡೆ ತಿರುಗಿ, "ನಾನು ನಿಮಗೆ ತುಂಬಾ ಆಭಾರಿಯಾಗಿದ್ದೇನೆ. ಈ ಮಾರ್ಗದಲ್ಲಿ ಹೋಗುತ್ತಿದ್ದ ನಿಮಗೆ ಇಲ್ಲಿಗೆ ದಯಮಾಡಿಸುವ ಮನಸ್ಸಾದದ್ದು ನನ್ನ ಪುಣ್ಯವೇ ಎನ್ನಬೇಕು. ಇಷ್ಟು ಪುರಾತನ ಪರಿಚಯದವರನ್ನು ಯಾರು ತಾನೇ ಈ ಬಗೆ ನೆನಪಿಟ್ಟುಕೊಂಡಾರು? ಅದೂ ಒಬ್ಬ ಗ್ರಾಹಕನನ್ನು! ಒಳ್ಳೆಯದು. ನೀವು ಬಂದೇಬಿಟ್ಟಿದ್ದೀರಿ. ನಿಮ್ಮಂತಹ ಸಹೃದಯರಿಗೆ ಬರ್ಲಿನ್, ಅಲ್ಬರ್ಟಿನಾ, ವಿಯನ್ನಾ, ಮತ್ತು ಪ್ಯಾರಿಸ್‌ಗಳಲ್ಲೂ ದೊರೆಯದಂತಹ ಅಮೂಲ್ಯವಾದ ವಸ್ತುಗಳನ್ನು ತೋರಿಸುತ್ತೇನೆ." ಎನ್ನುತ್ತ ಆವೇಶದಿಂದ, "ಲಿಸ್ ಬೆಥ್, ಸ್ವಲ್ಪ ಡ್ರಾಯರಿನ ಕೀಲಿಕೈ ಕೊಡು" ಎಂದು ಪತ್ನಿಯನ್ನು ಕೇಳಿದ. ಅವಳು ಅವನ ಭುಜವನ್ನು ನೇವರಿಸುತ್ತ,

"ಪ್ರಿಯ ಫ್ರಾಂಜ್, ಬರ್ಲಿನ್ನಿನಿಂದ ಇಷ್ಟು ದೂರ ಬಂದ ಇವರಿಗೆ ಬೇರೆ ಕೆಲವರನ್ನೂ ಭೇಟಿಯಾಗುವ ಇಚ್ಛೆ ಇರಬಹುದು. ಅಲ್ಲದೆ ಇದು ಊಟದ ವೇಳೆ ಎಂಬುದನ್ನೂ ಮರೆತುಬಿಟ್ಟಿರಾ?" ಎಂದಳು. ಪುನಃ ನನ್ನತ್ತ ನೋಡಿ—

"ಕ್ಷಮಿಸಿ ರೈಕ್ನರ್ ಮಹಾಶಯರೇ, ಅನಿರೀಕ್ಷಿತವಾಗಿ ಬಂದ ಅತಿಥಿಗಳಿಗೆ...ಆಹಾರದ ಅಭಾವದಿಂದಾಗಿ ತಾವು ಯಾವುದಾದರೊಂದು ಉತ್ತಮ ಹೋಟೆಲಲ್ಲಿ ಊಟ ತೀರಿಸಬೇಕೆಂದು ನನ್ನ ಆಸೆ. ನಂತರ ತಾವು ಇಷ್ಟಪಟ್ಟರೆ ಸಂತೋಷದಿಂದ ಒಂದು ಕಪ್ ಕಾಫಿಯನ್ನು ಕೊಡಬಲ್ಲೆ. ಆಗ ನನ್ನ ಮಗಳು ಅನ್ನಾ ಮಾರಿಯಾ ಕೂಡ ಇರುತ್ತಾಳೆ. ಅವಳಿಗೆ ಫ್ರಾಂಜ್‌ ಸಂಗ್ರಹಗಳ ಸಂಪೂರ್ಣ ಪರಿಚಯವಿದೆ." ಎಂದಾಗ ಅವಳು ಆ ಸಮಯದಲ್ಲಿ ನನಗೆ ಏನನ್ನೂ ತೋರಿಸ ಬಯಸುವುದಿಲ್ಲವೆನ್ನುವುದು ಮನದಟ್ಟಾಯಿತು. ಪರಿಸ್ಥಿತಿಗನುಗುಣವಾಗಿ ಸಹಜತೆಯನ್ನು ಪ್ರಕಟಿಸುತ್ತ—

"ನಿಜ ನಿಜ ನನಗೀಗ ಗೋಲ್ಡನ್ ಸ್ಟ್ಯಾಗ್‌ದಲ್ಲಿ ಊಟ ಮಾಡಬೇಕಾಗಿದೆ. ಮೂರು ಗಂಟೆಗೆ ಇಲ್ಲಿಗೆ ಬರಲು ಸಾಧ್ಯವಾಗಬಹುದು. ನಂತರವೇ ಕ್ರೀನ್‌ಫೀಲ್ಡರ ಅವರ್ಣನೀಯ ಸಂಗ್ರಹಗಳನ್ನು ನೋಡಲು ಅವಕಾಶವಾಗುತ್ತದೆ." ಎಂದೆ.

ಮಕ್ಕಳ ಕೈಯಿಂದ ಆಟಿಗೆಯನ್ನು ಕಸಿದುಕೊಂಡಂತಾಯಿತು ಫ್ರಾಂಜ್‌ನಿಗೆ. ಆತ ಭಾವೋದ್ರಿಕ್ತನಾಗಿ ಹೇಳಿದ.

"ತಮ್ಮ ಉಳಿದ ಎಲ್ಲಾ ಕೆಲಸಗಳಿಂದ ಮುಕ್ತರಾಗಿಯೇ ನಿಶ್ಚಿಂತೆಯಿಂದ ಇಲ್ಲಿಗೆ ಬನ್ನಿ. ನನ್ನ ಬಳಿ ಇರುವುದು ಕೇವಲ ಮೂರು, ನಾಲ್ಕು ವಸ್ತುಗಳಲ್ಲ. ತಾವು ನೋಡಬಯಸಿದರೆ ನನ್ನ ಬಳಿ ಚಿತ್ರಗಳದೇ ಮೂವತ್ತೇಳು ಸಂಗ್ರಹಗಳಿವೆ! ಅವೆಲ್ಲವೂ ಮಹಾ ಮಹಾ ಕಲಾವಿದರ ಕೃತಿಗಳು."

ನಾನು ಹೊರಡಲನುವಾದೆ. ಅವನ ಪತ್ನಿ ನನ್ನೊಡನೆ ಹೊರಗೆ ಬಂದು ಪಿಸುಗುಟ್ಟಿದಳು.

"ನನ್ನ ಪುತ್ರಿ ಮಾರಿಯಾ ತಮ್ಮನ್ನು ಭೇಟಿಯಾಗಲು ಹೋಟೆಲ್ಲಿಗೆ ಬಂದರೆ ತಮಗೇನಾದರೂ ತೊಂದರೆಯಾಗಬಹುದೇ? ಅನೇಕ ಕಾರಣಗಳಿಂದಾಗಿ ಇದು ಅತ್ಯಾವಶ್ಯವಾಗಿದೆ ಈಗ ಹೆಚ್ಚೇನೂ ಹೇಳಲಾರೆ."

"ಸಂತೋಷ. ಅವಶ್ಯವಾಗಿ ಕಳಿಸಿ," ಎಂದು ಹೇಳಿ ಹೊರಟೆ.

ಊಟ ಮುಗಿಸಿ ರೂಮಿನಲ್ಲಿ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದೆ. ಅಷ್ಟರಲ್ಲಿ ಅನ್ನಾ ಮಾರಿಯಾ ಬಂದಳು. ಮಧ್ಯ ವಯಸ್ಸಿನ ಆ ಯುವತಿಯ ಉಡುಪಿನಿಂದಲೇ ಅವರ ಆರ್ಥಿಕ ಸ್ಥಿತಿ ತಿಳಿಯುವಂತಿತ್ತು. ಅವಳು ನನ್ನನ್ನು

ಗುರುತಿಸಿ ನಮಸ್ಕರಿಸಿದಳು. "ನಾನು ನಿಮ್ಮೊಡನೆ ಹೋಗಲು ಸಿದ್ಧವಾಗಿದ್ದೇನೆ." ಎಂದೆ ಗಂಭೀರವಾಗಿ. ತಕ್ಷಣ ಅವಳಿಗೆ ಮಾತು ಪ್ರಾರಂಭಿಸಲು ಸಾಧ್ಯವಾಗಲಿಲ್ಲ. ಅವಳ ತುಟಿ ಮತ್ತು ಕೈಗಳು ನಡುಗುತ್ತಿದ್ದವು. ವಿಸ್ಮಯದಿಂದ ನಾನು ಅವಳನ್ನೇ ನೋಡುತ್ತ ಕುಳಿತೆ. ಅಷ್ಟರಲ್ಲಿ ಸ್ವಲ್ಪ ಸಾವರಿಸಿಕೊಂಡ ಅವಳು—

"ತಾಯಿ ನನ್ನನ್ನು ಕಳಿಸಿದ್ದಾಳೆ..ಮತ್ತೆ.. ತಾವು ಬಯಸಿದರೆ ಈಗಲೇ ಹೊರಡಬಹುದು.. ನಿಮಗೆ ತಮ್ಮ ಸಂಗ್ರಹಗಳನ್ನು ತೋರಿಸಲು ನಮ್ಮ ತಂದೆಯವರು ಬಹಳ ಉತ್ಸುಕರಾಗಿದ್ದಾರೆ... ಅಲ್ಲದೇ...ಸಂಗ್ರಹ... ಹಾಂ... ಸಂಗ್ರಹ...ಆದರೆ ಅವುಗಳಲ್ಲಿ ತೋರಿಸಲು ಯೋಗ್ಯವಾದವು ಬಹಳ ಕಡಿಮೆ ." ಎಂದಾಗ ಅವಳ ಮುಖ ನಿಸ್ತೇಜವಾಯಿತು. ತನ್ನೊಳಗಿನಲ್ಲಿ ಮುಳುಗಿ ಹೊರತೆಗೆದವಳಂತೆ ತೇಕತೊಡಗಿದಳು ಮಾರಿಯಾ. ಅವಳ ಶರೀರ ಕಂಪಿಸುತ್ತಿತ್ತು. ನಡುಗುವ ಧ್ವನಿಯಲ್ಲಿ ಮತ್ತೆ ಹೇಳಿದಳು—

"ಈಗ ನಾವು ಅತಿ ಕಷ್ಟದಲ್ಲಿ ದಿನ ನೂಕುತ್ತಿದ್ದೇವೆ...ಯುದ್ಧ ಆರಂಭವಾದ ಕೆಲವೇ ದಿನಗಳಲ್ಲಿ ತಂದೆಯವರ ಕಣ್ಣುಗಳು ತೀರ ಅಸಮರ್ಥವಾದವು. ಬಹುಶಃ ಯುದ್ಧದಿಂದ ಉತ್ಪನ್ನವಾದ ಉನ್ಮಾದವೇ ಇದಕ್ಕೆ ಕಾರಣ. ಅವರೀಗ ತಮ್ಮ ವಯಸ್ಸಿನ ಎಪ್ಪತ್ತನೇ ವರ್ಷವನ್ನು ಕಳೆಯುತ್ತಿದ್ದಾರೆ. ಆದಾಗ್ಯೂ ಹಿಂದಿನ ಯುದ್ಧದಲ್ಲಿ ತೋರಿಸಿದ ತಮ್ಮ ಶೌರ್ಯವನ್ನು ಸ್ಮರಿಸುತ್ತ ಈ ಯುದ್ಧದಲ್ಲೂ ಸೇರಲು ಉತ್ಸುಕರಾಗಿದ್ದರು. ಆದರೆ ಈ ಅವಸ್ಥೆಯಲ್ಲಿ ಅವರ ಸೇವೆ ಸಫಲವಾಗುವದು ಸಾಧ್ಯವಿರಲಿಲ್ಲ. ಮುನ್ನುಗ್ಗುತ್ತಿದ್ದ ನಮ್ಮ ಸೈನ್ಯವನ್ನು ಅಷ್ಟಿಗೆ ತಡೆದದ್ದೇ ಅವರ ಮೇಲೆ ತುಂಬಾ ದುಷ್ಪರಿಣಾಮ ಮಾಡಿತು. ಗಂಭೀರ ಚಿಂತೆ ಮತ್ತು ದುಃಖದ ಪರಿಣಾಮದಿಂದ ಅವರು ಅಂಧರಾಗಬಹುದೆಂದಿದ್ದರು ಡಾಕ್ಟರ್. ಅದು ನಿಜವಾಯಿತು. ಅವರು ಆಘಾತ ಒಡನೆ ಅವರ ಸಮಸ್ತ ಆಕರ್ಷಣವೂ ತಮ್ಮ ಸಂಗ್ರಹಗಳಲ್ಲಿಯೇ ಸೀಮಿತವಾಗಿದೆ ಪ್ರತಿದಿನವೂ ಸಂಗ್ರಹಗಳನ್ನು ತಿರುವಿಹಾಕುವುದು ಅವರ ನಿಯಮ. ಮಧ್ಯಾಹ್ನದ ನಂತರ ಅವುಗಳನ್ನು ತಮ್ಮ ಮುಂದೆ ಮೇಜಿನ ಮೇಲಿಟ್ಟುಕೊಂಡು ಪ್ರತಿಯೊಂದು ಪುಟದ ಮೇಲೂ ಬೆರಳಿಟ್ಟು ಚಿತ್ರವನ್ನು ಊಹಿಸುತ್ತಾರೆ. ಈಗ ಇವರ ಹೊರತಾಗಿ ಅವರಿಗೆ ಜೀವನದಲ್ಲಿ ಯಾವ ಸುಖವೂ ಇಲ್ಲ.

"ಅವರಿಗೆ ಮುದ್ರಣ ಮತ್ತು ಪ್ರಕಾಶನದ ವಿಷಯದಲ್ಲಿ ತಿಳುವಳಿಕೆ ಕಡಿಮೆ. ಅವರ ತಿಂಗಳಿನ ಪೆನ್ಶನ್ನಲ್ಲಿ ನಾವು ಒಂದು ದಿನವನ್ನೂ ನೂಕಲಾರೆವು. ನನ್ನ ಸಹೋದರಿಯ ಪತಿಯೂ ಯುದ್ಧದಲ್ಲಿ ಮಡಿದದ್ದರಿಂದ ಅವರ ನಾಲ್ವರು ಮಕ್ಕಳನ್ನೂ ನಾವೇ ನೋಡಿಕೊಳ್ಳಬೇಕಾಗಿದೆ. ಆದರೆ ಈ ಕಷ್ಟಗಳನ್ನೆಲ್ಲ ನಾವು ಅವರಿಗೆ ಸ್ವಲ್ಪವೂ ತಿಳಿಸುವುದಿಲ್ಲ. ಸಾಧ್ಯವಿರುವ ವರೆಗೆ ನಾವು ಮಿತವ್ಯಯದಿಂದಲೇ ಸಾಗಿದೆವು. ಆದರೆ ಇಷ್ಟರಲ್ಲಿಯೇ ನಮ್ಮೆಲ್ಲರ ಜೀವನ ಸಾಗುವದಾದರೂ ಹೇಗೆ? ಆದ್ದರಿಂದ ಮೊದಮೊದಲು ಮನೆಯಲ್ಲಿಯ ಅನವಶ್ಯಕ ವಸ್ತುಗಳನ್ನೆಲ್ಲ ಮಾರುತ್ತ ಬಂದೆವು. ನಂತರ...ಅವರ ಪ್ರೀತಿಯ ಸಂಗ್ರಹಗಳನ್ನೂ ಮಾರಲೇಬೇಕಾದ ಪರಿಸ್ಥಿತಿ ಬಂದಿತು. ಈ ವಿಷಯ ಅವರಿಗೆ ಅರಿವಾಗದಂತೆ ಸಾಕಷ್ಟು ಎಚ್ಚರವಹಿಸಿದೆವಲ್ಲದೇ ಜರ್ಮನಿಯ ಪರಾಭವದ ವಿಷಯದಲ್ಲಿಯೂ ಅವರಿಗೆ ನಾವು ಏನನ್ನೂ ತಿಳಿಸಲಿಲ್ಲ.

ನಾವು ಮಾರಿದ ಮೊದಲವಸ್ತು ಧಾತುವಿನಲ್ಲಿ ಕೆತ್ತಿದ ಒಂದು ಅಪರೂಪದ ಚಿತ್ರ. ನಮಗೆ ದೊರಕಿದ್ದು ಸಾವಿರ ಮಾರ್ಕ್‌ಗಳು. ಅದರಿಂದ ಹಲವು ದಿನಗಳನ್ನು ನಿರಾಯಾಸವಾಗಿ ನೂಕಬಹುದು ಎಂದು ಆಶಿಸಿದ್ದೆವು. ಆದರೆ ಸಾವಿರದ ಒಂಬೈನೂರಾ ಇಪ್ಪತ್ತೆರಡು, ಇಪ್ಪತ್ಮೂರರಲ್ಲಿ ಹಣ ಎಷ್ಟು ಸುಲಭವಾಗಿ ಕರಗಿ ಹೋಗುತ್ತಿತ್ತೆನ್ನುವದು ತಮಗೆ ನೆನಪಿರಬಹುದು. ಹೀಗಾಗಿ ನಮ್ಮ ಆಸೆ ವ್ಯರ್ಥವಾಯಿತು. ವಿವಶರಾದ ನಾವು ಅತ್ಯಂತ

ಕಲಾತ್ಮಕ ಚಿತ್ರಗಳನ್ನೂ ಮಾರಬೇಕಾಯಿತು. ಇವುಗಳಿಂದ ನಮಗೆ ದೊರೆತ ಹಣ ಸಾಮಾನುಗಳ ಬೆಲೆಯ ಮಿತಿಮೀರಿದ ಏರಿಕೆಯಿಂದಾಗಿ ನೀರಿನಂತೆ ಕರಗಿ ಹೋಗುತ್ತಿತ್ತು. ಮುದ್ರಣ, ಪ್ರಚಾರಗಳಿಂದಾಗಿ ನಮ್ಮ ಸಂಗ್ರಹಗಳ ಬೆಲೆಯೂ ದಿನದಿನಕ್ಕೆ ಇಳಿಯುತ್ತ ಹೋಯಿತು. ಹೀಗಾಗಿ ಅದರ ನಿಜವಾದ ಬೆಲೆಯಲ್ಲಿ ಹತ್ತರ ಒಂದು ಪಾಲೂ ದೊರೆಯದಿದ್ದುದು ನಮ್ಮ ದುರ್ದೈವ.

"ತಾವು ಇಲ್ಲಿಗೆ ಬಂದ ಕಾರಣ ತಿಳಿದೊಡನೆಯೇ ನನ್ನ ತಾಯಿ ಗಾಬರಿಯಾದಳು. ನೀವು ಸಂಗ್ರಹಗಳ ಆಲ್ಬಮ್ ನೋಡಿದೊಡನೆಯೇ ನಮ್ಮ ಕೈವಾಡ ಬಯಲಾಗುತ್ತದೆ. ಪ್ರತಿಯೊಂದು ಚಿತ್ರವನ್ನೂ ಅವರು ಈಗಲೂ ಚೆನ್ನಾಗಿ ಗುರುತಿಸಬಲ್ಲರು. ಆದ್ದರಿಂದಲೇ ನಾವು ಅಲ್ಲಿಂದ ಚಿತ್ರವನ್ನು ತೆಗೆದೊಡನೆಯೇ ಅದೇ ಅಳತೆಯ ಕಾಗದದ ತುಂಡೊಂದನ್ನು ಅಲ್ಲಿ ಸೇರಿಸುತ್ತೇವೆ. ಇದರಿಂದ ಅವರಿಗೆ ಸಂಶಯಬರಲೂ ಸಾಧ್ಯವಿಲ್ಲ. ಅವರು ಈಗಲೂ ಪ್ರತಿಯೊಂದು ಚಿತ್ರದ ನಿರ್ದಿಷ್ಟ ಸ್ಥಾನದಲ್ಲಿಯೂ ಬೆರಳಿಟ್ಟು ಕಣ್ಣುಗಳಿಂದ ನೋಡಿದಷ್ಟೇ ಆನಂದ ಪಡುತ್ತಾರೆ. ತಮ್ಮ ಈ ಅಮೂಲ್ಯ ಚಿತ್ರಗಳನ್ನು ನೋಡುವ, ಅರ್ಥ ಮಾಡಿಕೊಳ್ಳುವ ಯೋಗ್ಯತೆ ಯಾರಿಗೂ ಇಲ್ಲ ಎಂದು ಅವರು ದೃಢವಾಗಿ ನಂಬಿದ್ದಾರೆ. ಅದ ಕಾರಣ ಈ ವರೆಗೆ ಯಾರಿಗೂ ತಮ್ಮ ಕೃತಿಗಳನ್ನು ತೋರಿಸಿಲ್ಲ."

ಅನ್ನಾ ಮಾರಿಯಾಳ ಧ್ವನಿ ಕ್ಷೀಣವಾಯಿತು, ಖಿನ್ನಳಾಗಿ ಪುನಃ ಹೇಳಿದಳು.

"...ತಾವು ದಯವಿಟ್ಟು ಅವರ ಈ ವಿಶ್ವಾಸದ ಮೇಲೆ ಆಘಾತವುಂಟುಮಾಡಬಾರದು... ಈ ಹಾನಿಯನ್ನು ಅವರಿಗೆ ಯಾವ ರೀತಿಯಿಂದಲೂ ಸಹಿಸಲು ಸಾಧ್ಯವಿಲ್ಲ... ನಿಜವಾಗಿಯೂ ನಾವು ಅವರಿಗೆ ಬಹುದೊಡ್ಡ ದ್ರೋಹ ಮಾಡಿದ್ದೇವೆ. ಆದರೆ ಇದರ ಹೊರತಾಗಿ ನಾವು ಇನ್ನೇನು ತಾನೇ ಮಾಡಲು ಸಾಧ್ಯವಿತ್ತು? ಒಂದೆಡೆ ಅನಾಥ ಕೈಗೂಸುಗಳು. ಇನ್ನೊಂದೆಡೆ ಐತಿಹಾಸಿಕ ಕಾಲದ ಕಲಾಕೃತಿಗಳು!

ಈಗಲಾದರೂ ಚಿತ್ರಗಳನ್ನು ತಡವುತ್ತ ಗಂಟೆಗಟ್ಟಲೆ ಕಳೆಯುತ್ತಾರೆ. ಈ ಕಾಲ್ಪನಿಕ ಚಿತ್ರಗಳಿಂದ ಅವರ ಮೋಹ ಸ್ವಲ್ಪವೂ ಕಡಿಮೆಯಾಗಿಲ್ಲ. ನನಗೆ ತಿಳಿದಂತೆ ಅವರು ಅಂಧರಾದ ಮೇಲೆ–ಅದೇಕೆ, ಜೀವನದಲ್ಲಿಯೇ ಇಷ್ಟು ಭಾವೋನ್ಮಾದಗೊಂಡಿದ್ದು ಇದೇ ಮೊದಲಬಾರಿ. ತಮ್ಮ ಅಪೂರ್ವ ಕಲಾಕೃತಿಗಳನ್ನು ಯೋಗ್ಯತೆಯುಳ್ಳವರಿಗೇ ತೋರಿಸಬಯಸುತ್ತಿರುವ ಅವರು ಒಂದು ಯುಗದಿಂದಲೂ ಅಶಾಂತಿ, ನಿರಾಶೆಯಿಂದ ಜೀವಿಸುತ್ತಿದ್ದಾರೆ..."

ಅವಳ ಮುಖದಲ್ಲಿ ಕಾತರತೆ ಮೂಡಿತು. ಯಾಚನೆಯ ಸ್ವರದಲ್ಲಿ ಅವಳು ಹೇಳಿದಳು

"ನಾನು ತಮ್ಮಲ್ಲಿ ಬೇಡಿಕೊಳ್ಳುವುದಿಷ್ಟೇ. ದಯವಿಟ್ಟು ನಮ್ಮ ಈ ಮೋಸವನ್ನು ಬಯಲುಮಾಡಿ ಅವರ ಪ್ರಾಣ ಕಳೆಯಬೇಡಿ."

ನಾನು ದೀರ್ಘ ನಿಟ್ಟುಸಿರೊಂದನ್ನು ಬಿಟ್ಟೆ. ನನ್ನ ವ್ಯವಸಾಯಿಕ ಜೀವನದಲ್ಲಿ ಅನೇಕ ಏರಿಳಿತಗಳನ್ನು, ವಿಚಿತ್ರ ಪರಿಸ್ಥಿತಿಯನ್ನು ಕಂಡಿದ್ದೇನೆ. ಆದರೆ ಹೃದಯ ಇಷ್ಟು ದ್ರವಿಸಿರಲಿಲ್ಲ. ಅಂತಹ ಹೃದಯಸ್ಪರ್ಶಿ ದೃಶ್ಯ ನನ್ನ ಜೀವನಯಾತ್ರೆಯಲ್ಲಿ ಮೊದಲ ಬಾರಿ ಘಟಿಸಿತು! ಇಬ್ಬರೂ ಹೋಟೆಲಿನಿಂದ ಹೊರಟೆವು. ಎಷ್ಟು ಕಡಿಮೆ ಬೆಲೆಗೆ ಅವರು ತಮ್ಮ ಅಪೂರ್ವ ಕಲಾಕೃತಿಗಳನ್ನು ಬೀಸಾಡುತ್ತಿದ್ದರು ಎಂಬುದನ್ನು ಯೋಚಿಸಿದಾಗ ಬಹಳ ಖೇದವಾಯಿತು. ಕ್ರೋನ್‌ಫೀಲ್ಡ್ ಮಹಾಶಯರ ಸಂಗ್ರಹಗಳ ಮೌಲ್ಯ ನನಗೆ ತಿಳಿದಿತ್ತು. ಅವರ ದಯನೀಯ ಸ್ಥಿತಿಯನ್ನು ನೋಡಿ ಅವರಿಗೆ ಕೈಲಾದಷ್ಟು ಸಹಾಯ ಮಾಡಬೇಕೆಂದು ನಿಶ್ಚಯಿಸಿದೆ.

ಮೆಟ್ಟಿಲುಗಳನ್ನೇರಿ ಬಾಗಿಲಬಳಿ ಹೋಗುತ್ತಿದ್ದಂತೆಯೇ ಪ್ರಸನ್ನತೆ ಮತ್ತು ಭಾವಾತಿರೇಕದ ಸ್ವರ ಕೇಳಿಸಿತು.

"ಬನ್ನಿ ಬನ್ನಿ, ತಮ್ಮದೇ ದಾರಿ ನೋಡುತ್ತಿದ್ದೇನೆ!" ಆವೇಶಗೊಂಡ ಮುದುಕ ಬಡಬಡಿಸಿದ.

"ಊಟದನಂತರ ಅವರು ಒಂದು ಲೋಟ ಕಾಫಿ ಕುಡಿಯುತ್ತಿದರು. ಆದರೆ ಉತ್ತೇಜನದ ಕಾರಣ ಈ ದಿನ ವಿಶ್ರಾಂತಿ ಕೂಡ ತೆಗೆದುಕೊಳ್ಳಲಿಲ್ಲ!" ಎಂದು ಮುಗುಳ್ನಗುತ್ತ ಆತನ ಮುದಿ ಹೆಂಡತಿ ನಮ್ಮನ್ನು ಸ್ವಾಗತಿಸಿದಳು. ಅಲ್ಲದೇ, 'ಎಲ್ಲ ಸರಿಯಾಗಿದೆ ತಾನೆ?' ಎಂಬ ದೃಷ್ಟಿಯಿಂದ ಮಗಳ ಮುಖ ನೋಡಿದಳು. ಮೇಜಿನಮೇಲೆ ಕಲಾಕೃತಿಗಳ ಆಲ್ಬಮ್‌ಗಳು ಹರಿದಿದ್ದವು. ವೃದ್ಧ ಫ್ರಾಂಜ್ ಅನುಮಾನದಿಂದ ನನ್ನ ಕೈಹಿಡಿದು ನನಗಾಗಿ ಮೊದಲೇ ಇರಿಸಿದ ಖುರ್ಚಿಯ ಮೇಲೆ ಕೂಡ್ರಿಸಿದ.

"ಬನ್ನಿ, ಕೂಡಲೇ ನಾವು ಕಲಾಕೃತಿಗಳನ್ನು ನೋಡಲು ಪ್ರಾರಂಭಿಸೋಣ. ಏಕೆಂದರೆ ಅವುಗಳ ಸಂಖ್ಯೆ ಬಹಳಷ್ಟಿದೆಯಲ್ಲದೆ ತಮಗೆ ವೇಳೆಯ ಅಭಾವವೂ ಇದೆ."

ಆತ ಒಂದು ದಪ್ಪ ಆಲ್ಬಮ್ ಎತ್ತಿಕೊಂಡ.

"ನೋಡಿ, ಮೊದಲು ಡ್ಯೂರರ್‌ನಿಂದ ಪ್ರಾರಂಭವಾಗುತ್ತದೆ. ಈ ಸೆಟ್ ಪರಿಪೂರ್ಣವಾಗಿದೆ. ಎಪೋಕ್ಯಾಲಿಪ್ಸ್‌ನ ಕಲಾಕೃತಿಗಳೆಲ್ಲ ಕ್ರಮವಾಗಿ ಇಲ್ಲಿವೆ."

ಸಂಯಮದಿಂದ ಕೋಮಲವಾಗಿ ಪುಟ ತಿರುವತೊಡಗಿದ. ಖಾಲಿಯಾದ ದಪ್ಪ ಫಟ್ಟೊಂದರ ಮೇಲೆ ಬೆರಳಾಡಿಸುತ್ತ ಚಿತ್ರವನ್ನು ಗುರುತಿಸುವ ಪ್ರಯತ್ನ ಮಾಡಿದ. ಆವೇಶದಿಂದ ನಡುಗುತ್ತಿರುವ ಕೈ, ಉತ್ಸಾಹಭರಿತ ಮುಖದಿಂದ ಆತನೊಬ್ಬ ಕುರುಡನೆಂದು ನಂಬುವದೇ ಅಸಾಧ್ಯವಾಗಿತ್ತು. ಆತ ಹೇಳಿದ-

"ಚಿತ್ರಕಲೆಯ ಇತಿಹಾಸದಲ್ಲೇ ಇದಕ್ಕಿಂತ ಉತ್ತಮವಾದುದನ್ನು ನೀವು ಬೇರೆಲ್ಲಾದರೂ ನೋಡಿದ್ದೀರಾ? ಈ ಚಿತ್ರ ಅದೆಷ್ಟು ಭಾವಪೂರ್ಣವಾಗಿದೆ! ಅತಿ ಸೂಕ್ಷ್ಮ ಸಂಗತಿಗಳೂ ಸಹ ಎಷ್ಟು ಅಂದವಾಗಿ, ಪರಿಪೂರ್ಣವಾಗಿ ಮೂಡಿವೆ! ಇದೊಂದೇಯೇನು, ಇಂತಹ ಚಿತ್ರಗಳ ದೊಡ್ಡ ಸಂಗ್ರಹವೇ ಇದೆ ನನ್ನ ಬಳಿ!"

ಆತ ಪುಟ ತಿರುವಿದ. ಅಲ್ಲದೇ ಹಿಂದಿನ ಚಿತ್ರದ ವಿವರಣೆಯನ್ನು ಓದಲು ಒತ್ತಾಯಿಸಿದ. ಆ ಅಮೂಲ್ಯ, ಅಸ್ತಿತ್ವಹೀನ ಚಿತ್ರದ ವಿವರಣೆಯನ್ನು ಓದಲು ಪ್ರಾರಂಭಿಸಿದೆ. ಆತ ಉತ್ಸಾಹದಿಂದ ಹೇಳುತ್ತಿದ್ದ-

"ನಾವೀಗ ನೋಡುತ್ತಿದ್ದ ಕಲಾಕೃತಿಗಳು, ರೋಮಿ, ಇಸ್ರೇಲ್ ನಂತಹ ಮಹಾನ್ ಕಲಾಕಾರರ ಬಹು ಅಮೂಲ್ಯ ಕೃತಿಗಳು. ಇವೆಲ್ಲ ಈ ಪುಟ್ಟ ಕೋಣೆಯಲ್ಲಿ ಸೇರಬಹುದೆಂದು ಬಹುಶಃ ನನ್ನ ಪೂರ್ವಜರು ಯೋಚಿಸಿಯೂ ಇರಲಿಲ್ಲ!" ಅವನ ಅತ್ಯುತ್ಸಾಹದಿಂದ ಉಚ್ಛ್ವಸಿತನಾಗಿ ಚಿತ್ರಗಳ ಜಾಗದಲ್ಲಿ ಸೇರಿಸಿಟ್ಟ ಖಾಲಿ ಕಾಗದಗಳನ್ನು ನೋಡುತ್ತ ಕುಳಿತೆ. ತನ್ನ ಬೆರಳುಗಳನ್ನಾಡಿಸಿ ಶ್ರೇಷ್ಠ ಕೃತಿಗಳ ವಿವರಣೆ ಕೊಡುತ್ತಿದ್ದಾಗ ನಡುಗುವ ಅವನ ಬೆರಳಡಿಯಲ್ಲಿ ವಿಖ್ಯಾತ ಕಲಾವಿದರ ಆತ್ಮ ಚಡಪಡಿಸುತ್ತಿರುವಂತೆ ಭಾಸವಾಗುತ್ತಿತ್ತು.

ಆಕಸ್ಮಿಕವಾಗಿ ನನ್ನ ದೃಷ್ಟಿ ಭಯವಿಹ್ವಲರಾದ ಕ್ರೋನ್‌ಫೀಲ್ಡನ ಹೆಂಡತಿ, ಪುತ್ರಿಯರ ಮೇಲೆ ಬಿತ್ತು. ಅವರು ದಯನೀಯ ಮುದ್ರೆಯಲ್ಲಿ ಉಸಿರು ಬಿಗಿಹಿಡಿದು ನನ್ನತ್ತಲೇ ನೋಡುತ್ತಿದ್ದರು. ಅವರ ಅಳಲನ್ನು ಅರ್ಥಮಾಡಿಕೊಂಡು ನನ್ನ ಕರ್ತವ್ಯವನ್ನು ಜ್ಞಾಪಿಸಿಕೊಂಡೆ. ಕೃತಕ ಉತ್ಸಾಹದಿಂದ, "ಏ॥ ಕ್ರೋನ್ ಫೀಲ್ಡ್, ನಿಜವಾಗಿಯೂ ನಿಮ್ಮ ಸಂಗ್ರಹ ಅದ್ಭುತ ಮತ್ತು ಅತ್ಯಮೂಲ್ಯ!" ಎಂದು ಉದ್ಗರಿಸಿದೆ.

ನನ್ನ ಉದ್ಗಾರದಿಂದ ಇನ್ನಷ್ಟು ಉಬ್ಬಿಹೋದ ಆತ ಕೈಯಾಡಿಸುತ್ತ ಹೇಳಿದ-
"ಮಹಾಶಯರೇ, ನೀವು ಈವರೆಗೆ ನೋಡಿದ್ದು ಏನೂ ಅಲ್ಲ. ಜಗತ್ಪ್ರಸಿದ್ಧವಾದ 'ಉದಾಸಿ,' 'ವಾಸನಾ' ಎರಡು ಚಿತ್ರಗಳನ್ನು ನೋಡಿದರೆ ನಿಜವಾಗಿಯೂ ನೀವು ಹುಚ್ಚರಾಗುತ್ತೀರಿ. ಈ ಎರಡು ಚಿತ್ರಗಳನ್ನು ಬರ್ಲಿನ್ನಿನ ಐತಿಹಾಸಿಕ ಸಂಸ್ಥಾನದ ಕ್ಯೂರೇಟರ್ ಮತ್ತು ನಿಮ್ಮ ಪ್ರತಿಸ್ಪರ್ಧಿಗಳು ನೋಡಿದರೆ ಅಸೂಯೆಯಿಂದ ಸುಟ್ಟು ಬೂದಿಯಾಗುತ್ತಾರೆ!"

ಒಂದೇ ಸವನೆ ಆಲ್ಬಮ್ ತಿರುವಿ

ಹಾಕುತ್ತ ನಡೆದ ಕ್ರೋನ್‌ಫೀಲ್ಡ್. ಚಿತ್ರಗಳನ್ನು ಪ್ರಶಂಸಿಸುತ್ತ ಗುಣಾವಗುಣಗಳನ್ನು ವಿವರಿಸುತ್ತಿದ್ದ ಅವನ ಮುಖದಲ್ಲಿ ಉಲ್ಲಾಸ ತುಂಬಿ ತುಳುಕುತ್ತಿತ್ತು. ಎರಡು ಮೂರು ತಾಸಿನ ಈ ದೀರ್ಘ ಬೈಠಕ್ಕಿನಲ್ಲಿ ಕೇವಲ ಒಂದೇ ಒಂದು ಬಾರಿ ಅವನ ಮುಖದಲ್ಲಿ ನಿರಾಶೆಯ ಮೋಡ ಕವಿಯಿತು. ರೆಂಬ್ರಾಂಟ್ ಕಲಾಕೃತಿ 'ಎಂಟೋಪ್'ದ ಮೇಲೆ ಬೆರಳಾಡಿಸಿದಾಗ ಖಾಲೀ ಕಾಗದ ಕೈಗೆ ಬಂತು! ಏನೋ ಅನುಮಾನದಿಂದ ಸೂಕ್ಷ್ಮವಾಗಿ ಬೆರಳಾಡಿಸುತ್ತ ತನ್ನ ದೃಷ್ಟಿಹೀನ ಕಣ್ಣುಗಳನ್ನು ನನ್ನತ್ತ ತಿರುಗಿಸಿದ. "ಇದು ರೆಂಬ್ರಾಂಟ್‌ನ ಎಂಟೋಪ್ ಹೌದೇ?" ಈ ಕಲಾಕೃತಿಯ ಪ್ರತಿ ಎಳೆ ಎಳೆಯನ್ನೂ ಚೆನ್ನಾಗಿ ಅರಿತಿದ್ದ ಅವನಿಗೆ ಇದು ತಾನು ಕೊಂಡ ಕೃತಿಯಲ್ಲವೆಂದರಿಯಲು ಹೆಚ್ಚು ಸಮಯ ಬೇಕಾಗಲಿಲ್ಲ. ಈ ಕೃತಿ ಎಲ್ಲೋ ಪ್ರಕಟಗೊಂಡಿದ್ದನ್ನು ನಾನು ನೋಡಿದ್ದೆ. ನಿಜವಾಗಿಯೂ ಅದೊಂದು ಅಸಾಮಾನ್ಯ ಕೃತಿಯಾಗಿತ್ತು.

ಈ ಖಾಲೀ ಪೇಜನ್ನು ಹಿಡಿದುಕೊಂಡು ಫ್ರಾಂಜ್ ನನ್ನ ಕಡೆ ತಿರುಗಿ ನಿರಾಶೆಯಿಂದ ನೋಡುತ್ತಿದ್ದ. ಪರಿಸ್ಥಿತಿಯನ್ನರಿತ ನಾನು ತಕ್ಷಣ ಹೇಳಿದೆ. "ಹೌದು ಇದು ರೆಂಬ್ರಾಂಟ್‌ನ ಅದ್ವಿತೀಯ ಕಲಾಕೃತಿ ಎಂಟೋಪ್." ಹಿಂದೊಮ್ಮೆ ನೋಡಿದ್ದನ್ನು ಜ್ಞಾಪಿಸಿಕೊಳ್ಳುತ್ತ ಅದರ ಗುಣಗಳನ್ನು ವರ್ಣಿಸಿದಾಗ ಅವನ ಅನುಮಾನ ತುಸು ದೂರವಾಗಿ ಪ್ರಸನ್ನತೆ ಮೂಡಿತು. ಆವೇಶದಿಂದ ಹೆಂಡತಿಯ ಕಡೆ ತಿರುಗಿ ಹೇಳಿದ– "ನೋಡಿದಿರಾ? ಜಗತ್ತಿನ ಸರ್ವಶ್ರೇಷ್ಠ ಕಲಾಕೃತಿಗಳ ಗುಣಾವಗುಣಗಳನ್ನು ಎಷ್ಟು ಸೂಕ್ಷ್ಮವಾಗಿ ಅಳೆಯಬಲ್ಲ ಮಹಾಶಯರಿವರು! ಇವುಗಳಿಗಾಗಿ ಅನಾವಶ್ಯಕ ವ್ಯಯ ಮಾಡಿದ್ದೇನೆಂದು ದಿನವೂ ನೀವು ಕಿರಿಕಿರಿ ಮಾಡುತ್ತೀರಲ್ಲಾ, ಆದರೆ ನಾನು ಕೇಳುತ್ತೇನೆ– ಇದಕ್ಕಾಗಿ ಅರ್ಧ ಶತಮಾನದಿಂದ ಬೀರ್, ಶರಾಬು, ತಂಬಾಕು, ಥಿಯೇಟರು ಮಂತು, ನನ್ನ ಮೆಚ್ಚಿನ ಪ್ರವಾಸಗಳನ್ನು ಸಹ ನಾನು ತ್ಯಜಿಸಿಲ್ಲವೇ? ನಾನು ಸತ್ತ ಮೇಲೆ ನೀವು ಇವುಗಳ ಸಹಾಯದಿಂದ ಈ ನಗರದ ಧನಾಢ್ಯ ಸ್ತ್ರೀಯರಾಗಬಲ್ಲಿರಿ. ಆಗಲೇ ನಿಮಗೆ ನನ್ನ ಪರಿಶ್ರಮದ ಬೆಲೆಯು ಅರಿವಾದೀತು! ಆಗ ಸತ್ಯವಾಗಿಯೂ ನೀವು ನನಗೆ ಧನ್ಯವಾದ ಹೇಳುತ್ತೀರಿ, ನನ್ನ ಆತ್ಮಕ್ಕೆ ಶಾಂತಿ ಕೋರುತ್ತೀರಿ! ಆಗ ರೈಕ್ನರ್ ಮಹಾಶಯರು ನಿಮ್ಮ ಮುಂದೆ ಕುಳಿತು ನನ್ನ ಶ್ರೇಷ್ಠ ಕೃತ್ಯವನ್ನು ಬಾಯ್ತುಂಬ ಹೊಗಳುತ್ತಾರೆ. ನಾನು ಬದುಕಿರುವವರೆಗೆ ಸ್ವಲ್ಪ ಸಹನೆಯಿಂದಿರಿ. ನಾ ಸತ್ತ ಮೇಲೆ ನಿಮಗೆ ನನ್ನ ಪೆನ್‌ಶನ್ ಸಿಗುವುದಿಲ್ಲ. ಆದರೆ ಆಗ ಈ ಅಮೂಲ್ಯ ಕೃತಿಗಳನ್ನೆಲ್ಲ ರೈಕ್ನರ್ ಮಹಾಶಯರು ತಾವೇ ಸ್ವತಃ ಕೊಂಡುಕೊಳ್ಳುತ್ತಾರೆ. ಅಥವಾ ಇನ್ನೊಬ್ಬ ವ್ಯಾಪಾರಿಗೆ ಪರಮಾವಧಿ ಬೆಲೆಗೆ ಮಾರಿಸುತ್ತಾರೆ." ಅವನ ಉದ್ಗಾರದ ಒರಟು ಬೆರಳುಗಳು ನಡುಗುತ್ತಾ ಬಿಳಿ ಹಾಳೆಗಳ ಮೇಲೆ ಓಡಾಡುತ್ತಿದ್ದವು. ನಾನು ನನ್ನ ಜೀವಮಾನದಲ್ಲೇ ಇಷ್ಟೊಂದು ಉತ್ಸಾಹದ ಯಾವ ಜರ್ಮನ್‌-ನನ್ನೂ ನೋಡಿರಲಿಲ್ಲ; ಖಾಲೀ ಕಾಗದಗಳನ್ನೇ ಕಲಾಕೃತಿಗಳೆಂದು ನಂಬಿಸಿ ಈ ಜಂಥ ವೃದ್ಧನನ್ನು ಇಷ್ಟೊಂದು ಉದ್ವಿಗ್ನಗೊಳಿಸಿದ ಅವನ ಹೆಂಡತಿ, ಮಗಳ ಕಣ್ಣುಗಳಿಂದ ಧಾರಾಕಾರವಾಗಿ ನೀರು ಹರಿಯುತ್ತಿತ್ತು. ಕಡೆಗೊಮ್ಮೆ ಕಲಾಕೃತಿಗಳ ಚರಮಗೀತೆ ಹಾಡುತ್ತಿದ್ದ ಖಾಲಿ ಕಾಗದಗಳ ಆಲ್ಬಮ್‌ಗಳನ್ನು ಆತ ಮುಚ್ಚಿದ. ಅವುಗಳನ್ನು ಓಟಾರಿಯಲ್ಲಿ ಭದ್ರವಾಗಿಸಿ ಕಾಫಿ ಕುಡಿಯಲು ಟೇಬಲ್ ಸ್ವಚ್ಛಗೊಳಿಸತೊಡಗಿದಾಗ ನಾನು ಸಮಾಧಾನದ ನಿಟ್ಟುಸಿರು ಬಿಟ್ಟೆ.

ವೃದ್ಧ ಕ್ರೋನ್‌ಫೀಲ್ಡ್ ಬಹಳ ದಣಿದಿರಬೇಕೆಂದು ಭಾವಿಸಿದ್ದೆ. ಆದರೆ ನನ್ನೆಣಿಕೆ ತಪ್ಪಾಗಿತ್ತು. ತಾನು ಇಷ್ಟೊಂದು ಕಲಾಕೃತಿಗಳನ್ನು ಅಲ್ಲಿ ಕೂಡಿಹಾಕಿದ ಸಾಹಸದ ಕತೆಯನ್ನು ಆತ ಇನ್ನಷ್ಟು ಉತ್ಸಾಹದಿಂದ ಹೇಳಲು ಪ್ರಾರಂಭಿಸಿದ. ಅವನ ಪತ್ನಿ, ಪುತ್ರಿ

ಬಾರು ಕೊನೆಗೆ ನಾನು ಸಹ ಇನ್ನು ತಡ ಮಾಡಿದರೆ ಗಾಡಿ ತಪ್ಪುವ ಸಂಭವವನ್ನು ವ್ಯಕ್ತಪಡಿಸಿದಾಗ ಒಮ್ಮೆಲೇ ಅವನ ಮುಖದಲ್ಲಿ ನಿರಾಶೆಯು ಮೋಡ ಕವಿಯಿತು.

ನಾನು ಹೊರಡಲು ಸಿದ್ಧನಾದಾಗ ಆತ ಭಾವಾತಿರೇಕದಿಂದ ನನ್ನ ಕೈಗಳನ್ನು ಹಿಸುಕುತ್ತ ಆಭಾರ ವ್ಯಕ್ತಪಡಿಸುತ್ತ ಹೇಳಿದ- "ನನ್ನ ಕೊನೆಯ ದಿನಗಳಲ್ಲಿ ನನ್ನ ಇಡೀ ಜೀವನದ ಮಹತ್ಸಾಧನೆಯನ್ನು, ಯಾರ ಬಾಯಿಂದ ಪ್ರಶಂಸೆಯ ಒಂದೇ ಒಂದು ಶಬ್ದವನ್ನು ಕೇಳುತ್ತಲೇ ದೊಡ್ಡ ದೊಡ್ಡ ಲಕ್ಷಾಧೀಶರು ನಾಮುಂದು ತಾಮುಂದು ಎಂದು ಖರೀದಿಸುವರೋ- ಅಂಥ ಒಬ್ಬ ಸಮರ್ಥ ವ್ಯಕ್ತಿಗೆ ತೋರಿಸಿ ಕೃತಾರ್ಥನಾದೆ!" ಒಮ್ಮಿಂದೊಮ್ಮೆಲೇ ಆತನ ಭಾವಾವೇಶ ದ್ವಿಗುಣವಾಯಿತು. ನನ್ನೆರಡೂ ಕೈಗಳನ್ನು ಕಂಪಿಸುವ ತನ್ನ ಬಿಸಿ ಕೈಗಳಿಂದ ಹಿಡಿದುಕೊಂಡು- "ನನ್ನ ಮರಣದ ನಂತರ ನನ್ನ ಈ ಅಮೂಲ್ಯ ಸಂಗ್ರಹಗಳನ್ನೆಲ್ಲ ಒಬ್ಬ ಶ್ರೇಷ್ಠ ಶ್ರೀಮಂತ ವ್ಯಕ್ತಿಗೆ ಮಾರಿಕೊಡುತ್ತೇವೆಂದು ನೀವು ಈಗಲೇ ನನಗೆ ವಚನ ಕೊಡಬೇಕು," ಎಂದಾಗ ನನ್ನ ದುಃಖದ ಒಡ್ಡು ಒಡೆಯಿತು. ವೃದ್ಧನನ್ನು ತಬ್ಬಿಕೊಂಡು ಸ್ನೇಹ ಹಾಗೂ ವಿಶ್ವಾಸ ವ್ಯಕ್ತಪಡಿಸುವಾಗ ನನ್ನ ಕಣ್ಣುಗಳು ಸಜಲವಾಗಿದ್ದವು. ಅನ್ನಾ ಮಾರಿಯಾ ಹಾಗೂ ಅವಳ ತಾಯಿ ಬಾಗಿಲವರೆಗೆ ಬಂದು ನೀರು ತುಂಬಿದ ಕಣ್ಣುಗಳಿಂದ ನನ್ನನ್ನು ಬೀಳ್ಕೊಟ್ಟರು.

ವ್ಯಾಪಾರಕ್ಕಾಗಿ ಬಂದ ನನ್ನ ಉದ್ದೇಶವೆಲ್ಲಿ! ದುಃಖ, ನಿರಾಶೆ, ಬಡತನ, ಭಾವಾವೇಶಗಳ ಈ ವಿಚಿತ್ರ ಜಾಲವೆಲ್ಲಿ! ಸುಳ್ಳು ಹೇಳಿ ವೃದ್ಧನೊಬ್ಬನಿಗೆ ಮೋಸಮಾಡಿದ ಪಶ್ಚಾತ್ತಾಪಕ್ಕಿಂತ ಹೆಚ್ಚಾಗಿ ಅವನ ನಂಬಿಗೆಯ ಭದ್ರ ಗೋಡೆಯನ್ನು ಕೊನೆಗಾಲದಲ್ಲಿ ಬೀಳಗೊಡಲಿಲ್ಲವಲ್ಲಾ ಎಂಬ ಸಮಾಧಾನ ನನಗಿತ್ತು! ನನ್ನೊಂದಿಗೆ ತನ್ನ ಸಂಗ್ರಹಗಳ ವಿಚಾರ ವಿಮರ್ಶೆ ನಡೆಸಿದ್ದು ಅವನಿಗೆ ಅಪೂರ್ವ ಆನಂದವನ್ನುಂಟುಮಾಡಿತ್ತು.

ನಾನು ಬೀದಿಯನ್ನು ದಾಟುತ್ತಿದ್ದಂತೆ ನನ್ನ ಹೆಸರು ಹಿಡಿದು ಅರಚುವುದನ್ನು ಕೇಳಿದಾಗ ನಾನು ತಿರುಗಿ ನೋಡಿದೆ. ಉಲ್ಲಾಸದ ಕಡಲಿನಲ್ಲಿ ತೇಲುತ್ತಿದ್ದ ವೃದ್ಧ ಫ್ರಾಂಜ್ ನಾನು ಹೋದ ಮಾರ್ಗವನ್ನು ಊಹಿಸಿ ಕೂಗಿ ಕರೆಯುತ್ತಿದ್ದ. ಅವನು ಕಿಡಕಿಯು ಹೊರಗೆ ಎಷ್ಟು ಬಾಗಿದ್ದನೆಂದರೆ ಆತ ಬೀಳಬಹುದೆಂಬ ಹೆದರಿಕೆಯಿಂದ ಪತ್ನಿ ಹಾಗೂ ಪುತ್ರಿ ಅವನ ಎರಡೂ ತೋಳುಗಳನ್ನು ಹಿಡಿದುಕೊಂಡಿದ್ದರು! ಆತ ಆತ್ಮಾನಂದದಿಂದ ಕಿಟಕಿಯ ಹೊರಗೆ ಕರವಸ್ತ್ರ ಬೀಸುತ್ತ ಕೂಗುತ್ತಿದ್ದ- "ಹೆರ್ ರೈಕ್ನರ್, ನಿಮ್ಮ ಪ್ರಯಾಣ ಸುಖಕರವಾಗಲಿ!" ಅಕ್ಕಪಕ್ಕದ ಜನರು ಅವನ ಈ ವಿಚಿತ್ರ ಹುಚ್ಚಾಟವನ್ನು ಆಶ್ಚರ್ಯದಿಂದ ನೋಡುತ್ತ ನಿಂತಿದ್ದರು. ನಾನು ಅವನಿಗೆ ಹುಟ್ಟಿಸಿದ ಭ್ರಮೆ ಆತನ ಜೀವನದ ಕೊನೆಯ ದಿನಗಳಲ್ಲಿ ಜೀವ ತುಂಬಿತ್ತು. ಮಹಾನ್ ಸಾಹಿತಿ ಗಯಟೆಯಲ್ಲವೇ ಹೇಳಿದ್ದು "ಜಗತ್ತಿನಲ್ಲಿ ಕಲಾಸಂಗ್ರಾಹಕನೇ ಅತ್ಯಂತ ಸುಖಿ" ಎಂದು? ✡



ಗತ ಪೀಳಿಗೆಗಳ ಜ್ಞಾನ-ಅನುಭವಗಳ ಪಾರಂಪರ್ಯವೇ ನಮ್ಮ ಸಂಸ್ಕೃತಿ. ಅದನ್ನು ಅರಿತುಕೊಳ್ಳಲು ನಾವು ನಮ್ಮ ಅರ್ಹತೆಯನ್ನು ಬೆಳೆಸಿಕೊಳ್ಳಬೇಕು. ಆ ಸಂಸ್ಕೃತಿಯನ್ನು ಅರಗಿಸಿಕೊಳ್ಳಲು ಆ ಮಟ್ಟಕ್ಕೆ ಏರಬೇಕಾದುದು ಅಗತ್ಯ.

—ಆಂದ್ರೆ ಮಾರಿಯೊ

ಪ್ರಾಚೀನ ಕಾವ್ಯಸುಧೆ

ಹರಿಶ್ಚಂದ್ರನ ರಾಜ್ಯದಾನ

–ದಲಿಕೆ

[ಪರಕಾವ್ಯ ಬಿಟ್ಟು ನರಕಾವ್ಯ ರಚಿಸಿದ ಕವಿ ರಾಘವಾಂಕನ ಹರಿಶ್ಚಂದ್ರ ಕಾವ್ಯ ಒಂದು ಚಂದನ ತರುವಿದ್ದಂತೆ. ಆತನ ಈ ಕಾವ್ಯದ ಪ್ರಭಾವವು ಮುಂದಿನ ಶತಮಾನದ ಕವಿಗಳ ಮೇಲೆ ಗಾಢವಾಗಿ ಆಗಿದ್ದರಿಂದ ರಾಮರಸ ವಿರೂಪಾಕ್ಷ, ಬೊಂಬೆಯ ಲಕ್ಕ, ಒದುವ ಗಿರಿಯ, ಹಲಗ ಎಂಬ ನಾಲ್ವರು ಕವಿಗಳು ಹದಿನಾರನೇ ಶತಮಾನದಲ್ಲಿ, ಕವಿ ರಾಘವಾಂಕನ ಕಾವ್ಯವನ್ನಾಧರಿಸಿಯೇ, ಹರಿಶ್ಚಂದ್ರ ಸಾಂಗತ್ಯಗಳನ್ನು ನಿವೇದಿಸಿದರು. ಇವರಲ್ಲಿ ರಾಮರಸ ವಿರೂಪಾಕ್ಷ ತನ್ನ ಹರಿಶ್ಚಂದ್ರ ಸಾಂಗತ್ಯ ಮರುಗದ ಗಿಡ ಎಂದು ಹೇಳಿಕೊಂಡಿದ್ದಾನೆ. ಈತ ಪ್ರಾಸಾದಿಕ ಶೈಲಿಯಲ್ಲಿ ತಿಳಿಗನ್ನಡದಲ್ಲಿ ಹರಿಶ್ಚಂದ್ರನ ಕಥೆಯನ್ನು ಹೃದಯಂಗಮವಾಗಿ ನಿರೂಪಿಸಿದ್ದಾನೆ. ಈತನ ಕಾವ್ಯದಲ್ಲಿ ಕವಿ ರಾಘವಾಂಕನ ಪದಪುಂಜಗಳನ್ನು ಸಹಜವಾಗಿ ಗುರುತಿಸಬಹುದಾಗಿದೆ. ಆದರೂ ಕವಿ ತನ್ನ ವೈಶಿಷ್ಟ್ಯ ಕಾಪಾಡಿಕೊಂಡು ಬಂದಿದ್ದಾನೆ. ಬೇಟೆಗೆಂದು ಕಾಡಿಗೆ ಬಂದಿದ್ದ ಹರಿಶ್ಚಂದ್ರ ಮಾತಂಗಬಾಲೆಯರ ಮುಖಭಂಗ ಮಾಡಿ ಕಳಿಸಿದ ನಂತರ ವಿಶ್ವಾಮಿತ್ರ ಕೋಪೋದ್ರಿಕ್ತನಾಗಿ ಹರಿಶ್ಚಂದ್ರನಲ್ಲಿಗೆ ಬಂದು ತನ್ನ ಮಕ್ಕಳನ್ನು ದಂಡಿಸಿದ್ದೇಕೆಂದು ಆಕ್ಷೇಪಿಸಿ, ಆತನನ್ನು ಕಾಡಿಸಿ ಪೀಡಿಸಿ ಆತನಿಂದ ರಾಜ್ಯವನ್ನು ದಾನವಾಗಿ ಪಡೆದ ಕಥಾನಕವನ್ನು ಇಲ್ಲಿ ನೀಡಲಾಗಿದೆ. ಕವಿ ವಿರೂಪಾಕ್ಷನ ಕಥನ ಶೈಲಿ ಇಲ್ಲಿ ಉತ್ತಮವಾಗಿ ವ್ಯಕ್ತವಾಗಿದೆ. ಆತನ ಸಮಗ್ರ ಕಾವ್ಯವೇ ಒಂದು ರಸಘಟ್ಟಿ. ವರ್ಣನಾವೈಖರಿ, ಸಂಭಾಷಣಾ ಚತುರತೆ ಆತನಲ್ಲಿ ಚೇತೋಹಾರಿಯಾಗಿವೆ.]

ಸಿಡಿಲು ಸಿಡಿಲಿಸುವ ಜಡೆಯೊಳು ಧಗಿಸಿಹ ವಡಬಾಗ್ನಿಯೊ ಮಹಾದೇವ
ಕಡೆಗಣ್ಣ ನೋಟದಿ ಕಿಡಿಸೂಸಿ ಗರ್ಜಿಸಿ ನಡೆತರಲು ವಿಶ್ವಾಮಿತ್ರ ||೧||

ಪರಿಪರಿ ರತ್ನದ ಸಿರಿಮುಕುಟವಿರಿಸಿದ್ದ ಚರಣಕೆ ಮಣಿಯುತ ಬಾಗಿ
ಶರಣೆನ್ನಲು ಕೋಪ ಭರದಲಿ ಒದೆದನು ಮೊರೆಯುತಲಾ ವಿಶ್ವಾಮಿತ್ರ ||೨||

ಇಂದು ಧನ್ಯನು ನಾನು ಕುಂದದೆ ಪುರುಷನ ಹೊಂದಿದ ಲೋಕದುತಾದ
ಕಂದನ ಹಣೆ ತಾಗಿ ನೊಂದವು ಶ್ರೀಪಾದ ತಂದೆ ಮುನೀಂದ್ರ ಪಾಲಿಸುವುದು ||೩||

ಧರಣೀಶ ನಿನ್ನಿಂದ ಚರಣದ ಮಾತೇನು ಉರಿದೆದ್ದು ಸರ್ವಾಂಗ ನೊಂದು
ಕರಹಿಡಿಸುವೆಯಿನ್ನು ಎರಗಿ ಬೇಸರಿಸಲು ಕರುಣವಿಲ್ಲವು ಕೇಳು ಭೂಪ ||೪||

ಹುಟ್ಟಿಸಿ ಪಾಲಿಸಿ ನಿಟ್ಟೊರಸಲು ಬಲ್ಲ ದಿಟ್ಟ ಮಹಾತ್ಮರು ನೀವು
ಪೆಟ್ಟನೆ ಮುನಿದರೆ ಕೆಟ್ಟೆನು ನಾ ನಿಮ್ಮ ಕೊಟ್ಟಿಲ ಶಿಶುವೆಂದ ಭೂಪ ||೫||

ಪಾಲಿಸಿದೆನು ವೊಂದುವೇಳೆಗೆನ್ನಯ ಬಾಲಿಕೆಯರನೇಕೆ ಬಡಿದೆ
ಹೇಳುವುದೇನೆ ಮುನಿಪಾಲಗೆ ಧಾರುಣಿಪಾಲನು ಕರ ಮುಗಿದೆಂದ ||೬||

ಪಟ್ಟದ ಶಕ್ತಿಗೆ ನೆಟ್ಟಗೆ ಬೇಡಿ ಮನವಿಟ್ಟರು ಮದುವೆಯಾಗೆನುತ
ಸೃಷ್ಟಿಯೊಳೆನ್ನನು ಕೆಟ್ಟಾಡುವೆವುಯೆಂದು ಪೆಟ್ಟು ಹಾಕಿಸಿಕೊಂಡರವರು ||೭||

ಕೊಡುವೆನು ನಿನ್ನಯ ಪೊಡವಿಯನೆಲ್ಲವ ಹಿಡಿಬಡಿಸುವೆ ಬೆನ್ನ ಬಿಡದೆ
ಕಡೆಯದೆ ಮಕ್ಕಳ ಬಡಿದರೆ ಕೈಗಳ ಕಡಿಸುವೆ ಕೇಳೆಂದ ಮುನಿಪ ||೮||

ಪರಚಿಂತೆಯಿಲ್ಲದೆ ಪರಬ್ರಹ್ಮದ ಚರಣದಲಿ ಸೇರುವ ಮುನಿಗಳಿಗ
ಪರರನು ಕೆಡಿಸುವ ಗುರುಮಂತ್ರ ಲೇಸೆಂದು ಧರಣೀಶ ನಗೆಯಿಂದ ನುಡಿದ ||೯||

ಬಿಡುವೆನು ಕೋಪನ ಬಿಡದೆನ್ನ ಮಕ್ಕಳ ಮಡದಿಯರನು ಮಾಡಿಕೊಳಲು
ಪಡೆದಿಹೆ ಕರ್ಣಕೆ ಇರಿದನು ಬೆರಳನು ನುಡಿಯಲ್ಲ ಶಿವ ಶಿವಯೆಂದ ||೧೦||

ಧರಣೀಶರೊಳು ಕಂಡುಕೊರತೆಯು ಕಂಡರೆ ಪರಿಹರಿಸುವ ಬುದ್ಧಿಗಳನು
ಕರುಣಿಸುವದು ಗುರು ಹಿರಿಯರು ಕೊಲುತಿಹ ಪರಿಯೆಂಬ ಗುರುಮಂತ್ರ ಲೇಸು ||೧೧||

ಕೊಡುವೆನು ಬೇಡಲು ಪೊಡವಿಯನೆಲ್ಲವ ಕೊಡಲಾರೆ ಈ ಮಾತಿನಲು
ಬಿಡದಾಗ ಸಾಕೆಂದು ಒಡಗೂಡಿ ಮುನಿಗಳ ಒಡನಿತ್ತ ಮಂತ್ರ ಪಾಠವ ||೧೨||

ಧರಣಿಯು ಧಾರೆಯು ವರವಿಶ್ವಾಮಿತ್ರಗೆ ಎರೆದನು ಹರಿಶ್ಚಂದ್ರನೆನುತ
ವರತಪೋವನಕೆಲ್ಲ ಧರಣಿಗೆ ಡಂಗುರ ಹರುಷದಿ ಸಾರೆಂದ ಮುನಿಪ ||೧೩||

ನರಿಮಾರಿಗಾಗಳೆ ಧರೆಯೊಳು ದೂರುವ ಬಗೆಯಿದು ಲೇಸೆಂದ ಭೂಪ
ನಗೆಯಲಿ ಕೊಟ್ಟರೆ ನಗುತಲಿ ಕೊಂಡೆವು ಜಗಳವುಯಿಲ್ಲೆಂದ ಮುನಿಪ ||೧೪||

ವಸುಧೆಯು ಬಿಡಲಾರೆ ಹುಸಿಕನಾಗಿರಲಾರೆ ಶಶಿಮುಖಿಯರ ಸೇರಲಾರೆ
ದೆಸೆದೆಸೆಯೊಳು ನಿನ್ನ ಹೆಸರೆಂತು ಮೆರೆದುದು ದೆಸೆಯುಳ್ಳ ಹರಿಶ್ಚಂದ್ರನೃಪ ||೧೫||

ನುಡಿ ಹುಸಿಯೆನಿಸಿಯೆ ಬಿಡುವೆನಲ್ಲದೆಯನ್ನ ಒಡಲಿಂದ [illegible]
ಒಡಗೂಡಿದರೆ ನಿನ್ನ ಪೊಡವಿಯು ಮಾತೇನು ಕೊಡುವೆನು ಸಕಲಸಂಪದವ ||೧೬||

ಕೆಡಲೇಕೆ ನೀ ಶುದ್ಧ ಬಿಡಲೇಕೆ ಕೋಪಿಸಿ ನುಡಿದರೆ ನುಡಿ ಮುನಿಪಾಲ
ಪೊಡವಿಯೆಲ್ಲವ ಕೊಡುವೆನು ಬಾಯನು ಬಿಡಿಯುತ ನಡೆಯೆಂದ ಭೂಪ ||೧೭||

ಮುನಿ ವಿಶ್ವಾಮಿತ್ರನು ಜನಪತಿಯು ದಿಟ್ಟತನವನು ಕಂಡು ಕಂಗೆಡುತ
ಮನದೊಳು ಮರುಗದೆ ಪಣಿತೆ ಪೃಥ್ವಿಯು ತನುಜನ ಕೇಳೆಂದ ಮುನಿಪ ||೧೮||

ತರುಣಿಯರನು ಕೇಳಿ ಧರಣಿಯನಾಳುವ ಅರಸಿನ ಮಗನು ನಾನಲ್ಲ
ಹರುಷದಿ ಕೊಡುವೆನು ಕಿರುಕುಳ ಪುತ್ರನ ಪರಿಹರಿಸುವದೆಂದ ಭೂಪ ||೧೯||

ಕರಲೇಸು ಭೂಮಿಯು ಕರದೊಳು ಧಾರೆಯನೆರೆಯೆಂದನಾ ವಿಶ್ವಾಮಿತ್ರ
ಧರೆಯೊಳು ಬೇಗನೆ ನೆರೆಯುಲಾಪೋಶನವರಿವನೆ ಅಗ್ನಿಗೆ ಮುನಿಪ ||೨೦||

ಬಡ ಮನವನು ಮಾಡಿ ಕೊಡಲಾರೆ ಭೂಮಿಯು ಬಿಡದೆನ್ನ ಹೆಣ್ಣುಮಕ್ಕಳನು
ಒಡಗೂಡುವದು ಮುನ್ನ ಮೃಡನ ಪೂಜೆಯಮಾಡಿ ಪಡೆವವರಿಗೆಯಿಲ್ಲ ಭೂಪ ||೨೧||

ಎನಲಾಗ ಕೋಪದಿ ಜನಪತಿ ಧಾರೆಯು ಮುನಿ ವಿಶ್ವಾಮಿತ್ರನಿಗೆರೆದ
ಮನಪ್ರೋಲಿದಿತ್ತನು ಘನ ಸಪ್ತದ್ವೀಪವ ಮನೆಯು ಭಂಡಾರನೆಲ್ಲವನು ||೨೨||

ನಗೆಮಲ್ಲಿಗೆ

ಮೂರ್ಖ ಯಾರು?

ಹಿರಿಯ ಅಧಿಕಾರಿಗಳೊಬ್ಬರು ಇಂಟರ್‌ವ್ಯೂ ತೆಗೆದುಕೊಳ್ಳುತ್ತಿದ್ದರು. ಅಭ್ಯರ್ಥಿಯೋರ್ವನು ಅಧಿಕಾರಿಗಳ ಅಸಂಬದ್ಧ ಮತ್ತು ಲೆಕ್ಕವಿಲ್ಲದಷ್ಟು ಪ್ರಶ್ನೆಗಳಿಗೆ ಉತ್ತರ ಕೊಟ್ಟು ಬೇಸತ್ತಿದ್ದ. ಕೊನೆಗೆ ಆ ಅಧಿಕಾರಿಗಳು ಪ್ರಶ್ನಿಸಿದರು:

"ನಿಮ್ಮ ಮತದಂತೆ ಯಾರನ್ನು ಮೂರ್ಖನೆನ್ನಬೇಕು?"

"ಅಸಂಬದ್ಧ ಬಹಳ ಪ್ರಶ್ನೆ ಕೇಳುವವನನ್ನು!" ತಟ್ಟನೆ ಉತ್ತರ ಬಂತು.

—ವಾಸುದೇವ ರಾಣೆ

ಲಾಭ

ಆತ- ವೈದ್ಯರೇ, ತಮಗೆ ನನ್ನ ಧನ್ಯವಾದಗಳು. ತಮ್ಮ ಚಿಕಿತ್ಸೆಯಿಂದ ನನಗೆ ಅಧಿಕ ಲಾಭವಾಯಿತು.

ವೈದ್ಯ- ಆದರೆ ನಾನು ನಿಮಗೆ ಚಿಕಿತ್ಸೆ ಮಾಡಿದಂತೆ ಜ್ಞಾಪಕವಿಲ್ಲವಲ್ಲಾ!

ಆತ- ಇದರಿಂದಲೇ ನನಗೆ ಲಾಭವಾದದ್ದು-ತಾವು ನನ್ನ ಕೋಟ್ಯಾಧಿಪತಿ ದೊಡ್ಡಪ್ಪನಿಗೆ ಚಿಕಿತ್ಸೆ ಮಾಡಿದ್ದಿರಿ.

—ಎಸ್. ಕೆ. ನರಸಿಂಹಮೂರ್ತಿ

ಒಬ್ಬನೇ ಆಗಿದ್ದೇನೆ

ಅವನೊಬ್ಬ ಕಳ್ಳ. ಕೈದಿಯಾಗಿದ್ದ ಅವನನ್ನು ಅನೇಕ ವರ್ಷದ ನಂತರ ಬಿಡುಗಡೆಗೊಳಿಸಲಾಯಿತು. ಆದರವನು [illegible] ಒಪ್ಪದವನಾಗಿರುವುದನ್ನು ಅಧಿಕಾರಿ ಕಂಡು, ಕಾರಣ ಕೇಳಿದ್ದಕ್ಕೆ ಅವನು," ಸಾರ್, ನನ್ನ ಪ್ರಾಣಸ್ನೇಹಿತನೊಬ್ಬ ಜೈಲಿನಲ್ಲಿ ಇದ್ದಾನೆ ಅವನ ಬಿಡುಗಡೆಯಾಗುವವರೆಗೂ ನಾನೊಬ್ಬನೇ ಕಸಬು ಮಾಡಬೇಕಲ್ಲಾ". ಎಂದುಬಿಟ್ಟ.

ಸಕಾರಣ

ದಿನವೂ ಕಚೇರಿಗೆ ತಡವಾಗಿ ಬರುತ್ತಿದ್ದ ಗುಮಾಸ್ತನು ಅಂದು ಸರಿಯಾದ ಸಮಯಕ್ಕೆ ಬಂದಾಗ ಹಿರಿಯ ಅಧಿಕಾರಿಯು ಆಶ್ಚರ್ಯದಿಂದ ಕೇಳಿದ-

"ಏನಯ್ಯ, ಇಂದು ಸರಿಯಾದ ಸಮಯಕ್ಕೆ ಬಂದಿದೀಯಲ್ಲ, ಏನು ಸಮಾಚಾರ?"

ಅವನು ತಲೆ ಕೆರೆದುಕೊಳ್ಳುತ್ತಾ ಉತ್ತರಿಸಿದ: "ಇಂದು ನನ್ನ ಹೆಂಡತಿಯೇ ಅಡುಗೆ ಮಾಡಿದಳು ಸಾರ್." —ಜ[illegible]ವ

ಸ್ಮಾರಕ

ಹೆಂಡತಿ: ಷಹಜಹಾನ ತನ್ನ ಪ್ರೇಯಸಿಗಾಗಿ ತಾಜಮಹಲ ಕಟ್ಟಿಸಿದಂತೆ ನಾನು ಸತ್ತರೆ, ನನಗಾಗಿ ಏನು ಕಟ್ಟಿಸುತ್ತೀರಿ?

ಗಂಡ- ನೀನು ಸತ್ತರೆ ನಿನ್ನ ಗೋರಿಯ ಸುತ್ತಲೂ ಕಬ್ಬಿಣ ಸಲಾಕೆಗಳ ಪಂಜರವನ್ನು ಕಟ್ಟಿಸುತ್ತೇನೆ.

ಹೆಂಡತಿ- (ಗಾಬರಿಯಿಂದ) ಯಾಕ್ರೀ?...

ಗಂಡ- ಅಕಸ್ಮಾತಾಗಿ ಗೋರಿಯಿಂದ ನೀನು ಮತ್ತೆ ಎದ್ದು ಬರಬಾರದೆಂದು ಪ್ರಿಯೇ. —ಎಚ್. ಎಸ್. ಮುಜಾವರ



"ಒಂದು ದಿನ ಅನ್ನ ಸಾರು ಹಾಕಿದ್ದಕ್ಕೆ ದಿನಾನು ಬರೋದಿಕ್ಕೆ ರೂಢಿ ಮಾಡಿಕೊಂಡುಬಿಟ್ಟೆಯಲ್ಲಾ ಏಕೆ?"
''ನಿಮ್ಮ ಅಡಿಗೆ ಬಹಳ ರುಚಿಯಾಗಿದೆ ತಾಯಿ!'

ಗುಟ್ಟು!

ಸಾಹುಕಾರಗಳೊಬ್ಬರನ್ನು ಭೇಟಿ ಮಾಡಿದ ಸಿದ್ದ ಹೀಗೆ ಪ್ರಶ್ನಿಸಿದ:

"ಕ್ಷಮಿಸಿ, ನಿಮ್ಮ ಕುಟುಂಬ ಕಲಹ ಇದೆ ನಿಮಗೆ ಎಂದು ಕೇಳಿದ್ದೆ. ಆದರೂ ಸದಾ ನೀವು ಹೀಗೆ ನಗುನಗುತ್ತಿರುವುದರ ರಹಸ್ಯವೇನು?"

"ಏನೂ ಸುಮ್ಮಾನದ ರಹಸ್ಯವೂ ಇಲ್ಲ. ಸಾಲ ತೀರಿಸುವ ಯೋಚನೆ ಇದ್ದರಲ್ಲವೇ ಗಂಭೀರ ಮುಖ ಮಾಡಿಕೊಂಡಿರಬೇಕು?!"

—ಸ್ಕಂದ

ನಿಲ್ಲಿಸಿ ಬಿಡಿ

ದೇಶದಲ್ಲಿ ಜನಸಂಖ್ಯೆ ಹೆಚ್ಚುತ್ತಿರುವ ಪ್ರಮಾಣವನ್ನು ವಿವರಿಸುತ್ತ ಭಾಷಣಕಾರನೊಬ್ಬ ಹೇಳಿದ:

"ನಾನು ಒಂದು ಸಲ ಉಸಿರೆಳೆದಷ್ಟರಲ್ಲಿ ಹದಿನಾಲ್ಕು ಮಕ್ಕಳು ಹುಟ್ಟುತ್ತವೆ ನಮ್ಮ ದೇಶದಲ್ಲಿ"

"ಹಾಗಾದರೆ ನೀವು ಉಸಿರಾಡುವುದನ್ನು ನಿಲ್ಲಿಸಿ ಬಿಡಿ ಸ್ವಾಮಿ, ಸಮಸ್ಯೆಯೇ ತಪ್ಪಿಹೋಗುತ್ತದಲ್ಲ," ಎಂದು ಸಭಿಕನೊಬ್ಬ ಸಲಹೆ ನೀಡಿದ. —ಬಿ. ವಿ. ಮೋಹನಪ್ರಕಾಶ

ಸೋತು ಗೆದ್ದವರು,

ನ್ಯಾಯಾಲಯದಲ್ಲಿ ಮುದುಕಿಯೊಬ್ಬಳು ತಾನು ದತ್ತಕ ತೆಗೆದುಕೊಂಡಿದ್ದನ್ನು ರದ್ದು ಪಡಿಸಲು ಅಪೀಲ ಮಾಡಿದ್ದಳು. ಅದರಲ್ಲಿ ಅವಳು ತಾನು ಆ ಮೊದಲು ದತ್ತು ತೆಗೆದುಕೊಂಡೇ ಇಲ್ಲವೆಂದೂ ವಾದಿಸಿದ್ದಳು. ಪಾಟೀ ಸವಾಲಿನಲ್ಲಿ ಪ್ರತಿವಾದಿ ವಕೀಲರು ಎಷ್ಟು ಪ್ರಶ್ನೆ ಕೇಳಿದರೂ ಮುದುಕಿ ತಾನು ದತ್ತು ತೆಗೆದುಕೊಂಡಿಲ್ಲವೆಂದೇ ವಾದಿಸಿದಳು. ನ್ಯಾಯ ನಿರ್ಣಯದ ದಿನ ಪ್ರತಿವಾದಿ ವಕೀಲರು ಮುದುಕಿಗೆ ಹೇಳಿದರು,

ವಕೀಲ– ಮುದುಕಮ್ಮಾ, ಇಂದು ನ್ಯಾಯ ನಿರ್ಣಯದ ದಿನ. ನೀನು ಈಗಲೂ ದತ್ತು ತೆಗೆದುಕೊಂಡಿಲ್ಲವೆಂದೇ ವಾದಿಸಿದಿ. ಅಂತೂ ಕೊನೆಗೆ ನಾನು ಸೋತೆ, ನೀನು ಗೆದ್ದಿ. ಇರಲಿ, ನನ್ನ ಯಜಮಾನನ್ನು ದತ್ತು ತೆಗೆದುಕೊಳ್ಳಬೇಕಂತ ಮಾಡೀರಿ?

ಮುದುಕಿ– ಅಯ್ಯಯ್ಯಪ್ಪ, ಒಬ್ಬನನ್ನು ದತ್ತಕ ಮಾಡಿಕೊಂಡೆSSS ಸಾಕಾಯಿತು, ಇನ್ನೊಬ್ಬನ ದತ್ತಕ ಮಾತಿಲ್ಲ ಹೋಗಲಿ ಎಂದು ವಿಜಯದ ನಗೆಯಿಂದ ಹೇಳಿದಳು.

ಪ್ರತಿವಾದಿ ವಕೀಲರೂ ಕೂಡ ವಿಜಯದ ನಗೆ ಬೀರಿದರು. ಆದರೆ ವಾದಿ ವಕೀಲರು ಮಾತ್ರ ನಗಲಿಲ್ಲ. —ವಿಜಯಾಲಕ್ಷ್ಮಿ

ಬಾಣ ನಾಟಿತು

ಮೂವತ್ತು ವರ್ಷಗಳ ಹಿಂದೆ. ದೀಪಾವಳಿ ಮರುದಿನ ಪ್ರತಿ ಸಲದಂತೆ ಈ ಸಲವೂ ಗಟಾರ ಸ್ವಚ್ಛ ಮಾಡುವ ಹಿಂಗ್ಯಾ ಬಂದ.

"ಎಪ್ಪಾ...ಎಪ್ಪಾ" ಎಂದ.

"ಯಾರಂವಲೇ...ಅಂವಾ" ಎಂದರು ರಾಯರು.

"ನಾ ಯಪ್ಪಾ. ನಿಮ್ಮ ಮಗಾ ಹೊಲ್ಯಾ, ಹಿಂಗ್ಯಾ," ಎಂದು ಹೇಳುವಷ್ಟರಲ್ಲಿ ರಾಯರು ಭಕ್ಷೀಸು ಕೊಟ್ಟು ಕಳಿಸಿದ್ದರು.

—ಎಸ್. ಬಿ. ಜೋದಾನಪುರ

ಯಥಾವತ್ತಾಗಿ

ವರದಿಯನ್ನು ಯಥಾವತ್ತಾಗಿ ಬರೆದು ತಿಳಿಸಬೇಕೆಂಬ ಉದ್ದೇಶದಿಂದ, ಆಗ ತಾನೇ ಕೆಲಸಕ್ಕೆ ಸೇರಿದ ವರದಿಗಾರ, ಒಂದು ಊರಲ್ಲಿ ನಡೆದ ಘಟನೆಯನ್ನು ಈ ರೀತಿಯಾಗಿ ವರದಿ ಮಾಡಿದ. "ಸುಪ್ರಸಿದ್ಧ ನಟನೊಬ್ಬನ ಮನೆಗೆ ಬೆಂಕಿ ಹತ್ತಿದೆಯೆಂದು ಮಧ್ಯರಾತ್ರಿಯ ನಂತರ ಟೆಲಿಫೋನ್ ಬಂದಿತು. ಫೈಯರ್ ಬ್ರಿಗೇಡಿನಿಂದ ನಾಲ್ವರು ಫೈಯರ್‌ಮನ್‌ರು ಹೋಗಿ, ಬರಿ ಹತ್ತು ನಿಮಿಷಗಳಲ್ಲಿ ಬೆಂಕಿಯನ್ನು ಹತೋಟಿಗೆ ತಂದರು. ಆದರೆ ನಂತರ ಆ ನಾಲ್ವರು ಫೈಯರ್‌ಮನ್‌ರನ್ನು ಹತೋಟಿಗೆ ತರಲು ಒಂದು ಗಂಟೆ ಹಿಡಿಯಿತು."

—ವಿ. ಎಂ. ಜೋಶಿ

ಮೌನಪ್ರಾಕಾರ

ಪಿ. ಪಿ. ಉಪಾಧ್ಯ

ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲಿ ಅವರಿಬ್ಬರನ್ನಿಳಿಸಿದ ಬಸ್ಸು ಧೂಳನ್ನು ಹಾರಿಸುತ್ತ ಹೊರಟುಹೋದಾಗ ಅವರು ಸ್ವಲ್ಪ ಹೊತ್ತು ಅನಾಥರಂತೆ ಅಲ್ಲಿಯೇ ನಿಂತರು. ಪರಸ್ಪರ ಮುಖವನ್ನು ನೋಡುತ್ತ, ಬಸ್ಸು ಹೋದ ದಿಕ್ಕನ್ನೇ ನೋಡುತ್ತ ಮತ್ತು ಸುತ್ತಮುತ್ತಲ ಪರಿಸರವನ್ನು ವೀಕ್ಷಿಸುತ್ತ ನಿಂತ ಅವರು ತಮ್ಮೊಳಗೆ ಮಾತನ್ನೇನೂ ಆಡಲಿಲ್ಲ. ಮತ್ತು ಪರಿಚಯದ ನಗೆಯನ್ನೂ ಬೀರಲಿಲ್ಲ. ಒಬ್ಬರ ಮುಖವನ್ನು ಒಬ್ಬರು ನೋಡಿದರೂ ಅದೇನೋ ಅಕಸ್ಮಾತ್ತಾಗಿ ಆಗಿರಬೇಕು ಎನ್ನುವ ಭಾವನೆಯಿಂದ ಇಬ್ಬರೂ ಮುಖವನ್ನು ತಿರುಗಿಸುತ್ತಿದ್ದರು. ಕೆಲವು ನಿಮಿಷಗಳ ವರೆಗೆ ಈ ನಾಟಕ ನಡೆದಾಗ ಅವರಲ್ಲಿ ಒಬ್ಬನಿಗೆ ಸಾಕೆನ್ನಿಸಿರಬೇಕು. ಅತ್ತಿತ್ತ ನೋಡಿದವ ರಸ್ತೆಗೆ ಲಂಬವಾಗಿ ಮುಂದುವರಿಯುತ್ತಿದ್ದ ಕಾಲುದಾರಿಯ ಮೇಲೆ ನಡೆಯಲಾರಂಭಿಸಿದ. ಇನ್ನೊಬ್ಬ ಸ್ವಲ್ಪ ದೂರದಿಂದಲೇ ಹಿಂಬಾಲಿಸಿದ ಅವನನ್ನು. ಇಬ್ಬರೂ ಮಾತನಾಡಲಿಲ್ಲ.

ನಿರ್ಜನವಾದ ದಾರಿಯ ಮೇಲೆ ಈಗ ನಡೆಯುತ್ತಿದ್ದರು ಅವರು. ಅಲ್ಲಿ ಜನಸಂಚಾರ ಸುರುವಾಗಿರಲಿಲ್ಲವೋ ಅಥವಾ ಆ ದಿನದ ಮಟ್ಟಿಗೆ ಮುಗಿದಿತ್ತೋ, ಆದರೆ ಅವರಿಬ್ಬರಿಗೆ ಆ ಪರಿವೆಯಿದ್ದಂತಿರಲಿಲ್ಲ. ಅವರಿಬ್ಬರೂ ಆ ಊರಿಗೆ ಹೊಸಬರಂತೆ ಕಾಣಿಸುತ್ತಿದ್ದರು. ಕಾಲುಂಚಿನವರೆಗೆ ಇಳಿಬಿಟ್ಟ ಪಂಚೆ, ಮೈಮೇಲಿನ ದಪ್ಪ ಕೋಟು ತಲೆಯ ಮೇಲೆ ಸುತ್ತಿದ ಹನ್ನೆರಡು ಮೊಳದ ಪಂಚೆಯ ಮುಂಡಾಸು ಮತ್ತು ಕಾಲುಗಳಲ್ಲಿನ ಗಿರಕಿ ಚಡಾವು. ಇವಿಷ್ಟು ಅವರನ್ನು ಆ ಊರಿನವರಂತೂ ಅಲ್ಲ ಎನ್ನುವುದನ್ನು ಸ್ಪಷ್ಟಪಡಿಸುತ್ತಿದವು. ಅವರ ಕೈಗಳಲ್ಲಿಯೂ ಏನೂ ಇರಲಿಲ್ಲ. ಬೀಸುತ್ತ ನಡೆದಿದ್ದರು ಅವುಗಳನ್ನು. ಕೈಗಳಂತೆಯೇ ಅವರ ಮನಸ್ಸೂ ನಿರಾಳವಾಗಿದ್ದಿರಬೇಕು. ಯಾವುದೇ ತರದ ಚಿಂತೆ ಅವರ ಮುಖದ ಮೇಲೆ ಕಾಣಿಸುತ್ತಿರಲಿಲ್ಲ.

ಅವರಿಬ್ಬರೂ ಒಬ್ಬರಿದೊಬ್ಬರು ಸ್ವಲ್ಪ ಅಂತರದಲ್ಲಿಯೇ ನಡೆಯುತ್ತಿದ್ದರೂ ಮತ್ತು ಪರಸ್ಪರ ಮಾತನ್ನೇ ಆಡದಿದ್ದರೂ ದಾರಿಯ ಅಕ್ಕಪಕ್ಕದ ಮನೆಯವರು ಅಥವಾ ಅಲ್ಲಿಯೇ ಎಲ್ಲಿಯೋ ಕೆಲಸಮಾಡುತ್ತಿದ್ದ ಊರಿನ ಜನರು ಬಹುಶಃ ಅವರಿಬ್ಬರೂ ಒಬ್ಬರಿಗೊಬ್ಬರು ಸಂಬಂಧಪಟ್ಟವರೇ ಇರಬೇಕು ಎಂದು ಎಣಿಸುತ್ತಿದ್ದರು. ಯಾಕೆಂದರೆ ಒಬ್ಬರಿಗೊಬ್ಬರು ಸಂಬಂಧಪಡದ ಇಬ್ಬರು ಅಪರಿಚಿತರು ಒಟ್ಟಿಗೇ ಅಷ್ಟು ಹೊತ್ತಿಗೆ ಆ ದಾರಿಯಲ್ಲಿ ಬರುವುದು ಅವರ ಅಂದಾಜಿಗೆ ನಿಲುಕದ ವಿಷಯವಾಗಿತ್ತು.

ಕಾಲುದಾರಿಯ ಎರಡೂ ಬದಿಗಳಿಗೆ ಮಣ್ಣಿನ ದರೆ ಹಾಕಿಸಿದ್ದರು ಊರಿನ ಜನ. ದರೆಯ ಮೇಲೆ ಬೇಲಿಯಾಗಲೆಂದು ಮುಳ್ಳಿನ ಗಿಡಗಳನ್ನು ಬೆಳೆಸಿದ್ದರು. ದರೆಯ ಒಳಗಡೆ, ಇನ್ನು ಕೆಲವು ಕಡೆ ದರೆಯ ಹೊರಗಡೆ ಕಾಲುದಾರಿಯ ಪಕ್ಕದಲ್ಲಿಯೇ ಇದ್ದ ಮರಗಳು ನೆರಳನ್ನು ನೀಡುತ್ತಿದ್ದುವು ಮತ್ತು ತ ನೆರಳಿಲ್ಲದಿದ್ದರೆ ಆ ಬಿಸಿಲಿನಲ್ಲಿ ನಡೆಯಲಿಕ್ಕೆ

ಸಾಧ್ಯವೇ ಇಲ್ಲದ ಆ ದಾರಿಯನ್ನು ನಡೆಯುವಂತೆ ಮಾಡಿದ್ದವು. ಅವರಿಬ್ಬರೂ ನಡೆಯುತ್ತಿದ್ದರು. ಮರದ ನೆರಳಿದ್ದುದರಿಂದ ಹಾದಿಯಲ್ಲಿನ ಮಣ್ಣಿನ್ನೂ ಬಿಸಿಯಾಗಿರಲಿಲ್ಲ. ಆದರೆ ಮಳೆಗಾಲ ಮುಗಿದು ಬಹಳ ದಿನಗಳು ಕಳೆದುದರಿಂದ ಮಣ್ಣು ಒಣಗಿತ್ತು. ಮತ್ತು ಇವರ ಗಿರಕಿ ಚಪ್ಪಲಿನ ಹಿಮ್ಮಡಿಗೆ ಸಿಕ್ಕಿ ಮೇಲಕ್ಕೆ ಹಾರುತ್ತಿತ್ತು. ಇದರ ಗಮನವೇ ಇಲ್ಲದೆ ಮುಂದಿನವ ನಡೆಯುತ್ತಿದ್ದ. ಹಿಂದಿನವ ಅವನ ತಲೆಯವರೆಗೆ ಹಾರುವ ಮಣ್ಣನ್ನು ಕಂಡು ಅದರಲ್ಲಿನ ಕೆಲವಂಶವಾದರೂ ಅವನ ರುಮಾಲಿನಲ್ಲಿ ಸಿಕ್ಕು ಬೀಳುತ್ತದೆ ಎಂದುಕೊಳ್ಳುತ್ತಾ ತನ್ನ ಜಡೆಯೂ ಅಂತಹುದೇ ಮತ್ತು ಅದರಿಂದಲೂ ಅಷ್ಟೇ ಮಣ್ಣು ಹಾರುತ್ತದೆ ಎಂಬುದರ ಪ್ರಜ್ಞೆಯೇ ಇಲ್ಲದೆ ಖುಷಿಪಟ್ಟುಕೊಳ್ಳುತ್ತಿದ್ದ. ಆ ಸಂಬಂಧ ಹೌದೋ ಅಲ್ಲವೋ ಎನ್ನುವಂತೆ ಎರಡು ಹಲ್ಲುಗಳನ್ನೂ ಬಿಡುತ್ತಿದ್ದ ಆಗಾಗ. ನೆರಳಿರುವ ಕಾಲುದಾರಿ ಮುಗಿದು ಬಯಲುದಾರಿ ಬಂದಾಗ ಆ ನಗುವ ಕೆಲಸ ಸುಲಭವಾದೀತು ಎಂದು ಎಣಿಸಿದ್ದ ಹಿಂದಿನವ. ಆದರೆ ಅಲ್ಲಿಯೂ ಮಣ್ಣು ಒಣಗಿತ್ತು. ಗದ್ದೆಗಳ ಬದಿಯಿಂದ ಕತ್ತಿ ತೆಗೆದು ಅಂಚಿನ ಮೇಲೆ ಹಾಕಿದ ಮಣ್ಣು ಒಣಗಿ ಧೂಳಾಗಿತ್ತು. ಆ ಧೂಳು ಇವರ ಮೆಟ್ಟಿಗೆ ಸಿಕ್ಕಿ, ತಲೆಯ ವರೆಗೆ ಅಲ್ಲವಾದರೂ ನಡುವಿನ ವರೆಗೆ ಹಾರುತ್ತಿತ್ತು. ಅವರನ್ನು ಈ ಊರಿನವರಲ್ಲವೆಂದು ಜಾಹೀರು ಪಡಿಸುತ್ತಿದ್ದ ಕೋಟಿನ ಕೆಳಗಿನ ಅರ್ಧ ಭಾಗ ತನ್ನ ಬಣ್ಣವನ್ನೇ ಕಳೆದುಕೊಳ್ಳುವ ಸ್ಥಿತಿಯಲ್ಲಿದ್ದುದು ಮುಂದಿನವನಿಗೆ ತಿಳಿಯುತ್ತಿರಲಿಲ್ಲ. ಹಿಂದಿನವ ಅದನ್ನು ನೋಡುತ್ತಿದ್ದ ಮತ್ತು ತನ್ನಷ್ಟಕ್ಕೇ ನಗುತ್ತಿದ್ದ. ಇದರ ಪರಿವೆಯೇ ಇಲ್ಲದೆ ಮುಂದಿನವ ನಡೆಯುತ್ತಿದ್ದ. ಹಿಂದಿನಿಂದ ಇವನೊಬ್ಬ ತನ್ನನ್ನು ಹಿಂಬಾಲಿಸುತ್ತಿದ್ದಾನೆ ಎನ್ನುವುದು ಅವನಿಗೆ ತಿಳಿದಿತ್ತು. ಮತ್ತು ಅವನು ತನ್ನ ಜತೆಯಲ್ಲಿಯೇ ಬಸ್ಸು ಇಳಿದವನೆಂಬುದೂ ತಿಳಿದಿತ್ತು. ಆದರೂ ಅವ ಹಿಂತಿರುಗಿ ನೋಡುತ್ತಿರಲಿಲ್ಲ ಮತ್ತು ಅವನೊಂದಿಗೆ ಮಾತನಾಡುತ್ತಿರಲೂ ಇಲ್ಲ.

ಊರಿನವರು ಯಾರಾದರೂ ನೋಡಿದವರು ಅವರಿಬ್ಬರನ್ನು ಸ್ನೇಹಿತರೆಂದೇ ಭಾವಿಸುತ್ತಿದ್ದರು. ಬಹುಶಃ ಈ ಹಿಂದೆ ಯಾವುದೋ ಮಾತಿನಿಂದ ಅವರಲ್ಲಿ ತಾತ್ಕಾಲಿಕ ವಿರಸ ಉಂಟಾಗಿರಬೇಕು ಅಥವಾ ಗಹನವಾದ ವಿಚಾರವೊಂದರ ಬಗ್ಗೆ ಚರ್ಚೆ ನಡೆಸಿ ಈಗ ಅದರ ಆಗುಹೋಗುಗಳ ಬಗ್ಗೆ ಆಳವಾಗಿ ಚಿಂತಿಸುತ್ತಿದ್ದಿರಬೇಕು ಎಂದುಕೊಳ್ಳುತ್ತಿದ್ದರು. ಆದುದರಿಂದ ದಾರಿಯ ಮೇಲೆ ಸಿಕ್ಕ ಒಂದಿಬ್ಬರು ಅವರೊಡನೆ ಮಾತನಾಡಬೇಕು, ಊರಿಗೆ ಹೊಸಬರಾದ ಅವರ ಪರಿಚಯವನ್ನು ಮಾಡಿಕೊಳ್ಳಬೇಕು ಎನ್ನುವ ಬಯಕೆಯಿದ್ದೂ ಅವರ ರಾಜಮರ್ಜಿಯ ವೇಷವನ್ನು ನೋಡಿ ಹಿಂದೇಟು ಹೊಡೆದಿದ್ದರು ಮತ್ತು ಅವರನ್ನು ದಾಟಿಕೊಂಡು ಮುಂದೆ ಹೋಗಿದ್ದರು.

ಬಯಲುದಾರಿಯನ್ನು ಕ್ರಮಿಸುತ್ತಿದ್ದಂತೆ ಜನಸಂಚಾರ ಹೆಚ್ಚುಗತೊಡಗಿತ್ತು. ಸುಡುವ ಬಿಸಿಲಿದ್ದರೂ ನಿಧಾನವಾಗಿ ಬೀಸುತ್ತಿದ್ದ ಗಾಳಿ ಬಿಸಿಲಿನ ಜಳವನ್ನು ಕಡಿಮೆ ಮಾಡಿತ್ತು. ಬಯಲಾಚೆಯ ಊರಿನ ಜನ ಆ ಬಿಸಿಲಿನಲ್ಲೂ ರಾಷ್ಟ್ರೀಯ ಹೆದ್ದಾರಿಯ ಕಡೆಯಿದ್ದ ಪೇಟೆಯತ್ತ ಹೊರಟಿದ್ದರು. ಪೇಟೆಯ ಕಡೆಗೆ ಹೋಗುವ ಕೆಲಸವಿಲ್ಲದಿದ್ದವರೂ ಸಹ ಸುಮ್ಮನೆ ಮನೆಯಲ್ಲಿ ಕುಳಿತೇನು ಮಾಡುವುದು ಎಂದುಕೊಂಡು ತಮ್ಮ ತಮ್ಮ ಗದ್ದೆಗಳತ್ತ ಹೊರಟಿದ್ದರು ಮತ್ತು ದಾರಿಯ ಮೇಲೆ ಸಿಕ್ಕ ತಮ್ಮ ಗದ್ದೆಗಳನ್ನು ನೋಡುತ್ತ ತಾವು ಪಟ್ಟ ಶ್ರಮ, ಫಲ ಕೊಡುತ್ತಿದ್ದುದನ್ನು ಕಂಡು ಹಿಗ್ಗುತ್ತಿದ್ದರು. ಇನ್ನು ಕೆಲವರು ತಮ್ಮ ಗದ್ದೆಗಳ ಮತ್ತು ಬೇಸಾಯದ ಬಗ್ಗೆ ಹೆಚ್ಚು ನಿಗಾ ಕೊಡದಿದ್ದವರು ಪಕ್ಕದಲ್ಲಿ ಒಳ್ಳೆಯದಾಗಿ ಬೆಳೆ ಬೆಳೆದವನನ್ನು ಕಂಡು ಕರುಬುತ್ತಲೋ ಅಥವಾ ತಮ್ಮ ಸೋಂಬೇರಿತನವನ್ನು ಶಪಿಸುತ್ತಲೋ ಇರುತ್ತಿದ್ದರು. ಇವರೆಲ್ಲರ ನಡುವೆ ತಮ್ಮ ತಮ್ಮ ಗದ್ದೆಗಳಲ್ಲಿ ಕೆಲಸಕ್ಕೆ ತೊಡಗಿದವರೂ ಇದ್ದರು. ಆಳುಗಳ ಜತೆಗೆ ಆಳಾಗಿ ದುಡಿಯು-

ತ್ತಿದ್ದ ಅವರು ಕಳೆಯನ್ನು ಕೀಳುತ್ತಲೋ ಈಗ ಕಟಾವಿಗೆ ಬಂದ ಬೆಳೆಯನ್ನು ಕೊಯ್ಯುತ್ತಲೋ ಇದ್ದು ಆಗಾಗ್ಗೆ ಬೆನ್ನು ನೆಟ್ಟಗೆ ಮಾಡುವ ನೆಪದಲ್ಲಿ ಸುತ್ತಿಕೊಂಡು ದಾರಿಯ ಮೇಲೆ ಬರಹೋಗುವವರನ್ನು ನೋಡುತ್ತ ಕಾಲಹರಣ ಮಾಡುತ್ತಿದ್ದ ಆಳುಗಳಿಗೆ ಬಯ್ಯುತ್ತಿದ್ದರು. ಒಟ್ಟಿನಲ್ಲಿ ಬಯಲಿನಲ್ಲಿ ಚಟುವಟಿಕೆ ತುಂಬಿತ್ತು.

ಈಗ ಬಯಲಂಚಿನ ಮೇಲೆ ನಡೆಯುತ್ತಿದ್ದ ಅವರಿಬ್ಬರ ನಡುವಿನ ಅಂತರ ಸ್ವಲ್ಪ ಕಡಿಮೆಯಾಗಿತ್ತು. ಅತ್ತಿತ್ತ ಇದ್ದ ಜನ ಇವರ ಗಿರಕಿ ಚಡಾವಿನ ಸದ್ದು ಕೇಳಿ ತಲೆಯೆತ್ತಿ ನೋಡುತ್ತಿದ್ದರು ಮತ್ತು ಊರಿಗೆ ಹೊಸಬರು ಬಂದು ತಮ್ಮಷ್ಟಕ್ಕೇ ಅಂದುಕೊಳ್ಳುತ್ತಿದ್ದರು. ಯಾರೂ ಅವರನ್ನು ಮಾತಾಡಿಸುವ ಗೋಜಿಗೇ ಹೋಗಲಿಲ್ಲ. ತಮ್ಮಷ್ಟಕ್ಕೇ ಅವರ ವೇಷಭೂಷಣಗಳ ಬಗ್ಗೆ ತಮಾಷೆ ಮಾಡುತ್ತಿದ್ದರೋ ಏನೋ. ಅವರಲ್ಲಿ ಮುಂದಿನವನಿಗೆ ಸ್ವಲ್ಪ ವಯಸ್ಸಾಗಿದ್ದುದು ತಿಳಿಯುತ್ತಿತ್ತು. ರುಮಾಲಿನಾಚೆಯಿಂದ ಇಣುಕುತ್ತಿದ್ದ ತಲೆಯ ಕೂದಲು ಮತ್ತು ದಪ್ಪಗೆ ಹುರಿಮಾಡಿದ ಮೀಸೆ ಬಿಳುಪಾಗಲಿಕ್ಕೆ ತೊಡಗಿದ್ದುವು ಮತ್ತು ಆತ ಒಂದು ತೆರನ ನಿರ್ಲಿಪ್ತತೆಯಿಂದ ಹೆಜ್ಜೆಯನ್ನು ಹಾಕುತ್ತಿದ್ದ. ಹಿಂದಿನವ ಇನ್ನೂ ಪ್ರಾಯವನ್ನು ದಾಟಿರಲಿಲ್ಲ. ಅವನಲ್ಲಿ ನಿರ್ಲಿಪ್ತತೆಯ ಬದಲು ಚುರುಕುತನ ಕಾಣಿಸುತ್ತಿತ್ತು. ಚಟುವಟಿಕೆಯಿಂದ ಕೂಡಿದ ಆತ ಅತ್ತಿತ್ತ ನೋಡುತ್ತಿದ್ದ. ಪ್ರಪಂಚದಲ್ಲಿನ ಹೊಸತೇನನ್ನೋ ನೋಡುತ್ತಿದ್ದೇನೆ ಎನ್ನುವಂತೆ ಸುತ್ತಮುತ್ತಲಿನ ಗದ್ದೆಗಳನ್ನೂ ಅವುಗಳಲ್ಲಿನ ಬೆಳೆಯನ್ನೂ ವೀಕ್ಷಿಸುತ್ತಿದ್ದ. ಗದ್ದೆಯಲ್ಲಿ ಕುಳಿತು, ನಿಂತು, ಬಗ್ಗಿ ಕೆಲಸ ಮಾಡುತ್ತಿದ್ದ ಹೆಣ್ಣಾಳುಗಳನ್ನು ನೋಡುತ್ತಿದ್ದ. ಬೆನ್ನನ್ನು



ನೆಟ್ಟಗೆ ಮಾತಾಡದ ಹೆದರಿಕ್ಕೆಯೋ ಸಂಕೋಚವೋ ಸಂಕೋಚದ ಹೆದರಿಕ್ಕೆಯೋ ತಿಳಿಯುತ್ತಿ[illegible] ಅವನು ಇವನನ್ನು ನೋಡಿದರೆ ಇವನು ಸಂಭಾವಿತತನವನ್ನು ಪ್ರದರ್ಶಿಸುತ್ತಿದ್ದ [illegible] ಪುನಃ ಅವರತ್ತ ನೋಡುತ್ತಿದ್ದ. ಮುಂದಿನವನ ಕೋಟಿನ ಮೇಲಿನ ಧೂಳಾಗಲೀ ಮುಂಡಾಸಿನಿಂದ ಉದುರುತ್ತಿದ್ದ ಮಣ್ಣಾಗಲೀ ಈಗ ಅವನ ಗಮನ ಸೆಳೆಯಲಿಲ್ಲ. ಅದನ್ನು ನೋಡಿ ಸಂತೋಷಪಡಬೇಕು ಎನ್ನಿಸಲೂ ಇಲ್ಲ. ಸುಮ್ಮನೆ ಅತ್ತಿತ್ತ ನೋಡುತ್ತ ಮುನ್ನಡೆಯುತ್ತಿದ್ದ.

ಆಗಲೇ ಅನಾಹುತವೊಂದು ನಡೆದದ್ದು. ಹಿಂದಿನವ ಪ್ರಪಂಚದ ಸೌಂದರ್ಯವನ್ನು ಹೀರುವ ಗಡಿಬಿಡಿಯಲ್ಲಿ ತನ್ನ ಮತ್ತು ಮುಂದಿನವನ ಅಂತರ ಕಡಿಮೆಯಾದುದನ್ನು ಗಮನಿಸಿರಲಿಲ್ಲ. ಅಷ್ಟೇ ಅಲ್ಲ ಒಮ್ಮೆ ಮುಂದಿನವನ ಮೆಟ್ಟಿನ ಹಿಮ್ಮಡಿಯ ಮೇಲೆ ಕಾಲನ್ನು ಹಾಕಿಬಿಟ್ಟಿದ್ದ. ಮುಂದಿನವ ಮುಗ್ಗರಿಸುವಂತೆ ಆದಾಗ ಪ್ರಥಮ ಬಾರಿಗೆ ಹಿಂತಿರುಗಿ ನೋಡಿದ. ಆತ ಕೆರಳಿದ್ದನೆಂಬುದನ್ನು ಅವನ ಕೆಂಪಾದ ಕಣ್ಣುಗಳೇ ಹೇಳುತ್ತಿದ್ದವು. ಆದರೆ ಹಿಂದಿನವ ಮಾತ್ರ ಇದರ ಪರಿವೆಯೇ ಇಲ್ಲದಂತೆ ಎತ್ತಲೋ ನೋಡುತ್ತಿದ್ದ. ಕಾಲು ತುಳಿದುದರ ಜತೆಗೆ ಅವನ ನಿರ್ಲಕ್ಷತೆಯೂ ಸೇರಿ ಮುಂದಿನವನ ಕೋಪವನ್ನು ಹೆಚ್ಚಿಸಿದ್ದವು. ಏನೋ ಹೇಳಿದ. ಹಿಂದಿನವನಿಗೆ ಅದು ಅರ್ಥವಾಯಿತೋ ಇಲ್ಲವೋ ಅಂತೂ ಏನೋ ಬಯ್ಗಳು ಎಂದು ತಿಳಿದಿತ್ತು. ಅವನೂ ತಿರುಗಿ ಬಯ್ದ. ಮೊದಲಿನವನಿಗಿಂತ ದೊಡ್ಡ ಸ್ವರದಲ್ಲಿ ಬಯ್ದ. ಪುನಃ ಮೊದಲಿನವ ಬಾಯಿ ತೆರೆದ. ಎರಡನೆಯವ ಕಿರಿಚುವವನಂತೆ ಕೂಗಾಡಿದ. ಹಾಗೆ ಇಬ್ಬರೂ ಒಂದೇಸಮನೆ ಬಯ್ದುಕೊಳ್ಳಲಿಕ್ಕೆ ಶುರುಮಾಡಿದಾಗ ಅತ್ತಿತ್ತ, ಸುತ್ತಮುತ್ತಲಿದ್ದ ಜನರ ಕಿವಿ ನೆಟ್ಟಗಾಗಿದ್ದವು. ಕೆಲಸದ ಗಡಿಬಿಡಿಯಿಲ್ಲದ ಕೆಲವರಂತೂ ತಾವೂ ಅದರಲ್ಲಿ ಮೂಗು ತೂರಿಸುವ ಆಲೋಚನೆ ಮಾಡಿದ್ದರು. ತಮ್ಮ ಊರಿಗೆ [illegible] ಜಗಳಾಡುವಾಗ ತಾವು ಬರಿಯ ಪ್ರೇಕ್ಷಕರಾಗಿ ನಿಲ್ಲುವುದೇ ಎಂದು. ಆದರೆ ಅವರಿಬ್ಬರೂ ಜಗಳ ಮಾಡುತ್ತ ನಿಂತಿರಲಿಲ್ಲ. ನಡೆಯುತ್ತಲೇ ಇದ್ದರು. ಹಾಗಾಗಿ ಜನ ತಮ್ಮ ಉತ್ಸಾಹವನ್ನು [illegible] ತಮ್ಮ ಕೆಲಸದಲ್ಲಿ ಮಗ್ನರಾಗಿದ್ದರು. ಅವರ ಎತ್ತರಿಸಿದ ದನಿಯ ಜಗಳ ನಡೆದೇ ಇತ್ತು ಮತ್ತು ಅವರು ಮುಂದುವರಿಯುತ್ತಲೇ ಇದ್ದರು.

ದಾರಿಯ ಮೇಲೆ ಎದುರಾಗುತ್ತಿದ್ದ ಪೇಟೆಗೆ ಹೋಗುವ ಜನ ಸುಮ್ಮನೆ ಒಂದು ಕ್ಷಣ ನಿಂತು ಅವರ ಮಾತುಗಳಿಗೆ ಕಿವಿಗೊಟ್ಟು ಏನೂ ಅರ್ಥವಾಗದೆ ಅವರನ್ನು ದಾಟಿ ಮುಂದೆ ಹೋಗುತ್ತಿದ್ದರು. ಕೇಳುತ್ತಿದ್ದ ಜನಗಳಿಗೆ ಅವರ ಭಾಷೆ ಅರ್ಥವಾಗುತ್ತಿರಲಿಲ್ಲ. ಹಳ್ಳಿಯ ಯಾವ ಜನರಿಗೂ ಬಹುಶಃ ತಿಳಿಯುತ್ತಿರಲಿಲ್ಲವೇನೋ. ಅವರಷ್ಟಕ್ಕೆ ದೊಡ್ಡ ಸ್ವರದಲ್ಲಿ ಮಾತನಾಡುತ್ತ ಹೋಗುತ್ತಿದ್ದ ಅವರು ಜಗಳ ನಿಲ್ಲಿಸುವ ಸೂಚನೆಯೇ ಕಂಡುಬರುತ್ತಿರಲಿಲ್ಲ ಜನರೂ ಅಷ್ಟೆ! ಅವರ ಜಗಳ ಜೋರಾಗುತ್ತದೇನೋ ಅನ್ನಿಸಿದವರು ತಮಗೆ ಅರ್ಥವಾಗದ ಅವರ ಮಾತುಗಳ ಜಗಳ ಒಂದು ಹಂತವನ್ನು ತಲುಪಿ ತಮಗೂ ಸುಲಭವಾಗಿ ಅರ್ಥವಾಗುವ ಕೈಗಳ ಜಗಳಕ್ಕೆ ಮೊದಲಾಗುತ್ತದೇನೋ ಎಂದು ನಿರೀಕ್ಷಿಸಿ ಅಂಥದೇನೂ ನಡೆಯದಿದ್ದಾಗ ಮತ್ತು ಇದೇ ಗತಿಯಲ್ಲಿ ಜಗಳ ಸಾಗಿದರೆ ಅಂಥ ಮಟ್ಟವನ್ನು ಮುಟ್ಟಲಾರದೇನೋ ಎನ್ನಿಸಿ ತಮ್ಮ ಕೆಲಸದ ಕಡೆ ಗಮನ ಹರಿಸಿದ್ದರು.

ಅವರಿಬ್ಬರು ತಮ್ಮ ಗಂಟಲನ್ನು ಇನ್ನೂ ಜೋರು ಮಾಡಿದ್ದರು. ತಾವನ್ನುತ್ತಿದ್ದುದು ಉಳಿದವರಿಗೆ ಅರ್ಥವಾಗುತ್ತಿತ್ತೋ ಇಲ್ಲವೋ ಎನ್ನುವುದರ ಕಾಳಜಿಯೇ ಇಲ್ಲದೆ ಅವರ ಸ್ವರ ಏರುತ್ತಿತ್ತು. ಇಬ್ಬರ ಭಾಷೆಗಳೂ ಬೇರೆಯೇ ಇದ್ದರೂ ಒಬ್ಬನದನ್ನು ಇನ್ನೊಬ್ಬ ಅರ್ಥ ಮಾಡಿಕೊಳ್ಳುತ್ತಿದ್ದ ಮತ್ತು ಅವನಿಗಿಂತ

ಜೋರಾಗಿ ತನ್ನ ಭಾಷೆಯಲ್ಲಿ ಕಿರಚುತ್ತಿದ್ದ. ಇದು ಅವರನ್ನು ಹಾದು ಹೋಗುತ್ತಿದ್ದ ಜನರಿಗೊಂದು ತಮಾಷೆಯನ್ನಿಸುತ್ತಿತ್ತು. ಯಾವುದೋ ಭಾಷೆ ಬಾರದ ಊರಿನಿಂದ ಬಂದವರಿಬ್ಬರು ಹೀಗೆ ಒಗ್ಗಿಲ ಜನರಲ್ಲಿ ಕಾದಾಡುತ್ತ ಹೋಗುವುದು ಊರಿನವರಿಗೊಂದು ಹೊಸತೇ. ಜನ ಬಿಳಿ ಬಿಳಿ ನೋಡುತ್ತಿದ್ದರು. ಒಂದಿಬ್ಬರು ಧೈರ್ಯ ಮಾಡಿ ಅವರನ್ನು ಮಾತನಾಡಿಸಿ ಸಮಾಧಾನಪಡಿಸುವ ಎಂದು ಪ್ರಯತ್ನಿಸಿದರೂ ಅವರಿಬ್ಬರ ಭಾಷೆಯೂ ಬಾರದೆ ಸುಸ್ತಾಗಿ ತಮ್ಮ ದಾರಿಯನ್ನು ಹಿಡಿಯಬೇಕಾಯಿತು.

ಅವರು ದಾರಿ ನಡೆಯುತ್ತ ಆ ಊರಿನ ಹೊರಳಿ ಬಿತ್ತಿದ ಗದ್ದೆಗಳ ಅಂಚಿನಲ್ಲಿ ನಡೆಯಲಿಕ್ಕೆ ತೊಡಗಿದಾಗ ಸುತ್ತಮುತ್ತಲ ಗದ್ದೆಗಳಲ್ಲಿ ಜನ ಹೆಚ್ಚಿರಲಿಲ್ಲ. ಅಲ್ಲಿ ಇಲ್ಲಿ ಒಬ್ಬಿಬ್ಬರು, ಗದ್ದೆಯಂಚಿನ ಹುಲ್ಲು ಮೇಯುವ ಹಂಗಸರು ಮತ್ತು ಆ ಬಿಸಿಲಿನಲ್ಲೂ ಸುಮ್ಮನೆ ತಲೆಯ ಮೇಲೊಂದು ಪಂಚೆಯನ್ನು ಬಿಡಿಸಿಕೊಂಡು ಸುತ್ತುತ್ತಿದ್ದ ಗಂಡಸರು ಕೆಲವರನ್ನು ಬಿಟ್ಟರೆ ಬೇರೆ ಜನರಿರಲಿಲ್ಲ. ಈಗ ಇವರ ಸ್ವರ ತಗ್ಗಿತ್ತು. ಆದರೂ ಒಬ್ಬರನ್ನೊಬ್ಬರು ಬಯ್ಯುವ ಕೆಲಸವನ್ನು ಮಾಡುತ್ತಲೇ ಇದ್ದರು. ನಡು ನಡುವೆ ಮುಂದಿನವ ಹಿಂತಿರುಗಿ ನೋಡುತ್ತಿದ್ದ ಮತ್ತು ಕೆಂಗಣ್ಣು ಬಿಟ್ಟು ಅವನನ್ನು ಹೆದರಿಸುವ ಪ್ರಯತ್ನ ಮಾಡುತ್ತಿದ್ದ. ಆದರೆ ಹಿಂದಿನವ ಯಾವುದಕ್ಕೂ ಜಗ್ಗುತ್ತಿರಲಿಲ್ಲ. ಮಾಡಿದ್ದು ತಪ್ಪೇ ಆದರೂ ಇವನ ಕೆಂಗಣ್ಣು ಈಡೇ ತನಗೆ ಎನ್ನುವಂತೆ ಗಂಟಲು ದೊಡ್ಡದು ಮಾಡುತ್ತಿದ್ದ. ಮಾಡಿದ ತಪ್ಪನ್ನು ಹೇಳುವ ಕ್ರಮದಲ್ಲಿ ಹೇಳಿದ್ದರೆ ತಾನು ಕ್ಷಮೆಯನ್ನು ಕೇಳಲೂ ತಯಾರಿದ್ದೆ ಎನ್ನುವ ಭಾವನೆಯೂ ಅವನ ಮಾತಿನಲ್ಲಿ ವ್ಯಕ್ತವಾಗುತ್ತಿತ್ತು. ಆದರೂ ಜನರಿಲ್ಲದ ಜಾಗದಲ್ಲಿ ಅವರ ಜಗಳದ ಬಿರುಸು ಕಡಿಮೆಯಾಗಿತ್ತು.

ಈಗ ಅವರಿಬ್ಬರೂ ಒಂದು ಹೊಳೆಯ ಬಳಿಗೆ ಬಂದಿದ್ದರು. ಆ ಹೊಳೆ ಊರನ್ನು ಎರಡು ಭಾಗ ಮಾಡಿತ್ತು. ರಾಷ್ಟ್ರೀಯ ಹೆದ್ದಾರಿಗೆ ಸಮಾಂತರವಾಗಿ ಹರಿಯುತ್ತಿದ್ದ ಆ ಹೊಳೆಯನ್ನು ದಾಟಲು ಮರದ ಸೇತುವೆಯನ್ನೊಂದು ಮಾಡಿದ್ದರು. ಗಿಡ್ಡ ಹಲಗೆಗಳನ್ನು ಒಂದಕ್ಕೊಂದು ಜೋಡಿಸುತ್ತ ಹೊಳೆ ಒಡಲು ಹೊಳೆಯಲ್ಲಿ ಹುಗಿದ ಸಾಲು ಸಾಲು ಕಂಬಗಳ ಮೇಲೆ ನಿರ್ಮಿಸಿ ಮಾಡಿದ ಆ ಸೇತುವೆಯನ್ನು ನೋಡಿದ ಅವರಿಬ್ಬರು ಅಲ್ಲಿಯೇ ನಿಂತಿದ್ದರು. ಮುಂದಿನವ ಆ ಸೇತುವೆಯ ಕಿತ್ತುಹೋಗಿದ್ದ ಮೊದಲಿನೆರಡು ಹಲಗೆಗಳ ಬಗ್ಗೆಯೇ ಚಿಂತಿಸುತ್ತ ಹೇಗೆ ಅದನ್ನು ದಾಟುವುದು ಎಂದು ಆಲೋಚಿಸುತ್ತಿದ್ದಾಗ ಹಿಂದಿನವ ಅವನನ್ನು ಬಯ್ಯುತ್ತ ನಿಂತಿದ್ದ.

ಒಂದಿಷ್ಟು ಜನ ಪೇಟೆಗೆ ಹೊರಟವರೋ ಏನೋ ಸೇತುವೆಯ ಇನ್ನೊಂದು ಬದಿಯಿಂದ ಬರುತ್ತಿರುವುದು ಕಾಣಿಸಿತು. ಅವರ ಹಿಂದೆಯೇ ಸ್ವಲ್ಪ ದೂರದಲ್ಲಿ ಇನ್ನಷ್ಟು ಜನ ಬರುತ್ತಿದ್ದರು. ಅವರು ನಡೆದು ಬರುತ್ತಿದ್ದ ಬದಿಯಲ್ಲಿ ಬತ್ತದ ಗದ್ದೆಗಳಿದ್ದುವು ಮತ್ತು ಆ ಗದ್ದೆಗಳಲ್ಲಿ ಕೆಲಸ ಮಾಡುತ್ತಿದ್ದ ಜನರೂ ಇದ್ದರು. ಆ ಜನರು ತಮ್ಮ ಕೆಲಸದಲ್ಲಿಯೇ ಮಗ್ನರಾದವರಂತೆ ಕಾಣಿಸುತ್ತಿರಲಿಲ್ಲ. ಸ್ವಲ್ಪ ಹೊತ್ತಿನಿಂದ ಸೇತುವೆಯ ಈಚೆಗೆ ನಿಂತು ದೊಡ್ಡ ದನಿಯಲ್ಲಿ ಜಗಳವಾಡುತ್ತಿದ್ದ ಇವರಿಬ್ಬರನ್ನು ಆಗಾಗ್ಗೆ ತಲೆಯೆತ್ತಿ ನೋಡುತ್ತಿದ್ದರು ಅವರು. ಕೆಲವು ಜನ ಇತ್ತ ಬರುತ್ತಿರುವುದನ್ನು ನೋಡಿ ಧೈರ್ಯದಿಂದಲೋ ಅಥವಾ ತಮ್ಮ ಕಡೆಯೇ ಗಮನವಿರುವ ಊರವರಿಂದ ಅಂತಹ ಅಪಾಯ ಕಾಲದಲ್ಲಿ ಏನಾದರೂ ಸಹಾಯವಾದೀತು ಎಂತಲೋ ಇಷ್ಟು ಹೊತ್ತೂ ಸೇತುವೆಯ ಕಿತ್ತುಹೋದ ಹಲಗೆಗಳನ್ನೇ ನೋಡುತ್ತ ನಿಧಾನವಾಗಿ ಮಾತಾಡುತ್ತಿದ್ದ ಮುಂದಿನವನೂ ಗಟ್ಟಿಯಾಗಿ ಬಯ್ಯಲಿಕ್ಕೆ ಆರಂಭಿಸಿದ. ಸ್ವರವನ್ನು ಸಾಧ್ಯವಿದ್ದಷ್ಟೂ ಏರಿಸಿ ಕೂಗಲಿಕ್ಕೆ ಸುರು ಮಾಡಿದನಾಗ ಒಮ್ಮೆ ತಗ್ಗಾಗುವ ಸೂಚನೆ ತೋರಿದ್ದ ಜಗಳಕ್ಕೆ ಕಾವೇರಿತು. ಇಷ್ಟು ಹೊತ್ತೂ ಮಾತಾಡುತ್ತಲೇ ಇದ್ದರೂ ಅವರು

ನಡೆಯುತ್ತ, ಇದ್ದುದರಿಂದ ಬರುವುದು ಬಿಸಿ ಈಗ ಬಂತು; ಇಷ್ಟು ಹೊತ್ತು ಮಾತಿನಲ್ಲಿಯೂ [illegible]ಸುತ್ತಿದ್ದ ಮುಂದಿನವ ಈಗ ಮಾತಿಗೂದ್ದು ಕೈ ಮೇಲೆ ಮಾಡುತ್ತ ಮುಂದಿನವನನ್ನು ನೋಡುವುದಕ್ಕೇ ಹೊರಟವನಂತೆ ಕಾಣಿಸುತ್ತಿದ್ದ. ಹಿಂದಿನವನೂ ಕಡಿಮೆಯೇನಿರಲಿಲ್ಲ. ಬಂದದ್ದನ್ನು ಎದುರಿಸಿಯೇ ಬಿಡುತ್ತೇವೆ ಎನ್ನುವ ಕೆಚ್ಚಿನಿಂದ ಕೆಂಪು ಕೈಗಳನ್ನು ಮೇಲಕ್ಕೇರಿಸುತ್ತಲೇ ಇದ್ದ.

ಅವರಿಬ್ಬರೂ ಒಬ್ಬರ ಮುಖವನ್ನೊಬ್ಬರು ನೋಡುತ್ತಲೇ ಇದ್ದರು. ಇವರಿಬ್ಬರದೂ ಒಂದೇ ಗಾತ್ರದ ಮೀಸೆಯಾದರೂ ಮುಂದಿನವನ ಮೀಸೆ ಬೆಳ್ಳಗಾಗಲಿಕ್ಕೆ ತೊಡಗಿತ್ತು. ಆದರೆ ಈಗ ಅವನ ಸ್ವರವೇನೂ ಮುಪ್ಪನ್ನು ತೋರಿಸುತ್ತಿರಲಿಲ್ಲ. ಹಿಂದಿನವನಿಗಿಂತ ಒಂದು ತೂಕ ಹೆಚ್ಚೇ ಆಗಿತ್ತು. ಜಗಳ ಒಂದೇ ಸಮನೆ ದೊಡ್ಡದಾಗುತ್ತ ನಡೆದಂತೆ ಅತ್ತಲೇ ಹೊರಟಿದ್ದ ಜನ ನಡಿಗೆಯನ್ನು ಚುರುಕುಗೊಳಿಸಿದ್ದರು. ಎಂಟು ಹತ್ತು ಜನ ಒಂದೇ ಸಲಕ್ಕೆ ಆ ಸೇತುವೆಯ ಮೇಲೆ ನಡೆಯುವುದು ಅಪಾಯವೆಂದು ತಿಳಿದೂ ಅವರು ತಮ್ಮ ಕುತೂಹಲವನ್ನು ಹತ್ತಿಕ್ಕಲಾರದೆ ಮತ್ತು ಒಬ್ಬೊಬ್ಬರೇ ಹೋಗುವುದಾದರೆ ಯಾರು ಮುಂದೆ ಹೋಗಬೇಕೆನ್ನುವುದರ ಬಗ್ಗೆ ನಿಷ್ಕರ್ಷೆಗೆ ಬರಲಾಗದೆ ಎಲ್ಲ ಒಟ್ಟಿಗೇ ಹತ್ತಿದ್ದರು. ಓಲಾಡುತ್ತಲೇ ಇದ್ದ ಸೇತುವೆಯನ್ನು ಜಾಗ್ರತೆಯಿಂದ ದಾಟಿ ಇವರು ಜಗಳ ಮಾಡುತ್ತಿದ್ದ ಜಾಗೆಯನ್ನು ತಲುಪಿದ್ದರು. ಅಷ್ಟರಲ್ಲಿ ಜಗಳ, ತುದಿಯನ್ನು ಮುಟ್ಟಿತ್ತು. ಮಾತಿನಿಂದ ಆರಂಭವಾದ ಜಗಳ ಮಾತಿನಲ್ಲೇ ಬೆಳೆದಿದ್ದು ಮುಗಿಯುವಾಗ ಮಾತ್ರ ಹೊಡೆದಾಟದ ರೂಪ ಪಡೆದಿತ್ತು. ಮಾತಿಗೆ ಮಾತನ್ನು ಬೆಳೆಸಲು ಸಾಧ್ಯವಾಗದೆಯೋ ಅಥವಾ ಹಿಂದಿನವನ ಮಾತಿನ ಖಾರವನ್ನು ಸಹಿಸಿಕೊಳ್ಳಲಾರದೆಯೋ ಮುಂದಿನವ ಹಿಂದಿನವನ ಕೊರಳಿಗೆ ಕೈ ಹಾಕಿ ಎಳೆದಿದ್ದ ಮತ್ತು ಕೆನ್ನೆಗೆ ಮೇಲೆರಡು ಬಿಟ್ಟಿದ್ದ. ಹಿಂದಿನವ ಇದನ್ನೆಲ್ಲ ನಿರೀಕ್ಷಿಸಿಯೇ ತಯಾರಿ ಮಾಡಿಕೊಂಡಿದ್ದನೋ ಅಥವಾ ಅವನಿಗಿದೆಲ್ಲ ಅಭ್ಯಾಸವೇ ಆಗಿತ್ತೋ ಅಂತೂ ಕ್ಷಣ ಕಳೆಯುವುದರಲ್ಲಿಯೇ ಮುಂದಿನವನ ದವಡೆಯ ಮೇಲೆ ಬಿಗಿಯಾಗಿ ಬಾರಿಸಿದ್ದ ಮತ್ತು ಕಾಲಿಗೆ ಕಾಲನ್ನು ಅಡ್ಡಕೊಟ್ಟು ಕೆಳಗೆ ಬೀಳಿಸಿ ಬಿಟ್ಟಿದ್ದ. ಜನ ನೋಡುತ್ತಿದ್ದವರು ಯಾರಾದರೊಬ್ಬರನ್ನು ಬಿಡಿಸಬೇಕು ಎಂದುಕೊಂಡು ಕಾರ್ಯಪ್ರವೃತ್ತರಾಗುವುದರೊಳಗೆ ಅವ ಕೆಳಗೆ ಬಿದ್ದಿದ್ದ. ಜೋರಾಗಿ ಬಿದ್ದಿದ್ದ ಅವ ಧೂಳಿನಲ್ಲಿ ಹೊರಳುತ್ತ ಮೈ ಕೈಗಳಿಗೆಲ್ಲ ಇನ್ನಷ್ಟು ಧೂಳನ್ನು ಅಂಟಿಸಿಕೊಳ್ಳುತ್ತ ಏಳಲು ಪ್ರಯತ್ನಪಡುತ್ತಿದ್ದಾಗಲೇ ಇನ್ನಷ್ಟು ಜನ ಸೇರಿದ್ದರು ಅಲ್ಲಿ. [illegible] ಹೋಗಿರುವುದನ್ನು ತಿಳಿದೇ ಕೆಲವರು ಬಂದಿದ್ದರೆ, ಇನ್ನೂ ಕೆಲವರು ಜನ ಹೆಚ್ಚು ಸೇರಿದುದನ್ನು ಕಂಡು ಬಂದಿದ್ದರು. ಕೆಲವರಂತೂ ತಮ್ಮ ಕೆಲಸವನ್ನು ಬಿಟ್ಟು ಬಂದಿದ್ದರು ಕುತೂಹಲದಿಂದ. ಈಚೆ ಬಯಲಿನಲ್ಲಿಯೇ ಕೆಲಸವಿಲ್ಲದೆ ಸುತ್ತುತ್ತಿದ್ದು ಇವರ ಜಗಳವನ್ನು ಇಷ್ಟು ಹೊತ್ತೂ ಉಪೇಕ್ಷೆಯಿಂದ ಕಂಡವರೂ ಈಗ ಓಡಿ ಬಂದಿದ್ದರು. ಒಟ್ಟಿನಲ್ಲಿ ಅಲ್ಲಿ ಜನಗಳ ಗುಂಪೇ ನೆರೆದಿತ್ತು.

ನೆರೆದ ಜನ ಅವರಿಬ್ಬರನ್ನು ಸುತ್ತುಗಟ್ಟಿದ್ದರು. ಹಿಂದೆ ನಿಂತವರು ಮುಂದಿನವರ ನಡುವೆ ಎಡೆಮಾಡಿಕೊಂಡು ಅವರನ್ನು ನೋಡುವ ಪ್ರಯತ್ನ ಮಾಡುತ್ತಿದ್ದರೆ ಮುಂದೆಯೇ ನಿಂತವರು ಒಂದೇಸಮನೆ ಇನ್ನೂ ಮಾತನಾಡುತ್ತಿದ್ದ ಅವರ ಭಾಷೆಯನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನ ಮಾಡುತ್ತಿದ್ದರು. ಆದರೆ ಯಾರಿಗೂ ಆ ಭಾಷೆ ಅರ್ಥವಾದಂತೆ ಕಾಣಿಸುತ್ತಿರಲಿಲ್ಲ. ಅವರು ಏನು ಹೇಳುತ್ತಿದ್ದರೆಂಬುದು ಯಾರಿಗೂ ತಿಳಿದಿರಲಿಲ್ಲ. ನಿಂತಿದ್ದವನೂ ಬಹಳ ಸುಸ್ತಾದವನಂತೆ ಕಾಣಿಸುತ್ತಿದ್ದ. ಕೆನ್ನೆಯನ್ನು ಎಡಗೈಯಿಂದ ನೀವಿಕೊಳ್ಳುತ್ತಿದ್ದ ಅವ ಬಿದ್ದಿದ್ದವನತ್ತ ಒಂದೇ ಸಮನೆ ಉಗುಳುತ್ತಿದ್ದ ಮತ್ತು ಬಯ್ಯುತ್ತಿದ್ದ. ಅಷ್ಟರಲ್ಲಿ

ಜನರ ಗುಂಪಿನಿಂದ ಒಂದಿಬ್ಬರು ಮುಂದೆ ಬಂದರು. ಕೆಲವು ಊರುಗಳನ್ನು ತಿರುಗಿ ಬಂದ ಅವರಿಗೆ ಅವನ ಭಾಷೆಯ ಜ್ಞಾನವಿದ್ದಿತು. ಒಂದಿಬ್ಬರು ನಿಂತವನೊಂದಿಗೆ ನೇರವಾಗಿ ಅವನ ಭಾಷೆಯಲ್ಲಿಯೇ ಮಾತನಾಡಲಿಕ್ಕೆ ತೊಡಗಿದಾಗ ಅವನಿಗೆ ತನ್ನ ಭಾಷೆಯನ್ನು ಅರ್ಥ ಮಾಡಿಕೊಳ್ಳುವವರೊಬ್ಬರು ಸಿಕ್ಕಿದರಲ್ಲ ಎಂದು ಬಹಳ ಸಂತೋಷವಾಗಿತ್ತು. ತನ್ನ ಅಹವಾಲನ್ನು ಕೇಳಿಕೊಳ್ಳಲು ಒಬ್ಬರಿದ್ದಾರಲ್ಲ ಎಂದು ಒಂದೇಸವನೆ ಹೇಳಿಕೊಳ್ಳಲಿಕ್ಕೆ ತೊಡಗಿದ. ಅವ ಹೇಳಿದ್ದನ್ನು ಇವರು ಜನರಿಗೆ ವಿವರಿಸಿದ್ದರು—ಇವ ತಮಿಳಿನವನಂತೆ—ಇಲ್ಲಿ ಏನೋ ವ್ಯಾಪಾರಕ್ಕೆಂದು ಬಂದವ—ಎಂದು ಹೇಳಿ ಅವನೊಂದಿಗೆ ಮಾತನ್ನು ಮುಂದುವರಿಸಿದ್ದರು.'

ಜನ 'ಓಹೋ...'ಎಂದು ತಲೆ ಅಲ್ಲಾಡಿಸುವಾಗ ಅವನ ಮಾತುಕತೆ ಮುಂದುವರಿದಿತ್ತು. ಅವ ನಡೆದ ಕಥೆಯನ್ನು ಹೇಳುತ್ತಿದ್ದ. ತಾನು ತಮಿಳಿನವನೇ ಆದರೂ ಕೆಲವು ವರ್ಷಗಳಿಂದ ಇಲ್ಲೇ ಒಂದಿಷ್ಟು ದೂರದ ಊರಿನಲ್ಲಿ ಮನೆ ಮಾಡಿಕೊಂಡಿರುವುದಾಗಿಯೂ ತನ್ನ ಹೆಂಡತಿ ಮಕ್ಕಳೆಲ್ಲ ಇನ್ನೂ ಅಲ್ಲಿಯೇ ಇದ್ದಾರೆಂತಲೂ ಹೇಳಿದ್ದ. ಇವತ್ತಿನ ಕಥೆಯನ್ನೂ ಹೇಳುತ್ತ ಆಕಸ್ಮಾತ್ತಾಗಿ ತಾನು ಅವನ ಕಾಲನ್ನು ಮೆಟ್ಟಿದಾಗ ಸರಿಯಾದ ರೀತಿಯಲ್ಲಿ ಅವ ಹೇಳಿದ್ದಿದ್ದರೆ ತಾನು ಅವನ ಕ್ಷಮೆ ಕೇಳಲಿಕ್ಕೂ ತಯಾರಿದ್ದನೆಂದೂ ಆದರೆ ಅಸಹ್ಯ ಬೈಗುಳಗಳನ್ನು ಸುರಿಮಾಡಿದುದು ತನಗೆ ಸಹ್ಯವಾಗಲಿಲ್ಲವೆಂದು ಹೇಳಿದ, ಇವರು ಅದನ್ನೆಲ್ಲ ಕೇಳಿ ಊರಿನವರಿಗೆ ಹೇಳುತ್ತಿದ್ದರು. ಜನ ಸಹಾನುಭೂತಿಯನ್ನು ತೋರಿಸುತ್ತಿದ್ದರು. ಆಕಸ್ಮಾತ್ತಾಗಿ ಮೆಟ್ಟಿನ ಹಿಂಬದಿಗೆ ಕಾಲು ತಾಗಿದ ಕೂಡಲೇ ಅಷ್ಟು ದೊಡ್ಡದು ಮಾಡಬೇಕೇ ಅದನ್ನು ಎಂದುಕೊಳ್ಳುತ್ತಾ ಅವರು ತ್ಚ್... ತ್ಚ್... ಎನ್ನುತ್ತಿದ್ದರು. ಅಷ್ಟು ಹೊತ್ತಿಗೆ ನೆಲದ ಮೇಲೆ ಬಿದ್ದವ ಎದ್ದಿದ್ದ. ಮುಖ ಅಡಿಯಾಗಿ ಬಿದ್ದವ ಮುಖವನ್ನು ತಿರುಗಿಸಿದಾಗ ಅದರ ರೂಪ ಅಸಹ್ಯವಾಗುವಷ್ಟು ಗಲೀಜಾಗಿತ್ತು. ಒಸಡು ಒಡೆದು ಸುರಿದ ರಕ್ತ ತುಟಿಗಳ ಮೇಲೆ ಅವನ ಕೋಟಿನ ಮೇಲೆಯೂ ಬಿದ್ದಿತ್ತು. ಮಾತು ಸರಿಯಾಗಿ ಬರದೆ ಬಾಯಿ ನಡುಗುತ್ತಿತ್ತು. ನಿಂತವನ ಕಡೆಗೆ ಕೈಚಾಚಿ ಏನೋ ಹೇಳಲಿಕ್ಕೆ ಹೊರಟಿದ್ದ ಆತ. ಜನ ಅವನತ್ತ ನೋಡತೊಡಗಿದರು. ಇಷ್ಟು ಹೊತ್ತು ನಿಂತವನ ಮಾತನ್ನೇ ಕೇಳುತ್ತ ಅವನ ಬಗ್ಗೆಯೇ ಅನುಕಂಪ ತೋರಿಸುತ್ತಿದ್ದವರ ಕಣ್ಣೆದುರೇ ಬಿದ್ದವನ ಕಡೆಗೆ ತಿರುಗಿತು. ಅವನ ಸ್ಥಿತಿ ಇವರಲ್ಲಿ ಮರುಕವನ್ನು ಹುಟ್ಟಿಸಿತು. ಅಸ್ಪಷ್ಟವಾಗಿ ಅವನ ಬಾಯಿಯಿಂದ ಹೊರಡುತ್ತಿದ್ದ ಮಾತುಗಳನ್ನು ಕಷ್ಟದಿಂದ ಪೋಣಿಸಿ ಅರ್ಥವನ್ನು ತಿಳಿದುಕೊಳ್ಳಲಿಕ್ಕೆ ಹೊರಟ ಅವರಲ್ಲಿ ಹೆಚ್ಚಿನವರಿಗೆ ಅದು ಸಾಧ್ಯವಾಗಲಿಲ್ಲ. ಅವನೂ ಸಹ ತಮಗೆ ತಿಳಿಯದ ಒಂದು ಭಾಷೆಯ. ಎಂದುಕೊಂಡಾಗ ಜನರಿಗೆ ಸೋಜಿಗವೆನಿಸಿತು. ಈಗ ಪುನಃ ಇಷ್ಟು ಹೊತ್ತು ಆ ನಿಂತಿದ್ದವನ ಜತೆಗೆ ಮಾತನಾಡುತ್ತಿದ್ದವರೇ ಇವನ ಸಹಾಯಕ್ಕೆ ಬರಬೇಕಾಯಿತು.

ಅವನು ಮರಾಠಿ ಮಾತನಾಡುತ್ತಿದ್ದ ಮಾತ್ರ ನಡುನಡುವೆ ಕೆಲವು ಕನ್ನಡ ಶಬ್ದಗಳನ್ನೂ ಸೇರಿಸುತ್ತಿದ್ದ. ಪ್ರಯತ್ನಪಟ್ಟು ಕೈಯೂರಿ ನೆಲದ ಮೇಲೆ ಕುಳಿತುಕೊಂಡವ ನಿಲ್ಲುವ ಪ್ರಯತ್ನವನ್ನೂ ಮಾಡಿ ಸ್ವಲ್ಪ ಹೊತ್ತು ಅದು ಸಾಧ್ಯವಿಲ್ಲವೇನೋ ಎಂದೆಣಿಸಿ ಕುಳಿತಲ್ಲಿಂದಲೇ ಕಥೆ ಹೇಳಲಾರಂಭಿಸಿದ. ಜನರೆಲ್ಲ ಅವನತ್ತಲೇ ಗಮನ ಹರಿಸಿದ್ದರು. ಅವನ ಹಾವಭಾವಗಳಿಂದಲೇ ಸಾಕಷ್ಟು ಅರ್ಥ ಮಾಡಿಕೊಂಡ ಅವರು ನಡುನಡುವೆ ಆ ಮಧ್ಯವರ್ತಿ ಕೊಡುತ್ತಿದ್ದ ವಿವರಣೆಯಿಂದಾಗಿ ಪೂರ್ತಿಯಾಗಿ ತಿಳಿದುಕೊಂಡಿದ್ದರು. ಅವ ಉತ್ತರ ಕರ್ನಾಟಕದ ಮಹಾರಾಷ್ಟ್ರದ ಬದಿಯಲ್ಲಿಯ ಹಳ್ಳಿಯವನಂತಲೂ ಎಮ್ಮೆ ದನ ದಳ ವ್ಯಾಪಾರಿ ತಾನು... ಈ ಊರಿನಲ್ಲಿ ಒಂದೆರಡು ಎಮ್ಮೆಗಳು ಮಾರಾಟಕ್ಕಿವೆಯೆಂದು ಯಾರೋ ಹೇಳಿದುದರಿಂದ ಅಲ್ಲಿಯೇ ಸುತ್ತಮುತ್ತ ಊರುಗಳಲ್ಲಿ ತಿರುಗುತ್ತಿದ್ದವ

ಇವತ್ತು ಇಲ್ಲಿಗೆ ಬಂದವರಿಗೂ [illegible] ಆ [illegible] ಬಂಜವಾನವರುಗಳ ಹೆಸರನ್ನೂ ಅರ್ಧಂಬರ್ಧ ಹೇಳಿದ. ಆ ಗುಂಪಿನಲ್ಲಿಯೇ ಇದ್ದ ಅವರ ಕಿವಿ ಚಟ್ಟಗಾಗುವಾಗ ತನ್ನ ಕಥೆ ಮುಂದುವರಿಸಿದ್ದ. ತಾನು ಸುಮ್ಮನೇ ಬರುತ್ತಿದ್ದಾಗ [illegible] ಬಂದ ಅವ ತನ್ನ ಕಾಲಿಗೆ ಅಡ್ಡ ಕೊಟ್ಟು ಬೇಕೆಂದೇ ಜಗಳ ತೆಗೆದದ್ದು ಮತ್ತು ಇಲ್ಲಿ ಸೇತುವೆಯ ಹತ್ತಿರ ನಿಂತು ಅದನ್ನು ದಾಟಲು ಅನುಮಾನಿಸುತ್ತಿದ್ದಾಗ ಪುನಃ ಜಗಳ ತೆಗೆದು ತನ್ನ ಮೇಲೆ ಕೈ ಮಾಡಿದ್ದು, ಮೇಸುಂಡಿ ಒಡೆಯುವಂತೆ [illegible] ಎಲ್ಲ ಹೇಳುವಾಗ ಅವನ ಬಗ್ಗೆ ಜನರ ಅನುಕಂಪ ಮೇರೆಮೀರಿತ್ತು. ಅವನನ್ನು ಆ ಅವಸ್ಥೆಗೆ ತಂದ ಇನ್ನೊಬ್ಬನನ್ನು ತಡುಕಿಯೇ ಬಿಡುವ ಬಯಕೆ ಬೆಳೆದಿತ್ತು. ಇಷ್ಟೆಲ್ಲ [illegible] ಜನ ತದೇಕಚಕ್ಷುರಾಗಿ [illegible] ಕಥೆಯನ್ನು ಕೇಳುತ್ತಿದ್ದಾಗ [illegible] ನಿಧಾನವಾಗಿ ಗುಂಪಿನ ನಡುವಿನಿಂದ [illegible]ಗೆ ಚಲಿಸುತ್ತಿದ್ದವ ಜನರ ಸಿಟ್ಟು ಪೂರ್ತಿಯಾಗಿ ತನ್ನೆಡೆಗೆ ತಿರುಗುವಾಗ ಗುಂಪಿನ ಅತೀ ಹೊರಸುತ್ತಿನಲ್ಲಿ ಇದ್ದ ಮತ್ತು ಜನ ಈಗ ತನ್ನನ್ನು ಹಿಡಿದು [illegible] ಬಿಡುತ್ತಾರೆ ಎನ್ನಿಸಿದಾಗ ಒಂದೇ ಸಮನೆ ಓಡಿದ್ದ. ಜನ [illegible] ಮಾರಿ-[illegible] ಪಕ್ಕ-[illegible] ಇದ್ದ [illegible] ಹಾರಿ ಅದರ ಬದಿಯಲ್ಲಿ ಬೆಳೆದ ಹಳುಗಳ ಹಿಂದೆ ಮುಂದೆ ಮರೆಯಾಗುತ್ತ ಓಡಿದ್ದ. ಒಂದಿಬ್ಬರು ಸ್ವಲ್ಪ ದೂರ ಅವನನ್ನು ಬೆಂಬತ್ತಿದರೂ ಸಾಧ್ಯವಾಗದೆ ಪುನಃ ಗುಂಪಿನಲ್ಲಿಗೇ [illegible]. ತಮ್ಮ ಅಸಹಾಯಕತೆಯ ಬಗ್ಗೆ [illegible] 'ಗೊತ್ತು [illegible] ಬೇಕು. ಅವ ಒಳ್ಳೇ ಜೋರಿನಿಂದ ಓಡಿದ... ಕಳ್ಳ' ಎಂದು ತೃಪ್ತಿಪಟ್ಟುಕೊಳ್ಳುತ್ತಿದ್ದರು. [illegible] ಕೊಳ್ಳಗಳನ್ನು ಹಾರಿ ಅಷ್ಟು ಜನರಿಂದಲೂ ತಪ್ಪಿಸಿಕೊಂಡು ಓಡಿದ ಆತನನ್ನು ಕಂಡು [illegible] ಅದೇನೂ ಉತ್ಪ್ರೇಕ್ಷೆಯೆನಿಸ-[illegible]. [illegible] ಇದ್ದ-ವನ ಬಗ್ಗೆ ವಿಚಾರಕ್ಕೆ ತೊಡಗಿದರು.

ಮೈ ಮೇಲೆಲ್ಲ ರಕ್ತವನ್ನು ಸುರಿಸಿಕೊಂಡ ಆತ ನೋಡಲು ಅಸ[illegible] ಕಾಗಿದ್ದ. ಆದರೂ ಒಂದಿಬ್ಬರು ಅವನ ರಟ್ಟೆಗೆ ಕೈಕೊಟ್ಟು ಮೇಲೆತ್ತುವ [illegible] ಮಾಡಿದರು. ಅವ ಫಕ್ಕನೆ ಮೇಲೇಳಲಿಲ್ಲ ಮತ್ತು ಉಳಿ[illegible] ಯಾರೂ ಅವನನ್ನೆಬ್ಬಿಸಲು ಮುಂದೆ ಬರಲೂ ಇಲ್ಲ. ಆದ್ದರಿಂದ ಅವರೂ ಆ ಪ್ರಯತ್ನವನ್ನು ಕೈಬಿಟ್ಟರು. ಅವನೂ ಬಾಯಿಯಲ್ಲಿ ಏನನ್ನೋ ಮಣಗುಟ್ಟುತ್ತ ಕೈಯಿಂದ ಬೇಡ ಬೇಡವೆಂದು ಸನ್ನೆ ಮಾಡುತ್ತಲೇ ಇದ್ದ.

ಸುತ್ತುಗಟ್ಟಿದ್ದ ಜನ ತಮ್ಮಷ್ಟಕ್ಕೆ ಮಾತಾಡಿಕೊಳ್ಳುತ್ತಿದ್ದರು. ಕೆಲವರು ಅವನ ಮುಂದಿನ ಪರಿಸ್ಥಿತಿಯ ಬಗ್ಗೆ, ಅವನನ್ನು ಏನು ಮಾಡಿದರೆ ಸರಿಯಾದೀತು ಎಂದು ಆಲೋಚಿಸುತ್ತಿದ್ದರು. ಅವನು ಚೇತರಿಸಿಕೊಂಡಿದ್ದನ್ನು [illegible] ಕೆಲವರ ಆಲೋಚನೆ ಮರ ಕಡಿಯುವ ವರೆಗೂ ಹೋಗಿತ್ತು. ಮರ ಕಡಿಯುವವರು ಯಾರು .. ಸುಡುವವರು ಯಾರು ಮತ್ತು ಮರವನ್ನು ಪುಕ್ಕಟೆಯಾಗಿ ಯಾರು ಕೊಟ್ಟಾರು ಎಂದೂ ಚಿಂತಿಸುತ್ತಿದ್ದರು. ಇನ್ನು ಕೆಲವರು ಪೋಲೀಸರನ್ನು ಕರೆತಂದರೆ [illegible] ಎಂದೂ ಯೋಚಿಸುತ್ತಿದ್ದರು. ಆದರೆ ಅವ ಅಷ್ಟರಲ್ಲಿ ಪೂರ್ತಿಯಾಗಿ ಚೇತರಿಕೊಂಡಿದ್ದ. ತಾನಾಗಿಯೇ ನಿಂತುಕೊಳ್ಳುವ ಹಾಟ್ಟಿಗೆ ಸಾಧ್ಯವಾದ [illegible] ನಿಧಾನವಾಗಿ ನಡೆ-ಯಲಿಕ್ಕೆ ತೊಡಗಿದಾಗ ಜನ ದಾರಿ ಮಾಡಿಕೊಟ್ಟರು. ಇಳಿಜಾರಿನ ದಾರಿ-ಯಲ್ಲಿ ಇಳಿಯಲಿಕ್ಕೆ ತೊಡಗಿದಾಗ ಅವ ಹೊಳೆಗಾ[illegible]ಕೆ ಇಳಿಯುತ್ತಿದ್ದಾನೆಂದು ಕೆಲವರು ಗಾಬರಿ ಪಟ್ಟರೆ ಕೆಲವರು ಇನ್ನೂ ಅವನ ಆಸಕ್ತದ ಬಗ್ಗೆಯೇ ಆಲೋಚಿಸುತ್ತ, ನಿಂತರೆ ಅವ ನೀರಿಗೆ ಬಿದ್ದು ಸತ್ತೇ ಬಿಡುತ್ತಾನೆ ಎನ್ನಿಸಿ ಅವನೆರಡು ರಟ್ಟೆಗಳಿಗೆ ಕೈಹಾಕಿ ಇಳಿಸಿದರು. ಹೊಳೆಯ ನೀರಿನಲ್ಲಿ ಅವ ಕೈಕಾಲು ಮುಖ ತೊಳೆದುಕೊಂಡ. ನೀರನ್ನು ಸಿಂಪಡಿಸಿ

ಕೋಟಿನ ಮೇಲಿನ ರಕ್ತದ ಕಲೆಗಳನ್ನು ಸಾಧ್ಯವಾದಷ್ಟು ತೊಳೆದುಕೊಂಡ. ಬಾಯಿಯನ್ನು ಮುಕ್ಕಳಿಸಲೆಂದು ನೀರನ್ನು ಬಾಯಿಯಲ್ಲಿ ಹಾಕಿಕೊಂಡವನಿಗೆ ನೀರು ಉಪ್ಪೆಂಬುದು ತಿಳಿದು ಚಕ್ಕನೇ ಉಗಿದ ಮತ್ತು ಮೇಲಕ್ಕೆ ಓಡಿ ಬಂದ. ಒಸಡಿನಲ್ಲಿ ರಕ್ತವಿನ್ನೂ ಒಸರುತ್ತಿತ್ತು. ಬಂದವ ದಂಡೆಯ ಮೇಲೆ ಪುನಃ ಕುಳಿತ. ಜನರತ್ತ ನೋಡ ತೊಡಗಿದವ ಸ್ಪಷ್ಟ ದನಿಯಿಂದ ಇಷ್ಟು ಹೊತ್ತು ತನ್ನೊಡನೆ ಮಾತನಾಡುತ್ತಿದ್ದವನೊಡನೆ ನಿಧಾನವಾಗಿ ಮಾತಾಡತೊಡಗಿದ. ಮಧ್ಯ ಮಧ್ಯ ಅವ ಏದುತ್ತಿದ್ದರೂ ಮಾತು ಅರ್ಥವಾಗುವ ಮಟ್ಟಿಗೆ ಸ್ಪಷ್ಟವಿತ್ತು. ಅವನ ಮುಖದ ಮೇಲಿನ ಭಾವನೆಗಳನ್ನು ಕಂಡು ಮತ್ತು ಅವನ ಕೈಬಾಯಿಗಳ ಹಾವಭಾವಗಳಿಂದ ಅವನೇನನ್ನುತ್ತಿದ್ದಾನೆಂಬುದನ್ನು ಊಹಿಸಿಕೊಂಡೇ ಸುತ್ತಲಿದ್ದ ಭಾಷೆ ತಿಳಿಯದ ಜನರೂ ಅವನ ಬಗ್ಗೆ ಅನುಕಂಪವನ್ನು ತೋರಿಸುತ್ತಿದ್ದರು.

ತನ್ನ ಪುರಾಣವನ್ನು ಮುಂದುವರಿಸಿಯೇ ಇದ್ದ. ಆತ ತಾನು ಬಂದ ಕೆಲಸದ ಬಗ್ಗೆ ಹೇಳುವಾಗ ಥಕ್ಕನೇ ಏನೋ ನೆನಪಾದವನಂತೆ ಜೇಬು ಮುಟ್ಟಿಕೊಂಡ; ಗಾಬರಿಯಾಯ್ತು. ಕೋಟಿನ ಸಂದಿ ಸಂದಿಗಳಲ್ಲಿ ಕೈ ಇಳಿಸಿದಲ್ಲೆಲ್ಲ ಸಿಗುವ ಜೇಬುಗಳಲ್ಲಿ ಕೈಹಾಕಿದ. ಗಾಬರಿ ಹೆಚ್ಚಾಯಿತು. ಇನ್ನೂ ಕೆಲವು ಕಡೆ ಕೈಹಾಕಿ ಕೈ ಹಾಗೆಯೇ ವಾಪಾಸು ಬಂದಾಗ ಒಂದೇ ಸಮನೆ ಬೊಬ್ಬೆ ಹೊಡೆಯಲಿಕ್ಕೆ ಸುರುಮಾಡಿದ. ಜನ ಏನೆಂದು ಅರ್ಥವಾಗದೆ ಮಿಕಿ ಮಿಕಿ ನೋಡಲಿಕ್ಕೆ ತೊಡಗಿದ್ದರು. ಈ ಬಗ್ಗೆ ತಮ್ಮ ಕಾಳಜಿಯನ್ನು ಹೇಗೆ ತೋರಿಸುವುದೆಂದು ತಿಳಿಯದೆ ಒದ್ದಾಡುತ್ತಿದ್ದರು. ಅವನೊಂದಿಗೆ ಮಾತಾಡುತ್ತಿದ್ದವರು ಕೇಳಿದರು.— ವಿಷಯ ಏನೆಂದು. ಹೇಳಲು ಅವ ಪ್ರಯತ್ನ ಪಟ್ಟರೂ ವಿಷಯ ಹೊರಬರಲಿಲ್ಲ. ದುಃಖವನ್ನುಂಗಿಷ್ಟು ಪ್ರಯತ್ನ ಪಟ್ಟು ತಡೆಹಿಡಿದುಕೊಳ್ಳುತ್ತ ನಡು ನಡುವೆ ನಿಲ್ಲಿಸುತ್ತ ಮಾತನಾಡಿದ. ಅವನ ಮಾತುಗಳನ್ನು ಒಟ್ಟು ಪೋಣಿಸಿದಾಗ— ವ್ಯಾಪಾರಕ್ಕೆಂದು [illegible] ಆವ ಯಾರಿಂದಲೋ ಸಾಲ ಮಾಡಿ ಅಡ್ವಾನ್ಸ್ ಕೊಡುವ ಸಲುವಾಗಿ ತಂದ ಐನೂರು ರೂಪಾಯಿಗಳು ಈಗ ಅವನ ಬಳಿಯಲ್ಲಿಲ್ಲ ಎಂದು ತಿಳಿಯಿತು. ಜನ ಬೆರಗಾದರು. ತಲೆಗೊಂದು ಮಾತಾಡಲಿಕ್ಕೆ ತೊಡಗಿದರು. ಆ ಓಡಿಹೋದ ಇನ್ನೊಬ್ಬನದೇ ಈ ಕಿತಾಪತಿ ಎನ್ನುವ ಒಮ್ಮತದ ತೀರ್ಮಾನಕ್ಕೆ ಬರುವಲ್ಲಿ ಅವರಿಗೇನೂ ಕಷ್ಟವಾಗಲಿಲ್ಲ. ಕೆಲವರು ಇನ್ನಾದರೂ ಅವನು ಓಡಿದ ದಾರಿಯಲ್ಲಿಯೇ ಓಡಿ ಅವನನ್ನು ಹಿಡಿಯುವುದು ಒಳ್ಳೆಯದೆಂದರು. ಸ್ವಲ್ಪ ಆಲೋಚನೆಯಿದ್ದವರು ಅಥವಾ ಓಡಲಿಕ್ಕೆ ಮನಸ್ಸಿಲ್ಲದವರು, 'ಅಲ್ಲಿ ಬೇಕಾದಷ್ಟು ಬೊಂಬಾಯಿಗೆ ಹೋಗುವ ಬಸ್ಸುಗಳು ತಿರುಗುತ್ತವೆ ಈಗ ಈ ಹೆದ್ದಾರಿಯ ಮೇಲೆ. ಅವ ಇನ್ನೂ ಅಲ್ಲೇ ನಿಂತಿರುತ್ತಾನೆಯೆ? ಯಾವುದಾದರೂ ಬೊಂಬಾಯಿಯ ಬಸ್ಸನ್ನು ಹತ್ತಿಕೊಂಡು ಹೋಗಿದ್ದಾನು...' ಎಂದರು. ಜನ ಹೌದೆನ್ನುವಂತೆ ತಲೆ ಅಲ್ಲಾಡಿಸಿದಾಗ ಪೋಲೀಸ್ ಸ್ಟೇಷನ್ನಿಗೆ ಕಂಪ್ಲೇಂಟ್ ಕೊಡುವುದೇ ಪ್ರಶಸ್ತ ಎಂದು ಕೆಲವರೆಂದರು. ಅಲ್ಲಿಯೂ ಪೋಲೀಸರ ಕಾರ್ಯಶ್ರದ್ಧೆಯ ಬಗ್ಗೆ ಕೆಲವರು ಸಂಶಯ ವ್ಯಕ್ತಪಡಿಸಿದಾಗ ಅದೂ ಅಲ್ಲಿಗೇ ನಿಂತಿತು. ಅವನ ಗೋಳಾಟ ಮಾತ್ರ ಮುಂದುವರಿದೇ ಇತ್ತು. ಮನೆಮಾರೆಲ್ಲ ಕಳೆದುಹೋದವರಂತೆ ಬೊಬ್ಬಿಡುತ್ತಿದ್ದ ಅವ. ತನಗಿನ್ನು ಗತಿಯೇ ಇಲ್ಲವೇನೋ ಎನ್ನುವಂತೆ ಅಳುತ್ತಿದ್ದ ಅವನ ಬಗ್ಗೆ ಜನರಿಗೆ ಈಗ ಬರಿಯ ಅನುಕಂಪ ಮಾತ್ರವಲ್ಲ ಒಂದು ತೆರನ ಆತ್ಮೀಯ ಭಾವನೆಯೂ ಬರಲಿಕ್ಕೆ ಹತ್ತಿತು, ಅದರಲ್ಲಿಯೂ ಅವನೊಬ್ಬ [illegible] ವ್ಯಾಪಾರಿಯೆಂದು ತಿಳಿದುದರಿಂದ ಬರಡೆಮ್ಮೆಗಳನ್ನು ಕಟ್ಟಿಕೊಂಡವರು ಇವನೊಬ್ಬ ತಮ್ಮ ಸರಕಿಗೆ ಒಳ್ಳೆಯ ಗಿರಾಕಿಯಾಗುತ್ತಿದ್ದ ಎಂದು ಎಣಿಸಿಕೊಂಡಾಗಲಂತೂ ಅವ ಅವರಿಗೆ ತೀರ ಸಮೀಪದವನಾಗಿ ಕಂಡಿದ್ದ.

ಜನ ತಮ್ಮತಮ್ಮಲ್ಲಿಯೇ ಮಾತಾಡಿಕೊಳ್ಳ

ಲಿಕ್ಕೆ ತೊಡಗಿದರು. ಅವನ ಪರಿಸ್ಥಿತಿಯ ಬಗ್ಗೆ ಕನಿಕರ ತೋರಿಸಲಿಕ್ಕೆ ತೊಡಗಿದ ಜನರೆಲ್ಲ ಅವನ ಈ ಕಷ್ಟವನ್ನು ತಮ್ಮದೆಂಬೇ ಭಾವಿಸಿ ಮಾತಾಡಲಿಕ್ಕೆ ತೊಡಗಿದ್ದರು. ಬರತೆಪ್ಪೆಯ ಮಾಲೀಕರು ಅವನ ಬಗ್ಗೆ ಒಂದೆರಡು ಒಳ್ಳೆಯ ಮಾತುಗಳನ್ನು ಹೇಳಿದಾಗ ಉಳಿದವರು ತಾವು ಅವರಿಗಿಂತೇನು ಕಮ್ಮಿ ಎಂದು ಇನ್ನೂ ಒಂದು ಹೆಜ್ಜೆ ಮುಂದೆ ಹೋದರು. ಒಬ್ಬರಂತೂ, 'ನಾವೆಲ್ಲ ಸೇರಿ ಅವನಿಗಷ್ಟು ದುಡ್ಡನ್ನು ಒಟ್ಟು ಮಾಡಿ ಕೊಡಬಾರದು ಯಾಕೆ...' ಎಂದೇ ಬಿಟ್ಟದ್ದರು. ಆಡಿದ ಮೇಲೆ ಮಾತು ಮುಂದಾಯಿತೇನೋ ಎಂದು ತುಟಿ ಕಚ್ಚಿಕೊಂಡರೂ ತಮ್ಮ ಹೆಸರೇ ಮುಂದೆ ಬರಬೇಕೆಂಬ ಆಸೆಯುಳ್ಳವರು ಆ ಮಾತಿನ ಎಳೆಯನ್ನೇ ಜಗ್ಗಿದರು. 'ಛೆ... ಹೌದು ನಮ್ಮೂರಿಗೆ ಬಂದು ಅವರಿಗೆ ಹೀಗಾಗುವುದೇ... ಅನ್ಯಾಯ... ನಮ್ಮ ಊರಿಗೇ ಕೆಟ್ಟ ಹೆಸರು...' ಎಂದರು. ಮಾತು ಹಾಗೆಯೇ ಮುಂದುವರಿದಾಗ ಆ ಕ್ರಮದ ಬಗ್ಗೆ ವಿರೋಧವೇ ಬರಲಿಲ್ಲ. ಒಂದಿಬ್ಬರ ಮನಸ್ಸಿನಲ್ಲಿ ತಾವು ಸುಮ್ಮನೆ ಯಾಕೆ ಕಾಸು ಕಳೆದುಕೊಳ್ಳಬೇಕು ಎಂಬುದು ಬಂದರೂ ನಾವೊಬ್ಬರು ಬೇಡವೆಂದು ಸುಮ್ಮನೆ ಕಾಸುಗಳ್ಳರೆಂಬ ಅಪವಾದಕ್ಕೆ ಗುರಿಯಾಗುವುದು ಬೇಡ ಎಂದು ಬಹುಮತಕ್ಕೆ ತಲೆ ಅಲ್ಲಾಡಿಸಿದರು. ಬಾಯಿಂದ ಬಾಯಿಗೆ ವಿಷಯ ಮುಟ್ಟಿದ್ದೇ ತಡ ಅದು ತೀರ್ಮಾನವಾದಂತೆಯೇ ಆಯಿತು. ಜನ ಈ ವಿಷಯವನ್ನು ಮಧ್ಯವರ್ತಿಯಾಗಿ ಕೆಲಸ ಮಾಡುತ್ತಿದ್ದವರ ಮೂಲಕ ಅವನ ಕಿವಿಯ ಮೇಲೆ ಹಾಕಿದರು. ಸುದ್ದಿ ಕೇಳಿದ ಅವ ಒಮ್ಮೆಲೇ ಹೌಹಾರಿದ. 'ಛೆ... ಛೆ... ಬೇಡ' ಬೇಡ ಎನ್ನುವಂತೆ ಕೈ ಅಲ್ಲಾಡಿಸಿದ ತನ್ನ ಭಾಷೆಯಲ್ಲಿಯೇ 'ಅಯ್ಯೋ ಅನ್ಯಾಯ... ಅನ್ಯಾಯ ಆ ಬಡ್ಡೀ ಮಗ ನನ್ನ ದುಡ್ಡು ಹೊಡೆದುಕೊಂಡು ಹೋದುದಕ್ಕೆ ನಾನು ನಿಮಗೆ [illegible] ಹಾಕಿದ್ರೆ... ದೇವರು ಮೆಚ್ಚ್ಯಾನೇ... ಬೇಡ... ಬೇಡ ಸ್ವಾಮಿ...' ಎಂದು ಕೈ ಮುಗಿದ. ಜನ ಅವನ ಬಗ್ಗೆ ಅಭಿಮಾನ ತಾಳಿದರು. ಏನು ಕೊಡುವಲ್ಲಿ [illegible] ಕೊಟ್ಟರೂ ತೊಂದರೆಯಿಲ್ಲ. ಅಪಾತ್ರನಿಗೇನೂ ದಾನ ಮಾಡುತ್ತಿಲ್ಲ ಎನ್ನುವ ತೃಪ್ತಿ ಕಾಣುತ್ತಿತ್ತು ಅವರಲ್ಲಿ.

ಅವರು ತಡಮಾಡಲಿಲ್ಲ. ಜೇಬಿನೊಳಗೆ ಹೋಗಿ ಬಂದ ಪ್ರತಿಯೊಂದು ಕೈಯಲ್ಲಿಯೂ ಐದರ, ಹತ್ತರ, ನೋಟುಗಳು ಕಾಣಿಸಿದುವು. ಇಷ್ಟು ಹೊತ್ತು ಅವನೊಂದಿಗೆ ಮಾತನಾಡುತ್ತ ನಿಂತವರೇ ಎರಡೂ ಕೈಗಳಲ್ಲಿ ಪಂಚೆಯನ್ನು ಬಿಡಿಸಿ ಹಿಡಿದುಕೊಂಡು ಎಲ್ಲರ ನಡುವೆ ದಾರಿ ಮಾಡಿಕೊಂಡು ಒಮ್ಮೆ ತಿರುಗಿ ಬಂದರು. ಜನ ನಾ ಮುಂದು ತಾ ಮುಂದು ಎಂದು ಅವರ ಬಟ್ಟೆಯ ಮೇಲೆ ತಮ್ಮ ಕೈಯಲ್ಲಿದ್ದುದನ್ನು ಸುರುವಿದರು. ದುಡ್ಡಿಲ್ಲದವರು ಪಕ್ಕದವನಿಂದ ಸಾಲ ತೆಗೆದುಕೊಂಡು ಹಾಕಿದರು. ಕೆಲವರು ಪಕ್ಕದವ ಎಷ್ಟು ಕೊಡುತ್ತಿದ್ದಾನೆ ಎನ್ನುವುದನ್ನು ಸೂಕ್ಷ್ಮವಾಗಿಯೇ ಗಮನಿಸಿ ಅವರ ಮೇಲೆ ತಾವು ಎಷ್ಟು ಕೊಡಬೇಕನ್ನುವುದನ್ನು ನಿಶ್ಚಯಿಸುತ್ತಿದ್ದರು. ಮತ್ತು ತಮಗೂ ಅವರಿಗೂ ಇರುವ ಅಂತಸ್ತಿನ ಅಂತರವನ್ನು ಗಮನಿಸಿ ತಮ್ಮ ಕೊಡುಗೆಯಲ್ಲಿಯೂ ಆ ಅಂತರವನ್ನೇ ಉಳಿಸಿಕೊಳ್ಳಬೇಕೆಂದು ಪ್ರಯತ್ನ ಮಾಡಿದರು. ಪೇಟೆಗೆ ಹೊರಟವರಷ್ಟೇ ಅಲ್ಲ, ಕೆಲಸಕ್ಕೆಂದು ಗದ್ದೆಗಳ ಬದಿಗೆ ಬಂದವರೂ ಇದ್ದರು. ಕೈಯಲ್ಲಿ ದುಡ್ಡಿಲ್ಲದೆ ಬಂದ ಅವರು ಇಂತಹ ಒಳ್ಳೆಯ ಕೆಲಸಕ್ಕೂ ತಮ್ಮ ಹತ್ತಿರ ಹಣವಿಲ್ಲದೆ ಹೋಯ್ತಲ್ಲ ಎಂದು ಮರುಗುತ್ತಿದ್ದರು. ಯಾರು ಯಾರದೋ ಮನೆಯ ಕೂಲಿಯ ಕೆಲಸಕ್ಕೆ ಬಂದ ಹೆಂಗಸರಂತೂ ಕೆಲಸದ ನಡುವೆ ಬೇಯಿಸಿದ ಗೆಣಸನ್ನೋ ಐಸ್ ಕ್ಯಾಂಡಿಯನ್ನೋ ಹೊತ್ತುಕೊಂಡು ತರುವವನೊಂದಿಗೆ ವ್ಯಾಪಾರ ಮಾಡಲಿಕ್ಕೆಂದು ತಂದ ಪುಡಿಗಾಸುಗಳನ್ನೇ ಹಾಕಿದರು. ಒಂದು ಸುತ್ತು ಸುತ್ತಿ ಬರುವಾಗ ಅವರ ಪಂಚೆ ಬಹಳಷ್ಟು ಭಾರವಾಗಿತ್ತು. ಅವನ್ನೆಲ್ಲ ತಂದ

ವರು ಈಗ ಕುಳಿತಿದ್ದವನ ಪಕ್ಕದಲ್ಲಿಯೇ ಸುರಿದರು ಮತ್ತು ಲೆಕ್ಕ ಮಾಡಲು ತೊಡಗಿದರು. ಒಂದೊಮ್ಮೆ ಆತ ಈ ಹಣದ ರಾಶಿಯನ್ನು ಕಂಡರೂ ವಂತೆ ಎತ್ತಲೋ ನೋಡುತ್ತ ನಿರ್ಲಿಪ್ತನಂತೆ ಕುಳಿತ. ತೊಳೆದರೂ ಹೋಗದ ಕೋಟಿನ ಮೇಲಿನ ರಕ್ತದ ಕಲೆಯನ್ನು ಕೈಯ ಉಗುರಿನಿಂದ ಕೆರೆಯುತ್ತಲೋ, ಇನ್ನೂ ರಕ್ತ ಒಸರುತ್ತಿದ್ದ ತುಟಿಯನ್ನು ಬೆರಳಿನಿಂದ ಸವರುತ್ತಲೋ ಇದ್ದ.

ಜನ ದಾನ ಮಾಡಿದವರು ಅವನನ್ನು ನೋಡುತ್ತಲೇ ಇದ್ದರು. ಲೆಕ್ಕ ಮುಗಿದಿತ್ತು. ಒಟ್ಟಿಗೆ ಸುಮಾರು ನಾನೂರು ರೂಪಾಯಿಗಳು ಕೂಡಿದ್ದವು. ಇಷ್ಟರವರೆಗೆ ಗುಂಪಿನ ಮುಂದಾಳ್ತನವನ್ನು ತಾನೇ ವಹಿಸಿಕೊಂಡು ದುಡ್ಡನ್ನು ವಸೂಲಿ ಮಾಡಿ ಲೆಕ್ಕವನ್ನು ಮಾಡಿದವರು ಅದನ್ನು ಒಂದು ದೊಡ್ಡ ನಿಧಿಯನ್ನು ಸಮರ್ಪಿಸುವವನಂತೆ ಅವನ ಕೈಯ್ಯ ಮೇಲೆ ಗಂಟು ಕಟ್ಟಿ ಇಟ್ಟರು. ಬೇಡ ಬೇಡವೆನ್ನುತ್ತಲೇ ಆತ ಆ ಗಂಟನ್ನು ತೆಗೆದುಕೊಳ್ಳುವುದರಿಂದ ತಾನು ಆ ಊರ ಜನರ ಹಿರಿದಾದ ಋಣದಲ್ಲಿ ಬೀಳುತ್ತಿದ್ದೇವೆ ಎನ್ನುವ ಭಾವನೆ ತೋರಿಸುತ್ತ ತೆಗೆದುಕೊಂಡ. ಜನ, ಸಹಾಯಕ್ಕೆ ಬರಬೇಕೇ ಜತೆಯಲ್ಲಿ ಎಂದು ಕೇಳಿದರೆ ಬೇಡವೆನ್ನುತ್ತಲೇ ಅಲ್ಲಿಂದ ಹೊರಟ. ಊರವರೆಲ್ಲರ ಕೃತಜ್ಞತೆಯ ಹೊರೆಯನ್ನೇ ಹೊತ್ತಿದ್ದೇನೆ ತಾನು ಎನ್ನುವಂತೆ ತಗ್ಗುತ್ತಾ ಬಗ್ಗುತ್ತಾ, ನಾಳೆ ನಾಡಿದ್ದರಲ್ಲಿ ಸರಿಯಾಗಿ ಗುಣವಾದ ಮೇಲೆ ಪುನಃ ಬರುತ್ತೇನೆ ಎಂದು ಹೇಳಿ ಹಣದ ಗಂಟನ್ನು ಹಿಡಿದುಕೊಂಡು ಕುಂಟುತ್ತ ರಾಷ್ಟ್ರೀಯ ಹೆದ್ದಾರಿಯ ಪಕ್ಕಕ್ಕೆ ನಡೆದ. ಜನ ತಮ್ಮೂರಿಗೆ ಬಂದ ಪರವೂರಿನವನೊಬ್ಬನನ್ನು ನೊಂದು ಕೊಂಡು ಹೋಗದಂತೆ ಮಾಡಿದೆವಲ್ಲ ಎಂದು ಕೃತಾರ್ಥ ಭಾವನೆಯನ್ನು ತೋರಿಸುತ್ತ ಚದುರಿದರು.

*

ಸಂಜೆಯ ಕಡೆಯ ಬಸ್ಸಿಗೆ ಆ ಊರಿನ ನಿಲ್ದಾಣದಲ್ಲಿ ಸಾಮಾನ್ಯವಾಗಿ ಯಾರೂ ಹತ್ತುವವರಿರುತ್ತಿರಲಿಲ್ಲ. ಆದರೆ ಅಂದು ಇಬ್ಬರಿದ್ದರು. ವೇಷಭೂಷಣಗಳಿಂದ ಊರಿಗೆ ಹೊಸಬರೆಂದು ಕಾಣಿಸುತ್ತಿದ್ದ ಅವರು ದೂರದ ಊರಿಗೆ ಎರಡು ಟಿಕೇಟು ಪಡೆದುಕೊಂಡು ಬಸ್ಸಿನ ಹಿಂದುಗಡೆ ಯಾರೂ ಇಲ್ಲದ ಜಾಗದಲ್ಲಿ ಕುಳಿತರು. ಬಸ್ಸು ಹೊರಟಾಗ ತಮ್ಮಲ್ಲಿಯೇ ನಿಧಾನವಾಗಿ ಮಾತನಾಡಲಿಕ್ಕೆ ತೊಡಗಿದರು. 'ಎಷ್ಟಾಯಿತು ಒಟ್ಟಿಗೆ...' ಎಂದು ಕೇಳಿದಾಗ ಇನ್ನೊಬ್ಬ ಉತ್ತರಿಸಿದ 'ಸುಮಾರು ನಾನೂರು ಚಿಲ್ಲರೆ, ಸರಿಯಾಗಿ ಹಾಕಿದೆ ಟೊಪ್ಪಿಗೆ. ಬರೀ ಹುಂಬ ಜನ...'

'ಯಾರಿಗೂ ಸಂಶಯ ಬರಲಿಲ್ಲವೇ...'

'ಸಂಶಯವೇನು... ಬಣ್ಣದ [illegible] ಬಾಯಲ್ಲಿ ಕರಗಿಸಲು ನಾನು ಹತ್ತು ನಿಮಿಷ ಬೋರಲು ಮಲಗಿದರೂ ಸಂಶಯ ಬರಲಿಲ್ಲ ಅವರಿಗೆ. ಹೋಗಲಿ ಅಂದರೆ ಗಾಯವೇ ಇದ್ದಿದ್ದರೆ ಆ ಅಪ್ಪುಗೆಗೆ ತಾಗಿದಾಗ ಬೊಬ್ಬೆ ಹೊಡೆಯದೆ ಇರುತ್ತಿದ್ದನೆ... ಒಬ್ಬ [illegible] ಅಂದಾಜಾಗಬೇಡವೇ...'

ಹೀಗೆ ಅಪ್ಪಟ ಕನ್ನಡದಲ್ಲಿಯೇ ಸಂಭಾಷಣೆ ನಡೆಸಿದ ಅವರು ಏನೇ ಆಗಲಿ ಇನ್ನೊಂದಿಷ್ಟು ದಿನ ತಾಪತ್ರಯವೇನೂ ಇಲ್ಲವಲ್ಲ ಎಂದುಕೊಳ್ಳುತ್ತಾ ಸೀಟಿಗೊರಗಿ ನಿದ್ರಿಸತೊಡಗಿದರು.



ಶರವೇಗದ ರೈಲುಗಳು

ಜಪಾನಿನಲ್ಲಿರುವ ಶರವೇಗದ (ಬುಲೆಟ್ ಟ್ರೇನ್) ರೈಲುಗಳು ಟೋಕಿಯೊ-ಓಸಾಕಾಗಳ ನಡುವಿನ ೩೨೦ ಮೈಲುಗಳ ಅಂತರವನ್ನು ೧೯೦ ನಿಮಿಷಗಳಲ್ಲಿ ಕ್ರಮಿಸುತ್ತವೆ. ಇವುಗಳಲ್ಲಿ ನಿತ್ಯ ಪ್ರಯಾಣಿಸುವವರ ಸಂಖ್ಯೆ ೩೪೦೦೦೦ದಷ್ಟು.

ಬರುತ್ತಿದೆ ಕೂರ್ಮೋದ್ಯಮ!

ಮೂಲ: ವಿ. ಗೋ. ಭಾಗವತ
ಕನ್ನಡಕ್ಕೆ: ಜಿ. ಸಿ. ನಡೂರಮಠ

ಪ್ರೋಟೀನಿನಿಂದ ಸಮೃದ್ಧವಾಗಿರುವುದರಿಂದ ಸಮುದ್ರ ಆಮೆಗಳ ಮಾಂಸಕ್ಕೂ ಅವುಗಳ ಮೊಟ್ಟೆಗಳಿಗೂ ಇಂದು ಬಹಳ ಮಹತ್ವ ಬಂದಿದೆ. ಲಕ್ಷೋಪಲಕ್ಷ ಸಮುದ್ರ ಆಮೆಗಳನ್ನು ಬೆಳಸಿ ಪ್ರೋಟೀನಿನ ಕೊರತೆಯನ್ನು ನಿವಾರಿಸುವಲ್ಲಿ ಇಂದು ಅಮೇರಿಕಾದ "ಮೇರಿಕಲ್ಚರ್ ಲಿಮಿಟೆಡ್" ಎಂಬ ವ್ಯಾಪಾರೀ ಸಂಸ್ಥೆ ನಿರತವಾಗಿದೆ. ಬತ್ತ, ಗೋದಿ, ಗೋವಿನ ಜೋಳ, ಕಬ್ಬು ಇತ್ಯಾದಿ ಬೆಳೆಗಳನ್ನು ಬೆಳೆಯುವ ರೀತಿಯಲ್ಲಿ ಆಮೆಗಳನ್ನು ಅಪೇಕ್ಷಿಸಿದಷ್ಟು ಬೆಳೆಸುತ್ತಿದೆ. ಆಮೆಗಳ ಮಾಂಸ ಬಹು ರುಚಿಕರವೆನ್ನುವ ವಿಷಯ ಅನೇಕರಿಗೆ ತಿಳಿದಿರಲಿಕ್ಕಿಲ್ಲ. ಗ್ರೀನ್-ಸೀ-ಟರ್ಟಲ್ ಎಂಬ ವಿಶಿಷ್ಟ ಜಾತಿಯ ಆಮೆ ಇಂದು ನಿರ್ವಂಶವಾಗುವ ಸ್ಥಿತಿಯಲ್ಲಿದೆ. ಜಗತ್ತಿನಲ್ಲಿಯೇ ಇದೊಂದು ಅಮೂಲ್ಯವಾದ ಆಮೆಯ ಜಾತಿ ಎಂದು ತಿಳಿಯಲ್ಪಟ್ಟಿದೆ. ಈ ವಿಶಿಷ್ಟ ಜಾತಿಯ ಆಮೆಯ ಮಾಂಸವು ಪ್ರೋಟೀನಿನಿಂದ ಸಂಪೂರ್ಣವಾಗಿದ್ದು, ಕೊಬ್ಬು ಮಾತ್ರ ಕೊಲೆಸ್ಟರಾಲಿನ ಪ್ರಮಾಣ ಕಡಿಮೆ ಇದ್ದು ಇದು ತಿನಲು ಸ್ವಾದಿಷ್ಟವಾದ ಮಿಷ್ಟಾನ್ನವೇ ಆಗಿರುತ್ತದೆ. ಮೀನುಗಳನ್ನು ವೈಜ್ಞಾನಿಕ ರೀತಿಯಿಂದ ಬೆಳೆಸುವಂತೆ ಸಾಗರ ತೀರದ ಮೇಲೆ ಕಾಂಕ್ರೀಟಿನ ಹೊಂಡವನ್ನು ಕಟ್ಟಿ ಅದರಲ್ಲಿ ಆಮೆಗಳನ್ನು ದೊಡ್ಡ ಪ್ರಮಾಣದಲ್ಲಿ ಬೆಳೆಸುವ ಕಾರ್ಯದಲ್ಲಿ ಮೇರಿಕಲ್ಚರ್ ಸಂಸ್ಥೆಗೆ ಕ್ರಮೇಣ ಯಶ ದೊರೆಯುತ್ತಿದೆ.

ಐದು ಅಡಿ ಆಳವಾದ ಒಂದು ಎಕರೆ ಉಪ್ಪು ನೀರಿನಲ್ಲಿ ವೈಜ್ಞಾನಿಕ ರೀತಿಯಿಂದ ಆಮೆಗಳನ್ನು ಬೆಳೆಸಿದರೆ ಎರಡು ಲಕ್ಷ ಪೌಂಡು ಮಾಂಸವನ್ನು ಪ್ರತಿ ವರ್ಷ ಉತ್ಪಾದಿಸಬಹುದೆಂದು ಕಂಡುಬಂದಿದೆ.

ಜಗತ್ತಿನ ಜನಸಂಖ್ಯಾಭಿವೃದ್ಧಿಯ ವೇಗವನ್ನು ಲಕ್ಷ್ಯದಲ್ಲಿ ತೆಗೆದುಕೊಂಡರೆ ಇ. ಸ. 2000ದಲ್ಲಿ ಈ ಜಗತ್ತಿಗೆ ಇಂದಿಗಿಂತ ಮೂರು ಪಟ್ಟು ಆಹಾರದ ಅವಶ್ಯಕತೆ ಉಂಟಾಗುವುದೆಂದು ಹೇಳಬಹುದು. ಆ ಪ್ರಮಾಣದಲ್ಲಿ ಧಾನ್ಯೋತ್ಪಾದನವನ್ನು ಹೆಚ್ಚಿಸಲು ಭೂಮಿ ಇಲ್ಲ. ಏಕೆಂದರೆ ಪೃಥ್ವಿಯ ಮೂರು ನಾಲ್ಕಾಂಶ ಭಾಗ ನೀರಿನಿಂದ ತುಂಬಿದೆ. ಆದುದರಿಂದ ಪ್ರೋಟೀನಿನ ಕೊರತೆಯನ್ನು ಪೂರೈಸುವ ಏಕೈಕ ಸ್ರೋತವೆಂದರೆ ಸಮುದ್ರ, ಹಾಗೂ ಅದರಲ್ಲಿರುವ ಜಲಚರ ಪ್ರಾಣಿಗಳೆಂದು ಹೇಳಬಹುದು. ಒಂದು ಅಂದಾಜಿನಂತೆ ಪೃಥ್ವಿಯ ಮೇಲಿನ ಒಟ್ಟು ಪ್ರಾಣಿಗಳಲ್ಲಿ ಶೇಕಡಾ 80ರಷ್ಟು ಪ್ರಾಣಿಗಳು ಉಪ್ಪು ನೀರಿನಲ್ಲಿಯೇ ಇವೆ. ಈ ವಿಷಯವನ್ನು

(ಮರಾಠಿ 'ಲೋಕಪ್ರಭಾ' ಕೃಪೆ)

ಲಕ್ಷ್ಯದಲ್ಲಿಟ್ಟುಕೊಂಡು ಸಮುದ್ರಪ್ರಾಣಿಗಳ ಬಗೆಗೆ ಸಂಶೋಧನೆ ಹಾಗೂ ಅವುಗಳ ಬೆಳವಣಿಗೆಗೆ ಸಹಾಯ ಮಾಡುವ ಉದ್ದೇಶಕ್ಕಾಗಿ "ಮೆರಿಕಲ್ಚರ್" ಸಂಸ್ಥೆ ಇ. ಸ. ೧೯೭೦ರ ಕೊನೆಗೆ ಅಮೆರಿಕದಲ್ಲಿ ಸ್ಥಾಪಿತವಾಯಿತು.

ಈ ಸಂಸ್ಥೆ ೧೯೭೨ರಲ್ಲಿ ಕೆರೀಬಿಯನ್ ಸಾಗರದಲ್ಲಿ ಗ್ರ್ಯಾಂಡ ಕಾಯ್‌ಮೇನ್ ಎಂಬಲ್ಲಿ ಜಗತ್ತಿನಲ್ಲಿಯೇ ಮೊಟ್ಟಮೊದಲು ಆಮೆಗಳನ್ನು ಬೆಳೆಸುವ ಕೇಂದ್ರವನ್ನೂ ಅದರೊಂದಿಗೆ ಸಂಶೋಧನ ಕೇಂದ್ರವನ್ನೂ ಸ್ಥಾಪಿಸಿತು.

ಆಮೆಗಳನ್ನು ಬೆಳೆಸುವುದು ಒಂದು ಪ್ರಗತಿಪರ ಕಲ್ಪನೆಯಾಗಿದ್ದರೂ ಅದನ್ನು ಅನುಷ್ಠಾನಕ್ಕೆ ತರುವುದು ತುಂಬಾ ಕಷ್ಟಕರವಾಗಿತ್ತು. ವಿಶೇಷವಾಗಿ "ಚಲೋನಿಯಾ ಮಾಯಡಸ್" ಎಂಬ ವಿಶಿಷ್ಟ ಜಾತಿಯ ತಳಿಯು ಆಮೆ ನಿರ್ವಂಶವಾಗುವುದರಲ್ಲಿತ್ತು. ಅದನ್ನು ರಕ್ಷಿಸುವುದೂ ಅಭಿವೃದ್ಧಿಪಡಿಸುವುದೂ ಅವಶ್ಯವಾಗಿತ್ತು. ಈ ಸಂಸ್ಥೆ ಈ ಕಾರ್ಯವನ್ನು ಕೈಗೆತ್ತಿಕೊಂಡಿತು. ೧೯೭೪ನೆಯ ಮೇ ತಿಂಗಳು ಮೆರಿಕಲ್ಚರ್ ಸಂಸ್ಥೆಗೆ ಅಪೂರ್ವಕಾಲವಾಗಿತ್ತು. ಇದಕ್ಕೆ ಕಾರಣವೆಂದರೆ ಮೆರಿಕಲ್ಚರ್ ಸಂಸ್ಥೆಯ ತಂತ್ರಜ್ಞರು ವಿಶೇಷವಾಗಿ ಕಟ್ಟಿದ ಕಾಂಕ್ರೀಟ ಟ್ಯಾಂಕಿನಲ್ಲಿಯೇ ಬೆಳೆಸಲಾದ ಅನೇಕ ಆಮೆಗಳು ಮೊದಲ ಬಾರಿಗೆ ಮೊಟ್ಟೆಗಳನ್ನಿಟ್ಟವು. ಒಂಥನದಲ್ಲಿ ಇಲ್ಲವೆ ಅನೈಸರ್ಗಿಕ ವಾತಾವರಣದಲ್ಲಿ ಆಮೆಗಳು ಮೊಟ್ಟೆಗಳನ್ನಿಟ್ಟದ್ದು ಇದೇ ಮೊದಲ ಸಲ. ಈ ಕ್ರಮವನ್ನೇ ಮುಂದುವರಿಸಿ ಮೆರಿಕಲ್ಚರ್ ಸಂಸ್ಥೆ ಆ ವರ್ಷದ ಅಂತ್ಯದಲ್ಲಿ ಇಪ್ಪತ್ತುನಾಲ್ಕು ಆಮೆಗಳಿಂದ ಇಪ್ಪತ್ತೆರಡು ಸಾವಿರ ಮೊಟ್ಟೆಗಳನ್ನು ಪಡೆದು ವಿಕ್ರಮವನ್ನು ಸಾಧಿಸಿತು.

ಕಡಲಿನ ಆಮೆಯ ಆಯುಷ್ಯ ಸರಾಸರಿ ೩೦ರಿಂದ ೫೦ ವರ್ಷಗಳಷ್ಟು. ಆದರೆ ನೈಸರ್ಗಿಕ ವಾತಾವರಣದಲ್ಲಿ ಮತ್ತು ಬೇರೆ ಯಾವುದೇ ತರದ ಆತಂಕವಿಲ್ಲದಿದ್ದಲ್ಲಿ ೮೦ ರಿಂದ ೧೫೦ ವರುಷಗಳವರೆಗೆ ಅದು ಬದುಕುತ್ತದೆ. ಅದರಂತೆ ಪ್ರತಿಯೊಂದು ಆಮೆಯು ಸಾಮಾನ್ಯವಾಗಿ ಒಂದುವೇಳೆಗೆ ೧೫೦ ಮೊಟ್ಟೆಗಳನ್ನಿಡುತ್ತದೆ ಆದರೆ ಒಂದು ಬಾರಿಗೆ ಅದು ೨೨೬ ಮೊಟ್ಟೆಗಳನ್ನಿಟ್ಟ ದಾಖಲೆಯೂ ಇದೆ. ಆದರೆ ನೈಸರ್ಗಿಕ ಶತ್ರುಗಳು ಬಹಳವಿರುವುದರಿಂದ ಎಲ್ಲ ಮೊಟ್ಟೆಗಳೂ ಒಡೆದು ಮರಿಯಾಗುವುದಿಲ್ಲ. ನೈಸರ್ಗಿಕ ಶತ್ರುಗಳಲ್ಲಿ ಮುಂಗ, ಓತಿಕಾಟ, ನಾಯಿಗಳು ಮುಖ್ಯ. ಅದರಂತೆ ಆದೇ ಆಗ ಹುಟ್ಟಿದ ಮರಿಗಳು ದೊಡ್ಡ ದೊಡ್ಡ ಪಕ್ಷಿ ಮತ್ತು ಅನೇಕ ತರದ ಪ್ರಾಣಿಗಳಿಗೆ ಬಲಿಯಾಗುತ್ತವೆ. ಇಷ್ಟಾದರೂ ದೀರ್ಘ ಕಾಲದಿಂದ ಆಮೆಗಳ ಸಂತತಿ ವೃದ್ಧಿಸುತ್ತಾ ನಡೆಯಿತು.

ಆದರೆ ಮನುಷ್ಯನ ಮುಂದೆ ಅವುಗಳ ಆಟ ನಡೆಯಲಿಲ್ಲ. ಆತ ಅವುಗಳ ಮಾಂಸದ ಸಲುವಾಗಿ ಲಂಗುಲಗಾಮಿಲ್ಲದೆ ಬೇಟೆಯಾ-



ಇಲ್ಲೊಂದು ಅಮೂಲ್ಯ ಸಲಹೆ ಇದೆ ಸಾರ್ "ಸಲಹಾ ಪೆಟ್ಟಿಗೆ" ಯನ್ನು ಕಿತ್ತು ಬಿಸಾಡಿ ಅಂತಿದೆ...

ದಿದ್ದರಿಂದ ಇತ್ತೀಚೆಗಂತೂ ಗ್ರೀನ್‌_ ಸೀ-ಟರ್ಟಲ್ ಎಂಬ ಆಮೆ ನಿರ್ವಂಶವಾಗುವುದರಲ್ಲಿಯೇ ಇತ್ತು!

ಮುರಿಕಲ್ಬರ್ ಸಂಸ್ಥೆಯನ್ನು ವ್ಯಾಪಾರೀ ಉದ್ದೇಶದಿಂದ ಸ್ಥಾಪಿಸಲಾಗಿದ್ದರೂ ಅತ್ಯಮೂಲ್ಯವಾದ ಈ ಜಾತಿಯು ನಿರ್ವಂಶವಾಗಬಾರದೆಂದು ಅದನ್ನು ಸಂರಕ್ಷಿಸುವ ಉದ್ದೇಶವನ್ನು ಆ ಸಂಸ್ಥೆ ಇಟ್ಟುಕೊಂಡಿದೆ. ಕೇವಲ ಆಮೆಗಳನ್ನು ಸಾಕಿ ಬೆಳೆಸುವದಲ್ಲದೆ ಅವುಗಳ ಮೂಲಗಳನ್ನು ಹುಡುಕಿ ಅವುಗಳಿಗೆ ರಕ್ಷಣೆ ನೀಡುವ ಮತ್ತು ಅವುಗಳನ್ನು ವೃದ್ಧಿಸುವ ಉದ್ದೇಶ ಆ ಸಂಸ್ಥೆಗಿದೆ. ಈ ದೃಷ್ಟಿಯಿಂದ ಆ ಸಂಸ್ಥೆಯು ಗ್ರ್ಯಾಂಡ ಸಾಯಮನ್ ಎಂಬಲ್ಲಿ ಲಾಭ ಹಾನಿಯ ವಿಚಾರಮಾಡದೇ ಒಂದು ಸಂರಕ್ಷಣ ಮತ್ತು ಸಂಶೋಧನ ವಿಭಾಗವನ್ನು ತೆರೆದಿದೆ. ಈ ವರೆಗೆ ಹುಟ್ಟಿದ ಆಮೆಗಳಲ್ಲಿ ಶೇಕಡಾ ೫೦ರಂತೆ ಅಂದರೆ ಸುಮಾರು ೩೫೦೦ ಆಮೆಗಳ ಮೊದಲನೆಯ ತಂಡವನ್ನು ಅವುಗಳ ಮೂಲ ಸ್ಥಾನವಾದ ಕ್ಯಾರಿಬಿಯನ್ ಸಮುದ್ರದ ತೀರದಲ್ಲಿ ಬಿಟ್ಟಿದೆ. ಇದರಿಂದ ಈ ಜಾತಿಯ ಆಮೆಗಳಿಗೆ ನೈಸರ್ಗಿಕ ವಾತಾವರಣದಲ್ಲಿ ಬೆಳೆಯಲಿಕ್ಕೆ ಸಹಾಯವಾಗಿದೆ.

ಮುರಿಕಲ್ಬರ್ ಸಂಸ್ಥೆಯ ಉತ್ಪಾದನಾ ಕೇಂದ್ರದಲ್ಲಿಯ ಆಮೆಯ ಮಾಂಸವು ನೈಸರ್ಗಿಕವಾಗಿ ಬೆಳೆದ ಆಮೆಗಳ ಮಾಂಸಕ್ಕಿಂತಲೂ ಶ್ರೇಷ್ಠ ದರ್ಜೆಯದು ಮತ್ತು ಪ್ರಕ್ರಿಯೆಗೊಳಿಸಲ್ಪಟ್ಟದ್ದು. ಗಿರಾಕಿಗಳಿಗೆ ಅನಾಯಾಸವಾಗಿ ಆಮೆ ಸಿಗುವುದರಿಂದ ಅವುಗಳನ್ನು ಕದ್ದು ಶಿಕಾರಿ ಮಾಡುವ-ಪ್ರವೃತ್ತಿ ಕಡಿಮೆಯಾಗಬಹುದು. ಇದಲ್ಲದೆ ನಿರ್ವಂಶವಾಗದಂತೆ ಈ ಪ್ರಾಣಿಗಳನ್ನು ರಕ್ಷಿಸುವುದು ಸರಕಾರದ ಕರ್ತವ್ಯವಾಗಿದೆ. ಕಾಯದೆ ಮೂಲಕ ಆಮೆಗಳ ಬೇಟೆಯನ್ನು ತಡೆದರೆ ಆಮೆಗಳ ಮಾಂಸದಿಂದ ಮಾಡಿದ ಖಾದ್ಯಗಳನ್ನು ಕಳ್ಳರೀತಿಯಿಂದ ನಿರ್ಯಾತ ಮಾಡುವದು ತಂತಾನೇ ನಿಲ್ಲುತ್ತದೆ. ಈ ಉದ್ದೇಶದಿಂದ ಫಿಲಿಪೀನ್ಸ್ ಸರ್ಕಾರದ ಮತ್ಸ್ಯೋದ್ಯಮ ವಿಭಾಗ ಮುಂದಿನ ಐದು ವರುಷದ ವರೆಗೆ ಆಮೆಗಳನ್ನು ಹಿಡಿಯುವುದನ್ನೂ ಅವುಗಳನ್ನು ಕೊಲ್ಲುವದನ್ನೂ ನಿರ್ಬಂಧಿಸಿದೆ.

ಈ ಹೊಸ ವ್ಯವಸಾಯದಲ್ಲಿ ಮುರಿಕಲ್ಬರ್ ಸಂಸ್ಥೆಗೆ ಆರ್ಥಿಕದೃಷ್ಟಿಯಿಂದ ಪ್ರಚಂಡ ಜಯ ಲಭಿಸಿದರೂ ಲಭಿಸಬಹುದು. ಈ ಕೇಂದ್ರದಲ್ಲಿ ಈ ವರೆಗೆ ಒಂದು ಲಕ್ಷ ಆಮೆಗಳನ್ನು ವೈಜ್ಞಾನಿಕವಾಗಿ ಬೆಳೆಸಲಾಗಿದೆ. ಬರುವ ಐದಾರು ವರ್ಷಗಳ ಅವಧಿಯಲ್ಲಿ ಈ ಕೇಂದ್ರದ ವ್ಯಾಪ್ತಿಯು ದ್ವಿಗುಣಗೊಂಡು ಆಮೆಗಳ ಮಾಂಸವನ್ನು [illegible] ನಿರ್ಯಾತ ಮಾಡುವ ಒಂದು ದೊಡ್ಡ ವ್ಯಾಪಾರೀ ಸಂಸ್ಥೆಯಾಗಿ ಈ ಸಂಸ್ಥೆ ರೂಪುಗೊಳ್ಳುವುದೆಂದು ಸಂಸ್ಥೆಯ ಕಾರ್ಯಕಾರೀ ಸಂಚಾಲಕ ಪೀಟರ್ ಗುಡ್‌ಇಯರ್ ಹೇಳಿದ್ದಾರೆ. ಮುಂಬರುವ ಐದು ವರುಷಗಳಲ್ಲಿ ಇಂಥ ಕೇಂದ್ರಗಳನ್ನು ಸ್ಥಾಪಿಸುವ ವಿಚಾರ ಮುರಿಕಲ್ಬರ್ ಸಂಸ್ಥೆಗಿದೆ ◆



ಬ್ರಿಟಿಶರ ಹೆಮ್ಮೆ

ಬ್ರಿಟಿಶರ ಪ್ರಧಾನ ಮಂತ್ರಿಯು ವಾಸಕ್ಕಾಗಿ ೫೯೦೦೦೦ ರೂ. ಗಳಲ್ಲಿ [illegible] ನಿವಾಸವೊಂದನ್ನು [illegible] ಬ್ರಿಟಿಶರು ಪ್ರಧಾನ ಮಂತ್ರಿಯ ಅಧಿಕೃತ ನಿವಾಸವಾದ ನಂ. ೧೦, ಡೌನಿಂಗ ಸ್ಟ್ರೀಟನ್ನೇ ದುರಸ್ತು ಮಾಡಲು ಹೊರಟಿದ್ದಾರೆ. ಕ್ರಿ. ೧೭೩೩ ರಿಂದ ಬ್ರಿಟಿಶ ಪ್ರಧಾನಿಗಳು ನಂ. ೧೦ ಡೌನಿಂಗ್ ಸ್ಟ್ರೀಟ್‌ನಲ್ಲಿದ್ದಾರೆ. ೧೯೬೦-೬೩ರಲ್ಲಿ ಅದನ್ನು ಪುನರ್ನಿರ್ಮಿಸಲಾಯಿತು. [illegible] ಬ್ರಿಟಿಶರು ಅದನ್ನೇ ದುರಸ್ತಿ ಮಾಡುವ ಪ್ರಯತ್ನದಲ್ಲಿ ತೊಡಗಿದ್ದಾರೆ.

ಮೂರನೇ ತಿಂಗಳಲ್ಲಿ ಮಗುವಿಗೆ ಕೊಡುವ ಘನ ಆಹಾರ – ಮಗುವಿನ ಪೂರ್ತ ಜೀವಮಾನಕ್ಕೆ ಆಧಾರ

ಡಾಕ್ಟರರು ಹೇಳುತ್ತಾರೆ ಹಾಲು ಒಂದೇ ಸಾಕಾಗದು



ಡಾಕ್ಟರರು ಶಿಫಾರಸು ಮಾಡುತ್ತಾರೆ:

ಫೆರೆಕ್ಸ್®

ಸಂತುಲಿತ ಘನ ಆಹಾರ
ಶೀಘ್ರ, ಸರ್ವಾಂಗೀಣ ಬೆಳವಣಿಗೆಗಾಗಿ

ಮಗುವಿನ ಶರೀರ ಮತ್ತು ಮೆದುಳು ತ್ವರಿತ ಗತಿಯಿಂದ ಬೆಳೆಯುತ್ತಿರುವ ಕಾಲಾವಧಿಯಲ್ಲಿ ಹಾಲೊಂದೇ ಸಾಕಾಗುವುದಿಲ್ಲ. ತಾಯಿಯ ಹಾಲು ಕುಡಿಸುವ ಮಾದರಿ ಘನಾಹಾರಗಳನ್ನು ಕೊಡಲು ಆರಂಭಮಾಡಬೇಕು— 3ನೇ ತಿಂಗಳಿನಲ್ಲಿಯೇ. ಆಗಿದು ತಿನ್ನಲು ಮಗು ಕಲಿಯಬೇಕು. ಅದಕ್ಕಾಗಿ ಡಾಕ್ಟರರು ಫೆರೆಕ್ಸ್ ಶಿಫಾರಸು ಮಾಡುತ್ತಾರೆ. ಕಾರಣ: ಅದು ಮಗುವಿನ ಬೆಳವಣಿಗೆಯ ಅನೇಕ ಅವಶ್ಯಕತೆಗಳನ್ನು ಪೂರೈಸುವ ಸಂತುಲಿತ ಆಹಾರ. ರಕ್ತದ ಆರೋಗ್ಯಕ್ಕಾಗಿ ಮತ್ತು ಚೈತನ್ಯಕ್ಕಾಗಿ ಸರಿಯಾದ ಪ್ರಮಾಣದಲ್ಲಿ ಕಬ್ಬಿಣ ಸತ್ವ; ಎಲುಬುಗಳ ಮತ್ತು ಹಲ್ಲುಗಳ ಗಟ್ಟಿಮುಟ್ಟುತನಕ್ಕಾಗಿ ಕ್ಯಾಲ್ಶಿಯಂ ಮತ್ತು ವಿಟಮಿನ್ ಡಿ; ಮೆದುಳಿನ ಮತ್ತು ಶರೀರದ ಶೀಘ್ರ ಬೆಳವಣಿಗೆಗಾಗಿ ಸರಿಯಾದ ಪ್ರೋಟೀನ್‌ಗಳು; ಬೆಳೆಯುವ ಶರೀರಕ್ಕೆ ಶಕ್ತಿ— ಇವೆಲ್ಲ ಫೆರೆಕ್ಸ್‌ನಲ್ಲಿವೆ. ತಾಯಂದಿರು ಬೇರೆ ಯಾವುದೇ ಘನ ಆಹಾರಕ್ಕಿಂತ ಅಧಿಕವಾಗಿ ಫೆರೆಕ್ಸ್‌ನ್ನು ಆರಿಸುವುದರಲ್ಲಿ ಆಶ್ಚರ್ಯವೇನೂ ಇಲ್ಲ.

ಹಣ್ಣುಗಳು, ತರಕಾರಿಗಳು, ಬೇಳೆ, ಮಾಂಸ, ಮೊಟ್ಟೆಗಳು— ಇವುಗಳಲ್ಲಿ ಯಾವುದರೊಡನೆಯಾದರೂ ಬೆರಸಿ ಕೊಡಲು ಫೆರೆಕ್ಸ್ ರುಚಿಕರವಾಗಿದೆ.

ಫೆರೆಕ್ಸ್ ಆದರ್ಶವಾದ ಶೈಶವದ ಘನ ಆಹಾರ.

ನಮ್ಮ ಉಚಿತ ಫೆರೆಕ್ಸ್ ಪುಸ್ತಿಕೆಯನ್ನು ಮತ್ತು ರೂ. 2 ರಿಯಾಯಿತಿಯ ಯೋಜನೆಯ ವಿವರವನ್ನು ಪಡೆಯಲು ಇಂದೇ ಬರೆಯಿರಿ.

ನಿಮ್ಮ ಹೆಸರು ಮತ್ತು ವಿಳಾಸದ ಜೊತೆಗೆ (ಭಾಷೆಯ ಹೆಸರನ್ನು ನಮೂದಿಸಿರಿ) 25 ಪೈಸೆ ಸ್ಟ್ಯಾಂಪನ್ನು ಇಟ್ಟು ಪೋಸ್ಟ್ ಬ್ಯಾಗ್ ನಂ. 10110, ಮುಂಬಯಿ 400 025 ಈ ವಿಳಾಸಕ್ಕೆ ಕಳಿಸಿರಿ.



ಭೀಷ್ಮ: ಮಹಾಭಾರತ ಯುದ್ಧಕ್ಕೆ ಮೂಲಕಾರಣ

ಅವನೀಂದ್ರಕುಮಾರ ವಿದ್ಯಾಲಂಕಾರ

ಕುರುಕ್ಷೇತ್ರದಲ್ಲಿ ನಡೆದ ಮಹಾಭಾರತ ಯುದ್ಧ ಕೌರವ-ಪಾಂಡವರ ನಡುವೆ ನಡೆದುದೇ ಆಗಿರಲಿ ಇಲ್ಲವೆ ಕೌರವ-ಪಾಂಚಾಲರ ನಡುವೆ ಸಂಭವಿಸಿದುದೇ ಆಗಿರಲಿ, ಆ ಮಹಾಯುದ್ಧದಿಂದ ಭಾರತೀಯ ಸಂಸ್ಕೃತಿಗೆ ಅಪಾರಹಾನಿ ತಟ್ಟಿದೆ ಎಂಬುದರಲ್ಲಿ ಸಂದೇಹವೇನಿಲ್ಲ. ಈ ಘನಘೋರ ಯುದ್ಧಕ್ಕೆ ಕಾರಣರಾದವರನ್ನು ಮುಂದಿನ ಪೀಳಿಗೆಯವರು ಕ್ಷಮಿಸದಿದ್ದರೆ ಅಚ್ಚರಿ ಏನಿಲ್ಲ!

ಮಹಾಭಾರತಕಾರನು ತನ್ನ ಮಹಾಕಾವ್ಯದಲ್ಲಿ ವಿವಿಧ ಪಾತ್ರಗಳನ್ನು ಬಣ್ಣಿಸುವ ವೈಖರಿಯನ್ನು ಪರಿಶೀಲಿಸಿದಾಗ ಪಿತಾಮಹ ಭೀಷ್ಮನ ಬಗೆಗೆ ಆತನಿಗೆ ಆದರ ಇಲ್ಲ ಎಂಬುದು ಕಂಡು ಬರದಿರದು. ಭೀಷ್ಮನ ಶಕ್ತಿಶೌರ್ಯಗಳನ್ನೂ ಜ್ಞಾನ ಸಹಿಷ್ಣುತೆಗಳನ್ನೂ ಆತ ಒಪ್ಪಿಕೊಂಡಿದ್ದರೂ ಭೀಷ್ಮನಿಗೆ ಆತ ತಪ್ಪಿಯಾದರೂ ಒಮ್ಮೆ ಕೂಡ 'ಆಚಾರ್ಯ' ಎಂಬ ಉಪಾಧಿಯನ್ನು ನೀಡಿಲ್ಲ ಇದಕ್ಕೇನು ಕಾರಣ?

ಮಹಾಭಾರತ ಯುದ್ಧದ ಮೂಲಕಾರಣ ಭೀಷ್ಮನ ಪತನದಲ್ಲಿಯೇ ಅಡಗಿದೆ ಎಂದು ಲಕ್ಷ್ಮಣಶಾಸ್ತ್ರಿ ಓಗಲೆ ಅವರ ಅಭಿಪ್ರಾಯ. ಭೀಷ್ಮನು ತನ್ನ ಕರ್ತವ್ಯವನ್ನು ದಕ್ಷತೆಯಿಂದ ನೆರವೇರಿಸಿದ್ದರೆ ಮಹಾಭಾರತ ಯುದ್ಧ ನಡೆಯುತ್ತಿರಲಿಲ್ಲ ಮತ್ತು ಹದಿನೆಂಟು ಅಕ್ಷೋಹಿಣಿಯಷ್ಟು ಅಪಾರ ಸೈನ್ಯದ ಹಾನಿಯೂ ತಪ್ಪುತ್ತಿತ್ತು.

ರಾಮಚಂದ್ರ ಪಿತೃಭಕ್ತಿಗಾಗಿ ರಾಜ್ಯ ತ್ಯಜಿಸಿ ಅರಣ್ಯವಾಸ ಕೈಕೊಂಡು ಆದರ್ಶ ಪ್ರದರ್ಶಿಸಿದ ಆದರೆ ಪಿತೃಭಕ್ತಿಯ-ಆದರ್ಶವನ್ನು ಬಣ್ಣಿಸುವ ಮಹಾಭಾರತಕಾರನು ಭೀಷ್ಮನು ತನ್ನ ತಂದೆಯ ವಿಷಯವಾಸನೆಯನ್ನು ತೃಪ್ತಿಪಡಿಸುವದಕ್ಕಾಗಿ ತಾನು ಆಜೀವ ಬ್ರಹ್ಮಚಾರಿಯಾಗಿ ಉಳಿಯುವ ಪ್ರತಿಜ್ಞೆ ಕೈಕೊಂಡ ಎಂದು ಹೇಳಿದ್ದಾನೆ, ಆ ಕಾಲಕ್ಕೆ ಇದೊಂದು ಮಹಾಪ್ರತಿಜ್ಞೆಯಾಗಿ ಬಿಟ್ಟಿತು. ಆಗಿನ ಕಾಲದಲ್ಲಿ ಅನೇಕ ಸ್ತ್ರೀಯರೊಡನೆ ಸಂಪರ್ಕವಿಟ್ಟುಕೊಳ್ಳುವ ಪದ್ಧತಿ ರೂಢಿಯಲ್ಲಿದ್ದಿತಾದ್ದರಿಂದ ಹೀಗೆ ಆಜನ್ಮ-ಬ್ರಹ್ಮಚರ್ಯ ಪರಿಪಾಲನೆಯ ಪ್ರತಿಜ್ಞೆ ಕೈಕೊಳ್ಳುವದು ಭೀಷ್ಮ ಪ್ರತಿಜ್ಞೆಯೇ ಆಗಿತ್ತು. ಇದರಿಂದಾಗಿಯೇ ದೇವವ್ರತನ ಹೆಸರು ಭೀಷ್ಮ ಎಂದು ಬದಲಾಯಿತು. ಬ್ರಹ್ಮಚರ್ಯದ ಮಹಿಮೆಯನ್ನು ಕೊಂಡಾಡುವ ಆ ರಾಜ್ಯದಲ್ಲಿ ವಯೋವೃದ್ಧ ಶಂತನು ರಾಜನು ತರುಣಿ-ಸತ್ಯವತಿಯನ್ನು ವಿವಾಹವಾಗುವದು ಅಧಃಪತನವೇ ಅಲ್ಲವೇ? ಭೀಷ್ಮನೂ ಇಲ್ಲಿ ಕಾರಣ ಎಂದು ಹೇಳಬಹುದಲ್ಲವೆ? ಇಂಥ ಅತಿರೇಕದ ಪಿತೃಭಕ್ತಿಯನ್ನು ಆತ ತೋರ್ಪಡಿಸದಿದ್ದರೆ ಶಂತನು ಸತ್ಯವತಿಯನ್ನು ವಿವಾಹವಾಗುವದು ಸಾಧ್ಯವಿರಲಿಲ್ಲ. ಮಹಾಭಾರತದ ಸ್ವರೂಪವೇ ಆಗ ಬದಲಾಗುತ್ತಿತ್ತು.

ತನ್ನ ಕ್ಷಯರೋಗಿ ಸೋದರ ವಿಚಿತ್ರವೀರ್ಯನಿಗಾಗಿ ಭೀಷ್ಮನು ಕಾಶೀರಾಜನ ಮಕ್ಕಳಾದ ಅಂಬಿಕಾ-ಅಂಬಾಲಿಕೆಯರನ್ನು ಗೆದ್ದು ತರಲಿಲ್ಲವೆ? ಭೀಷ್ಮನ ಈ ಕನ್ಯಾಪಹರಣವೇನೂ ಕ್ಷತ್ರಿಯೋಚಿತವೇ ಆಗಿತ್ತು. ಆದರೆ ಮುಂದೆ ಅಲ್ಪಾವಧಿಯಲ್ಲಿಯೆ ವಿಚಿತ್ರವೀರ್ಯನು ಕ್ಷಯದಿಂದ ನಿಪುತ್ರಿಕನಾಗಿ ಸ್ವರ್ಗಸ್ಥನಾದ. ಇದಕ್ಕೆ ಕಾರಣರಾರು?

ಸಿಂಹಾಸನವನ್ನು ಹಾಗೇ ತೆರವಿಟ್ಟಿರಲೂ ಬರುವಂತಿಲ್ಲ ಭೀಷ್ಮನೊ ವಿವಾಹವಾಗಲಿಕ್ಕೆ ಸಿದ್ಧನಿಲ್ಲ. ಮಾತೆ ಸತ್ಯವತಿಯು ದುಃಖವನ್ನು

ಕಂಡೂ ಭೀಷ್ಮನ ಎದೆಗರಗಲಿಲ್ಲ: ಕುಲವನ್ನು ಮುಂದುವರಿಸಿಕೊಂಡು ಹೋಗುವುದಕ್ಕಾಗಿ ಭೀಷ್ಮನು ದತ್ತು ತೆಗೆದುಕೊಳ್ಳುವ ಸೂಚನೆ ನೀಡದೆ ನಿಯೋಗದ ಉಪಾಯ ಅವಲಂಬಿಸಲು ಹೇಳಿದ. ವಿಚಿತ್ರವೀರ್ಯನ ಇಬ್ಬರು ರಾಣಿಯರಲ್ಲಿ ವೇದವ್ಯಾಸರಿಂದ ಧೃತರಾಷ್ಟ್ರ-ಪಾಂಡು ಇವರ ಜನನವಾಯಿತು. ಆತನಿಂದಲೇ ದಾಸಿಯಲ್ಲಿ ವಿದುರನ ಜನ್ಮವಾಯಿತು. ಈ ಮೂವರಿಗೂ ಒಬ್ಬನೇ ತಂದೆ ಇದ್ದರೂ ಯೋಗ್ಯನಾದ ವಿದುರನಿಗೆ ಸಿಂಹಾಸನ ದೊರೆಯಲಿಲ್ಲ. ದಾಸೀಪುತ್ರನಿಗೆ ಹೇಗೆ ಸಿಂಹಾಸನ ಲಭ್ಯ ಎಂದು ಆಕ್ಷೇಪಿಸಿದರೆ ಸತ್ಯವತಿ ಕೂಡ ಅಂಬಿಗರ ಕನ್ಯೆ, ಮಹಾರಾಣಿ ಹೇಗಾದಳು ಎಂದು ಕೇಳಬಹುದು. ಸತ್ಯವತಿಯನ್ನು ಮಹಾರಾಣಿ ಎಂದು ಒಪ್ಪಿಕೊಳ್ಳಲು ಭೀಷ್ಮನಿಗೆ ಯಾವ ಶಾಸ್ತ್ರ ನಿರ್ಬಂಧವೂ ಇಲ್ಲದಿದ್ದಾಗ ವಿದುರನನ್ನು ಪಟ್ಟಕ್ಕೇರಿಸಲು ಏಕೆ ನಿರ್ಬಂಧ ಕಂಡುಬರಬೇಕು ? ಇಲ್ಲಿ ಭೀಷ್ಮ ನ್ಯಾಯ-ಧರ್ಮಗಳನ್ನು ಕಡೆಗಣಿಸಿದ್ದಾನೆನ್ನಬೇಕೆ ? ಈ ಮೂವರನ್ನು ಭೀಷ್ಮ ಸರಿಸಮಾನತೆಯಿಂದ ಕಂಡಿದ್ದರೆ ಮಹಾಭಾರತ ಯುದ್ಧವು ಸಂಭವಿಸುತ್ತಿತ್ತೇ? ಭೀಷ್ಮನು ಧೃತರಾಷ್ಟ್ರನಿಗೆಂದು ಗಾಂಧಾರಿಯನ್ನೂ ಪಾಂಡುವಿಗೆಂದು ಕುಂತಿ ಮಾದ್ರಿಯರನ್ನೂ ತಂದ. ಇಲ್ಲಿ ಕೂಡ ಭೀಷ್ಮನು ವಿವಾಹಕ್ಕಾಗಿ ಕನ್ಯೆಯರನ್ನು ಕೊಂಡು ತರಬಹುದು ಎಂಬ ಅಭಿಪ್ರಾಯವನ್ನೇ ಪುಷ್ಟೀಕರಿಸುವಂತೆ ತೋರುತ್ತದೆ. ಆತನೇನೂ ಸುಧಾಕರನಂತೆ ತೋರುವದಿಲ್ಲ.

ಪಾಂಡು ರಾಜನು ತನ್ನ ಆರೋಗ್ಯ ಸಂವರ್ಧನೆಗಾಗಿ, ಭೀಷ್ಮನ ಅನುಮತಿ ಪಡೆದುಕೊಂಡೇ ಅರಣ್ಯಕ್ಕೆ ತೆರಳಿದನು. ಧೃತರಾಷ್ಟ್ರನು ಅರಸನಾದನು. ಪಾಂಡುರಾಜನಿಗೂ ನಿಯೋಗ ಪದ್ಧತಿಯಿಂದಲೇ ಮಕ್ಕಳಾದರು. ಪಾಂಡು ರಾಜನು ಸತ್ತ ಅನೇಕ ವರ್ಷಗಳ ನಂತರ ಋಷಿಗಳು ಪಂಚಪಾಂಡವರನ್ನು — ಕರೆದುಕೊಂಡು ಹಸ್ತಿನಾವತಿಗೆ ಹೋದಾಗ ಅಲ್ಲಿಯ ನಾಗರಿಕರು ಇವರ ಹುಟ್ಟಿನ ಬಗ್ಗೆ ಸಂದೇಹ ವ್ಯಕ್ತಪಡಿಸಿದರು. ಮುಂದೆ ಕೃಷ್ಣ ದೌತ್ಯದ ಕಾಲಕ್ಕೆ ದುರ್ಯೋಧನನೂ ಇದೇ ಶಂಕೆಯನ್ನು ಶ್ರೀಕೃಷ್ಣನೆದುರು ವ್ಯಕ್ತಪಡಿಸಿದ. ಆದರೆ ದೇವತೆಗಳು ಪುಷ್ಪವೃಷ್ಟಿಗೈದದ್ದರಿಂದ ಅವರನ್ನು ಪಾಂಡುಪುತ್ರರೆಂದು ಒಪ್ಪಲಾಯಿತು. ಈ ಸಂದಿಗ್ಧ ಪ್ರಸಂಗದಲ್ಲಿ ಭೀಷ್ಮ ತನ್ನ ಕರ್ತೃತ್ವವನ್ನು ಮೆರೆಯಲಿಲ್ಲ. ಇದೂ ಗಮನಾರ್ಹ.

ದ್ರೋಣಾಚಾರ್ಯ ಕೃಪಾಚಾರ್ಯರನ್ನು ನೇಮಕ ಮಾಡಿಕೊಂಡವನೂ ಭೀಷ್ಮನೆ. ಕುಲವೃದ್ಧ-ಜ್ಞಾನವೃದ್ಧನೆಂದು ಆತನಿಗೆ ಆ ಅಧಿಕಾರ ಇದೆ. ದುರ್ಯೋಧನ ಕರ್ಣರು ದೃತರಾಷ್ಟ್ರನ—ಸಮ್ಮತಿಯಿಂದಲೇ ಪಾಂಡವರನ್ನು ರಾಜ್ಯಭ್ರಷ್ಟರಾಗಿಸುವ ಕುತಂತ್ರಗಳಲ್ಲಿ ತೊಡಗಿದ್ದರು. ಭೀಷ್ಮನಿಗೆ ಈ ಕುಹಕ ಗೊತ್ತಿದ್ದಿಲ್ಲವೆಂದು ಹೇಳಲಿಕ್ಕಾಗದು. ಆದರೆ ದುರ್ಯೋಧನನ ಚಟುವಟಿಕೆಗಳಿಗೆ ಕಣ್ಣುಮುಚ್ಚಿದ್ದ ಅಷ್ಟೇ.

ಆಜನ್ಮ ಬ್ರಹ್ಮಚಾರಿಯಾಗಿರುವದಾಗಿ ಪ್ರತಿಜ್ಞೆ ಮಾಡಿದ್ದ ಭೀಷ್ಮ ನಗರವನ್ನಾಗಲಿ ರಾಜಭವನವನ್ನಾಗಲಿ ತ್ಯಜಿಸಿರಲಿಲ್ಲ. ದುರ್ಯೋಧನಾದಿ ಕೌರವರು ಪಾಂಡವರ ವಿನಾಶಕ್ಕಾಗಿ ಕುತಂತ್ರಗಳನ್ನು ನಡೆಸಿದ್ದು ಭೀಷ್ಮನ ಸಮ್ಮುಖದಲ್ಲಿಯೆ. ಆದರೂ ಆತನು ಅವನ್ನು ತಡೆಗಟ್ಟಲು ಮುಂದಾಗಲಿಲ್ಲ. ಕೌರವರು ಭೀಮನಿಗೆ ವಿಷಪ್ರಾಶನ ಮಾಡಿಸಿದರೂ ಭೀಷ್ಮನು ಅವರನ್ನು ಆಕ್ಷೇಪಿಸಲಿಲ್ಲ. ಲಾಕ್ಷಾಗೃಹದ ಘಟನೆ ನಡೆಯಿತು. ಕರ್ಣನ ಜನನ, ಶಿಖಂಡಿ ಜನ್ಮಗಳ ವೃತ್ತಾಂತ ರಹಸ್ಯಗಳನ್ನು ಬಚ್ಚಿಡಲಾಯಿತು. ಇದು ಸಾಧ್ಯವೇ ? ಲಾಕ್ಷಾಗೃಹದ ದುರ್ಘಟನೆಗೆ ಧೃತರಾಷ್ಟ್ರನಷ್ಟೇ ಭೀಷ್ಮನೂ ಹೊಣೆಗಾರ ಎಂದರೆ ತಪ್ಪೇನು ? ಲಾಕ್ಷಾಗೃಹದಲ್ಲಿ ಪಾಂಡವರು ಬೆಂದು ಹೋದರು ಎಂಬ ವಾರ್ತೆ ಕೇಳಿ ಭೀಷ್ಮನು ಹೊರಡಿಸಿದ ಈ ಕೆಳಗಿನ ಉದ್ಗಾರಗಳು ಕೃತಕ ಎನಿಸುತ್ತವೆ.

ಯದಾ ಪ್ರಭೃತಿ ದಗ್ಧಾಸ್ತೇ
ಕುಂತೀಭೋಜ ಸುತಾ ಸುತಾಃ
ತದಾ ಪ್ರಭೃತಿ ಗಾಂಧಾರೇ ನ
ಶಕ್ತೋಽಮ್ಯಭಿವೀಕ್ಷಿತುಮ್॥

(ಅರಗಿನ ಮನೆಯಲ್ಲಿ ಪಾಂಡವರು ಬೆಂದು ಹೋದ ಸುದ್ದಿ ಕೇಳಿ ನಾನು ನಾಡಿನಲ್ಲಿ ತಲೆ ಎತ್ತಿ ತಿರುಗಾಡದಂತಾಗಿದೆ.)

ತನಗೆ ಕೌರವರಷ್ಟೇ ಪಾಂಡವರೂ ಇಷ್ಟರು ಪ್ರಿಯರು ಎಂದೂ ಭೀಷ್ಮನ ಅಭಿಪ್ರಾಯ.

ಗಾಂಧಾರ್ಯಾಶ್ಚ ಯಥಾ ಪುತ್ರಾಃ
ತಥಾ ಕುಂತೀಸುತಾ ಮಮ
ಯಥಾ ಚ ಮಮ ತೇ ರಕ್ಷ್ಯಾ
ಧೃತರಾಷ್ಟ್ರ ತಥಾ ತವ

ಕೌರವ-ಪಾಂಡವರಲ್ಲಿ ಹುಟ್ಟಿದ ದ್ವೇಷವನ್ನು ಶಮನಗೊಳಿಸುವುದು ಭೀಷ್ಮನ ಕರ್ತವ್ಯವಾಗಿರಲಿಲ್ಲವೇ? ಎಂಬ ಪ್ರಶ್ನೆ ಏಳುವುದು ಸಹಜ. ಪಾಂಡುರಾಜ ಮಡಿದ ನಂತರ ಭೀಷ್ಮನು ಧರ್ಮಜನನ್ನು ಏಕೆ ಹಸ್ತಿನಾಪುರದ ಪಟ್ಟಕ್ಕೇರಿಸಲಿಲ್ಲ? ಹಾಗೆ ನೋಡಿದರೆ, ಧೃತರಾಷ್ಟ್ರನು ಪಾಂಡುರಾಜನ ಪ್ರತಿನಿಧಿಯಾಗಿ ಹಸ್ತಿನಾವತಿಯ ರಾಜ್ಯವನ್ನಾಳುತ್ತಿದ್ದ. ಭೀಷ್ಮನು ಪರಿಪಾಲಕನಾಗಿದ್ದ. ಭೀಷ್ಮನು ಪರಂಪರೆ ಪ್ರಿಯನಾಗಿದ್ದರೂ ಧರ್ಮರಾಜನನ್ನು ಹಸ್ತಿನಾಪುರದ ಸಿಂಹಾಸನಕ್ಕೇರಿಸಲು ಸಂಕೋಚಪಡಬೇಕಾಗಿರಲಿಲ್ಲ. ಪಾಂಡವರು ಕಾಡಿನಿಂದ ಹಿಂತಿರುಗಿದ ಕೂಡಲೇ ಅವರ ರಾಜ್ಯವನ್ನು ಅವರಿಗೆ ಒಪ್ಪಿಸಿಬಿಟ್ಟಿದ್ದರೆ ಯಾರೂ ಆಕ್ಷೇಪಿಸುತ್ತಿರಲಿಲ್ಲ. ತನ್ನ ಮೌನದಿಂದ ಭೀಷ್ಮನು ಪಾಂಡುರಾಜನ ವಿಶ್ವಾಸಘಾತ ಮಾಡಿದಂತಾಗಲಿಲ್ಲವೇ? ಭೀಷ್ಮನ ಅನುಮತಿ ಪಡೆದೇ ಪಾಂಡುರಾಜನು ಅರಣ್ಯಕ್ಕೆ ತೆರಳಿದ್ದ ಎಂಬುದನ್ನು ಮರೆಯಬಾರದು.

ದ್ರೌಪದಿ ಸ್ವಯಂವರದ ನಂತರ ಪಾಂಡವರಿಗೆ ಶ್ರೀಕೃಷ್ಣ-ದ್ರುಪದರಂಥ ಸಮರ್ಥ ಸಹಾಯಕರು ದೊರೆತಿದ್ದರು. ಆಗ ಪಾಂಡವರು ತಮ್ಮ ಪಾಲಿನ ರಾಜ್ಯವನ್ನು ಕೇಳಿದ್ದರೆ ನಿರಾಕರಿಸುವ ಧೈರ್ಯ ಯಾರಲ್ಲಿತ್ತು? ಇದನ್ನು ಅರಿತೇ ಭೀಷ್ಮನು ಧೃತರಾಷ್ಟ್ರನಿಗೆ, "ನೀನು ಅರ್ಧಭಾಗದ ರಾಜ್ಯ ಪರಿಪಾಲಿಸು. ಇನ್ನರ್ಧ ಭಾಗವನ್ನು ಪಾಂಡವರಿಗೆ ಬಿಟ್ಟುಕೊಡು" ಎಂದು ಹೇಳುತ್ತಾನೆ.

ಅಧರ್ಮೇಣ ಚ ರಾಜ್ಯಂ ತ್ವಂ।
ಪ್ರಾಪ್ತವಾನ್ ಭರತರ್ಷಭ
ತೇಽಪಿ ರಾಜ್ಯಮನುಪ್ರಾಪ್ತಾಃ।
ಪೂರ್ವಮೇವೇತಿ ಮೇ ಮತಿಃ
ಯದಿ ಧರ್ಮಸ್ತ್ವಯಾ ಕಾರ್ಯೋ
ಯದಿ ಕಾರ್ಯಂ ಪ್ರಿಯಂ ಚ ಮೇ
ಕ್ಷೇಮಂ ಚ ಯದಿ ಕರ್ತವ್ಯಂ
ತೇಷಾಮರ್ಧಂ ಪ್ರದೀಯತಾಮ್ ॥

ಇಡೀ ರಾಜ್ಯವೇ ಪಾಂಡುವರದೆಂದು ಧರ್ಮ ಹೇಳುತ್ತಿದೆ, ಭೀಷ್ಮನ ಬುದ್ಧಿಯೂ ಸಾಕ್ಷಿ ನುಡಿಯುತ್ತಿದೆ ಎಂದಾಗ ಭೀಷ್ಮನು ಇಡೀ ರಾಜ್ಯವನ್ನು ಪಾಂಡವರಿಗೆ ಒಪ್ಪಿಸದೆ "ತ್ವಯಾರ್ಧಂ ಮಯಾರ್ಧಂ" ಎಂಬ ನೀತಿಯನ್ನು ಅನುಸರಿಸುವದೇಕೆ? ತಂದೆಯ ಸಮಸ್ಯೆಯಲ್ಲಿ ಧರ್ಮ ಪರಿಪಾಲನೆಗೆ ಮನ ತೆತ್ತ ಭೀಷ್ಮನು ಇಲ್ಲಿ ಒಬ್ಬ ಮೊಮ್ಮಗ ಇನ್ನೊಬ್ಬ ಮೊಮ್ಮಗನ ರಾಜ್ಯವನ್ನು ಅಪಹರಿಸುತ್ತಿರುವಾಗ ತಡೆಯಲಿಲ್ಲವೇಕೆ?

ಮುಂದಿನ ವಿನಾಶವನ್ನು ತಪ್ಪಿಸುವುದಕ್ಕಾಗಿ ರಾಜ್ಯವನ್ನು ವಿಭಾಗಿಸಿ ಪಾಂಡವರಿಗೆ ನೀಡಲಾಯಿತು, ಎನ್ನುವದೂ ಸರಿಯಲ್ಲ. ದುರ್ಯೋಧನನು ಪಾಂಡವರ ಮೇಲೆ ವೈರ ಸಾಧಿಸುತ್ತಿದ್ದುದು ಸ್ವಸಾಮರ್ಥ್ಯವನ್ನು ನೆಚ್ಚಿಯೇ ಹೊರತು ಭೀಷ್ಮ ದ್ರೋಣಾದಿಗಳ ಬಲವನ್ನು ನಂಬಿ ಅಲ್ಲ. ತನ್ನ ಬಂಧುವರ್ಗ-ಮಿತ್ರವರ್ಗದ ಸಾಹಸ- ಪರಾಕ್ರಮಗಳನ್ನು ದುರ್ಯೋಧನ ಬಹುವಾಗಿ ಮೆಚ್ಚಿಕೊಂಡಿದ್ದ. ಸಮರದಲ್ಲಿ ತೀಕ್ಷ್ಣ ಶರಗಳಿಂದ ಪಾಂಡವರ ವಿನಾಶಗೈಯುತ್ತೇನೆ ಎಂದು ಆತ ಬಡಾಯಿ ಕೊಚ್ಚುತ್ತಿದ್ದ.

ಪಿತಾಮಹ ವಿಜಾನೀಹೇ
ಪಾರ್ಥೇಷು ವಿಜಯಂ ಕಥಂ
ನಾಹಂ ಭವತಿ- ವದ್ರೋಣೇ
ನಕೃಪೇ ನಚ ಬಾಹ್ಲಿಕೇ
ಅನ್ಯೇಷುಚ ನರೇಂದ್ರೇಷು
ಪರಾಕ್ರಮ್ಯ ಸಮಾರಭೇ

ಅಹಂ ವೈಕರ್ತನಃ ಕರ್ಣೋ
ಭ್ರಾತಾ ದುಃಶಾಸನಶ್ಚ ಮೇ
ಪಾಂಡವಾನ್ ಸಂಯುಗೇ ಸರ್ವಾನ್
ಹನಿಷ್ಯಾಮಃ ಶಿತೈಃ ಶರೈಃ

ರಾಜ್ಯ ವಿಭಜನೆ ಮತ್ತು ನಂತರ ದ್ಯೂತದಲ್ಲಿ ಪಾಂಡವರು ರಾಜ್ಯ ಕಳೆದುಕೊಂಡು ಅರಣ್ಯವಾಸಕ್ಕೆ ತೆರಳುವ ಕಾಲಕ್ಕೆ ಕೌರವರ ದರ್ಬಾರಿನ (ಆಸ್ಥಾನ)ದಲ್ಲಿ ಭೀಷ್ಮನ ಸ್ಥಿತಿಗತಿ ಏನಿತ್ತು? ದುರ್ಯೋಧನನಾಗಲಿ ಧೃತರಾಷ್ಟ್ರನಾಗಲಿ ಭೀಷ್ಮನ ಮಾತನ್ನು ಕೇಳುತ್ತಿರಲಿಲ್ಲ. ದ್ಯೂತದ ಪ್ರಸಂಗದಲ್ಲಿ ದ್ರೌಪದಿಯು, "ತಾವೇ ಪರಾಜಿತರಾದ ಬಳಿಕ ನನ್ನನ್ನು ಪಣಕ್ಕೊಡ್ಡಲು ಪಾಂಡವರಿಗೇನು ಅಧಿಕಾರವಿದೆ"? ಎಂದು ಕೇಳಿದ ಪ್ರಶ್ನೆಗೆ ಧರ್ಮಸಮ್ಮತ ಉತ್ತರ ನೀಡಲಾಗದ ಭೀಷ್ಮ ರಾಜಸಭೆಯಿಂದ ಹೊರ ಬೀಳಬೇಕಾಗುತ್ತದೆ. ಆತನ ಹಿತವಚನವನ್ನು ಯಾರೂ ಕಿವಿಯ ಮೇಲೆ ಹಾಕಿಕೊಳ್ಳುವುದಿಲ್ಲ.

ದುರ್ಯೋಧನನು ಹೀಗೆ ಅಡ್ಡದಾರಿ ಹಿಡಿಯುವಂತಾದುದರಲ್ಲಿ ಭೀಷ್ಮನ ಹೊಣೆಗಾರಿಕೆ ಏನೂ ಇಲ್ಲವೆ? ಎಂಬ ಮಾತು ಬರುತ್ತದೆ. ಅನ್ಯಾಯ- ಅಧರ್ಮಗಳಿಗೆ ಆಶ್ರಯವಿತ್ತೇ ಭೀಷ್ಮ ತನ್ನ ಸ್ಥಿತಿಯನ್ನು ಇಷ್ಟು ಹೀನಾಯಮಾನವಾಗಿಸಿಕೊಂಡನೇ?

ಭೀಷ್ಮ ಕೌರವರ ಸೇವಕ ನಿಜ, ಆದರೆ ನಿಷ್ಠಾವಂತ ಸೇವಕನಾಗಿರಲಿಲ್ಲ. ಕೌರವರು ಭೀಷ್ಮನಲ್ಲಿ ವಿಶ್ವಾಸವಿಟ್ಟಿರಲಿಲ್ಲ. ತನ್ನ ದೇಹ ಮಾತ್ರ ಕೌರವರ ಸೇವೆಯಲ್ಲಿದೆಂದು ಭೀಷ್ಮನು ಯುಧಿಷ್ಠಿರನಿಗೆ ನಿವೇದಿಸಿದುದು ನಿಜವಾದದ್ದೇ ಸೈ. ಗಾಂಧಾರಿ ಕೂಡ ಯುದ್ಧ ಪ್ರಾರಂಭದಲ್ಲಿ, ಭೀಷ್ಮ ದ್ರೋಣಾದಿಗಳನ್ನು ನಂಬಬೇಡ ಎಂದು ದುರ್ಯೋಧನನನ್ನು ಎಚ್ಚರಿಸಿದ್ದಳು. ಇವರು ನಿನಗಾಗಿ ತ್ರಿಕರಣಪೂರ್ವಕ ಯುದ್ಧ ಮಾಡಲಾರರು ಎಂದು ಗಾಂಧಾರಿ ತಿಳಿಸಿದ್ದಳಂತೆ

ಭೀಷ್ಮನು ಸ್ವಾಮಿಭಕ್ತ ಸೇವಕನೂ ಆಗಿರಲಿಲ್ಲ. ಆತನ ಹೃದಯ ಪಾಂಡವರತ್ತ; ಶರೀರ ಕೌರವರ ಸೇವೆಯಲ್ಲಿ. ಇದೇನು ಸ್ವಾಮಿಭಕ್ತಿಯ ಆದರ್ಶವಾಗಬಲ್ಲದೆ? ತನ್ನ ಪಂಗಡದ ರಹಸ್ಯೋಪಾಯವನ್ನು ಶತ್ರುಗಳಿಗೆ ಬಿಟ್ಟು ಕೊಡುವವನನ್ನು ಇಂದಿನ ಯುಗದಲ್ಲಿ ವಿಶ್ವಾಸಘಾತಕಿ ಎನ್ನುವದಿಲ್ಲವೆ?

ಭೀಷ್ಮನು ಮನಸು ಮಾಡಿದ್ದರೆ ಮಹಾಭಾರತ ಯುದ್ಧದ ಸಂಭವನೀಯತೆಯನ್ನು ಕುಡಿಯಲ್ಲಿಯೆ ಚಿವುಟಿ ಹಾಕಬಹುದಿತ್ತು. ಕೌರವ-ಪಾಂಡವರು ಚಿಕ್ಕವರಿದ್ದಾಗ ಅಂದಿನ ಕರ್ಣನು ರಂಗಶಾಲೆಯಲ್ಲಿ ಪ್ರತ್ಯಕ್ಷನಾಗಿ ಅರ್ಜುನನಿಗೆ ಸರಿಸಮನಾಗಿ ಕೈಚಳಕವನ್ನು ಪ್ರದರ್ಶಿಸಿದಾಗ ಭೀಷ್ಮ ಅಲ್ಲಿ ಹಾಜರಿದ್ದ. ಕೃಪಾಚಾರ್ಯರ ಯುಕ್ತಿಯಿಂದಲೇ ಅಂದು ಕರ್ಣಾರ್ಜುನರ ದ್ವಂದ್ವ ಸಂಭವಿಸಲಿಲ್ಲ. ಈ ಸುದ್ದಿ ಕೇಳಿಯೆ ಕುಂತಿ ಹೌಹಾರಿ ಎಚ್ಚರ ತಪ್ಪಿದಳು. ಆ ಕಾಲಕ್ಕೆ ಭೀಷ್ಮನು ಕರ್ಣನ ನಿಜ ಪರಿಚಯವನ್ನು ಎಲ್ಲರಿಗೆ ಮಾಡಿಕೊಟ್ಟು ಆತನಿಗೆ ಹಸ್ತಿನಾಪುರದ ಪಟ್ಟ ಕಟ್ಟಿದ್ದರೆ ಮಹಾಭಾರತ ಯುದ್ಧವೇನಾದರೂ ಸಂಭವಿಸುತ್ತಿತ್ತೇ?

ಕರ್ಣನ ಬಗೆಗೆ ಭೀಷ್ಮನ ಅಭಿಪ್ರಾಯ ಏನಿತ್ತು? ಭೀಷ್ಮ ಶರಶಯ್ಯೆಯಲ್ಲಿದ್ದಾಗ ಕರ್ಣನು ಆತನ ಭೆಟ್ಟಿಗೆಂದು ಹೋದ. ಆಗ ಭೀಷ್ಮನು, "ಕರ್ಣ, ನೀನು ಸುವೃತ್ತಿ ಹೌದು, ಆದರೆ ನಿನ್ನ ಜನ್ಮ ಅಧರ್ಮದಿಂದಾದ್ದರಿಂದ ನಿನ್ನ ಬುದ್ಧಿ ಕುಮಾರ್ಗಿಯಾಗಿ ನೀನು ನೀಚರನ್ನು ಆಶ್ರಯಿಸುತ್ತ ಗುಣದ್ವೇಷಿಯಾಗಿರುವಿ," ಎಂದು ಆತನಿಗೆ ಹೇಳಿದನಂತೆ.

ಅಧರ್ಮದಿಂದ ಜನಿಸಿದ ಕರ್ಣನ ಬುದ್ಧಿ ಭ್ರಷ್ಟವಾಗಿದೆ ಎಂದರೆ ಧರ್ಮದಿಂದಲೇ ಜನ್ಮ ತಾಳಿದ ದುರ್ಯೋಧನ-ದುಃಶಾಸನರ ಬುದ್ಧಿ ಹೇಗಿದ್ದಿತು? ನೀನು ನೀಚರನ್ನು ಆಶ್ರಯಿಸಿದಿ ಎಂದು ಕರ್ಣನನ್ನು ಆಕ್ಷೇಪಿಸುವ ಭೀಷ್ಮನ ಒಡೆಯನೂ ಈ ದುರ್ಯೋಧನನೇ ತಾನೆ?

ಈ ಎಲ್ಲ ಅಂಶಗಳನ್ನು ವಿಚಾರಿಸಿದಾಗ ಮಹಾಭಾರತ ಯುದ್ಧಕ್ಕೆ ಭೀಷ್ಮನೇ ಕಾರಣೀಭೂತ ಎಂದು ಭಾವಿಸಿದರೆ ತಪ್ಪಾಗಲಿಕ್ಕಿಲ್ಲ ★

ಕಳೆದ ಕೆಲವು ದಶಕಗಳಿಂದೀಚೆಗೆ ಬೀಜವಿಲ್ಲದ ಫಲಗಳ ಸೃಷ್ಟಿಕಾರ್ಯದತ್ತ ನಾನಾ ದೇಶಗಳ ಉದ್ಯಾನ ತೋಟಗಾರಿಕೆ ತಜ್ಞರ ಲಕ್ಷ್ಯ ಸೆಳೆದಿದೆ. ಅಂತಹ ಬೀಜವಿಲ್ಲದ ಫಲಗಳಿಗೆ ವಿಶೇಷ ವಾಣಿಜ್ಯ ಮಹತ್ವವಿರುವುದೇ ಮುಖ್ಯ ಕಾರಣ. ಬೀಜವುಂಟಾಗದಿರುವಿಕೆಗೆ ಅನಿಷೇಕ ಫಲನ (Parthenocarpy) ಎಂಬ ನಿಯಮವೇ (ಎಂದರೆ– ಅಂಡ ಕೋಶದಲ್ಲಿ ಗರ್ಭಾಂಕುರತೆಯಾಗದೇ ಫಲ ನಿರ್ಮಾಣವಾಗುವುದು) ಬಹಳ ನಿಕಟವಾಗಿ ಸಂಬಂಧಿಸಿರುತ್ತದೆ. ಆದರೆ ಅಂಡಕೋಶದಲ್ಲಿ ಗರ್ಭಾಂಕುರತೆಯು ಉಂಟಾದರೂ ಫಲ– ಬೀಜೋತ್ಪತ್ತಿ ಆಗಲೇಬೇಕೆಂಬುದೇನೂ ಇಲ್ಲ. ಒಮ್ಮೊಮ್ಮೆ ಗರ್ಭಾಂಕುರತೆಯಾದ ಮೇಲೆ ಉಂಟಾದ ಬೀಜಗಳ ನಾಶದಿಂದ ಬೀಜರಹಿತ ಸ್ಥಿತಿ ನಿರ್ಮಾಣಗೊಳ್ಳಬಹುದು. ಸಾಮಾನ್ಯವಾಗಿ ಬೀಜರಹಿತ ಫಲವು ಅನಿಷೇಕ ಫಲನ ರೀತ್ಯಾ ಬೆಳೆಯುವುದು. ಆದರೆ ಅನಿಷೇಕ ಫಲನದಿಂದ ಉಂಟಾದ ಫಲವು ಯಾವಾಗಲೂ ಬೀಜರಹಿತವಾಗಿಯೇ ಇರಬೇಕೆಂಬ ಕಡ್ಡಾಯವೂ ಇಲ್ಲ.

ಬೀಜರಹಿತ ಫಲಗಳು

ಎಂ. ಎಸ್. ಎಸ್. ರಾವ್

ಸಾಮಾನ್ಯವಾಗಿ ಗರ್ಭಾಂಕುರತೆಯ ಪರಿಣಾಮವಾಗಿ ಫಲ ನಿರ್ಮಾಣವಾಗುತ್ತದೆ. ಅದರಿಂದ ಗರ್ಭಾಂಕುರತೆಯು ವಿಧಾನವೊಂದು ಫಲೋತ್ಪತ್ತಿಗೆ ಅವಶ್ಯವೆಂದು ಭಾವಿಸುವುದುಂಟು. ಆದರೂ ಕೆಲ ಜಾತಿಯ ದ್ರಾಕ್ಷೆ, ಕಿತ್ತಳೆ, ಸವತೆ, ಕುಂಬಳ, ಅಂಜೂರ, ಬಾಳೆ, ಪೈನಾಪಲ್ (ಅನಾನಸ್), ಪಪ್ಪಾಯಿ ಮುಳ್ಳೇರಿ, ಟೊಮ್ಯಾಟೋ ಮುಂತಾದ ಫಲಗಳಲ್ಲಿ ಗರ್ಭಾಂಕುರತೆ ಇಲ್ಲದೆಯೂ ಉತ್ಪಾದನೆ ಮುಂದುವರೆದು, ಗಣನೀಯ ಪ್ರಮಾಣದಲ್ಲಿ ಬೀಜಗಳಿಲ್ಲದೆಯೇ ಫಲ ನಿರ್ಮಾಣಗೊಳ್ಳಬಹುದು.

ಈಗ ಕಳೆದ ಕೆಲ ಕಾಲದಿಂದಲೂ ಬೀಜರಹಿತ ಫಲಗಳನ್ನು ಉತ್ಪಾದಿಸುವ ಅನೇಕ ಪ್ರಯತ್ನಗಳು ನಡೆದಿವೆ. ಆದರೆ ಕೆಲವೇ ಪ್ರಸಂಗಗಳಲ್ಲಿ ಮಾತ್ರ ಈ ಪ್ರಯತ್ನ ಯಶಸ್ವಿಯಾಗಿದೆ. ೧೯೩೦ರಲ್ಲಿ ಕೆ. ಯಾಸುಂದಾ ಎಂಬ ಒಬ್ಬ ಜಪಾನಿ ತಜ್ಞನು ಒಂದು ಪ್ರಯೋಗದಲ್ಲಿ ಬದನೆ ಗಿಡದ ಹೂಗಳಲ್ಲಿ ಯಥಾ ರೀತಿ ಪರಾಗ ಸಂಪರ್ಕ ಕ್ರಿಯೆ ಕೈಕೊಂಡನು. ಆದರೆ ಪರಾಗ ನಳಿಕೆ ಅಂಡಾಶಯದ ವಲಯವನ್ನು ಸೇರುವ ಮೊದಲೇ, ಇಡೀ ಶಲಾಕೆಯನ್ನು ಕತ್ತರಿಸಿ ಹಾಕಿ, ಅಂಡಾಶಯದಲ್ಲಿ ಗರ್ಭಾಂಕುರತೆಯಾಗುವುದನ್ನು ತಪ್ಪಿಸಿದನು. ಇಷ್ಟಾದರೂ ಅಂಡಾಶಯದಲ್ಲಿ ಬೆಳವಣಿಗೆ ಮುಂದುವರಿಯುತ್ತಲೇ ಸಾಗಿತು. ಮುಂದೆ ಉಂಟಾದ ಫಲವು ಬೀಜರಹಿತವಾಯಿತು. ಇದರಿಂದ ಅಂಡಕೋಶದಲ್ಲಿ ಗರ್ಭಾಂಕುರತೆಯಾಗದಿದ್ದರೂ ಪರಾಗರೇಣುಗಳು ಫಲೋತ್ಪತ್ತಿಗೆ ಪ್ರೇರಣೆ ಹಾಗೂ ಪ್ರಚೋದನೆ ನೀಡಬಲ್ಲವು ಎಂದು ಭಾವಿಸಬಹುದು.

ಬೇರೆ ಬೇರೆ ಸಸ್ಯಗಳಿಂದ ದೊರಕಿಸಿಕೊಂಡ ಪರಾಗರೇಣುಗಳನ್ನು ಬಳಸಿ ಫಲಗಳಲ್ಲಿ ಬೀಜರಹಿತ ಸ್ಥಿತಿಯನ್ನು ಉಂಟು ಮಾಡುವ ಹಲವಾರು ಪ್ರಯೋಗಗಳನ್ನೂ ನಡೆಸಲಾಗಿದೆ. ಆದರಲ್ಲಿ ವಿವಿಧ ಮಟ್ಟದ ಯಶಸ್ಸು ದೊರೆತಿದೆ. ೧೮೪೯ ರಲ್ಲಿ ಗಾರ್ಟನರ್ ಎಂಬ ಜರ್ಮನ್ ತಜ್ಞನು ಮೊದಲಬಾರಿಗೆ ಕೆಲ ಕುಂಬಳ ಜಾತಿಯ ಸಸ್ಯಗಳಲ್ಲಿ 'ಲೈಕೋಪೋಡಿಯಂ' ಸಸ್ಯಗಳ ಬೀಜಾಣುಗಳನ್ನು ಬಳಸಿ ಬೀಜರಹಿತ ಫಲೋತ್ಪತ್ತಿ ಪ್ರಯೋಗಗಳನ್ನು ಮಾಡಿತೋರಿಸಿದನು. ತಂಬಾಕು (ಹೊಗೆ ಸೊಪ್ಪು) ಮೆಣಸಿನಕಾಯಿ ಟೊಮ್ಯಾಟೋ ಮುಂತಾದ ಸಸ್ಯಗಳಲ್ಲಿ ಬೇರೆ

ಬೇರೆ ತಳಿಯ ಸಸ್ಯಗಳಿಂದ ದೊರೆತ ಪರಾಗ ರೇಣುಗಳ ಸಹಾಯದಿಂದ ಮತ್ತು ಕೆಲವು ಬಗೆಯ ರಾಸಾಯನಿಕ ವಸ್ತುಗಳಿಂದ ಕೂಡ, ಬೀಜರಹಿತ ಫಲೋತ್ಪಾದನೆ ಕೈಕೊಂಡು ಯಶಸ್ಸು ಸಾಧಿಸಿದ್ದುಂಟು. ನಂತರ ನಡೆದ ಇನ್ನೂ ಕೆಲವು ಪರಿಶೋಧನೆಗಳು ಪರಾಗ ರೇಣುವಿನ ನಾಶವಾದರೂ ಸಹ ಬೀಜರಹಿತ ಫಲೋತ್ಪಾದನೆಗೆ ಪ್ರೇರಣೆ ನೀಡಲು ಸಾಕಾಗುವುದೆಂದು ತೋರಿಬಂದಿತು. ಮುಂದೆ ಈ ಈ ರಾಸಾಯನಿಕ ವಸ್ತುಗಳ ದೀರ್ಘ ಪರಿಶೀಲನೆಗಳಿಂದ ಅವುಗಳೆಲ್ಲ 'ಆಕ್ಸಿನ್ಸ್' (Auxins) ಎಂಬ ಒಂದು ವಿಶಿಷ್ಟ ವರ್ಗದ ಸಂಯುಕ್ತ ಘಟಕ ಹಾಗೂ ಸಸ್ಯಪ್ರೇರಕ ಅಥವಾ ನಿಯಂತ್ರಗಳಿಗೆ (Hormones) ಸೇರಿರುವುವು ಎಂದು ತಿಳಿದುಬಂದಿತು.

ಪರಾಗನಳಿಕೆ ಕೂಡ ಕೆಲ ರಸಾಯನಿಕಗಳನ್ನು ಸ್ರವಿಸುತ್ತವೆ. ಇವು ಅಂಡಾಶಯದೊಳಗೆ ಪಸರಿಸಿದಾಗ, ಫಲೋತ್ಪಾದನೆಗೆ ಚೇತನ ಹಾಗೂ ಪ್ರೇರಣೆ ನೀಡುತ್ತವೆ. ಈ ರಾಸಾಯನಿಕ ವಸ್ತುಗಳು ಅಂಡಾಶಯದೊಳಗೆ ಪಸರಿಸಿದರೂ ಗರ್ಭಾಂಕುರತೆಯನ್ನು ಮಾತ್ರ ತಪ್ಪಿಸಿದಾಗ ಮುಂದೆ ಉಂಟಾಗುವ ಫಲದೊಳಗೆ ಗಣನೀಯವಾದ ಬೀಜರಹಿತಸ್ಥಿತಿ ನಿರ್ಮಾಣಗೊಳ್ಳುವುದು ಗೋಚರವಾಯಿತು. ಇದರಿಂದ ಅಂಡಾಶಯಕ್ಕೆ ನೀಡಿದ ಒಂದು ಪ್ರೇರಣೆ ಅಥವಾ ಪ್ರಚೋದನೆ ರಾಸಾಯನಿಕ ರೀತಿಯದೆ ಎಂದು ಸ್ಪಷ್ಟವಾಗುತ್ತದೆ. ಅನೇಕ ಸಸ್ಯತಳಿಗಳ ಪರಾಗರೇಣುಗಳು 'ಆಕ್ಸಿನ್ ಭರಿತ'ವೆಂತಲೂ ಅವೇ ಫಲೋತ್ಪಾದನೆಗೆ ಮುಖ್ಯ ಪ್ರೇರಕವಾಗಬಲ್ಲವು ಎಂತಲೂ ಸಿದ್ಧವಾಯಿತು. ಅನಾನಸ್, ಬಾಳೆ, ದ್ರಾಕ್ಷೆ ಮುಂತಾದ ಕೆಲ ಸಸ್ಯಗಳಲ್ಲಿ ಪರಾಗ ಸಂಪರ್ಕ ಕ್ರಿಯೆ ಮತ್ತು ಗರ್ಭಾಂಕುರತೆ ಇವೆರಡೂ ಸಂಪೂರ್ಣವಾಗಿ ಇಲ್ಲದೆ ಹೋಗಬಹುದು. ಆಗ ಗರ್ಭಾಂಕುರತೆ ಹೊಂದದ ಪುಷ್ಪಗಳಿಂದ ಉಂಟಾದ ಫಲಗಳೆಲ್ಲ ಬೀಜರಹಿತವೇ ಆದುದುಂಟು.

ಕೆಲ ಸಸ್ಯಗಳು ಏಕೆ ಮತ್ತು ಹೇಗೆ ಬೀಜರಹಿತ ಫಲಗಳನ್ನು ಉತ್ಪಾದಿಸುತ್ತವೆ ಎಂಬ ಸಮಸ್ಯೆ ಸಾಕಷ್ಟು ದೀರ್ಘಕಾಲದ ವರೆಗೆ ಒಂದು ಒಗಟಾಗಿಯೇ ಉಳಿದಿತ್ತು. ೧೯೩೬ರಲ್ಲಿ ಗಸ್ಟಾಫ್‌ಸನ್ ಎಂಬ ಒಬ್ಬ ಅಮೇರಿಕನ್ ತಜ್ಞನು ಕಿತ್ತಳೆ, ನಿಂಬೆ, ದ್ರಾಕ್ಷೆ ಇತ್ಯಾದಿ ಸಸ್ಯ ತಳಿಗಳ ಹೂ ಮೊಗ್ಗುಗಳು ಮತ್ತು ಅಂಡಾಶಯಗಳಲ್ಲಿ ಆಕ್ಸಿನ್ ಅಂಶವನ್ನು ಪರಿಶೋಧಿಸಿದನು. ಆಗ ಅವನಿಗೆ ಕಂಡು ಬಂದ ಒಂದು ಮುಖ್ಯ ಅಂಶ ಹೀಗಿದೆ. ಬೀಜಗಳನ್ನು ಹೊಂದಿದ ಫಲಗಳಲ್ಲಿ ಇರುವ ಆಕ್ಸಿನ್‌ಗಿಂತ, ಸಹಜವಾಗಿ ಉಂಟಾಗುವ ಬೀಜರಹಿತ ಅಂಡಾಶಯ ಮತ್ತು ಫಲಗಳಲ್ಲಿ ಅಧಿಕಪ್ರಮಾಣದ ಆಕ್ಸಿನ್ ಅಂಶ ಇತ್ತು. ವಾಸ್ತವವಾಗಿ ಬೀಜವುಳ್ಳ ದ್ರಾಕ್ಷೆ ಫಲಗಳಿಗಿಂತ ಬೀಜರಹಿತ ದ್ರಾಕ್ಷೆ ಫಲಗಳಲ್ಲಿಯೇ ಆಕ್ಸಿನ್ ಅಂಶ ಹೆಚ್ಚಾಗಿತ್ತು. ಇದರಿಂದ ಕೆಲ ಸಸ್ಯಗಳಲ್ಲಿ ಫಲಗಳು ಏಕೆ ಅನಿಷೇಕ ಫಲನದಿಂದ ಬೀಜರಹಿತ ಫಲಗಳಾಗಿ ಉತ್ಪಾದನೆಯಾಗುವವು ಎಂಬುದಕ್ಕೆ ಒಂದು ಕಾರಣ ದೊರೆತಂತಾಗುತ್ತದೆ. ಮೇಲಾಗಿ ಅವುಗಳ ಅಂಡಾಶಯಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಆಕ್ಸಿನ್ ಇದ್ದು, ಅವು ಗರ್ಭಾಂಕುರತೆ ಇಲ್ಲದಿದ್ದರೂ ಫಲೋತ್ಪಾದನೆ ಕೈಕೊಳ್ಳುತ್ತವೆ ಎಂಬುದು ಸಿದ್ಧವಾಯಿತು.

ಕೆಲ ದಶಕಗಳ ಹಿಂದೆ ಬೀಜರಹಿತ ಸ್ಥಿತಿ ಎಂಬ ನಿಯಮವು ಮಿಶ್ರತಳಿಗಾರಿಕೆ (Hybridity) ಮತ್ತು ಬಹುಗುಣಿತ ವರ್ಣಸಂಖ್ಯೆಗಳಿಗೆ (Polyploidy) ಏನೂ ಸಂಬಂಧವಿಲ್ಲ ಎಂಬ ಕಲ್ಪನೆ ಪ್ರಚಲಿತವಿತ್ತು. ಆದರೆ ಈಗ ಬೀಜರಹಿತ ಫಲಗಳೆಲ್ಲ ವಂಶವಾಹಿಗಳ ಪರಿವರ್ತನ ಮಾರ್ಪಾಡುಗಳಿಂದ ಆಗುತ್ತದೆ ಎಂಬ ಭಾವನೆಗೆ ಪುಷ್ಟಿ ದೊರೆಯುತ್ತಿದೆ. ಸಸ್ಯದ ವಂಶವಾಹಿ ಘಟಕದಳಿಂದ ಬೀಜರಹಿತ ಸ್ಥಿತಿಗೆ ಪ್ರೇರಣೆ ದೊರೆಯುವ ಒಂದು ತಾಂತ್ರಿಕ ರೀತಿಯು ಪ್ರಾಯಶಃ ಫಲಕೋಶಗಳ ಆಕ್ಸಿನ್ ಅಂಶದಲ್ಲಿ ಉಂಟಾಗುವ ಏರು ಪೇರುಗಳಿಂದ ಸಾಗುತ್ತದೆ ಎನಿಸುವುದುಂಟು. ದಟ್ಟವಾದ ಮಂಜು ಮತ್ತು ಅತ್ಯಂತ ಕನಿಷ್ಠ ಉಷ್ಣಾಂಶ

[illegible] ತಿಳಿಸಿವೆ. ಬೀಜರಹಿತ ಫಲೋತ್ಪಾದನೆಗೆ ಕಾರಣವಾಗಬಹುದು. [illegible] ಆಕ್ಸಿನ್ ಪ್ರಮಾಣದಲ್ಲಿ ವ್ಯತ್ಯಾಸಗಳು ಉಂಟಾಗುವುದೇ ಮುಖ್ಯ ಕಾರಣ. ಆದರೂ ಆಕ್ಸಿನ್ ಒಂದು [illegible] ಮುಖ್ಯ ಕಾರಣವಾಗಲಾರದು. ಅದರ ಜೊತೆಗೆ [illegible] ಮುಖ್ಯ ಕಾರಣವೆನಿಸಬಹುದು.

ಸಸ್ಯಪ್ರೇರಕ (ನಿಯಂತ್ರಕ)ಗಳು ಫಲೋತ್ಪಾದನ ಕಾರ್ಯದಲ್ಲಿ ಪ್ರಮುಖ ಪಾತ್ರವಹಿಸುತ್ತವೆ ಎಂಬುದು [illegible]. ಅಂಡಾಶಯಕ್ಕೆ ಅದರ ಬೆಳವಣಿಗೆಯ ವಿವಿಧ ಹಂತಗಳಲ್ಲಿ ಸಸ್ಯನಿಯಂತ್ರಕಗಳ ಪ್ರೇರಣೆ ಮತ್ತು [illegible] ಅವಶ್ಯವಿರುತ್ತದೆ. ಹೂ ಮೊಗ್ಗುಗಳು [illegible] ಅವುಗಳಲ್ಲಿ ಆಕ್ಸಿನ್ ಪ್ರಮಾಣ ಅತಿ ಕಡಿಮೆ ಇರುತ್ತದೆ. ಪ್ರಾಯಶಃ ಈ ಕೊರತೆಯೇ ಪರಾಗಸಂಪರ್ಕ ಕ್ರಿಯೆಯಿಂದ ತುಂಬಿಬರುತ್ತದೆ. ಹಾಗೆಂದೆ ಅಂಡಾಶಯವು ಫಲವಾಗಿ ಮಾರ್ಪಡಾಗುವ ವೇಳೆಗೆ ಈ ಆಕ್ಸಿನ್ ಪ್ರಮಾಣ ಗರಿಷ್ಠ ಮಿತಿಗೆ ಬಂದು ಮುಟ್ಟುತ್ತದೆ. ಆದರೆ ಇಲ್ಲಿ ಪರಾಗರೇಣುವು ಅಂಡಾಶಯ [illegible] ಸಂಗ್ರಹವಾಗುವಷ್ಟು ಮತ್ತು ಫಲೋತ್ಪಾದನೆಯ ಆರಂಭಕ್ಕೆ ಸಾಕಾಗುವಷ್ಟು ಆಕ್ಸಿನ್‌ನ್ನು ಒದಗಿಸಲಾರದು. ಅನೇಕ ಸಸ್ಯತಳಿಗಳ [illegible]ಗಳಲ್ಲಿ ಸಂಪೂರ್ಣವಾಗಿ ಸಂಗ್ರಹವಾದ ಆಕ್ಸಿನ್ ಪ್ರಮಾಣವು [illegible] ಬರುವ ಒಂದು ವಿಶಿಷ್ಟ [illegible] ಆಕ್ಸಿನ್ [illegible] ಹಾಗೂ [illegible]ವಂತೆ ಪರಿವರ್ತನೆ [illegible]ತ್ತದೆ. ಹೀಗಾಗಿ ಅಂಡಾಶಯದಲ್ಲಿ ಆಕ್ಸಿನ್ ಪ್ರಮಾಣ ಫಲೋತ್ಪಾದನೆಗೆ ಅವಶ್ಯವಿರುವಷ್ಟು ಪ್ರಮಾಣಕ್ಕೆ ಏರುತ್ತದೆ. ಈ ಹಿಂದೆ ಪರಾಗಸಂಪರ್ಕ ಕ್ರಿಯೆ [illegible]ದಲ್ಲಿ ಬೆಳವಣಿಗೆಯ ನಿಯಂತ್ರಕ ಅಥವಾ ವರ್ಧಕಗಳನ್ನು ಬಳಸಿ, ಬೀಜರಹಿತ ಫಲಗಳನ್ನು ಉತ್ಪಾದಿಸುವ [illegible] ಬಗ್ಗೆ ತಿಳಿಸಿತ್ತು. ಈಗ ತೋಟಗಾರಿಕೆ ರಂಗದಲ್ಲಿ ಬೀಜರಹಿತ ಫಲಗಳನ್ನು ನಿರ್ಮಿಸುವಲ್ಲಿ ಆ ಅನುಭವವನ್ನು ಮತ್ತಷ್ಟು ಹೆಚ್ಚೆಚ್ಚು ಬಳಸಿಕೊಳ್ಳಲಾಗುತ್ತಿದೆ.

ಅದಕ್ಕಾಗಿ ಆಕ್ಸಿಜನ್ನಿನ ವಿವಿಧ ರೂಪಗಳೆನಿಸಿದ ಇಂಡೋಲ್, ಅಸಿಟಿಕ್ ಆಮ್ಲ, ಇಂಡೋಲ್ ಬ್ಯುಟಿರಿಕ್ ಆಮ್ಲ, ಇಂಡೋಲ್ ಪ್ರೊಪಿಯೊನಿಕ್ ಆಮ್ಲ, ಆಲ್ಫನಾಫ್ಥಲಿನ್ ಅಸಿಟಿಕ್ ಆಮ್ಲ, ಫಿನೈಲ್ ಅಸಿಟಿಕ್ ಆಮ್ಲ, ಮಿಂಥೈಲ್ ಇಂಡೋಲ್ ಬ್ಯುಟಿರೇಟ್, ಆಲ್ಫನಾಫ್ಥಲ್ ಥಿಯೊ ಅಸೆಟಮೈಡ್ ೨-೪-ಡೈಕ್ಲೊರೊ-ಫಿನಾಕ್ಸಿ ಅಸಿಟಿಕ್ ಆಮ್ಲ, ೪-ಕ್ಲೊರೊ-ಫಿನಾಕ್ಸಿ ಅಸಿಟಿಕ್ ಆಮ್ಲ, ಪೊಟ್ಯಾಸಿಯಂ ನಾಫ್ಥಲಿನ್ ಅಸಿಟೇಟ್ ಮತ್ತು ಜಿಬರೆಲಿಕ್ ಆಮ್ಲ ಇತ್ಯಾದಿಗಳನ್ನು ಬಳಸಲಾಗುತ್ತಿದೆ. ಹೀಗೆ ಕೃತಕ ಪ್ರೇರಣೆಯಿಂದ ಉತ್ಪಾದಿಸಿದ ಬೀಜರಹಿತ ಫಲಗಳನ್ನು ನೈಸರ್ಗಿಕ ರೀತಿಯ ಗರ್ಭಾಂಕುರತೆಯಿಂದ ಉತ್ಪಾದನೆಯಾಗುವ ಫಲಗಳಿಗೆ ಹೋಲಿಸಿದಾಗ, ಆಕಾರ ಗಾತ್ರ, ರುಚಿ ಇತ್ಯಾದಿಗಳಲ್ಲಿ ಏನೂ ವ್ಯತ್ಯಾಸ ಕಂಡುಬರುವುದಿಲ್ಲ. ಇತ್ತೀಚೆಗೆ 'ಜಿಬರೆಲಿನ್ಸ್' ಎಂಬ ಸಸ್ಯನಿಯಂತ್ರಕಗಳನ್ನು ಟೊಮ್ಯಾಟೊ ಸಸ್ಯಗಳಲ್ಲಿ ಫಲಗಳು ಶೀಘ್ರ ಉಂಟಾಗುವಂತೆ ಮಾಡುವುದಕ್ಕಾಗಿಯೂ ಯಶಸ್ವೀ ರೀತಿ ಬಳಸಲಾಗಿದೆ.

ಆಕ್ಸಿನ್ ಎಂಬ ಬೆಳವಣಿಗೆ (ವೃದ್ಧಿ) ನಿಯಂತ್ರಕಗಳನ್ನು ಸಾಮಾನ್ಯವಾಗಿ ಸಸ್ಯಗಳಿಗೆ ಹೂ ಅರಳಿದ ನಂತರ ಬಳಸಿದರೆ, ಜಿಬರೆಲಿನ್ಸ್‌ಗಳನ್ನು ಹೂ ಮೊಗ್ಗುಗಳು ಇನ್ನೂ ಅರಳುವ ಸ್ಥಿತಿಯಲ್ಲಿದ್ದಾಗಲೇ ಬಳಸುವುದುಂಟು. ಈ ವೃದ್ಧಿ ನಿಯಂತ್ರಕಗಳನ್ನು ಶಲಾಕೆ, ಅಂಡಾಶಯ, ಪುಷ್ಪವೃಂತ, ಕಾಂಡ, ಬೇರು ಇತ್ಯಾದಿ ಸಸ್ಯದ ಯಾವುದೇ ಭಾಗಕ್ಕೆ ಹಚ್ಚಬಹುದು. ಈ ವೃದ್ಧಿ ನಿಯಂತ್ರಕಗಳ ಪ್ರಮಾಣವು ಪೇಸ್ಟಿನ ರೂಪದಲ್ಲಿ ಬಳಸುವಾಗ ೦–೦೫–೨ ೦% ನಷ್ಟಿರಬೇಕು. ಸಿಂಪನೆಯಲ್ಲಿ ಬೆರೆಸಿ ಬಳಸುವುದಾದರೆ ೦ ೦೦೦೧–೦ ೦೨%ನಷ್ಟಿರಬೇಕು. ✡

ಈ ಮಾರಕರೋಗ
ಮತ್ತೆ ತಲೆಯೆತ್ತಿದೆ....

ಮಲೇರಿಯ

ಡಾ. ಅರವಿಂದ ಪ್ರಭು

ಪ್ರಸಿದ್ಧ ಆಯುರ್ವೇದಾಚಾರ್ಯರಾದ ಚರಕ, ಸುಶ್ರುತರಿಂದಲೂ ಗುರುತಿಸಲ್ಪಟ್ಟ ಈ ರೋಗ ಆಧುನಿಕವೈದ್ಯಶಾಸ್ತ್ರದಲ್ಲಿ ಪ್ರಾಮುಖ್ಯತೆಯನ್ನು ಪಡೆದುದು ೧೯ನೆಯ ಶತಮಾನದಲ್ಲಿ. ೧೮೯೭ರಲ್ಲಿ ಡಾ. ರೋನಾಲ್ಡ್ ರಾಸನೆಂಬ ವೈದ್ಯ ವಿಜ್ಞಾನಿ ಮಲೇರಿಯಾ ವಿಷಕ್ರಿಮಿಗೂ ಸೊಳ್ಳೆಗೂ ಇರುವ ಸಂಬಂಧವನ್ನು ಕಂಡುಹಿಡಿದ ಮೇಲೆ, ಮಲೇರಿಯಾದ ಬಗೆಗೆ ಹೆಚ್ಚು ಹೆಚ್ಚು ವಿಷಯಗಳು ತಿಳಿದು, ಇಂದು ಈ ರೋಗ ಪ್ರಪಂಚದ ಮುಂದುವರಿದ ರಾಷ್ಟ್ರಗಳಲ್ಲಿ ಹೇಳ ಹೆಸರಿಲ್ಲದಂತಾಗಿದೆ. ಭಾರತದಲ್ಲಿ ಇನ್ನೂ ಈ ರೋಗ ಕಣ್ಣುಮುಚ್ಚಾಲೆ ನಡೆಸಿದೆ. ೧೯೫೩ರಲ್ಲಿ ಏಳೂವರೆ ಕೋಟಿ ಜನರಿಗೆ ಬಂದಿದ್ದ ಮಲೇರಿಯಾ ೧೯೬೩ರಲ್ಲಿ ಕೇವಲ ೮೭೦೦೦ ಜನರನ್ನು ಪೀಡಿಸಿತ್ತು. ನಂತರ ಅದು ಹೆಚ್ಚಾಗುತ್ತಲೇ ನಡೆದು ೧೯೭೪ರಲ್ಲಿ ೨೫ ಲಕ್ಷ ಜನರನ್ನು ಅದು ಪೀಡಿಸಿತ್ತು.

ಮಲೇರಿಯಾಕ್ಕೆ ಕಾರಣವೇನು ?

ಕಲುಷಿತ ಹವೆಯಿಂದ ಮಲೇರಿಯಾ ಬರುವುದೆಂಬ ನಂಬಿಕೆಯಿಂದ ಇದನ್ನು ಮಲೇರಿಯಾ ಎಂದು ಕರೆಯಲಾಯಿತು. ೧೮೮೦ರಲ್ಲಿ ಲೆವೆರಾನನೆಂಬ ಸೈನಿಕ ವೈದ್ಯನು ಮಲೇರಿಯಾ ಉಂಟುಮಾಡುವ "ಪ್ಲಾಸ್ಮೋಡಿಯಂ" ಕ್ರಿಮಿಯನ್ನು ಕಂಡುಹಿಡಿದನು. ಆದರೆ ಮನುಷ್ಯನಿಗೆ ರೋಗ ತರುವಲ್ಲಿ ಅನಾಫೆಲಿಸ್ ಹೆಣ್ಣು ಸೊಳ್ಳೆ ವಹಿಸುವ ಪ್ರಮುಖ ಪಾತ್ರವನ್ನು ಕಂಡುಹಿಡಿದ ಕೀರ್ತಿ ಡಾ. ರೋನಾಲ್ಡ್ ರಾಸನಿಗೆ ಸಲ್ಲುತ್ತದೆ. "ಪ್ಲಾಸ್ಮೋಡಿಯಂ" ಕ್ರಿಮಿಗಳಲ್ಲಿ ನಾಲ್ಕು ವಿಧಗಳಿವೆ. ಅವು ಪ್ಲಾಸ್ಮೋಡಿಯಂ ವಿವಾಕ್ಸ್, ಪ್ಲಾ. ಓವೇಲ್, ಪ್ಲಾ. ಫಾಲ್ಸಿಪಾರಂ ಮತ್ತು ಪ್ಲಾ. ಮಲೇರಿಯೆ, ಇವುಗಳಲ್ಲಿ ಪ್ಲಾ. ಫಾಲ್ಸಿಪಾರುನಿಂದ ಬರುವ ಮಲೇರಿಯಾವು ತೀವ್ರತರವಾದುದು. ಭಾರತದಲ್ಲಿ ಶೇಕಡಾ ೬೫ರಿಂದ ೭೦ರಷ್ಟು ಮಲೇರಿಯಾ ಪ್ಲಾ. ವಿವಾಕ್ಸ್‌ನಿಂದ ಬರುವುದೆಂದು ಸಿದ್ಧಪಡಿಸಲಾಗಿದೆ. ರಾಜಸ್ಥಾನ, ಗುಜರಾತ, ಮಧ್ಯಪ್ರದೇಶ ಮತ್ತು ಒರಿಸ್ಸಾಗಳು ಅತಿ ಹೆಚ್ಚು ಮಲೇರಿಯಾ ಪೀಡಿತ ಪ್ರದೇಶಗಳು. ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು, ಉತ್ತರ ಪ್ರದೇಶ ಇವುಗಳಲ್ಲಿ ಮಲೇರಿಯಾದ ಪ್ರಮಾಣ ಸ್ವಲ್ಪ ಕಡಿಮೆ.

ಪ್ಲಾಸ್ಮೋಡಿಯಂನ ಜೀವನ ಚಕ್ರ:

ಪ್ಲಾಸ್ಮೋಡಿಯಂ ಮಲೇರಿಯಾ ರೋಗಿಯ ರಕ್ತದಲ್ಲಿರುತ್ತದೆ. ಈ ಕ್ರಿಮಿಗಳನ್ನು 'ಮೀರೋರಷೋಟ್' ಗಳೆಂದು ಕರೆಯಲಾಗುತ್ತದೆ. ಇವುಗಳಲ್ಲಿ ಕೆಲವು ಗೆಮಿಟೋಸೈಟ್' ಗಂಡು ಮತ್ತು ಹೆಣ್ಣು ಕ್ರಿಮಿಗಳಾಗಿ ಮಾರ್ಪಾಡಾಗುತ್ತವೆ. ಅನಾಫೆಲಿಸ್ ಹೆಣ್ಣು ಸೊಳ್ಳೆ ಈ ರೋಗಿಯನ್ನು ಕಡಿದಾಗ ಸ್ವಲ್ಪ ಜೊಲ್ಲನ್ನು ಅವನಲ್ಲಿ ಬಿಟ್ಟು ಸ್ವಲ್ಪ ರಕ್ತವನ್ನು ಹೀರುತ್ತದೆ.

ಸೊಳ್ಳೆಯನ್ನು ಸೇರಿದ ಗಂಡು ಹೆಣ್ಣು ಕ್ರಿಮಿಗಳು ಕೂಡಿ ಊಕಿನಿಟ್ ಉತ್ಪತ್ತಿಯಾಗುತ್ತದೆ. ಅದು ನಂತರ ವಿಭಜಿಸಿ ಹೆಚ್ಚಿನ ಸಂಖ್ಯೆಯಲ್ಲಿ ಕ್ರಿಮಿಗಳು ಬೆಳೆಯು-

ತ್ತವೆ. ಇವನ್ನು "ಸ್ಪೋರೋಜೂವ"ಗಳೆಂದು ಕರೆಯುತ್ತಾರೆ. ಈ ಕ್ರಿಮಿಗಳು ನಂತರ ಸೊಳ್ಳೆಯ ಜೊಲ್ಲಿನೊಳಗೆ ಸೇರುತ್ತವೆ. ಸ್ಪೋರೋಜೂವಾಗಳನ್ನು ಹೊಂದಿರುವ ಸೊಳ್ಳೆ ರೋಗವಾಹಕ ಸೊಳ್ಳೆಯಾಗಿರುತ್ತದೆ.

ರೋಗವಾಹಕ ಸೊಳ್ಳೆ ಆರೋಗ್ಯವಂತ ಮನುಷ್ಯನನ್ನು ಕಡಿದಾಗ ಸ್ಪೋರೋಜೂವಾಗಳು ಅವನ ರಕ್ತ ಸೇರಿ ನಂತರ ಪಿತ್ತಜನಕಾಂಗದ ಜೀವಕೋಶಗಳನ್ನು ಸೇರಿ ಅಲ್ಲಿ ವಿಭಜಿಸಿ ಬೆಳೆಯತೊಡಗುತ್ತವೆ. ೬-೮ ದಿನಗಳಲ್ಲಿ ಅವು ಪುನಃ ರಕ್ತದಲ್ಲಿನ ಕೆಂಪು ರಕ್ತ ಕಣಗಳನ್ನು ಸೇರಿ ಮತ್ತೆ ಬೆಳೆದು ವಿಭಜಿಸತೊಡಗುತ್ತವೆ. ಒಂದು ಹಂತದಲ್ಲಿ ಅವು ಕೆಂಪು ರಕ್ತಕಣಗಳನ್ನೊಡೆದು ಹೊರಬಂದು ಹೊಸ ಕೆಂಪು ರಕ್ತ ಕಣಗಳನ್ನು ಸೇರುತ್ತವೆ. ಕೆಂಪು ರಕ್ತ ಕಣಗಳನ್ನೊಡೆದು ಹೊರಬರುವಾಗ ಕ್ರಿಮಿಗಳು ಕೆಲವು ವಿಷವಸ್ತುಗಳನ್ನೂ ಹೊರತರುವುದರಿಂದ ರೋಗಿ ಜ್ವರದಿಂದ ನರಳತೊಡಗುತ್ತಾನೆ. ಹೀಗೆ ಪ್ರತಿಸಲವೂ ರಕ್ತಕಣಗಳು ಒಡೆದಾಗ ಮತ್ತೆ ಮತ್ತೆ ಚಳಿ, ಜ್ವರ ಬೆವರುವಿಕೆಗಳಿಗೆ ತುತ್ತಾಗುತ್ತಾನೆ. ಕೆಲವು ಕ್ರಿಮಿಗಳು ಮತ್ತೆ ಪಿತ್ತಜನಕಾಂಗದ ಕೋಶಗಳಿಗೆ ಹಿಂತಿರುಗಿ ಅಲ್ಲಿ ಬೆಳೆಯತೊಡಗುವುದರಿಂದ ಯಾವುದೇ ಸಮಯದಲ್ಲಿ ಮಾಡಿದ ರಕ್ತ ಪರೀಕ್ಷೆಯಲ್ಲಿ ಪ್ಲಾಸ್ಮೋಡಿಯಂಗಳಿಲ್ಲದಿದ್ದರೆ, ಮಲೇರಿಯಾ ರೋಗವಿಲ್ಲವೆನ್ನಲೂ ಸಾಧ್ಯವಿಲ್ಲ. ನಂತರ ರೋಗಿಯ ರಕ್ತದಲ್ಲಿ ಮತ್ತೆ ಗಂಡು, ಹೆಣ್ಣು ಗೆಮಿಟೋಸೈಟ್‌ಗಳು ಬೆಳೆಯುವುದರಿಂದ ಮತ್ತು ಇವು ಆರೋಗ್ಯವಂತನಲ್ಲಿ ಸೊಳ್ಳೆಯ ಮೂಲಕ ಹರಡಿ ಅವುಗಳ ಜೀವನಚಕ್ರ ಪೂರ್ಣವಾಗುತ್ತದೆ.

ಎಂಥವರಲ್ಲಿ ಮಲೇರಿಯಾ ಹೆಚ್ಚು ?

ಹಸುಗೂಸಿನಿಂದ- ವೃದ್ಧರವರೆಗೆ ಯಾರೂ ಮಲೇರಿಯಾಕ್ಕೆ ಹೊರತಲ್ಲ. ಆದರೆ ಭಾರತದಲ್ಲಿ ಗಂಡಸರು ಹೆಂಗಸರಿಗಿಂತ ಹೆಚ್ಚು ಓಡಾಡುವುದರಿಂದಲೂ ಹೆಂಗಸರು ದೇಹದ ಹೆಚ್ಚು ಭಾಗವನ್ನು ಬಟ್ಟೆಯಿಂದ ಮುಚ್ಚುವುದರಿಂದಲೂ ಗಂಡಸರಲ್ಲಿ ಈ ರೋಗ ಹೆಚ್ಚು. ಬೇಸಿಗೆಯ ಬೇಗೆಯಿಂದ ಪಾರಾಗಲು ಮನೆಯ ಹೊರಗೆ ಮಲಗುವ ಅಭ್ಯಾಸವೂ ಮಲೇರಿಯಾ ಬರಲು ಸಹಾಯಕ.

ಮಲೇರಿಯಾ ಚಳಿಗಾಲದಲ್ಲಿಯೂ ಮಳೆಗಾಲದಲ್ಲಿಯೂ ಅಧಿಕವಾಗಿರುತ್ತದೆ. ಸಣ್ಣ ಮಳೆಯಿಂದ ಉಂಟಾದ ನೀರು ನಿಂತ ಸ್ಥಳಗಳು ಸೊಳ್ಳೆಗಳು ಬೆಳೆಯಲು ಸಹಾಯಕವಾಗುತ್ತವೆ. ಕೆರೆಗಳು, ಚರಂಡಿಗಳು ಇತ್ಯಾದಿ ಸೊಳ್ಳೆಗಳಿಗೆ ಮನುಷ್ಯನು ಕಲ್ಪಿಸಿದ ಆವಾಸಸ್ಥಾನಗಳು.

ಸೊಳ್ಳೆಯ ಪಾತ್ರ:

ರೋಗಿಯನ್ನು ಕಚ್ಚಿದ ಅನಾಫೆಲಿಸ್ ಹೆಣ್ಣು ಸೊಳ್ಳೆ ಮನೆಯ ಗೋಡೆಯ ಮೇಲೆ ಸ್ವಲ್ಪ ಹೊತ್ತು ವಿಶ್ರಮಿಸುತ್ತದೆ. ತದನಂತರ ಸೊಳ್ಳೆ ಆರೋಗ್ಯವಂತನಿಗೆ ರೋಗ ಹರಡಬೇಕಾದರೆ ೧೦-೨೦ ದಿನಗಳಷ್ಟು ಕಾಲಾವಧಿ ಬೇಕು. ಕೆಲವು ಸೊಳ್ಳೆಗಳು ನಿಂತ ನೀರಿನಲ್ಲೂ ಕೆಲವು ಹರಿಯುವ ನೀರಿನಲ್ಲೂ ಮೊಟ್ಟೆ ಇಡುತ್ತವೆ. ಇತ್ತೀಚೆಗೆ ಡಿ. ಡಿ. ಟಿ. ಯಂತಹ ಕ್ರಿಮಿನಾಶಕಗಳಿಗೆ ಸೊಳ್ಳೆಗಳು ಒಗ್ಗಿರುವುದು ಮಲೇರಿಯಾ ನಿರ್ಮೂಲನಾ ಕಾರ್ಯಕ್ರಮದಲ್ಲಿ ಹೊಸ ತೊಡಕಾಗಿದೆ.

ರೋಗವಾಹಕ ಸೊಳ್ಳೆಯಿಂದ ಕಡಿಸಿಕೊಂಡ ಆರೋಗ್ಯವಂತನು ೮-೧೦ ದಿನಗಳ ವರೆಗೆ ಯಾವ ಲಕ್ಷಣಗಳನ್ನೂ ಹೊಂದಿರುವುದಿಲ್ಲ. ನಂತರದ ಲಕ್ಷಣಗಳು ಮಲೇರಿಯಾ ರೋಗಕ್ಕೆ ವಿಶಿಷ್ಟವಾದದ್ದರಿಂದ ರೋಗವನ್ನು ಗುರುತಿಸಲು ಬಹಳ ಸಹಾಯಕವಾಗುತ್ತವೆ. ಈ ಲಕ್ಷಣಗಳು ಪ್ಲಾಸ್ಮೋಡಿಯಂ ಕ್ರಿಮಿಯ ವಿಧದ ಮೇಲೆ ಹೊಂದಿ ಪ್ರತಿ ದಿನವೋ ಅಥವಾ ದಿನ ಬಿಟ್ಟು ದಿನವೋ ಪುನರಾವರ್ತನೆಯಾಗುತ್ತವೆ.

ಈ ಲಕ್ಷಣಗಳನ್ನು ಹಂತಗಳಾಗಿ ವಿಂಗಡಿಸಬಹುದು.

ಚಳಿಯ ಹಂತ:

ರೋಗಿ ಚಳಿಯಿಂದ ನರಳತೊಡಗುತ್ತಾನೆ.

ನಾಲ್ಕು ಹೊದಿಕೆಗಳನ್ನು ಹೊದ್ದು ಕೊಂಡರೂ ಚಳಿಯಿಂದ ಹಲ್ಲುಗಳನ್ನು ಕಟ-ಕಟ ಕಡಿಯುತ್ತಾನೆ. ಒಂದೆರಡು ಬಾರಿ ವಾಂತಿ ಮಾಡಬಹುದು. ಜ್ವರ ಪ್ರಾರಂಭವಾಗುತ್ತದೆ.

ಜ್ವರ ಏರುತ್ತಾ ರೋಗಿಯು ವ್ಯಾಕುಲವೇರುತ್ತದೆ. ವಾಂತಿ ಹೆಚ್ಚಾಗಬಹುದು. ೩-೪ ಗಂಟೆಗಳ ನಂತರ ರೋಗಿ ಚೆನ್ನಾಗಿ ಬೆವರತೊಡಗುತ್ತಾನೆ. ಜ್ವರದ ಕಾವು ಇಳಿಯುತ್ತಲೆ ರೋಗಿ ನಿದ್ದೆ ಹೋಗಬಹುದು.

ಆದರೆ ಪ್ಲಾ. ಫಾಲ್ಸಿಪಾರುನಿಂದ ಬರುವ ಮಲೇರಿಯಾದಲ್ಲಿ ಈ ರೀತಿಯ ಹಂತಗಳಿರುವುದು ಅಪರೂಪ. ತಲೆನೋವು, ವಾಂತಿಯಾಗುವುದೂ ಮಾತ್ರ ಬಹಳ ಸಾಮಾನ್ಯವಾಗಿರುತ್ತದೆ.

ಎಲ್ಲ ರೀತಿಯ ಮಲೇರಿಯಾಗಳಲ್ಲೂ ಪದೇ ಪದೇ ಕೆಂಪು ರಕ್ತ ಕಣಗಳು ಒಡೆಯುವುದರಿಂದ ಉಂಟಾಗುವ ರಕ್ತಹೀನತೆ, ರೋಗಿಯ ದೌರ್ಬಲ್ಯತೆಯನ್ನು ಹೆಚ್ಚಿಸುತ್ತದೆ.

ಫಾಲ್ಸಿಪಾರಂ ಮಲೇರಿಯಾ ಯಾವುದೇ ಸಮಯದಲ್ಲಿ ಭಯಾನಕ ತಿರುವನ್ನು ಹೊಂದಬಹುದು. ವಿಷಕ್ರಿಮಿಗಳಿಂದ ತುಂಬಿದ ಕೆಂಪು ರಕ್ತ ಕಣಗಳು ದೇಹದ ಬೇರೆ ಬೇರೆ ಅಂಗಗಳ ಲೋಮನಾಳಗಳನ್ನು ಮುಚ್ಚಿ, ರಕ್ತ ಪರಿಚಲನೆಯನ್ನು ತಡೆ ಹಿಡಿಯುವುದರಿಂದ ಬೇರೆ ಬೇರೆ ಲಕ್ಷಣಗಳೂ ಉಂಟಾದಬಹುದು. ಕರುಳಿನಲ್ಲಾದರೆ ತೀಕ್ಷ್ಣ ಹೊಟ್ಟೆನೋವು, ರಕ್ತಭೇದಿ; ಮಿದುಳಿನಲ್ಲಾದರೆ ಪಾರ್ಶ್ವವಾಯು, [illegible], ಮಾತನಾಡುವ ಶಕ್ತಿ ಕಳೆದುಕೊಳ್ಳುವಿಕೆ ಉಂಟಾಗಬಹುದು. ಅಥವಾ ಮೂತ್ರಜನಕಾಂಗಗಳ ಕಾರ್ಯವೇ ತಡೆ ಹಿಡಿಯಲ್ಪಟ್ಟು ರೋಗಿ ಮೃತ್ಯುವಿನ [illegible] ಬಹುದು. ಒಡೆದ ರಕ್ತ ಕಣಗಳಿಂದ ಹೊರಬಂದ ಹೀಮೋಗ್ಲೋಬಿನ್ ಮೂತ್ರದಲ್ಲಿ ಬಂದು ಕರಿ ಮೂತ್ರ ಜ್ವರ (Black water fever) ಉಂಟಾಗಬಹುದು.

ಕ್ರಮೇಣ ದೇಹದಲ್ಲಿ ಮಲೇರಿಯಾ ರೋಗ ನಿರೋಧ ಶಕ್ತಿ ಬೆಳೆದು ರೋಗವನ್ನು ತಡೆಹಿಡಿದರೂ ಒಂದೆರಡು ವರ್ಷಗಳ ವರೆಗೂ ಮತ್ತೆ ಮತ್ತೆ ಅದೇ ರೋಗ ಮರುಕಳಿಸಿಕೊಳ್ಳಬಹುದು. ಇದಕ್ಕೆ ಪಿತ್ತಜನಕಾಂಗದಲ್ಲಿ ಬೆಳೆಯುತ್ತಿರುವ ಕ್ರಿಮಿಗಳೇ ಕಾರಣ.

ಗರ್ಭಿಣಿಯರಲ್ಲಿ ಮಲೇರಿಯಾ ಬಂದರೆ ಗರ್ಭಸ್ರಾವ ಉಂಟಾಗಬಹುದು; ಇಲ್ಲದಿದ್ದರೆ ಭಾರೀ ರಕ್ತಹೀನತೆಯೂ ಉಂಟಾಗಬಹುದು. ಚಿಕ್ಕ ಮಕ್ಕಳಲ್ಲಿ ಮಲೇರಿಯಾ "ನಡುಕ" (Convulsions) [illegible] ಬಂದು ಮಗುವು ಪ್ರಜ್ಞಾಹೀನವಾಗಿ ಯಾವುದೇ ಕ್ಷಣದಲ್ಲಿ ಮೃತ್ಯುವನ್ನಪ್ಪಬಹುದು.

ರೋಗ ಗುರುತಿಸುವ ಬಗೆ:

ಪ್ಲಾಸ್ಮೋಡಿಯಂಗಳಿಗಾಗಿ ನಡೆಸುವ ರಕ್ತ ಪರೀಕ್ಷೆಯೇ ಈಗ ಪ್ರಚಲಿತವಿರುವ ವಿಧಾನ. ಚಳಿ-ಜ್ವರದಿಂದ ರೋಗಿ ನಡುಗುತ್ತಿರುವಾಗ ತೆಗೆದ ಕೆಲವು ಹನಿ ರಕ್ತವನ್ನು ತೆಳು ಪದರದಂತೆ ಹರಡಿ ವಿವಿಧ ಬಣ್ಣಗಳನ್ನು ಹಾಕಿ, ಸೂಕ್ಷ್ಮದರ್ಶಕ ಯಂತ್ರದಲ್ಲಿ ಪರೀಕ್ಷಿಸುವುದರಿಂದ ಪ್ಲಾಸ್ಮೋಡಿಯಂಗಳನ್ನು ಗುರುತಿಸಬಹುದು. ಭಾರತದಲ್ಲಿ ಪ್ರತಿ ಆರೋಗ್ಯ ಕೇಂದ್ರದಲ್ಲೂ ಈ ಕಾರ್ಯಕ್ಕಾಗಿ ಏರ್ಪಾಡುಗಳಿರುತ್ತವೆ. ಆರೋಗ್ಯ ವೀಕ್ಷಕರು ಮನೆ ಮನೆ ಸಂಚರಿಸಿ ಮಲೇರಿಯಾ ಬಾಧಿತೆ ಎಂದು ಅನುಮಾನಿಸಿದವರಿಂದ ರಕ್ತ ತೆಗೆದು ಪರೀಕ್ಷೆ ನಡೆಸುತ್ತಾರೆ.

ಕೆಲವೊಮ್ಮೆ ಕ್ರಿಮಿಗಳನ್ನು ಗುರುತಿಸಲಾಗದಿದ್ದರೂ, ಮೇಲೆ ವಿವರಿಸಿದ ವಿಶಿಷ್ಟ ಲಕ್ಷಣಗಳಿಂದ ಮಲೇರಿಯಾವನ್ನು ಗುರುತಿಸುವುದು ಕಷ್ಟವಾಗದು.

ರೋಗ ಚಿಕಿತ್ಸೆ:

ರೋಗ ಗುರುತಿಸಿದ ಮೇಲೆ ರೋಗಿ ಓಡಾಟವನ್ನು ನಿಲ್ಲಿಸಿ, ಹಾಸಿಗೆಯಲ್ಲಿ ಮಲಗಬೇಕು. ಚಳಿಯ ಸಮಯದಲ್ಲಿ ಹೆಚ್ಚು ಹೊದಿಕೆಗಳೂ ಬಿಸಿ ನೀರಿನ ಚೀಲಗಳೂ ಬೇಕಾಗುತ್ತವೆ. ತಲೆನೋವನ್ನು ಔಷಧಿಗಳಿಂದ

ನಿವಾರಿಸಬೇಕು. ವಾಂತಿ ಭೇದಿ ಇವು ಹೆಚ್ಚಾಗಿದ್ದರೆ ರೋಗಿಯನ್ನು ಆಸ್ಪತ್ರೆಗೆ ಸೇರಿಸುವುದು ಒಳಿತು.

ಈಗ ಉಪಯೋಗಿಸುತ್ತಿರುವ ಮಲೇರಿಯಾ ನಿರೋಧಕ ಔಷಧಗಳೆಂದರೆ ಕ್ಲೋರೋಕ್ವಿನ್ ಮತ್ತು ಪ್ರೈಮಾಕ್ವಿನ್‌ಗಳು. ಹಿಂದೆ ಉಪಯೋಗಿಸಲ್ಪಡುತ್ತಿದ್ದ ಕ್ವಿನೈನ್ ದೇಹಕ್ಕೆ ಹೆಚ್ಚು ಅಪಾಯಕಾರಿಯಾದುದರಿಂದ ಈಗ ಬಹಳ ಅಪರೂಪವಾಗಿ ಉಪಯೋಗಿಸಲ್ಪಡುತ್ತಿದೆ. ಫಾಲ್ಸಿಪಾರಂ ಮಲೇರಿಯಾದಲ್ಲಿ ಮಾತ್ರ ಗಂಭೀರ ಪರಿಸ್ಥಿತಿಯನ್ನು ತಲುಪಿದಾಗ ಕ್ವಿನೈನ್, ಮೆಪಾಕ್ರಿನ್ ನಂತಹ ಔಷಧಗಳನ್ನು ಬಳಸಲಾಗುತ್ತದೆ.

ಮೊದಲ ದಿನ ಕ್ಲೋರೋಕ್ವಿನ್ ಮತ್ತು ಪ್ರೈಮಾಕ್ವಿನ್ ಅನ್ನು ನಂತರದ ನಾಲ್ಕು ದಿನಗಳಲ್ಲಿ ಪ್ರೈಮಾಕ್ವಿನ್ ಅನ್ನು ಕೊಡಲಾಗುತ್ತದೆ. ಆದರೆ ತುಂಬಾ ಮಲೇರಿಯಾ ಪೀಡಿತ ಪ್ರದೇಶಗಳಲ್ಲಿ ಜ್ವರವಿರುವ ಪ್ರತಿಯೊಬ್ಬನನ್ನೂ ಮಲೇರಿಯಾ ರೋಗಿಯೆಂದು ಪರಿಗಣಿಸಿ ಒಂದೇ ದಿನದ ಚಿಕಿತ್ಸೆಗೆ ಒಳಪಡಿಸಲಾಗುತ್ತದೆ.

ಮಲೇರಿಯಾ ತಡೆಯುವ ವಿಧಾನಗಳು

ಇವನ್ನೂ ಎರಡು ಭಾಗಗಳಾಗಿ ವಿಂಗಡಿಸಬಹುದು.

ಅ) ಮಲೇರಿಯಾ ರೋಗಿಗಳನ್ನು ಬೇಗ ಚಿಕಿತ್ಸೆಯ ಮೂಲಕ ಗುಣಪಡಿಸಿ ಸೊಳ್ಳೆಗಳು ರೋಗವಾಹಕಗಳಾಗದಂತೆ ಮಾಡುವುದು.

ಆ) ಸೊಳ್ಳೆಗಳಿಂದ ರಕ್ಷಣೆ ಪಡೆಯುವುದು. ಇದರಲ್ಲಿ ಯಾವುದೇ ಕೆಳಗಿನ ವಿಧಾನವನ್ನು ಉಪಯೋಗಿಸಬಹುದು.

೧) ಬಲಿತ ಸೊಳ್ಳೆಗಳನ್ನು ಡಿ. ಡಿ. ಟಿ. ಮುಂತಾದ ಕ್ರಿಮಿನಾಶಕಗಳನ್ನು ಸಿಂಪಡಿಸುವುದರಿಂದ ನಾಶಪಡಿಸುವುದು (ಮನೆಗಳಲ್ಲಿ).

೨) ಮನೆಯ ಸುತ್ತಲ ಪ್ರದೇಶಗಳಲ್ಲಿ ನೀರು ನಿಲ್ಲದಂತೆ ಮಾಡಿ ಸೊಳ್ಳೆಗಳು ಬೆಳೆಯಲು ಅವಕಾಶ ಕೊಡದಿರುವುದು ಅಥವಾ ಅಂಥ ಸ್ಥಳಗಳಲ್ಲಿ ಕ್ರಿಮಿನಾಶಕಗಳನ್ನು ಸಿಂಪಡಿಸಿ ನಾಶಪಡಿಸುವುದು.

೩) ಸೊಳ್ಳೆಯ ಮರಿಗಳನ್ನು ತಿನ್ನುವ ಮೀನುಗಳನ್ನು ಬೆಳೆಸುವುದು. ಮತ್ತು ನಪುಂಸಕ ಗಂಡು ಸೊಳ್ಳೆಗಳನ್ನು ಮಲೇರಿಯಾ ಪೀಡಿತ ಪ್ರದೇಶಗಳಲ್ಲಿ ಬಿಟ್ಟು, ಒಂದು ರೀತಿಯಲ್ಲಿ ಸೊಳ್ಳೆಗಳಲ್ಲಿ ಕುಟುಂಬ ಯೋಜನೆಯನ್ನು ತರುವುದು ಇತ್ತೀಚಿನ ವಿಧಾನಗಳು.

೪) ಮಲಗುವಾಗ ಸೊಳ್ಳೆ ಪರದೆಯನ್ನು ಉಪಯೋಗಿಸುವುದೂ ಮನೆಗಳಿಗೆ ಸೊಳ್ಳೆಗಳು ತೂರಲಾರದಂತೆ ತಂತಿ ಜಾಲಗಳನ್ನು ಹಾಕಿಸುವುದೂ ಸೊಳ್ಳೆಗಳನ್ನು ಓಡಿಸುವ ಘಾಟು ಪದಾರ್ಥಗಳನ್ನು (ಓಡೋಮೋಸ್, ಟಾರ್ಟಾಯಿಸ್ ಸುರಳಿಯಂತಹವು) ಉಪಯೋಗಿಸುವುದೂ ಕೆಲವು ಇತರ ವಿಧಾನಗಳು.

ಭಾರತದಲ್ಲಿ ಮಲೇರಿಯಾ ನಿರೋಧ ಕಾರ್ಯಕ್ರಮಗಳು

ಭಾರತದಲ್ಲಿ ಮಲೇರಿಯಾ ನಿರೋಧ ಕಾರ್ಯಕ್ರಮವನ್ನು ಅಧಿಕೃತವಾಗಿ ೧೯೫೩ ರಲ್ಲಿ ಪ್ರಾರಂಭಿಸಲಾಯಿತು. ೨೪ ಕೋಟಿ ರೂ. ಗಳ ವೆಚ್ಚದಿಂದ ಅತಿ ಹೆಚ್ಚು ಮಲೇರಿಯಾ ಪೀಡಿತ ಪ್ರದೇಶಗಳಲ್ಲಿ ಮನೆಮನೆಗೆ ಡಿ. ಡಿ. ಟಿ. ಸಿಂಪಡಿಸಿ ಮಲೇರಿಯಾ ರೋಗಿಗಳಿಗೆ ಚಿಕಿತ್ಸೆ ಕೊಡಲಾಯಿತು. ಈ ಕಾರ್ಯಕ್ರಮ ಬಹುಮಟ್ಟಿಗೆ ಯಶಸ್ವಿಯಾದುದರಿಂದ ೧೯೫೮ ರಲ್ಲಿ ಮಲೇರಿಯಾ ನಿರ್ಮೂಲನಾ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ಈ ಕಾರ್ಯಕ್ರಮದ ಗುರಿ— ಮಲೇರಿಯಾ ಹರಡಬಲ್ಲ ಸೊಳ್ಳೆಗಳಿದ್ದರೂ ಮಲೇರಿಯಾ ರೋಗಿಗಳನ್ನು ಬೇಗ ಗುರುತಿಸಿ, ಗುಣಪಡಿಸಿ (ಪ್ಲಾಸ್ಮೋಡಿಯಂ ಕ್ರಿಮಿಗಳು ಸೊಳ್ಳೆಗಳಿಗೆ ಸಿಗದಂತೆ ಮಾಡಿ) ಪ್ಲಾಸ್ಮೋಡಿಯಂಗಳನ್ನು ಆ ಪ್ರದೇಶದಲ್ಲಿ ನಿರ್ಮೂಲವಾಡಿ ಮತ್ತೆ ಮಲೇರಿಯಾ ತಲೆದೋರದಂತೆ ಮಾಡುವುದು.

ಮಲೇರಿಯಾ ನಿರ್ಮೂಲನಾ ಕಾರ್ಯಕ್ರಮವನ್ನು ನಾಲ್ಕು ಹಂತಗಳಾಗಿ ವಿಭಜಿಸಲಾ-

ಯಿತು. ಅವುಗಳು.

೧. ಸಿದ್ಧತೆಯ ಹಂತ: ಆಡಳಿತ ವ್ಯವಸ್ಥೆ, ಕೆಲಸಗಾರರು, ಕ್ರಿಮಿನಾಶಕಗಳು ಇತ್ಯಾದಿ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವುದು.

೨) ದಾಳಿಯ ಹಂತ: ಇದರ ಮುಖ್ಯ ಗುರಿ ಮನುಷ್ಯ-ಸೊಳ್ಳೆ-ಮನುಷ್ಯ ಚಕ್ರವನ್ನು ತುಂಡರಿಸುವುದು. ಇದನ್ನು ಕ್ರಿಮಿನಾಶಕಗಳ ಸಿಂಪಡಿಸುವಿಕೆಯಿಂದಲೂ ಮಲೇರಿಯಾ ರೋಗಿಗಳನ್ನು ಬೇಗ ಪತ್ತೆ ಹಚ್ಚಿ ಗುಣಪಡಿಸುವುದರಿಂದ ಮಾಡಲಾಗುತ್ತದೆ.

೩) ಸ್ಥಿರೀಕರಣದ ಹಂತ: ಈ ಹಂತದಲ್ಲಿ ದಾಳಿಯ ಹಂತದಲ್ಲಿಯ ಕಾರ್ಯಕ್ರಮಗಳನ್ನು ನಿಲ್ಲಿಸಲಾಗುತ್ತದೆ. ಇದರಲ್ಲಿ ಪ್ರತ್ಯಕ್ಷ ವೀಕ್ಷಣೆ ಅಂದರೆ, ಆರೋಗ್ಯ ವಿಕ್ಷಕರು (೧೦೦೦೦ ಜನತೆಗೆ ಒಬ್ಬರಂತೆ) ರೋಗಿಗಳನ್ನು ಪತ್ತೆ ಹಚ್ಚಿ, ಚಿಕಿತ್ಸೆ ನೀಡುವುದೂ ಮತ್ತು ಪರೋಕ್ಷ ವೀಕ್ಷಣೆ ಅಂದರೆ ಆಸ್ಪತ್ರೆ, ಆರೋಗ್ಯ ಕೇಂದ್ರ ಮತ್ತು ಖಾಸಗಿ ವೈದ್ಯರುಗಳು ಗುರುತಿಸುವ ಮಲೇರಿಯಾ ರೋಗಿಗಳಿಗೆ ಚಿಕಿತ್ಸೆ ನೀಡುವುದೂ ಸೇರಿರುತ್ತವೆ.

೪) ಸಮಸ್ಥಿತಿಯನ್ನುಳಿಸುವ ಹಂತ: ಇದರಲ್ಲಿ ಒಮ್ಮೆ ಮಲೇರಿಯಾವನ್ನು ನಿರ್ಮೂಲನೆ ಮಾಡಿದ ಮೇಲೆ, ಆ ಸ್ಥಿತಿಯನ್ನು ಉಳಿಸಿಕೊಳ್ಳುವುದು. ಮಲೇರಿಯಾ ಪೀಡಿತ ಪ್ರದೇಶದಿಂದ ರೋಗ ಇಲ್ಲಿಗೆ ಹರಡದಂತೆ ನೋಡಿಕೊಳ್ಳುವುದು.

೧೯೫೮ ರಲ್ಲಿ ಪ್ರಾರಂಭಿಸಲ್ಪಟ್ಟ ಮಲೇರಿಯಾ ನಿರ್ಮೂಲನ ಕಾರ್ಯಕ್ರಮ ೧೯೬೮-೬೯ ರಲ್ಲಿ ಮುಗಿಯಬೇಕಾಗಿದ್ದರೂ ಹಲವು ಕಾರಣಗಳಿಂದ ನಿರೀಕ್ಷಿಸಿದ ಸಮಯದಲ್ಲಿ ಮುಗಿಯಲಿಲ್ಲ ಅವುಗಳಲ್ಲಿ ಕೆಲವು— ಕೆಲಸಗಾರರ ಕೊರತೆ, ಡಿ. ಡಿ. ಟಿ. ಮತ್ತಿತರ ಕ್ರಿಮಿನಾಶಕಗಳ ಕೊರತೆ, ಬೆಲೆಯೇರಿಕೆ, ಮತ್ತು ಕೆಲವೆಡೆಗಳಲ್ಲಿ ಸೊಳ್ಳೆಗಳು ಡಿ.ಡಿ. ಟಿ. ಕ್ರಿಮಿನಾಶಕಕ್ಕೆ ಒಗ್ಗಿಹೋದುದು ಮುಖ್ಯ ಕಾರಣ. ಇದರಿಂದಾಗಿ ಒಮ್ಮೆ ಸ್ಥಿರೀಕರಣದ ಹಂತವನ್ನು ತಲುಪಿದ್ದ ಕಾರ್ಯಕ್ರಮವನ್ನು ಮತ್ತೆ ದಾಳಿಯ ಹಂತಕ್ಕೆ ಬದಲಿಸಲಾಗಿದೆ; ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ೧೦೦ ಕೋಟಿಗಿಂತ ಹೆಚ್ಚು ರೂ. ಗಳನ್ನು ಈ ಕಾರ್ಯಕ್ರಮಕ್ಕಾಗಿ ಖರ್ಚುಮಾಡಲಾಯಿತು.

ಮಲೇರಿಯಾ ಸಮಸ್ಯೆಯ ಬೃಹದ್ಗಾತ್ರವನ್ನು ಗಮನಿಸಿ, ರಾಷ್ಟ್ರದ ಜನತೆಯು ತಮ್ಮದೇ ರಾಷ್ಟ್ರವನ್ನು ಆರ್ಥಿಕ ಸುಭದ್ರತೆಯ, ಸಾರ್ವಜನಿಕ ಆರೋಗ್ಯದ ಭದ್ರ ತಳಹದಿಯಂತ್ತ ಒಯ್ಯಲು, ಮಲೇರಿಯಾ ನಿರ್ಮೂಲನಾ ಕಾರ್ಯಕ್ರಮಕ್ಕೆ ತಮ್ಮ ಸಂಪೂರ್ಣವಾದ ಸಹಕಾರವಿತ್ತಲ್ಲಿ ಈ ರೋಗವನ್ನು ಭಾರತದಿಂದ ಓಡಿಸುವುದು ಎಷ್ಟರ ಮಾತು! (ಮೈಲಿಬೇನೆಯನ್ನು ಭಾರತದಿಂದ ಹೊರದೂಡಿದ ನಾವು ಇದನ್ನೂ ಹೊರದೂಡುವುದು ಕಷ್ಟವೇನಲ್ಲ). ಇದಕ್ಕಾಗಿ ಕೆಲವಂಶಗಳನ್ನಾದರೂ ನಾವು ಚೆನ್ನಾಗಿ ತಿಳಿದುಕೊಳ್ಳಬೇಕು...

೧) ಆರೋಗ್ಯ ವೀಕ್ಷಕರು ಬಂದಾಗ ರಕ್ತ-ಪರೀಕ್ಷೆಯ ಅವಶ್ಯಕತೆಯಿದ್ದಲ್ಲಿ ಅದನ್ನು ವಿರೋಧಿಸದಿರುವುದು.

೨) ಕ್ರಿಮಿನಾಶಕಗಳ ಸಿಂಪಡಿಸುವಿಕೆಯ ಕಾರ್ಯಕ್ರಮದಲ್ಲಿ ಕಾರ್ಯಕರ್ತರಿಗೆ ಸಂಪೂರ್ಣ ಸಹಕಾರ ಕೊಡುವುದು.

೩) ಸೊಳ್ಳೆಗಳ ಆವಾಸಸ್ಥಾನಗಳನ್ನೂ ಬೆಳೆಯುವ ಸ್ಥಳಗಳನ್ನೂ ಸಾಧ್ಯವಿದ್ದಷ್ಟು ಕಡಿಮೆ ಮಾಡುವುದು.

೪) ಮಲೇರಿಯಾ ರೋಗದ ಬಗೆಗೆ, ರಾಷ್ಟ್ರೀಯ ಸಮಸ್ಯೆಯಾಗಿರುವ ಅಗಾಧತೆಯ ಬಗೆಗೆ ಅವರ ಅರಿವನ್ನು ಉಂಟುಮಾಡಿಕೊಳ್ಳುವುದು, ಉಂಟುಮಾಡಿಸುವುದು.

ಮಲೇರಿಯಾ ನಿರೋಧ ಕಾರ್ಯಕ್ರಮದಲ್ಲಿ ನಾಗರಿಕರೂ ತಮ್ಮ ಪಾತ್ರ ಏನಿದೆಂಬುದನ್ನು ಅರಿತು ಸಹಕರಿಸುವದರಿಂದ ಶೀಘ್ರ ಪರಿಣಾಮ ಕಂಡುಬರುವಲ್ಲಿ ಅನುಕೂಲವಾಗಬಲ್ಲದು. ✡





ಬದುಕಲು ಕಲಿಯಿರಿ

ಮೂಲ: ಶ್ರೀತನಯ
ಸಂಗ್ರಹ: ಡಾ. ಎ. ಚಂದ್ರಶೇಖರ ಉಡುಪ.

ಬದುಕಲು ಕಲಿಯಿರಿ

ಬಾಳು ಬಾಳುವುದಕ್ಕಾಗಿದೆ-ಬರಿದೆ ಬಳಲುವುದಕ್ಕಲ್ಲ. ಬಾಳಿನ ಯುಕ್ತವಾದ ಆಸೆ ಆಕಾಂಕ್ಷೆಗಳು ರೂಪುಗೊಳ್ಳುವುದಕ್ಕಾಗಿ ಇವೆ-ಬರಿದೆ ಕಲ್ಪನೆಯ ಕನಸು ಕಾಣುವುದಕ್ಕಲ್ಲ. ವ್ಯಕ್ತಿಯೊಬ್ಬನ ಪಾಲಿಗೆ ಬಂದ ಜ್ಞಾನ ಇಚ್ಛಾಕ್ರಿಯಾಶಕ್ತಿಗಳು ಯೋಗ್ಯ ಅಭಿರುಚಿ-ಅಭ್ಯಾಸ-ಸಂಸ್ಕಾರಗಳಿಂದ ವೃದ್ಧಿಗೊಂಡು ಆತನ ಸರ್ವಾಂಗೀಣ ಅಭಿವೃದ್ಧಿಯ ಜೊತೆಗೆ ನೆರೆಹೊರೆಯ ಹಾಗೂ ಸಮಾಜದ ಹಿತವನ್ನು ಹೇಗೆ ಸಾಧಿಸಬಲ್ಲುದು ಎಂಬುದನ್ನು ನೇರವಾಗಿ ತಿಳಿಸಿಕೊಟ್ಟು, ಬದುಕಿಗೊಂದು ದಿಕ್ಕನ್ನೂ ಅಭ್ಯುದಯ ಅಭಿವೃದ್ಧಿ ಉನ್ನತಿಯೆಡೆಗೆ ಮುನ್ನಡೆಯುವ ಸ್ಫೂರ್ತಿಯನ್ನೂ ಯುವಕರಿಗೆ ಕೊಡಬಲ್ಲ ಗ್ರಂಥ ಕನ್ನಡದಲ್ಲಿ ದುರ್ಲಭ ಎನ್ನುವಷ್ಟು ವಿರಳ. ಆಂಗ್ಲ ಭಾಷೆಯ ಅಂಥ ಸಾಹಿತ್ಯಕ್ಕೆ ಹೋಲಿಸಿದರೆ. ಮನುಷ್ಯನು ಯಾವ ಕ್ಷೇತ್ರದಲ್ಲೇ ಆಗಲಿ ಪಡೆಯಬಹುದಾದ ಉನ್ನತ ಸಿದ್ಧಿಯು ಅವನ ಮಾನಸಿಕ ಶಕ್ತಿ, ಸಂಕಲ್ಪ, ಆಸೆ, ಆಕಾಂಕ್ಷೆಗಳ ತೀವ್ರತೆ, ಹಿಡಿದ ಕಾರ್ಯವನ್ನು ದೃಢ ನಿಶ್ಚಯದಿಂದ ಅತ್ಯುತ್ತಮ ರೀತಿಯಲ್ಲಿ ಮಾಡಿ ಮುಗಿಸುವ ದಾರ್ಢ್ಯ-ಇವುಗಳನ್ನು ಹೊಂದಿಕೊಂಡಿದೆ ಎಂಬುದು ಸರ್ವವಿದಿತ. ಇಂದು ಯುವಕರಿಗೆ ಅಧ್ಯಯನ ಅಭ್ಯಾಸಗಳಿಗೆ ಸಕಲ ಸೌಕರ್ಯ ಸೌಲಭ್ಯಗಳಿದ್ದರೂ ಅವುಗಳನ್ನುಪಯೋಗಿಸಿಕೊಂಡು ಮೇಲೇರುವ ಉತ್ಕಟ ಅಭಿಲಾಷೆಗೆ ಆತಂಕವಾಗಿರುವ ತಡೆಗಳಾವುವು? ಯುವಜನರ ಮನದಲ್ಲಿ ಸ್ಫೂರ್ತಿಯ ಕಿಡಿಯನ್ನು ಹೊತ್ತಿಸಿ, ಉದಾತ್ತ ಬದುಕನ್ನು ಬದುಕಲು ತೀವ್ರ ಹಂಬಲವನ್ನುಂಟುಮಾಡುವ, ಸಾಹಸ ಉದ್ಯಮಶೀಲತೆಯನ್ನು ಉಕ್ಕಿಸುವ ಸಿದ್ಧೌಷಧ ಎಲ್ಲಿದೆ? ಹದಿನೈದು ವರ್ಷಗಳ ಹಿಂದೆ 'ಶ್ರೀತನಯ'ರಿಂದ ಬರೆಯಲ್ಪಟ್ಟು, ಅಷ್ಟೊಂದು ಪ್ರಸಿದ್ಧಿಗೆ ಬಂದಿರದ (ಪುನರ್ಮುದ್ರಣಗೊಳ್ಳದ) 'ಬದುಕಲು ಕಲಿಯಿರಿ' ಎಂಬ ಗ್ರಂಥವನ್ನೋದಿದಾಗ ಹೃದಯದಲ್ಲಿ ಸಾಹಸ ಉತ್ಸಾಹದ ಉತ್ತುಂಗ ತರಂಗಗಳು ಹೊಮ್ಮುತ್ತವೆ. ವೈದ್ಯಕೀಯ ಅಧ್ಯಯನವನ್ನು ಮುಗಿಸಿ ತಿರುಗಿ ಇನ್ನೊಮ್ಮೆ ಓದಿದಾಗಲೂ ಮಿತ್ರರಿಗೆ ಓದಿ ಹೇಳಿದಾಗಲೂ ಅವರಲ್ಲೂ ಸಾಹಸ ಸಾಫಲ್ಯದತ್ತ ಮುನ್ನಡೆಯುವ ಅದಮ್ಯೋತ್ಸಾಹ ಅಂಕುರಿಸಿದ್ದನ್ನು ಕಂಡೆ. ಎಲ್ಲ ಯುವಕ ಮಿತ್ರರೂ ಇದನ್ನು ಮತ್ತೊಮ್ಮೆ ಓದಬೇಕೆಂದು ಹಂಬಲಿಸಿದಾಗ ಕರ್ನಾಟಕದ ಯುವಕರೂ ಈ ಬರವಣಿಗೆಯ ಸ್ವಲ್ಪ ಪರಿಚಯವನ್ನಾದರೂ ಪಡೆಯಲಿ ಎಂಬ ಉದ್ದೇಶದಿಂದ ಇಲ್ಲಿ ಸಂಗ್ರಹವನ್ನು ಕೊಡುತ್ತಿದ್ದೇನೆ. ಮೂಲದ ಮನಸೆಳೆಯುವ, ಓದುಗರನ್ನು ಒಂದೇ ಏಟಿಗೆ ಓದಿ ಮುಗಿಸುವಂತೆ ಮಾಡುವ ತಂತ್ರ ಸಂಗ್ರಹದಲ್ಲಿ ಸಫಲವಾಗದಾದರೂ ಮೂಲ ಗ್ರಂಥದಲ್ಲಿರುವ ನಾಲ್ಕು ವಿಭಾಗಗಳ ವಿಚಾರಗಳ ಸಾರ ದೊರೆಯುವ ಯತ್ನ ಮಾಡಿದ್ದೇನೆ. ತಮ್ಮ ಆಶ್ರಮವಾಸದ ಪೂರ್ವದ ದಿನಗಳಲ್ಲಿ ಈ ಗ್ರಂಥವನ್ನು ಬರೆದ ಲೇಖಕರು-ಸ್ವಾಮಿ ಜಗದಾತ್ಮಾನಂದರು-ಮೈಸೂರು ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ಅಧಿಕಾರಿಗಳಲ್ಲೊಬ್ಬರು ಮೈಸೂರು ನಗರದ ವಿದ್ಯಾರ್ಥಿಗಳಿಗೂ ಹಿರಿಯರಿಗೂ ಅವರ ಆಧ್ಯಾತ್ಮಿಕ ಪ್ರವಚನಗಳು ಪ್ರಿಯವಾದವು

-ಸಂಗ್ರಾಹಕ

ಸಿಕ್ಕಿದುದು ನೋಡಿ, ಬೀದಿಯೊಂದರಲ್ಲಿ ನಡು ಹಗಲಿನಲ್ಲೇ ಅದೊಂದು ದಿನ ಒಬ್ಬಾತ ಸಂತೋಷದಿಂದ ಕೇಕೆ ಹಾಕುತ್ತಾ, ಪೂರ್ಣ ಬತ್ತಲಾಗಿ ಓಡುತ್ತಿದ್ದ! ಜನ ದಿಗ್ಭ್ರಾಂತರಾಗಿ ಏನೊಂದೂ ತೋಚದೆ ಅವನನ್ನೇ ನೋಡುತ್ತಿದ್ದರು! ಆತನೇ ವಿಖ್ಯಾತ ಗಣಿತಜ್ಞ ವಿಜ್ಞಾನಿಯಾದ ಆರ್ಕಿಮಿಡಿಸ್. ಸಾಪೇಕ್ಷ ಸಾಂದ್ರತೆಯ ಗಣಿತ ಸುಲಭದಲ್ಲಿ ಪರಿಹರಿಸಬಲ್ಲ ಉತ್ತರವೊಂದು ಸ್ನಾನ ಮಾಡುವಾಗ ದೊರೆತುದೇ ಆರ್ಕಿಮಿಡಿಸನ ಅಪಾರ ಸಂತೋಷಕ್ಕೆ ಕಾರಣವಾಗಿತ್ತು! 'ಯುರೇಕಾ-ಯುರೇಕಾ' (ನಾನು ಕಂಡುಹಿಡಿದೆ) ಎಂಬ ಶಬ್ದಗಳನ್ನು ಸಂತಸದಿಂದ ಉಚ್ಚರಿಸುತ್ತಾ, ಆತ ದೇಹದ ಪರಿವಿಲ್ಲದೆ ಊರ ಜನನಿಬಿಡ ಬೀದಿಯಲ್ಲಿ ಬತ್ತಲಾಗಿ ಓಡಿದ್ದ!

ಕಷ್ಟಪಟ್ಟು ದುಡಿಯುವಾಗ ಎಣಿಸಿಕೊಂಡ ಫಲ ದೊರೆಯಿತೆಂದರೆ ಸಂತೋಷವಾಗುವುದಿಲ್ಲವೆ? ಯಾವ ಮಹತ್ಕಾರ್ಯವೇ ಆಗಲಿ, ಆವಿಷ್ಕಾರವೇ ಆಗಲಿ ದಿನವೊಪ್ಪತ್ತಿನ ದುಡಿಮೆಯಿಂದ ಆದುದಲ್ಲವಲ್ಲ. ಎರಡು ಸಾವಿರಕ್ಕೂ ಹೆಚ್ಚಿನ ಹೊಸ ಯಂತ್ರಗಳನ್ನು ಸೃಷ್ಟಿಸಿ ಅಸಾಧಾರಣ ಪ್ರತಿಭಾಶಾಲಿ ಎಂದೆನಿಸಿಕೊಂಡ ವಿಜ್ಞಾನಿ ಎಡಿಸನ್ ಹೀಗೆ ಹೇಳಿದ್ದಾನೆ- "ನಾನು ಮಾಡಿದ ಯಾವುದೇ ಪ್ರಯೋಜಕ ಕೆಲಸವಾಗಲೀ ಆವಿಷ್ಕಾರವಾಗಲೀ ಆಕಸ್ಮಾತ್ ಘಟಿಸಲಿಲ್ಲ. ಅವು ನಿರಂತರ ಶ್ರಮದಿಂದ ಸಾಧ್ಯವಾದವು."

ಜಗತ್ತಿನ ಇತಿಹಾಸವನ್ನು ನೋಡಿ. ಮಹತ್ಕಾರ್ಯಕರ್ತರೆಲ್ಲರೂ ತಮ್ಮ ಕೆಲಸದಲ್ಲಿ ಮಗ್ನರಾಗಿ ಹಗಲಿರುಳು ದುಡಿಯುತ್ತಿದ್ದರು. ಶ್ರಮ ಅವರಿಗೆ ಅದ್ಭುತ ಆನಂದವನ್ನೀಯುತ್ತಿತ್ತು. ಅಪಾರ ಶಕ್ತಿಯನ್ನೊದಗಿಸುತ್ತಿತ್ತು. ಉತ್ಸಾಹ ಸ್ಫೂರ್ತಿಯ ಚಿಲುಮೆಯಾಗಿತ್ತು. ಪ್ರಸಿದ್ಧ ವಿಜ್ಞಾನಿ ಎಡಿಸನ್ ಹೇಳಿದಂತೆ 'ಪ್ರತಿಭೆ' ಎಂಬುದರಲ್ಲಿ ಶೇ. ೯೯ ಪಾಲು ಬೆವರು, ೧ ಪಾಲು ಸ್ಫೂರ್ತಿ ಇರುತ್ತದೆ. ಕೆಲಸ ಮಾಡುವಲ್ಲಿ ಮೌಲ್ಯಗಳನ್ನ ತೋರಿಸುವಲ್ಲಿ

ಗಟುಕದು. ಎಷ್ಟೇ ಹೆಚ್ಚಿಗೆ ಕೆಲಸವಿರಲಿ. ಈ ಒಂದು ದಿನದಲ್ಲೇ ಮುಗಿಸಬಲ್ಲೆ ಎಂಬ ದೃಢ ವಿಶ್ವಾಸವನ್ನು ತಳೆದು, ಛಲದಿಂದ ನೀವು ಮುಂದಡಿ ಇಟ್ಟಲ್ಲಿ ಖಂಡಿತ ನಿಮ್ಮಿಂದದು ಸಾಧ್ಯವಾಗುತ್ತದೆ. ಮಹಾತ್ಮರಾಗಲೂ ಗುಟ್ಟೊಂದಿದೆ- 'ಒಂದು ಆದರ್ಶವನ್ನು ತೆಗೆದುಕೊಳ್ಳಿ, ಅದನ್ನೇ ನಿಮ್ಮ ಬದುಕಿನ ಉಸಿರಾಗಿ ಮಾಡಿಕೊಳ್ಳಿರಿ. ಬೇರೆ ಯೋಚನೆಗಳನ್ನೆಲ್ಲ ದೂರಕ್ಕೆಸೆಯಿರಿ. ನಿಮ್ಮ ಪೂರ್ಣ ಮನಸ್ಸು, ದೇಹ, ಮಾಂಸಖಂಡಗಳು ಅದೊಂದೇ ವಿಷಯವನ್ನು ಚಿಂತಿಸಲಿ ಕನಸು ಕಾಣಲಿ. ಮಹಾತ್ಮರಾಗಲೂ ದಾರಿ ಅದೊಂದೇ' ನಾವೆಲ್ಲರೂ ಮಹಾತ್ಮರಾಗಬೇಕಿಲ್ಲ, ನಿಜ. ಆದರೆ ಬದುಕಿನ ಯಾವ ಕ್ಷೇತ್ರದಲ್ಲೇ ಆಗಲಿ ಯಶಸ್ವಿಗಳಾಗಬೇಕು.

ಕೆನಡದ ಸುಪ್ರಸಿದ್ಧ ವೈದ್ಯಶಾಸ್ತ್ರಜ್ಞನಾದ ವಿಲಿಯಂ ಓಸ್ಲರನ ಜೀವನದಲ್ಲಿ ಅದ್ಭುತ ಬದಲಾವಣೆಯನ್ನುಂಟುಮಾಡಿದ್ದೇನು ಗೊತ್ತೆ? ಥಾಮಸ್ ಕಾರ್ಲೈಲನ ಒಂದು ನುಡಿ, ಕೇವಲ ಒಂದು ನುಡಿ ಮಾತ್ರವೆ. "ದೂರದ ದಿಗಂತದಲ್ಲಿ ಅಸ್ಪಷ್ಟವಾಗಿ ಗೋಚರಿಸುವ ಭವಿಷ್ಯದಲ್ಲಿ ನಮ್ಮ ಮನಸ್ಸಿರಿಸದೆ, ಸಮೀಪದ ಸಮಸ್ಯೆಯನ್ನು ಧೀರತೆಯಿಂದ ಎದುರಿಸುವುದರಲ್ಲೇ ಜೀವನದ ಸಾಫಲ್ಯವಿದೆ," ಎಂಬೀ ಮಾತು ಆತನ ಬಾಳಿನ ಯಶಸ್ಸಿನ ಮೂಲಮಂತ್ರವಾಯಿತು. ಕಾರ್ಲೈಲನ ನುಡಿಯನ್ನು ಅಕ್ಷರಶಃ ಪಾಲಿಸಿದ ಓಸ್ಲರ್ ತಾನು ವರ್ತಮಾನ ಕಾಲದಲ್ಲಿ ಬದುಕಿದೆ ಎನ್ನುತ್ತಾನೆ. "ಭವಿಷ್ಯವು ಇಂದು—ನಾಳೆ ಎಂಬುದಿಲ್ಲ. ಮನುಷ್ಯನ ಮುಕ್ತಿಯು ಕ್ಷಣ ಈಗಲೇ. ಭವಿಷ್ಯದ ಬಗ್ಗೆ ಅತ್ಯಾತುರನಾದ ವ್ಯಕ್ತಿಯು ಪ್ರತಿಯೊಂದು ಹೆಜ್ಜೆಯನ್ನು ವೃಥಾ ಶಕ್ತಿವ್ಯಯ. ಮಾನಸಿಕ ಚಿಂತೆ ಮತ್ತು ನರದೌರ್ಬಲ್ಯ—ಇವುಗಳು ಧ್ವಂಸಮಾಡುತ್ತವೆ. ಭೂತ ಮತ್ತು ಭವಿಷ್ಯತ್ ಕಾಲದ ಬಾಗಿಲುಗಳನ್ನು ಭದ್ರವಾಗಿ ಮುಚ್ಚಿ—ವರ್ತಮಾನದಲ್ಲಿ— ನಿರ್ದಿಷ್ಟ ಕಾರ್ಯಸೀಮೆಯನ್ನು ಯೋಚಿಸಿ ನಿಶ್ಚಿಂತೆಯಿಂದ ದುಡಿಯುವ

ಅಭ್ಯಾಸ ಮಾಡಿ," ಎಂದಾತ ಆದೇಶ ನೀಡುತ್ತಾನೆ.

ಓಸ್ಲರ್ ಹೇಳಿದ ಮಾತುಗಳನ್ನೇ ಭಾರತದ ಋಷಿಗಳು ಸಾವಿರಾರು ವರ್ಷಗಳ ಹಿಂದೆಯೇ ಹೇಳಿದ್ದರು–

"ಗತ ಶೋಕಂ ನ ಕುರ್ವೀತ
ಭವಿಷ್ಯಂ ನೈವ ಚಿಂತಯೇತ್ ।
ವರ್ತಮಾನೇಷು ಕಾರ್ಯೇಷು
ವರ್ತಯಂತಿ ವಿಚಕ್ಷಣಾಃ"

(ಬುದ್ಧಿವಂತರು ಕಳೆದುಹೋದುದರ ಕುರಿತು ದುಃಖಿಸುವುದಿಲ್ಲ. ಭವಿಷ್ಯವನ್ನು ಕುರಿತು ಚಿಂತಿಸುವುದಿಲ್ಲ. ಅವರು ವರ್ತಮಾನ ಕಾಲದಲ್ಲೇ ಕಾರ್ಯನಿರತರಾಗುತ್ತಾರೆ). 'ಇಂದಿನ ದಿನ ಸುದಿನ; ನಾಳೆ ಎಂದರೆ ಅದು ಕಠಿಣ' ಎಂದರು ಹರಿದಾಸರು. 'ನೀನು ಈ ದಿನವನ್ನು ನೋಡಿಕೋ, ಅದು ನಾಳೆಯನ್ನು ನೋಡಿಕೊಳ್ಳುತ್ತದೆ' ಎಂಬುದು ಒಬ್ಬ ಆಂಗ್ಲ ವಿದ್ವಾಂಸನ ವಾಣಿ. ಅಮರ ಸಾಹಿತಿ ರಸ್ಕಿನ್ 'ಈ ದಿನ' ಎಂಬ ಶಬ್ದ ಮಾತ್ರವನ್ನೇ ತನ್ನ ಮೇಜಿನ ಮೇಲೆ ದೊಡ್ಡದಾಗಿ ಬರೆದಿಟ್ಟುಕೊಂಡಿದ್ದನಂತೆ! ಇವರೆಲ್ಲರೂ ಉಪಯೋಗಿಸಿದ ಶಬ್ದಗಳ ಅರ್ಥ ಒಂದೇ– ವರ್ತಮಾನ ಕಾಲದಲ್ಲಿ ಕಾರ್ಯನಿರತರಾಗುವುದು ಅವಶ್ಯ ಎಂದು. ಭವಿಷ್ಯದ ಸುಖಸ್ವಪ್ನಗಳನ್ನು ಕಟ್ಟುತ್ತ ಸೋಮಾರಿಯಾಗಿ ಕುಳಿತುಕೊಳ್ಳಬೇಡಿ. ಅಂದರೆ ನೀವು ಭವಿಷ್ಯದ ಕುರಿತು ಯೋಚಿಸುವುದೇ ತಪ್ಪೆಂದು ಅರ್ಥವಲ್ಲ. ಅವಶ್ಯವಾಗಿ ಯೋಚಿಸಿ! ಆದರೆ ಚಿಂತಿಸಬೇಡಿ, ಉದ್ವೇಗಪಡಬೇಡಿ, ಹಗಲು ಕನಸು ಕಾಣಬೇಡಿ. ಒಮ್ಮೆ ಸುಸಂಬದ್ಧವಾದ ಯೋಜನೆಯನ್ನು ಮಾಡಿ ನಿರ್ದಿಷ್ಟ ನಿಯಮಗಳನ್ನು ಹಾಕಿಕೊಂಡ ಬಳಿಕ ಅದನ್ನನುಸರಿಸಿ ದುಡಿಯುತ್ತ ಹೋಗಿ.

ಜೀವನದಲ್ಲಿ ಸಫಲತೆಯನ್ನು ಸಂಪೂರ್ಣವಾಗಿ ಹಣದ ಮಾನದಂಡದಿಂದಲೇ ಅಳೆಯುವುದು ದೊಡ್ಡ ತಪ್ಪು. ಒಂದು ಉದಾತ್ತ ಧ್ಯೇಯ ಸಾಧನೆಗಾಗಿ ನೀ[illegible]

ಒಂದು ತೆರನಾದ ಸಾಫಲ್ಯ ಅಡಗಿದೆ. ಆದರೆ ಜೀವನದ ಆ ಉದ್ದೇಶವೇನು ಎಂಬುದನ್ನು ಮೊದಲು ನಿರ್ಧರಿಸಿಕೊಳ್ಳಿ. ನಿಮಗೇನು ಬೇಕು ಎಂಬುದನ್ನು ನಿಮ್ಮೊಡನೆಯೇ ಕೇಳಿಕೊಂಡು ಉತ್ತರ ಪಡೆದುಕೊಳ್ಳಿ. ಮರೆಯದಿರಿ–ಉದ್ದೇಶವಿಲ್ಲದ ಜೀವನ ಚುಕ್ಕಾಣಿಯಿಲ್ಲದ ದೋಣಿಯಂತೆ ಎಲ್ಲೆಲ್ಲೋ ಸಾಗುವುದು.

ನಿಮ್ಮ ಜೀವನದಲ್ಲಿ ನಿರ್ದಿಷ್ಟ ಉದ್ದೇಶಗಳ ಅಭಾವಕ್ಕೆ ಹಲವಾರು ಕಾರಣಗಳಿರಬಹುದು. ನಿಮ್ಮ ಅಭಿರುಚಿಯ ವಿಷಯದಲ್ಲಿ ಬಾಲ್ಯದಿಂದಲೇ ತರಬೇತಿಯ ಅಭಾವ ನಿಮಗಿರಬಹುದು. ನಿಮ್ಮ ಅನಾರೋಗ್ಯವೂ ನಿಮ್ಮ ದಾರಿಯಲ್ಲಿ ತೊಡಕಾಗಿರಬಹುದು. ನೀವು ಸ್ವಭಾವತಃ ಚಂಚಲ ಮನಸ್ಕರಾಗಿದ್ದು ದೃಢತೆಯಿಂದ, ಏಕಾಗ್ರತೆಯಿಂದ ಹಿಡಿದ ಕೆಲಸವನ್ನು ಪಟ್ಟುಹಿಡಿದು ಮಾಡದಿರಬಹುದು. ನೀವು ಮಾಡಬೇಕಾದ ಉದ್ಯೋಗದಲ್ಲಿ ನಿಮಗೆ ಅಭಿರುಚಿಯಾಗಲೀ, ಅರ್ಹತೆಯಾಗಲೀ ಇಲ್ಲದೆ ನಿಮ್ಮ ವ್ಯಕ್ತಿತ್ವವನ್ನು ಪೂರ್ತಿಯಾಗಿ ಪ್ರಕಟಿಸಲು ಅಲ್ಲಿ ಅವಕಾಶವಿಲ್ಲದಿರಬಹುದು. ಜೀವನದ ಹಲವು ಕ್ಷೇತ್ರಗಳಲ್ಲಿ ಸೋಲನ್ನು ಕಂಡ ನೀವು ನಿರಾಶಾವಾದಿಗಳಾಗಿರಬಹುದು. ಇಲ್ಲವೇ, ಎಲ್ಲವೂ ಹಣೆಬರಹ, ಪ್ರಾರಬ್ಧಕರ್ಮ, ವಿಧಿವಶ ಎನ್ನುತ್ತಾ ನೀವು ಕಾಲ ಕಳೆಯುತ್ತಿರಬಹುದು.

ನಿಮ್ಮಲ್ಲಿರುವ ಸುಪ್ತಶಕ್ತಿಗಳನ್ನು ಬಡಿದೆಬ್ಬಿಸಬೇಕಾದರೆ ಜೀವನಕ್ಕೊಂದು ಗುರಿ ಇದ್ದೇ ತೀರಬೇಕು. ಗುರಿ ಎಂದರೆ ಮೋಕ್ಷಾಕಾಂಕ್ಷೆಯೇ ಎಂದೇ ಆಗಬೇಕೆಂದಿಲ್ಲ. ನಿರ್ದಿಷ್ಟವಾದ ಯಾವುದಾದರೊಂದು ಸ್ಪಷ್ಟ ಉದ್ದೇಶವಿದ್ದರೂ ಸಾಕು. ಆ ಉದ್ದೇಶ ಅಥವಾ ಗುರಿ ಏನನ್ನು ಸೂಚಿಸುತ್ತದೆ? ಅದೇ ನಿಮ್ಮನ್ನು ಕಾರ್ಯಪ್ರವೃತ್ತರನ್ನಾಗಿ ಮಾಡುತ್ತದೆ. ಆದರೆ ನಿಮಗೇನು ಬೇಕೆಂದೇ ತಿಳಿಯದಿದ್ದರೆ ಪರಿಣಾಮ ಶೂನ್ಯ ಸಂಪಾದನೆಯಾದೀತು. ನಿಮ್ಮ 'ಬೇಕು' [illegible]ಗಳನ್ನು ತೂಗಿ ನೋಡಿ. ಅವುಗಳಲ್ಲಿ ಮುಖ್ಯ

ನಾದುದನ್ನು ಆರಿಸಿ. ನಿಮ್ಮ ಸಮೀಪದ ಗುರಿಯನ್ನು ಹೊಂದಲು ಕೂಡಲೇ ಕಾರ್ಯ-ಮಗ್ನರಾಗಿ.

ಪ್ರಸಿದ್ಧ ಮನೋವಿಜ್ಞಾನಿಯಾದ ವಿಲಿಯಂ ಜೇಮ್ಸ್ ಏನು ಹೇಳಿದ್ದ ಗೊತ್ತೇ? "ಭವಿಷ್ಯದಲ್ಲಿ ಏನು ಆಗಬೇಕೆಂದು ಯೋಚಿಸಿರುತ್ತೇವೆಯೋ- ಅದನ್ನು ಕುರಿತು ನಾವು ಅರ್ಧ ಜಾಗ್ರತರಾಗಿರುತ್ತೇವೆ. ನಮ್ಮ ದೈಹಿಕ ಹಾಗೂ ಮಾನಸಿಕ ಶಕ್ತಿಗಳ ಬಹು ಅಲ್ಪ ಭಾಗವನ್ನು ನಾವು ಉಪಯೋಗಿಸುತ್ತೇವೆ. ವಿಶಾಲಾರ್ಥದಲ್ಲಿ ಮಾನವ ತನ್ನ ಶಕ್ತಿಯ ವಿಸ್ತಾರ ಪರಿಧಿಯೊಳಗಣ ತೀರ ಸೀಮಿತ ಕ್ಷೇತ್ರದಲ್ಲೇ ಬದುಕುತ್ತಾನೆ. ನಾನಾ ವಿಧದ ಶಕ್ತಿಗಳನ್ನು ಪಡೆದೂ ಅವನ್ನು ಉಪ-ಯೋಗಿಸಲು ಅಸಮರ್ಥನಾಗುತ್ತಾನೆ". ಅಂದರೆ ನಿಸರ್ಗದ ಸಂಪೂರ್ಣ ಐಶ್ವರ್ಯಗಳ ಉಪಯೋಗ ಪಡೆಯುವಲ್ಲಿ ನಾವು ವಿಫಲರಾಗಿದ್ದೇವೆಂದು ಅರ್ಥವಲ್ಲವೆ? 'ಕಣ್ಣಿಗೆ ಕೈ ಮುಚ್ಚಿಕೊಂಡು ಕತ್ತಲೆ ಎಂದು ಅಳುವವರು ನಾವು' ನಿತ್ಯ ಬಳಕೆಯಲ್ಲಿ ಮಾತೊಂದಿದೆ— ಯಾವುದಾದರೊಂದು ವಸ್ತುವಿನ ಕುರಿತು ಅರಿತುಕೊಳ್ಳಬೇಕೆಂಬ ವಿಚಾರವು ಮಾನವನ ಹೃದಯದಲ್ಲಿ ಪ್ರಬಲವಾಗಿ ಏಳದಿದ್ದರೆ, ವ್ಯಾಕುಲತೆ ಉತ್ಪನ್ನವಾಗದಿದ್ದರೆ ಅವನ ಕಣ್ಣುಗಳ ಎದುರಿಗೆ ಅಂಧಕಾರವೇ ಇರುವುದು. ಆ ವಸ್ತು ಅವನಿಗೆ ಗೋಚರಿಸುವುದೇ ಇಲ್ಲ

ನಮ್ಮ ಜೀವನ ಸಾಫಲ್ಯವು ದಿನದ ಪ್ರತಿ-ಯೊಂದು ಕ್ಷಣದಲ್ಲಿ ನಾವು ಬದುಕುವ ರೀತಿಯನ್ನವಲಂಬಿಸಿದೆ. 'ನಾವು ಎಂಥ ಪರಿಸ್ಥಿತಿ-ಯಲ್ಲಿದ್ದರೂ ನಮ್ಮ ಭವಿಷ್ಯ ನಿರ್ಮಾಣವಾಗುವುದು ಈಗ ನಾವು ನಡೆಸುವ ಕ್ಷಣ ಕ್ಷಣದ ಜೀವನವನ್ನು ಹೊಂದಿಕೊಂಡಿದೆ— ಭವಿಷ್ಯ ಜೀವನವೆಂಬ ಕಟ್ಟಡಕ್ಕೆ ನಾವು ಯೋಚಿಸುವ ಯೋಚನೆ, ಭಾವನೆ, ಕಲ್ಪನೆ, ಕನಸು, ಮಾತುಕತೆ, ಕಾರ್ಯ- ಈ ಒಂದೊಂದೂ ನಿರ್ಮಾಣಪರೂಪ ರೇಖೆಯ ಕಲ್ಲುಗಳಾಗುತ್ತವೆ' ಎಂಬುದು ನಮಗೆ ತಿಳಿದಿರಲಿ. 'ನಾಳೆ' 'ನಾಡಿದ್ದು' ಎಂದು ದಿನದೂಡುತ್ತಿರುವವರು ತಮ್ಮ ಕೊನೆಯ ದಿನಗಳಲ್ಲಿ ಏನು ಹೇಳಿಯಾರು ?

"ಅಯ್ಯೋ, ವ್ಯರ್ಥ ವಿಚಾರಗಳಲ್ಲೆ ನನ್ನ ಸಮಯ ಕಳೆದು ಹೋಯಿತು."

"ಎಲ್ಲ ವಿಷಯಗಳಲ್ಲೂ ಸುಲಭವಾದುದನ್ನೇ ಆರಿಸಿ ಮೋಸ ಹೋದೆ."

ಕೆಟ್ಟ ಮೇಲೆ ಬುದ್ಧಿ ಬಂದರೆ ಏನು ಪ್ರಯೋಜನ?

ಸಂತ ಪಾಲ್ ಕೊನೆಯ ದಿನಗಳಲ್ಲಿ ತನ್ನ ಜೀವನಾವಲೋಕನ ಮಾಡುತ್ತ, "ನಾನು ಒಳ್ಳೆಯ ರೀತಿಯಲ್ಲೇ ಹೋರಾಡಿದ್ದೇನೆ," ಎಂದನಂತೆ. ದೃಢ ಪ್ರಜ್ಞೆ ಹಾಗೂ ಸದ್ಗುರಿಯ ಪ್ರಭಾವದಿಂದ ಅನವರತ ಕಾರ್ಯನಿರತ-ನಾಗಿ ಕಷ್ಟಕಾರ್ಪಣ್ಯಗಳನ್ನು ಕೆಚ್ಚೆದೆಯಿಂದ ಎದುರಿಸಿ ಬದುಕಿದ ಬಾಳಿನ ಸಮೀಕ್ಷೆ ಅದು. ನೀವೂ ಆ ದಿಸೆಯಲ್ಲಿ ಹೋರಾಡಿದಲ್ಲಿ ಅಂತಿಮ ಗಳಿಗೆಯಲ್ಲಿ, 'ಸಾರ್ಥಕ ಬದುಕನ್ನು ಬಾಳಿ-ದ್ದೇನೆ' ಎಂದು ಸಂತೃಪ್ತಿಯ ನಿಟ್ಟುಸಿರು ಬಿಡುವುದು ಸುಲಭ ಸಾಧ್ಯವೆ.

ಆದರೆ ನಮಗೆ ಜೀವನದಲ್ಲಿ ಮಹತ್ವಾಕಾಂಕ್ಷೆಗಳಿಲ್ಲ- ನಿರ್ದಿಷ್ಟ ಉದ್ದೇಶಗಳಿಲ್ಲ. ನಿಯಮಗಳನ್ನನುಸರಿಸಿ ನಾವು ಕೆಲಸ ಮಾಡುತ್ತಿಲ್ಲ. ಹರಟೆ ಹೊಡೆಯಲು ಮಾತ್ರ ಇಚ್ಛೆಪಡುತ್ತೇವೆ. ಅಂತಿರುವಾಗ ನಾವು ಯಶಸ್ವಿ-ಯಾಗಬಲ್ಲೆವೇ ?

ಯಶಸ್ಸಿನ ಗುಟ್ಟು ಇಲ್ಲಿದೆ ನೋಡಿ. ಅದೇ ನಿಮ್ಮ ಸಮಯದ ಸದ್ವಿನಿ-ಯೋಗ .. ನಿಮ್ಮ ಜೀವನ ದೀರ್ಘವಾಗಿಲ್ಲವೆಂದು ಗೊತ್ತೆ ? ಉಮರ್ ಖಯ್ಯಾಮನ ನುಡಿ ಕೇಳಿದ್ದೀರಾ ?—

'ನಮ್ಮಾಯುಸ್ಸಿನ ಹಕ್ಕಿ ಹಾರ್ವ
ದೂರವೆ ಕಿರಿದು
ಅದು ರೆಕ್ಕೆ ಎತ್ತಿಹುದು ನೋಡು
ಮನ ಮಾಡು'

ಜೀವನದಲ್ಲಿ ಕಳೆದು ಹೋದ ಸಮಯ ಎಂದೆಂದೂ ಹಿಂದಿರುಗಿ ಬರಲಾರದು. ಅಂತಿ-ರುವಾಗ ಉದ್ದೇಶಹೀನ ಚರ್ಚೆಯಲ್ಲಿ

ಗೃಹಿಣಿಯರೇ !

ಸಂಬಳದ ದಿವಸ,
ನಿಮ್ಮ ಮನೆಯ ವೆಚ್ಚದ 'ಅಂದಾಜು ಪತ್ರ'ದಲ್ಲಿ
ಜೀವ ವಿಮೆಯ ಪ್ರೀಮಿಯಮ್ ತುಂಬಲು ಅವಕಾಶ ಒದಗಿಸಿರಿ

ಸಂಬಳದ ದಿನ...
ಪ್ರೀಮಿಯಮ್ ತುಂಬುವ ದಿನ

ಲೈಫ್ ಇನ್‌ಶೂರನ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ

ನಿಮ್ಮ ಜೀವ ವಿಮೆ ಬೇಕಷ್ಟು ಮೊತ್ತದಲ್ಲಿದೆಯೆ ? ನಿಮ್ಮ ಮಕ್ಕಳ ಶಿಕ್ಷಣ, ಮದುವೆ, ತೆಂಗಗಳು, ಮುಪ್ಪಿನ ವಯಸ್ಸು ಮತ್ತು ಇತರ ಅವಶ್ಯಕತೆಗಳಿಗೆ ಹಣದ ವ್ಯವಸ್ಥೆ ಮಾಡಿರುವಿರಾ ?

ನಿಮ್ಮ ಜೀವ ವಿಮೆಯ ಏಜಂಟರಾಗಲಿ, ಹತ್ತಿರದ ಎಲ್. ಐ. ಸಿ. ಕಚೇರಿಯವರಾಗಲಿ, ನಮ್ಮ ಹಲವಾರು ಯೋಜನೆಗಳನ್ನು ವಿವರಿಸಿ ಹೇಳಲು ಸಿದ್ಧರಿರುವರು.

ನೀವೇಕೆ ವ್ಯಗ್ರರಾಗಬೇಕು? "ಈ ದಿನ ಎಂದಿಗೂ ಹಿಂದಿರುಗಿ ಬರಲಾರದೆಂಬುದನ್ನು ಯೋಚಿಸು." ಎಂದು ಡಾಂಟೆ ಸಾರಿದ. ಈದಿನ ಮಾತ್ರ ನಮ್ಮ ಅಮೂಲ್ಯ ಸೊತ್ತು. ಓಸ್ಲರ್ ಹೇಳಿದಂತೆ ! ನಾವು ಈಗಿಂದೀಗ ಜಾಗ್ರರಾಗದಿದ್ದರೆ ಮತ್ತೆ ಪಶ್ಚಾತ್ತಾಪ ಪಡಬೇಕಾಗುವುದು ಸತ್ಯ. ಭೂತ ಭವಿಷ್ಯಗಳ ಚಿಂತೆಯನ್ನು ಸಂಪೂರ್ಣವಾಗಿ ಮರೆತು ಈ ಒಂದು ದಿನವನ್ನು ಸರ್ವಪ್ರಯತ್ನದಿಂದಲೂ ಯಶಸ್ವಿಯಾಗಿ ಬದುಕಲು ದಿನದಿನವೂ ಯತ್ನಿಸೋಣ. ಪ್ರತಿಯೊಂದು ದಿನವನ್ನೂ ಇದು ಕೊನೆಯ ದಿನವೋ ಎಂಬಂತೆ ತಿಳಿದು ಸಾಧ್ಯವಾದಷ್ಟು ಉತ್ತಮ ರೀತಿಯಿಂದ ಕಾರ್ಯಮಗ್ನರಾಗಿ ದುಡಿಯೋಣ. ಆಗಲೇ ನಮ್ಮ ಬಾಳಿಗೆ ಹುರುಪು—ಹೊಸತನ ಬೆಳಕು ಬಂದೀತು; ಯಶಸ್ಸು ನಮ್ಮ ಪಾಲಿಗೆ ಪ್ರಾಪ್ತವಾದೀತು.

ಗುರಿಯಷ್ಟೇ ಅದನ್ನು ಹೊಂದುವ ಮಾರ್ಗದ ಕಡೆಗೂ ನಾವು ಗಮನ ಕೊಡಬೇಕು. ಸ್ವಾಮಿ ವಿವೇಕಾನಂದರಂತೆ, "ಆದರ್ಶದ ಕಡೆಗೇ ನಮಗೆ ಹೆಚ್ಚು ಸೆಳೆತ. ಇದೇ ನಮ್ಮ ಜೀವನದ ಅತಿ ದೊಡ್ಡ ದೋಷ. ಗುರಿಯು ನಮಗೆ ಎಷ್ಟು ಹೆಚ್ಚು ಆಕರ್ಷಕವೂ ಮೋಹಕವೂ ಮನಸ್ಸಿನ ಪರಿಧಿಯಲ್ಲಿ ಬೃಹದಾಕಾರವಾಗಿಯೂ ಆಗುವುದೆಂದರೆ, ಸಣ್ಣ ಪುಟ್ಟ ವಿಷಯಗಳ ಕುರಿತು ನಾವು ಸಂಪೂರ್ಣ ಅಲಕ್ಷ್ಯರಾಗುತ್ತೇವೆ."

ಸೋಲು ಬಂದಾಗ ನಾವದನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸಿದರೆ ಶೇ. ೯೦ ಬಾರಿಯೂ ನಾವು ಗುರಿಯನ್ನು ಹೊಂದುವ ಮಾರ್ಗದತ್ತ ಗಮನವಿತ್ತಿಲ್ಲ ಎಂಬುದನ್ನು ಕಂಡುಕೊಳ್ಳುವೆವು. ಕೇವಲ ಗುರಿಯನ್ನೇ ಮೊಲಕು ತಾಕಿ ಮನಸಿನಲ್ಲಿ ಮಂಡಿಗೆ ತಿನ್ನುವವರು ನಾವು. ಅದನ್ನು ಪಡೆಯುವ ಮಾರ್ಗವನ್ನು ಬಲಗೊಳಿಸುವ- ಅದನ್ನು ಸಂಪೂರ್ಣ ಮಾಡುವುದರ ಕಡೆಗೇ ನಮ್ಮ ಗಮನವಿರಬೇಕಾದುದು ಅತ್ಯವಶ್ಯಕ. ನಾವು ಯಾವ ಕೆಲಸವನ್ನೇ ಮಾಡಲಿ- ಅದನ್ನು ಪೂರ್ಣ ಮನಸ್ಸಿನಿಂದ ಪೂರ್ಣ ಶಕ್ತಿಯನ್ನುಪಯೋಗಿಸಿ ಮಾಡಬೇಕೆಂಬುದನ್ನು ಸರ್ವಥಾ ಮರೆಯಬಾರದು.

ಸಣ್ಣಪುಟ್ಟ ಕೆಲಸಗಳೆಂದಾಕ್ಷಣ ನಾವು ಬೇಸರ ಪಟ್ಟುಕೊಳ್ಳುತ್ತೇವೆ. ಆದರೆ 'ದೊಡ್ಡ ಮನುಷ್ಯನು ಚಿಲ್ಲರೆ ವಿಷಯಗಳಲ್ಲೂ ದೊಡ್ಡತನದಿಂದ ನಡೆದುಕೊಳ್ಳುತ್ತಾನೆ'ಬ ಮಾತನ್ನು ನೀವು ಕೇಳಿದ್ದೀರಾ? ಸಣ್ಣಪುಟ್ಟ ವಿಷಯಗಳನ್ನಾತ ಎಂದೆಂದೂ ಅಲಕ್ಷಿಸುವುದಿಲ್ಲ. ಸಾವಿರಾರು ಪುಟಗಳ ಗ್ರಂಥವನ್ನು ಒಮ್ಮಿಂದೊಮ್ಮೆಗೇ ಬರೆಯಲಾಗುತ್ತದೆಯೇ? ಒಂದೊಂದೇ ವಾಕ್ಯ ಸೇರಿ ಬೃಹತ್ ಗ್ರಂಥವಾಗುವುದಿಲ್ಲವೇ? ಬರೆಹಗಾರನು ತನ್ನ ಮಸಿ ಕುಡಿಕೆ ಮತ್ತು ಲೇಖನಿಯನ್ನು ಇರಿಸಿಕೊಂಡ ಬಗೆಯಿಂದಲೇ ಅವನ ಯೋಗ್ಯತೆಯನ್ನು ಗುರುತಿಸಬಹುದೆನ್ನುವ ಮಾತಿದೆ. ಅತಿ ಚಿಕ್ಕ ಕೆಲಸವನ್ನು ಮಾಡುವ ರೀತಿಯನ್ನು ಕಂಡೇ ವ್ಯಕ್ತಿಯೊರ್ವನ ಕಾರ್ಯ ಸಾಮರ್ಥ್ಯವನ್ನೂ ಅವನ ನಡತೆಯನ್ನೂ ತಿಳಿದುಕೊಳ್ಳಬಹುದು.

ಪ್ರತಿಯೊಬ್ಬ ಮನುಷ್ಯನ ಕೆಲಸ ಅವನ ವ್ಯಕ್ತಿತ್ವದ ಸಾಕ್ಷಿಚಿತ್ರ. ಸೋಮಾರಿಯೂ, ಚಂಚಲಚಿತ್ತನೂ ಆದ ವ್ಯಕ್ತಿ ಅತ್ಯಂತ ಸುಲಭ ಹಾಗೂ ಸರಳವಾದ ಕೆಲಸವನ್ನು ಅವ್ಯವಸ್ಥಿತ ರೀತಿಯಲ್ಲಿ ಮಾಡಿ ಮುಗಿಸುತ್ತಾನೆ. ನಾವು ಸಣ್ಣ ಪುಟ್ಟ ಕೆಲಸಗಳನ್ನೆಂದಿಗೂ ಅಲಕ್ಷಿಸಬಾರದು. ಅವುಗಳನ್ನು ಒಳ್ಳೆಯ ರೀತಿಯಿಂದ ಮಾಡಿದರೆ ಅವೇ ನಮ್ಮನ್ನು ಮುಂದೆ ಮಹತ್ವದ ಕೆಲಸಕ್ಕೆ ಒಯ್ಯುತ್ತವೆ.

ಕೆಲಸ ಮಾಡುವ ಆವೇಶದಲ್ಲಿ ಅವಸರಕ್ಕೆ ಬಲಿ ಬೀಳದಿರಿ. 'ಅಯ್ಯೋ, ಸಮಯವಿಲ್ಲ,' 'ಬೇಗ ಬೇಗನೆ' ಎನ್ನುವ ಪಲ್ಲವಿಯನ್ನು ಹಾಡುತ್ತಲೇ ಇರಬೇಡಿ. ಅವಸರ ಗಡಿಬಿಡಿ ನಿಮ್ಮ ಮನಸ್ಸನ್ನು ಬಳಲಿಸಿ ದೇಹವನ್ನು ಸವೆಯಿಸೀತು; ನೀವು ನರದೌರ್ಬಲ್ಯಕ್ಕೆ ತುತ್ತಾಗಿ ನರಳಬೇಕಾದ ದುಃಸ್ಥಿತಿ ಬಂದೊದಗೀತು.

ಕೆಲಸಗಳನ್ನು ಹೇಗಾದರೂ ಮಾಡಿ ಮುಗಿಸಬೇಕೆಂದಾಗಲಿ, ಈಗಿಂದೀಗಲೇ ಮಾಡು

ಫಾಸ್ಫೋಮಿನ್ ಅಯರ್ನ್


ಕುಟುಂಬದ ಎಲ್ಲರಿಗಾಗಿ...
ಪ್ರೀತಿ, ಆನಂದ, ಆರೈಕೆ



ಮತ್ತು ನಿಮಗಾಗಿ...

ಫಾಸ್ಫೋಮಿನ್ ಅಯರ್ನ್

ಸ್ತ್ರೀಯರಿಗಾಗಿ ವಿಶೇಷವಾಗಿ
ತಯಾರಿಸಲ್ಪಟ್ಟ ಟಾನಿಕ್





ಇದು ಆರೋಗ್ಯವಂತ ಕೆಂಪು ರಕ್ತಕಣಗಳನ್ನು ತಯಾರಿಸಲು ಸಹಕರಿಸುತ್ತದೆ...ಶಕ್ತಿ ನೀಡುತ್ತದೆ. ದೇಹದಾರ್ಢ್ಯವನ್ನು ಹೆಚ್ಚಿಸುತ್ತದೆ, ದೇಹದ ರೋಗನಿರೋಧಕ ಶಕ್ತಿಯನ್ನು ಬಲಪಡಿಸುತ್ತದೆ.

ಫಾಸ್ಫೋಮಿನ್ ಅಯರ್ನ್ ಪ್ರತಿದಿನ ತೆಗೆದುಕೊಳ್ಳಿರಿ.

SARABHAI CHEMICALS LTD.

Shilpi SC 3A/76

ವಿಷಯ ಅನುಭವಿಸಿರುವುದನ್ನು ಗಣಿ ಕೇಳಿಸಿ ಕೊಡಿ. ಗಾಬರಿಗೊಂಡ ಮನಸ್ಸಿನ ವ್ಯಕ್ತಿ ಸ್ಪಷ್ಟ ನಿರ್ಧಾರ, ಪರಿಹಾರಗಳ ವಿಚಾರ ಮಾಡಲಾರ. ಗಾಬರಿ ಬೇಡಿ. ಮೌನವಾಗಿದ್ದು ನಿಮ್ಮ ಸಮಸ್ಯೆಯ ಬಗೆಗೆ ಯೋಚಿಸಿ. ದೃಢ ನಿಶ್ಚಯ ಹಾಗೂ ಸ್ಪಷ್ಟತೆ ನಿಮ್ಮಲ್ಲಿರಲಿ, ಶಾಂತರಾಗಿ ಕಾರ್ಯೋನ್ಮುಖರಾಗಿ. ಎಲ್ಲವೂ ಒಂದೇ ದಿನದಲ್ಲಿ ಸಾಧ್ಯವಾಗಬೇಕೆಂಬ ಒಣಜಂಭವನ್ನು ನೀವು ತೋರಿದ್ದರೆ ನಿಮ್ಮಿಂದ ಏನನ್ನೂ ಸಾಧಿಸಲಾಗದ ಸ್ಥಿತಿಯಲ್ಲೇ ಉಳಿಯಬೇಕಾದೀತು. ಖಚಿತ ಸತ್ಯ. ಕ್ರಮವಾಗಿ ಕೆಲಸ ಮಾಡುತ್ತ, ಮಾಡುತ್ತ ನೀವು ಕಾರ್ಯಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬಲ್ಲಿರಿ. ಆಲಸಿಗಳಾಗುತ್ತ ಬದುಕಿದರೆ ನೀವು ಇನ್ನೂ ಹೆಚ್ಚು ಆಲಸಿಗಳಾಗಬಲ್ಲಿರಿ.

ಸತ್ತ ಮೇಲೆ ಜೀವಾತ್ಮನ ಅವಸ್ಥೆಯ ಕುರಿತು ಪುರಾಣಗಳು ಹಲವು ಕತೆಗಳನ್ನು ಹೇಳುತ್ತವೆ. ಈ ಲೋಕದಲ್ಲಿ ಆತ ಮಾಡಿದ ಅನಾಚಾರದಿಂದ ನರಕಯಾತನೆ ಅವನಿಗೆ ಪ್ರಾಪ್ತವೆಂಬ ವಿಚಾರ ಕೇಳಿಲ್ಲವೆ? ಅದಕ್ಕಿಂತಲೂ ಭೀಕರವಾದ ಯಮಯಾತನೆಯನ್ನು ನಾವಿಲ್ಲಿ ಅನುಭವಿಸಬೇಕಾಗುತ್ತದೆಂದು ಜೇಮ್ಸ್ ಹೇಳಿದ– "ತಪ್ಪು ದಾರಿಯಲ್ಲಿ ನಡೆಯುವ ಅಭ್ಯಾಸದಿಂದ ಈ ಜಗತ್ತಿನಲ್ಲಿ ನಾವು ನಿರ್ಮಿಸಿಕೊಳ್ಳುವ ನರಕ ಪುರಾಣಗಳು ಹೇಳುವ ನರಕಕ್ಕಿಂತ ಕನಿಷ್ಠವಾದುದಲ್ಲ." ಎಂದು ಆತ ಸಾರಿದ. ಹೌದು, ಪುರಾಣಗಳು ಹೇಳುವ ನರಕಕ್ಕಿಂತಲೂ ನಮ್ಮ ದುರ್ನಡತೆಗಳಿಂದ ನಾವೇ ನಿರ್ಮಿಸಿಕೊಳ್ಳುವ ನರಕ ಹೆಚ್ಚು ಭಯಾನಕವಾದುದು. ಎಷ್ಟೊಂದು ವಾಸ್ತವಿಕವಾದ ನುಡಿ ಇದಲ್ಲವೇ? ನಮ್ಮ ನರಕದ ಸೃಷ್ಟಿಕರ್ತರೂ ನಾವೇನೇ ಹಾಗಾದರೆ!?

ಹಿಂದೆ ಮಾಡಿದ ಸಾಲವನ್ನು ಮರು ತೀರಿಸಬಹುದು. ಅರ್ಧ ಕಟ್ಟಿ ಆರಂಭಿಸಿದ ಕಟ್ಟಡವನ್ನು ಕೂಡ ಪೂರೈಸಬಹುದು. ಆದರೆ ನಿಮ್ಮ ಹಸಿವು ನೀರಡಿಕೆಗಳನ್ನು ನೀವೇ ಪರಿಹರಿಸಿಕೊಳ್ಳಬೇಕಲ್ಲವೆ? ಅಂತೆಯೇ ನಿಮ್ಮ ಸಮಸ್ಯೆಗಳಿಗೆ ನೀವೇ ಉತ್ತರ ಹುಡುಕಿಕೊಳ್ಳಬೇಕು. ಇತರರೇನೋ ನಿಮಗೆ ಮಾರ್ಗದರ್ಶನ ನೀಡಬಹುದು; ಆದರೆ ಆ ಮಾರ್ಗದಲ್ಲಿ ಮನಸ್ಸು ಮಾಡಿ ಮುನ್ನಡೆಯಬೇಕಾದವರು ನೀವು. ನೀವೇ. ಆಗ ಮಾತ್ರವೇ ನಿಮ್ಮ ಬಾಳಿಗೊಂದು ಸಾರ್ಥಕತೆ ಬಂದೀತು. ವ್ಯವಸ್ಥಿತ ಜೀವನವನ್ನು ನಡೆಸುವ ನೀವು ಭಾಗ್ಯಶಾಲಿಗಳಾಗಬಲ್ಲಿರಿ...

'ಒಳಿತೋ ಕೆಡುಕೋ ನಿಮ್ಮ ಅದೃಷ್ಟವನ್ನು ನೀವೇ ರೂಪಿಸಿಕೊಳ್ಳುತ್ತೀರಿ' ಎಂಬ ಗಾದೆ ಮಾತೊಂದಿದೆ. ಆದುದರಿಂದ ಒಳ್ಳೆಯ ಯೋಚನೆ ಮಾಡಿ. ಅದು ನಿಮ್ಮಿಂದ ಒಳ್ಳೆಯ ಕೆಲಸಕ್ಕೆ ಪ್ರೇರೇಪಣೆ ನೀಡೀತು. ಒಳ್ಳೆಯ ಕೆಲಸದಿಂದ ಒಳ್ಳೆಯ ಅಭ್ಯಾಸ ನಿಮಗೆ ಪ್ರಾಪ್ತವಾದೀತು. ಒಳ್ಳೆಯ ಅಭ್ಯಾಸ ಒಳ್ಳೆಯ ನಡತೆಯನ್ನೇ ನಿಮಗೊದಗಿಸೀತು. ಒಳ್ಳೆಯ ನಡತೆಯಿಂದ ನಿಮ್ಮ ಅದೃಷ್ಟ ಒಳ್ಳೆಯದಾಗಿ ನಿಮ್ಮ ಸರ್ವತೋಮುಖ ಏಳ್ಗೆ ಆಗಲೇಬೇಕು.

ನಿಮ್ಮ ವ್ಯಕ್ತಿತ್ವ ಹಾಗೂ ಭವಿಷ್ಯ ಜೀವನವು ಇಂದು ನೀವು ರೂಪಿಸಿಕೊಳ್ಳುವ ಅಭ್ಯಾಸ ನಿಯಮಗಳನ್ನೇ ಅವಲಂಬಿಸಿದೆ. ಒಳ್ಳೆಯ ಅಭ್ಯಾಸಗಳನ್ನು ಕಲಿತು ಬಂಗಾರದ ಬದುಕನ್ನು ಬಾಳಿ, ಜೇನು ಜೀವನದ ಸವಿ ಊಟ ಮಾಡಿ. ಜೀವನದಲ್ಲಿ ಕ್ರಮಬದ್ಧತೆಯ ನಿಯಮವನ್ನನುಸರಿಸಲು ಕಷ್ಟಪಟ್ಟಾದರೂ ಸರಿ, ಪ್ರಯತ್ನಪಡಿ. ದಿನದ ಪ್ರತಿಯೊಂದು ಗಂಟೆಗೂ ಸಂಬಂಧಿಸಿದ ಕಾರ್ಯಕ್ರಮಗಳನ್ನಿಟ್ಟುಕೊಳ್ಳಿ. ಆ ಸಮಯದಲ್ಲಿ ನಿಮ್ಮ ಇದಿರಿರುವ ವಿಷಯದ ಹೊರತು ಬೇರೇನನ್ನೂ ಯೋಚಿಸದೆ ಏಕಾಗ್ರತೆಯಿಂದ ಕೆಲಸಮಾಡಿ. ಅಭ್ಯಾಸದಿಂದ ನಿಮ್ಮ ಮನಸ್ಸು ದೃಢವಾಗಬಲ್ಲುದು. ತಿರುಗಿ ತಿರುಗಿ ಅದೇ ಒಂದೇ ಕೆಲಸವನ್ನು ಮಾಡುತ್ತಿದ್ದರೆ ಅಭ್ಯಾಸವಾಗುವುದರಿಂದ ಸುಲಭದಲ್ಲಿ ನಿಮ್ಮ ಮನಸ್ಸಿನಲ್ಲದು ನೆಲೆ ನಿಲ್ಲುತ್ತದೆ. ಕ್ರಮಬದ್ಧವಾದ ಜೀವನ ಸುಖದ ಸೋಪಾನ–ಇನ್ನುವುದನ್ನು ಮಾತ್ರ ಮರೆಯದಿರಿ.

ನಮ್ಮ ಭವಿಷ್ಯದ ನಿರ್ಮಾತೃ ಯಾರು?

ಮನುಷ್ಯನು ತನ್ನ ಜೀವನವನ್ನು ತಾನೇ ರೂಪಿಸಿಕೊಳ್ಳುತ್ತಾನೆಯೇ? 'ತೇನ ವಿನಾ ತೃಣಮಪಿ ನ ಚಲತಿ' ಎನ್ನುತ್ತ ಒಂದು ಹುಲ್ಲುಕಡ್ಡಿಯೂ ಭಗವಂತನ ಕೃಪೆಯಿಲ್ಲದೆ ಅಲುಗಾಡದು ಎನ್ನುವ ವಿಧಿವಾದಿಗಳಿದ್ದಾರೆ. ಸ್ವಪ್ರಯತ್ನದಿಂದ ಸರ್ವವೂ ಸಾಧ್ಯವೆನ್ನುವ ಪೌರುಷವಾದಿಗಳಿದ್ದಾರೆ. ಮನುಷ್ಯನು ಪರಿಸ್ಥಿತಿಯ ದಾಸ ಎನ್ನುವುದು ಕೆಲವರ ಮತ. ತನ್ನ ವ್ಯಕ್ತಿತ್ವದ ಪ್ರಭಾವದಿಂದ ಪರಿಸ್ಥಿತಿಯನ್ನೇ ಬದಲಿಸಬಲ್ಲ ಸಾಮರ್ಥ್ಯ ಮಾನವನಿಗಿದೆ ಎನ್ನುವುದು ಇತರರ ವಾದ. ಸ್ವಪ್ರಯತ್ನ ಮತ್ತು ವಿಧಿ—ಇವು ರಥದ ಎರಡು ಗಾಲಿಗಳಂತೆ, ಕತ್ತರಿಯ ಎರಡು ಅಲಗುಗಳಂತೆ ಎಂದು ಹೇಳುವವರೂ ಇದ್ದಾರೆ.

'ಹಣೆಯ ಬರಹ,' 'ಗ್ರಹಗತಿ,' 'ಕರ್ಮಫಲ'—ಇವು ನಾವು ಯಾವುದೇ ಕಾರ್ಯದಲ್ಲಿ ಸೋತಾಗ ಹೇಳುವ ಮಾತುಗಳು. ತಾತ್ವಿಕ ದೃಷ್ಟಿಯಿಂದಿವುಗಳಿಗೆ ಏನೇ ಅರ್ಥವಿರಲಿ, ನಮ್ಮ ಬದುಕನ್ನು ಮೌಲ್ಯಯುತವನ್ನಾಗಿ ಮಾಡಲು ನಾವು ಹೋರಾಡಲೇಬೇಕು. ಸಾಹಸದಿಂದ ಮುನ್ನುಗ್ಗಲೇಬೇಕು ಸ್ವಪ್ರಯತ್ನದಲ್ಲಿ ವಿಶ್ವಾಸವಿಟ್ಟು ಶ್ರದ್ಧೆಯಿಂದ ದುಡಿಯಲೇಬೇಕು. 'ಆರರ ವರೆಗೆ ಮನುಷ್ಯ ಪ್ರಯತ್ನ, ಏಳನೆಯದು ದೈವ ಕೃಪೆ' ಎಂಬ ಮಾತೊಂದಿದೆ. ಸಾಧನೆಯಿಲ್ಲದೆ, ಉತ್ಸಾಹವಿಲ್ಲದೆ, ಅವಿರತ ಪರಿಶ್ರಮವಿಲ್ಲದೆ ಈ ಪ್ರಪಂಚದಲ್ಲಿ ಯಾರಾದರೂ ಉನ್ನತಿ ಹೊಂದಿದ್ದಾರೆಯೇ? ಕೀರ್ತಿ ಪಡೆದಿದ್ದಾರೆಯೇ?

ಯೋಗವಾಸಿಷ್ಠದಲ್ಲಿ ಸ್ವಪ್ರಯತ್ನದ ಕುರಿತು ಮುತ್ತಿನಂತಹ ಮಾತುಗಳನ್ನು ಹೇಳಿದೆ. "ಸರಿಯಾದ ಮತ್ತು ಉತ್ಸಾಹಪೂರಿತ ಪ್ರಯತ್ನದಿಂದ ಪಡೆಯಲಸಾಧ್ಯವಾದ ವಸ್ತು ಯಾವುದೂ ಈ ಪ್ರಪಂಚದಲ್ಲಿಲ್ಲ—ಯಾರಾದರೂ ಯಾವುದೇ ವಸ್ತುವನ್ನು ಪಡೆಯಲು ಆಶಿಸಿ ಅದನ್ನು ಹೊಂದಲು ಯತ್ನಿಸಿದುದೇ ಆದರೆ ಖಂಡಿತವಾಗಿಯೂ ಅವರು ಸಫಲರಾಗಬಲ್ಲರು. ಆದರೆ ಹಿಡಿದ ದಾರಿಯಲ್ಲಿ ಹಿಂದೆಟು ಹಾಕದೆ ಮುಂದುವರಿಯುತ್ತಲೇ ಸಾಗಬೇಕು."

"ಈ ಪ್ರಪಂಚದಲ್ಲಿ ಹಲವು ಮಂದಿ ಅತ್ಯಂತ ನಿಮ್ನ ಪರಿಸ್ಥಿತಿಗಳಿಂದ, ದುಃಖ ದಾರಿದ್ರ್ಯಗಳಿಂದ ಪಾರಾಗಿ ಪರಮ ಭಾಗ್ಯಶಾಲಿಗಳಾದರು. ಬುದ್ಧಿಶಾಲಿಗಳಾದವರು ಪ್ರಯತ್ನ ಮಾತ್ರದಿಂದಲೇ ಅತ್ಯಂತ ಅಪಾಯಕರ ಸನ್ನಿವೇಶಗಳನ್ನು ದಾಟಿ ಜಯಶಾಲಿಗಳಾದರಲ್ಲದೆ ಅದೃಷ್ಟದಲ್ಲಿ ಅರ್ಥಹೀನ ನಂಬಿಕೆಯನ್ನಿಟ್ಟಿಲ್ಲ. ಯಾರು ಯಾವುದಕ್ಕಾಗಿ ಹಾತೊರೆದಿದ್ದನೋ ಯಾವುದನ್ನು ಪಡೆಯುವುದಕ್ಕಾಗಿ ಹೋರಾಡಿದ್ದನೋ ಅದನ್ನು ಪಡೆದೇ ಪಡೆಯುತ್ತಾನೆ—ಸೋಮಾರಿಯಾಗಿ ಕುಳಿತು ಯಾರೂ ಏನನ್ನೂ ಸಾಧಿಸಿಲ್ಲ. ಪ್ರತಿಯೊಬ್ಬನೂ ತನಗೆ ತಾನೇ

ಶತ್ರು ಅಥವಾ ಮಿತ್ರ ಎಂಬುದನ್ನು ತಿಳಿದುಕೊಳ್ಳಬೇಕು. ಯಾರು ತನ್ನನ್ನು ತಾನು [illegible] ಅವನನ್ನು ರಕ್ಷಿಸುವವರು ಯಾರೂ ಇರಲಾರರು. [illegible] ಸನ್ನಿವೇಶಗಳಿಂದ ಪಾರಾಗಬಲ್ಲನು. ಆದುದರಿಂದ ಪ್ರತಿಯೊಬ್ಬನೂ [illegible] ಮಾರ್ಗದಲ್ಲಿ [illegible] ಧೈರ್ಯ, [illegible] ಸಾಹಸಗಳು, ಜ್ಞಾನಗಳು [illegible] ವಿಧಿಯನ್ನು [illegible] ತಿರಲಿಲ್ಲ.

"ಅದೃಷ್ಟದ ಕಲ್ಪನೆ ಅನಗತ್ಯವಾದುದು— ಕಾರಣ, ನಾವು ಯಾವ ಕಡೆ ನೋಡಿದರೂ ಪ್ರಯತ್ನಶೀಲತೆ ಹಾಗೂ ಚಟುವಟಿಕೆಯು ಫಲಪ್ರದವಾದುದನ್ನು ಕಾಣುತ್ತೇವೆಯೋ ಹೊರತು ಕರ್ಮಹೀನತೆಯನ್ನಲ್ಲ— ಕರ್ಮಶೀಲತೆ ಸಂಪೂರ್ಣವಾಗಿ ಮಾಯವಾದ ಕಡೆಯಲ್ಲಿ ಅದೃಷ್ಟದಿಂದ ಏನಾದರೂ ಸಂಭವಿಸಿದುದನ್ನು ನಾವು ಎಂದೂ ಪರಿಶೀಲಿಸಿಲ್ಲ— ಅದೃಷ್ಟ ಏನನ್ನೂ ಮಾಡುವುದಿಲ್ಲ— ನಮ್ಮ ಕಲ್ಪನೆಯಲ್ಲಿ ಮಾತ್ರವೇ ಅದೃಷ್ಟಕ್ಕೆ ಅಸ್ತಿತ್ವ. ಅದೃಷ್ಟಕ್ಕೆ ತನ್ನದೇ ಆದ ಅಸ್ತಿತ್ವವಿಲ್ಲ.

"ಅದೃಷ್ಟವೆಂದರೆ ನಾವು ಆಗಲೇ ಮಾಡಿದ ಕಾರ್ಯಗಳ ಒಳ್ಳೆಯ ಅಥವಾ ಕೆಟ್ಟ ಫಲಗಳ ಹೊರತು ಬೇರೇನೂ ಅಲ್ಲ— ಒಬ್ಬನ ಸ್ವಪ್ರಯತ್ನದ ಫಲವಾಗಿ ಯಾವುದು ಸಂಭವನೀಯವೋ ಅದನ್ನೇ ನಾವು ಅದೃಷ್ಟವೆನ್ನುತ್ತೇವೆ- ಒಬ್ಬ ವ್ಯಕ್ತಿಯ ಪ್ರಯತ್ನವನ್ನೇ ಹೊಂದಿದೆ ಆತನ [illegible]."

"ಮಹತ್ಕಾರ್ಯಗಳು ಶಕ್ತಿ ಬಲದಿಂದಲ್ಲ ನಿರಂತರ ಪರಿಶ್ರಮದಿಂದ ಸಾಧ್ಯವಾಗಿವೆ." ಎಂದು ಡಾ. ಸ್ಯಾಮ್ಯುಯಲ್ ಜಾನ್ಸನ್ ಹೇಳಿದ್ದಾರೆ. 'ಸಾಧಿಸಿದರೆ ಸಬಳ ನುಂಗಬಹುದು' ಎಂಬ ಗಾದೆ ಮಾತನ್ನು ಕೇಳದವರೇ ಇಲ್ಲಿಕ್ಕಿಲ್ಲ. ಕಾರ್ಲೈಲ್ ಹೇಳಿದಂತೆ, "ಹಿಡಿದ ಕೆಲಸವನ್ನು ಪರಿಪೂರ್ಣಗೊಳಿಸುವ ದೃಢ ನಿರ್ಧಾರವೇ ಬಲಿಷ್ಠನಿಗೂ ದುರ್ಬಲನಿಗೂ ಇರುವ ಅಂತರವನ್ನು ಸೂಚಿಸುತ್ತದೆ."

ಮನಸ್ಸಿದ್ದಲ್ಲಿ ಮಾರ್ಗವಿದೆಯಲ್ಲವೇ? ಪ್ರಯತ್ನಿಸಿದರೆ ಅಸಾಧ್ಯ ಯಾವುದೂ ಇಲ್ಲ ಎಂಬುದಕ್ಕೆ ಡಿಮೋಸ್ತನೀಸ್‌ನ ಉದಾಹರಣೆಯೊಂದೇ ಸಾಕು. ಆತ ಕ್ರಿ. ಪೂ. ೩೮೪ ರಲ್ಲಿ ಗ್ರೀಸ್ ದೇಶದಲ್ಲಿ ಜನಿಸಿದಾಗ ಜ್ಯೋತಿಷ್ಯರು ಆತ ಸಾಮಾನ್ಯ ಮನುಷ್ಯನಾಗಿ ಬಾಳುವನೆಂದು ಭವಿಷ್ಯ ನುಡಿದಿದ್ದರು. ಉಗ್ಗು ದನಿಯ ಕುಗ್ಗು ನುಡಿಯ ಹುಡುಗನಾದ ಆತ ಬಾಲ್ಯದಿಂದಲೇ ನಿಶ್ಯಕ್ತನಾಗಿದ್ದು ನಿತ್ಯ ರೋಗಿಯಾಗಿದ್ದ. ಚಿಕ್ಕಂದಿನಲ್ಲೇ ಅವನ ತಂದೆಯೂ ತೀರಿ ಹೋಗಿದ್ದ. ಅವನ ಚಿಕ್ಕಪ್ಪ ಅವನಿಗೆ ಸಿಗಬೇಕಾಗಿದ್ದ ಆಸ್ತಿಯನ್ನೆಲ್ಲ ಕಬಳಿಸಿಬಿಟ್ಟಿದ್ದ. ಈ ಅನ್ಯಾಯದ ವಿರುದ್ಧ ಡಿಮೋಸ್ತನೀಸ್ ನ್ಯಾಯಾಲಯದ ಮೊರೆ ಹೋದನು ಅಲ್ಲಿ ಜಯ ಪಡೆಯದಾದ. ನಿರಾಶನಾದ ಆತನ ಮನಸ್ಸಿಗೆ ಆಗ ಹೊಳೆದದ್ದು ಆ ಕಾಲದ ಪ್ರಸಿದ್ಧ ಗ್ರೀಕ್ ವಾಗ್ಮಿಯೊಬ್ಬನ ವಾಕ್ ಚಾತುರ್ಯ ಕೇಳಿ ಮೋಹಗೊಂಡ ಜನತೆ ಅವನಿಗೆ ತೋರಿಸಿದ ಗೌರವಾದರಗಳ ಸುರಿಮಳೆಯ ವಿಚಾರ! ತಾನೂ ವಾಗ್ಮಿಯಾಗಬೇಕೆಂದು ಡಿಮೋಸ್ತನೀಸ್ ದೃಢ ಸಂಕಲ್ಪ ಮಾಡಿದ. ಅವನ ಮಾತನಾಡಲಾರಂಭಿಸಿದರೆ ಉಗ್ಗು ಅವನನ್ನು ಬಾಧಿಸುತ್ತಿತ್ತು. ಒಬ್ಬ ವೈದ್ಯನ ಸಲಹೆಯಂತೆ ನಾಲಿಗೆಯ ಮೇಲೆ ಬೆಣಚು ಕಲ್ಲುಗಳನ್ನಿಟ್ಟು ಸ್ಪಷ್ಟವಾಗಿ, ಗಟ್ಟಿಯಾಗಿ ಶಬ್ದಗಳನ್ನು ಉಚ್ಚರಿಸತೊಡಗಿದ. ಎತ್ತರವಾದ ದಿಬ್ಬಗಳನ್ನೇರಿ ಇಳಿಯುತ್ತ ದೀರ್ಘವಾಗಿ ಉಸಿರೆಳೆಯುವ ಅಭ್ಯಾಸವನ್ನೂ ಮಾಡಿ ಅತ್ಯಂತ ಉದ್ದವಾದ ವಾಕ್ಯಗಳನ್ನೂ ನಿರಾತಂಕನಾಗಿ ಉಚ್ಚರಿಸತೊಡಗಿದ. ಪ್ರತಿನಿತ್ಯವೂ ಸಮುದ್ರದ ಬಳಿ ನಿಂತು ಸಮುದ್ರದ ಆರ್ಭಟವನ್ನೂ ಮೀರಿಸುವ ಧ್ವನಿಯಲ್ಲಿ ಮಾತುಗಾರಿಕೆಯನ್ನು ಅಭ್ಯಸಿಸುತ್ತಿದ್ದ. ಕಾನೂನು ಗ್ರಂಥಗಳನ್ನೂ ಗ್ರೀಕ್ ಮಹಾಕಾವ್ಯಗಳನ್ನೂ ದಿನದಲ್ಲಿ ೧೬ ಗಂಟೆಗಳಿಗೂ ವಿಕ್ಕ

ಅಭ್ಯಾಸಿಸ ಬಯಸಿದ. ತನ್ನ ಈ ಶ್ರಮದ ಅಭ್ಯಾಸಕ್ಕೆ ಜನರಿಂದ ವಿಘ್ನ ಬರಬಾರದೆಂದು ತನ್ನ ತಲೆಯನ್ನು ಅರ್ಧ ಬೋಳಿಸಿ ವಿಕಾರ ಮಾಡಿಕೊಂಡು ನೆಲಮಾಳಿಗೆಯಲ್ಲಿ ಕುಳಿತಿರುತ್ತಿದ್ದ. ಪ್ರಭಾವೀ ಹಾವಭಾವ ಮತ್ತು ಅಂಗಾಭಿನಯಕ್ಕಾಗಿ ದೊಡ್ಡ ಕನ್ನಡಿಯ ಮುಂದೆ ಪ್ರತಿದಿನವೂ ನಾಟಕ ನಡೆಸುತ್ತಿದ್ದ. ಮೂರು ವರ್ಷಗಳ ಈ ಅಜ್ಞಾತ ವಾಸದಿಂದ ಹೊರಬಿದ್ದಾಗ ಆತ ಜ್ಞಾನನಿಧಿಯಾಗಿದ್ದ; ಗ್ರೀಕ್ ದೊರೆ ಫಿಲಿಪ್ ಹೇಳಿದ, "ಇಡೀ ಜಗತ್ತನ್ನೇ ಜಯಿಸಬಹುದು, ಆದರೆ ಡಿಮೋಸ್ತನೀಸನ ನಾಲಗೆಯನ್ನು ಜಯಿಸುವುದು ಅಸಾಧ್ಯ. ವಾಗ್ದೇವಿ ಅವನ ನಾಲಗೆಯಲ್ಲಿ ನಲಿದೊಲಿದು ನರ್ತಿಸುತ್ತಿದ್ದಾಳೆ"

ಯಾರೂ ಕಂಡರಿಯದ ಕಡೆಗೆ ಹಡಗನ್ನು ತಿರುಗಿಸಿ ಹೊಸ (ಅಮೇರಿಕ) ಭೂಖಂಡವನ್ನೇ ಕಂಡುಹಿಡಿದ ಕೊಲಂಬಸನ ಧೈರ್ಯ, ಶೌರ್ಯ ಹಾಗೂ ಸಾಹಸ ಎಂಥಹುದು! ಜೇಮ್ಸ್ ವಾಟ್ ೩೦ ವರ್ಷಗಳ ನಿರಂತರ ಶ್ರಮದಿಂದ ತಾನು ರಚಿಸಲು ತೊಡಗಿದ ಯಂತ್ರವನ್ನು ಪೂರ್ಣಗೊಳಿಸಿದನಂತೆ! ವಿದ್ಯುಚ್ಛಕ್ತಿಯ ಆವಿಷ್ಕಾರ ಮಾಡಿದ ಎಡಿಸನ್ ತನ್ನ ಪ್ರಯೋಗಗಳಲ್ಲಿ ೬೦೦ ಬಾರಿ ವಿಫಲನಾದ! ಆದರೂ ತಾಳ್ಮೆಯಿಂದ ಹೋರಾಟ ನಡೆಸಿ ಕೊನೆಗೂ ಯಶಸ್ವಿಯಾದ. ಸುಪ್ರಸಿದ್ಧ ವಿಜ್ಞಾನಿ ಐಸಾಕ್ ನ್ಯೂಟನ್ ವರ್ಷಗಟ್ಟಲೆ ದುಡಿದು ಸಂಶೋಧಿಸಿದ ಬರಹವನ್ನು ತನ್ನ ಅಭ್ಯಾಸ ಕೋಣೆಯ ಮೇಲಿರಿಸಿದ್ದ. ಅವನ ಸಾಕುನಾಯಿ ಉರಿಯುತ್ತಿರುವ ಬತ್ತಿಯನ್ನು ಆ ಹಾಳೆಗಳ ಮೇಲೊಮ್ಮೆ ಎಸೆಯಿತು. ನ್ಯೂಟನ್ ಅತ್ತ ಗಮನ ಹರಿಸಿದಾಗ ಅವನ ಸಂಶೋಧನಾ ಬರಹ ಸಂಪೂರ್ಣವಾಗಿ ಸುಟ್ಟು ಭಸ್ಮವಾಗಿತ್ತು! ಈ ಘಟನೆಯಿಂದಂತೂ ನ್ಯೂಟನ್

[illegible] ಕೊಂಡಿದ್ದ. ಆದರೂ ಧೃತಿಗೆಡದೆ ಮತ್ತೊಮ್ಮೆ ಅದೇ ಸುದೀರ್ಘ ಬರಹವನ್ನು ಬರೆದು ಮುಗಿಸಿಯೇ ಬಿಟ್ಟ! ದೃಢ ನಿರ್ಧಾರ, ಧ್ಯೇಯನಿಷ್ಠೆ ಮತ್ತು ಮಹಾ ತಾಳ್ಮೆಯಿಂದ ಕೂಡಿದ ಪರಿಶ್ರಮದಿಂದ ಗಾಂಧೀಜಿ ಭಾರತದಲ್ಲಿ ಅತ್ಯದ್ಭುತ ಕ್ರಾಂತಿಯನ್ನು ಮಾಡಿ 'ಮಹಾತ್ಮ' ರಾದರಲ್ಲವೇ?

ಪ್ರಕೃತಿಯು ಅತ್ಯಂತ ಭೀಷಣ ತಡೆಯೊಡ್ಡಿದ್ದರೂ ಮಹಾತ್ಮರಾದವರೆಲ್ಲ ಸ್ವಸಾಮರ್ಥ್ಯದಿಂದ, ನಿರಂತರ ಪರಿಶ್ರಮದಿಂದ, ಅಚಲ ಆತ್ಮವಿಶ್ವಾಸದಿಂದ, ಅನಂತ ತಾಳ್ಮೆಯಿಂದ, ಅಪಾರ ತ್ಯಾಗ ಮಾಡಿ ಮುನ್ನಡೆದು ಕೀರ್ತಿ ಶಿಖರವನ್ನೇರಿದುದನ್ನು ನಾವು ಕಾಣುತ್ತೇವೆ. ಅವರೆಲ್ಲರ ಗೆಲುವಿನ ಗುಟ್ಟೇನು? 'ನಿರಂತರ ಪರಿಶ್ರಮವೇ ಪರಮಪೂಜೆ' ಎಂಬ ಸತ್ಯವನ್ನು ಆಚರಣೆಗೆ ತಂದುದೇ ಅಲ್ಲವೇ?

ಚಿಂತೆಗೆಡೆಕೊಡಬೇಡಿ....

"ರಕ್ತ ಸಂಚಾರ, ಹೃದಯ, ಗ್ರಂಥಿಗಳು ಹಾಗೂ ನರಮಂಡಲ ಇವುಗಳ ಮೇಲೆ ಚಿಂತೆ ತನ್ನ ಪ್ರಬಲ ಪ್ರಭಾವವನ್ನು ಬೀರಿ ನಿಮ್ಮ ಆರೋಗ್ಯವನ್ನು ಹಾಳು ಮಾಡೀತು. ಹೆಚ್ಚಿನ ಶ್ರಮದಿಂದ ಜನರು ಸತ್ತುದನ್ನು ನಾನು ಕಂಡಿಲ್ಲ. ಆದರೆ ಭಯ- ಸಂಶಯಗಳಿಂದ ಸತ್ತು ಹೋದವರು ಹಲವು ಮಂದಿ" ಎಂದಿದ್ದರು ಡಾ. ಚಾರ್ಲ್ಸ್ ಮೇಯೊ. ಚಿಂತೆಯಿಂದುಂಟಾಗುವ ರೋಗಗಳೇನು ಒಂದೆರಡಲ್ಲ. ಜಠರದ ಹುಣ್ಣು, ಮನೋವಿಕಲತೆ, ಅಸ್ತಮಾ, ಕೀಲು ನೋವು, ಅನಿಯಂತ್ರಿತ ಭೇದಿ, ರಕ್ತ ಪ್ರವಾಹದ ತಡೆ, ಸಕ್ಕರೆ ರೋಗ, ರಕ್ತದ ಏರೊತ್ತಡ, ಹೃದಯದ ದೌರ್ಬಲ್ಯ ಮುಂತಾದುವು. ವಿಶ್ವವ್ಯಾಪಿ ಮಹಾರೋಗವಾದ ಕ್ಯಾನ್ಸರ್ ಕೂಡಾ ಈ ದಿಸೆಯಲ್ಲಿ ಉಲ್ಲೇಖನಾರ್ಹವಾದವು. "ಚಿಂತೆಯನ್ನು ದೂರಕ್ಕೆಸೆಯಲರಿಯದ ವ್ಯಾಪಾರೋದ್ಯಮಿಗಳು ಯೌವನದಲ್ಲೇ ಸಾಯುತ್ತಾರೆ," ಎಂದು ನೋಬೆಲ್ ಪ್ರಶಸ್ತಿ ವಿಜೇತ ಪ್ರಖ್ಯಾತ ವೈದ್ಯವಿಜ್ಞಾನಿ ಡಾ. ಅಲೆಕ್ಸಿಸ್ ಕೆರೆಲ್ ಹೇಳುತ್ತಾರೆ.

'ಚಿಂತೆಯನ್ನು ದೂರಕ್ಕೆಸೆಯಿರಿ' ಎಂಬ ಕೂಗು ಇಂದು ನಿನ್ನೆಯದಲ್ಲ. ಆದಿಕವಿ ವಾಲ್ಮೀಕಿಯೂ ಈ ಕುರಿತು ಎಚ್ಚರಿಕೆ ಇತ್ತಿರುವನು. "ಮನುಷ್ಯ ಚಿಂತಾಗ್ರಸ್ತನಾಗುವಂತೆ ಮಾಡಬಾರದು. ಚಿಂತೆಯಿಂದ ದೋಷವಿದೆ. ಕ್ರೋಧದಿಂದ ತುಂಬಿದ ಸರ್ಪವು ಬಾಲಕನನ್ನು ಕಚ್ಚಿ ಕೊಲ್ಲುವಂತೆ ಚಿಂತೆಯು ಮನುಷ್ಯನನ್ನು ನಾಶಮಾಡುತ್ತದೆ. ಯಾರು ನಿರುತ್ಸಾಹಿಯೂ, ದೀನನೂ, ಶೋಕಾಕುಲನೂ ಆಗಿರುವನೋ ಅವನ ಎಲ್ಲ ಕಾರ್ಯಗಳೂ ಹಾಳಾಗುತ್ತವೆ. ಅವನು ಬಹಳ ವಿಪತ್ತಿನಲ್ಲಿ ಸಿಕ್ಕಿ ಬೀಳುತ್ತಾನೆ" ಎಂಬುದಾಗಿ.

ಅಂಜಿಕೆ ನಮ್ಮೆಲ್ಲರ ಹುಟ್ಟುಗುಣ. ಪ್ರಕೃತಿದತ್ತವಾದ ಸ್ವಾಭಾವಿಕ ಭಯ ನಮ್ಮ ರಕ್ಷಣೆಗೂ ಅವಶ್ಯಕವೇ. ಆದರೆ ಅಸ್ವಾಭಾವಿಕ ಹಾಗೂ ವಿಪರೀತ ಭಯ ಸಂಶಯಗಳಿಂದಂತೂ ನಾವು ದೂರವಿರಲೇಬೇಕು. "ಭಯದ ಕಲ್ಪನೆ ನಿಮ್ಮನ್ನು ಪೀಡಿಸಿದಷ್ಟು ನಿಜವಾದ ಭಯದ ಸನ್ನಿವೇಶ ಪೀಡಿಸುವುದಿಲ್ಲ." ಎಂಬುದನ್ನು ನೆನಪಿನಲ್ಲಿಡಿ.

ಯಮ ಧರ್ಮರಾಯನ ಕತೆ ಕೇಳಿದ್ದೀರಾ? ಒಮ್ಮೆ ಆತ ತನ್ನ ದೂತರಿಗೆ ೪೦೦ ಮೃತ ಜೀವಿಗಳನ್ನು ತರಲು ಆಜ್ಞೆ ಮಾಡಿದನಂತೆ. ದೂತರು ವಿವಿಧ ರೋಗಗಳ ಅಸ್ತ್ರಗಳನ್ನು ಪ್ರಯೋಗಿಸುತ್ತ ಮುನ್ನಡೆದರಂತೆ. ಆದರೆ ೪೦೦ ರ ಬದಲು ೮೦೦ ಜೀವಿಗಳನ್ನು ಯಮನ ಬಳಿ ಕೊಂಡೊಯ್ದರಂತೆ. ರೋಷಭೀಷಣವೇಷನಾಗಿ ಯಮ ಕೇಳಿದನಂತೆ- "ಇಷ್ಟು ಮಂದಿ ಏಕೆ? ನಾನೇನು ಹೇಳಿದ್ದೆ?" ದೂತರಿಂದ ಸಾವಧಾನವಾಗಿ ಉತ್ತರ ಬಂದಂತೆ "ನಾವೇನು ಮಾಡಬೇಕು ಮಹಾಸ್ವಾಮಿ? ನಾವು ಕೊಂದುದು ಕೇವಲ ೪೦೦ ಮಂದಿಯನ್ನು ಮಾತ್ರವೆ. ಈ ಹತ್ಯೆಯನ್ನು ಕಂಡು ಬೆದರಿ ಉಳಿದ ೪೦೦ ಮಂದಿ ಭಯದಿಂದಲೇ ಪ್ರಾಣ ಬಿಟ್ಟರು..."

ಅನರ್ಥಕಾರಿ ಚಿಂತೆಯೇ ಸದಾ ನಮ್ಮನ್ನು

[illegible] ಚಿತೆ ನಿರ್ಜೀವಿಯನ್ನು ಸುಟ್ಟರೆ, ಚಿಂತೆ ಸಜೀವಿಯನ್ನು ಸುಡುತ್ತದೆಂಬುದನ್ನು ಚಿಂತೆಗೆ ಬಲಿಯಾದಾಗ ನಾವು ಮರೆಯುತ್ತೇವೆ. ವರ್ತಮಾನ ಕಾಲದ ಯೋಚನೆಗಳಿಂದ ನಾವು ಚಿಂತಿಸುವುದು ಬಹಳ ಅಪರೂಪ. ಹೆಚ್ಚಿನಂಶ ನಮ್ಮ ಮನಸ್ಸು ವಿಚಲಿಸಲ್ಪಟ್ಟಿರುವುದು ಭವಿಷ್ಯತ್ತಿನ ಅರ್ಥಹೀನ ಚಿಂತಾಸಾಗರದಿಂದಲೇ. ವ್ಯಕ್ತಿಯೊಬ್ಬನ ಚಿಂತೆಯ ವಿಧಾನವನ್ನಿಲ್ಲಿ ಚಿತ್ರಿಸಲಾಗಿದೆ ನೋಡಿ. ಅತ್ತ ಬಿರುಗಾಳಿ ಬೀಸುವಾಗ ಮನೆಯ ಮಾಡು ಹಾರಿ ಹೋದರೇನು ಗತಿ? ಎಂದು ಚಿಂತಿಸುತ್ತಿದ್ದ. ಸಿಡಿಲಿನ ಶಬ್ದ ಕೇಳಿಯೇ ತಾನು ಸಾಯುವುದು ನಿಶ್ಚಯವೆಂದು ಚೀರಿಕೊಳ್ಳುತ್ತಿದ್ದ. ಯಾವುದೋ ಪುರಾಣದ ಕತೆಗಳಲ್ಲಿ ಹೇಳಿದ ನರಕದ ಚಿತ್ರಗಳನ್ನು ನೋಡಿ ಸತ್ತ ಮೇಲೆ ಎಂಥೆಂಥ ಕಷ್ಟಗಳನ್ನೆದುರಿಸಬೇಕೋ ಎಂದು ಅಳುತ್ತಿದ್ದ. ತೋಟದಲ್ಲಿ ಕೆಲಸಗಾರರು ಹೇಳಿದ ಕೆಲಸ ಮಾಡದಿದ್ದಾಗ ಅವರನ್ನು ಗದರಿಸಲೂ ಹೆದರುತ್ತಿದ್ದ. ಹಾಗೆ ಮಾಡಿದಲ್ಲಿ ಅವರೆಲ್ಲ ಒಂದಾಗಿ ಕೂಡಿ ತನ್ನನ್ನು ಹೇಳ ಹೆಸರಿಲ್ಲದಂತೆ ಮಾಡಿಬಿಟ್ಟರೆ... ಎಂದು ಊಹಿಸಿಯೇ ನಡುಗಿ ಹೋಗುತ್ತಿದ್ದ. ಯಾವ ಹುಡುಗಿಯೂ ತನ್ನನ್ನು ಮದುವೆಯಾಗಲು ಒಪ್ಪದಿದ್ದರೆ ಏನು ಮಾಡಲಿ? ಎಂಬ ಚಿಂತೆಯೂ ಅವನನ್ನು ಬಾಧಿಸುತ್ತಿತ್ತು. ಮದುವೆಯಾದ ಬಳಿಕ ಮಾವನ ಮನೆಯವರೊಡನೆ ಹೇಗೆ ನಡೆದುಕೊಳ್ಳಬೇಕು? ಎಂದು ಈಗಿಂದಲೇ ಚಿಂತಿಸುತ್ತಿದ್ದ! ಹೆಂಡತಿಯು ತಂಗಿ ಹಳ್ಳಿಯಲ್ಲಿದ್ದು. ಇವನು ದಾರಿಯಲ್ಲಿ ಬರುವಾಗ ಪುಂಡಪೋಕರು ಇದಿರಾದರೇನು ಮಾಡುವುದು ಎಂದು ಯೋಚಿಸಿ ಕಂಗಾಲಾಗಿಬಿಡುತ್ತಿದ್ದ...!

ಇದು ಅವನೊಬ್ಬನ ವಿಚಾರವಲ್ಲ. ಹಲವರು ಈ ರೀತಿ ಕಾಲ್ಪನಿಕ ಭಯದೊಂದಿಗೆ ಗುದ್ದಾಡಿಯೇ 'ಜೀವ ಶವ'ದಂತಾಗುತ್ತಾರೆ! 'ಅಯ್ಯೋ, ಹೀಗಾಯಿತಲ್ಲಾ, ಇನ್ನೇನು ಕಾದಿದೆಯೋ!' ಎಂದು ವಿಲಪಿಸುವವರ ಸಂಖ್ಯೆ ನಮ್ಮ ಸಮಾಜದಲ್ಲೇನು ಕಡಿಮೆಯಿಲ್ಲ. ಇಂಥವರನ್ನು ಇಬ್ಬಗೆಯ ಭೂತಗಳು ಗದರಿಸುತ್ತವೆ. ಒಂದು ಗತಕಾಲದ ಭೂತ, ಇನ್ನೊಂದು ಭವಿಷ್ಯದ ಭೂತ. ಇನ್ನಾದರೂ ನೆನಪಿನಲ್ಲಿಡಿ–'ಅಂಜಿದವನಿಗೆ' ನೀವು ಯಾವುದಕ್ಕೂ ಪ್ರಯೋಜನವಿಲ್ಲ ಪ್ರಪಂಚದ ವ್ಯಥೆಗೆ ದೊಡ್ಡ ಕಾರಣವೇ ಅಂಜಿಕೆ. ಭಯವೇ ಎಲ್ಲಕ್ಕಿಂತ ದೊಡ್ಡ ಮೂಢ ನಂಬಿಕೆ...?

ಈ ಭಯದ ಭೂತವನ್ನು ನಿಮ್ಮ ಮಂಡೆಯಿಂದ ಹೊರಗೆ ಓಡಿಸಲು ಸರ್ವ

ಪ್ರಯತ್ನ ಮಾಡಿ. ಆಶೆ, ಉತ್ಸಾಹ, ಆತ್ಮವಿಶ್ವಾಸ, ಶೌರ್ಯ ಮತ್ತು ಧೈರ್ಯದ ಯೋಜನೆಗಳನ್ನು ನಿಮ್ಮ ಮಿದುಳಿನಲ್ಲಿ ತುಂಬಿಸಿ: ಆಗ ದುರ್ಬಲ ವಿಚಾರಗಳು ತಮ್ಮಿಂದ ತಾವಾಗಿಯೇ ದೂರವಾಗುತ್ತವೆ. ಪಾತ್ರೆಯೊಂದರಲ್ಲಿ ನೀವು ನೀರನ್ನು ತುಂಬಿಸುತ್ತ ಹೋದಂತೆ ಗಾಳಿಯು ತನ್ನಿಂದ ತಾನಾಗಿಯೇ ಹೊರಗೆ ಹೋಗಿ, ಕೊನೆಗೆ ಗಾಳಿ ಪೂರ್ತಿಯಾಗಿ ತೊಲಗಿ ಹೋಗಿ ನೀರು ಮಾತ್ರವೇ ಉಳಿಯುವುದಿಲ್ಲವೇ? ಅಂತೆಯೇ ಮಹಾಪುರುಷರ ಜೀವನ ಚರಿತ್ರೆಯನ್ನೋದುವುದರ ಮೂಲಕವೋ, ಅವರ ಸಾಹಸ ಕತೆಗಳನ್ನು ಕೇಳಿ ಆನಂದಪಟ್ಟೋ ನಿಮ್ಮ ಮನಸ್ಸಿನಲ್ಲಿ ಸ್ಫೂರ್ತಿಯ ಚಿಲುಮೆಗೆ ಅವಕಾಶ ಕೊಡಿ.

ನೀವು ಯಾರನ್ನಾದರೂ ದ್ವೇಷಿಸುತ್ತೀರಾ? ಅದೇ ನಿಮ್ಮ ಅತಿ ದೊಡ್ಡ ದೌರ್ಬಲ್ಯ—ಅತಿ ದೊಡ್ಡ ದೋಷ. ನೀವು ನಿಮ್ಮ ಶತ್ರುಗಳನ್ನೋ ಇತರರನ್ನೋ ದ್ವೇಷಿಸತೊಡಗಿದಾಗ ನಿಮ್ಮ ಮೇಲೆ ಅಧಿಕಾರ ಚಲಾಯಿಸುವ ಪೂರ್ಣ ಹಕ್ಕನ್ನು ಅವರಿಗೆ ಬಿಟ್ಟುಕೊಡುತ್ತೀರಿ. ನಿಮ್ಮ ನಿದ್ರೆ, ಹಸಿವೆ, ಆರೋಗ್ಯ, ಆನಂದ—ಇವುಗಳ ಮೇಲೆ ಅವರು ಸಂಪೂರ್ಣ ಅಧಿಕಾರ ಚಲಾಯಿಸತೊಡಗುತ್ತಾರೆ. ನಿಮ್ಮ ದ್ವೇಷ ಭಾವನೆಗಳು ನಿಮ್ಮ ಶತ್ರುಗಳನ್ನು ನೋಯಿಸುವುದಿಲ್ಲ; ಬದಲು ನಿಮ್ಮನ್ನು ದುಃಖ ಮನಸ್ತಾಪಗಳ ನರಕಕ್ಕೆ ಕೊಂಡೊಯ್ಯುತ್ತವಷ್ಟೆ.

ಗೌತಮಬುದ್ಧ ಸಾವಿರಾರು ವರ್ಷಗಳ ಹಿಂದೆ ಬೋಧಿಸಿದ ಮಾತೊಂದಿದೆ— 'ದ್ವೇಷಕ್ಕಿಂತ ಭಯಾನಕವಾದ ಶತ್ರು ಬೇರೊಂದಿಲ್ಲ'— 'ದ್ವೇಷದಿಂದ ದ್ವೇಷ ಎಂದಿಗೂ ಅಳಿಯದು'— 'ಪ್ರೀತಿಯಿಂದ ದ್ವೇಷವನ್ನು ಗೆಲ್ಲು'— ಈ ಮಾತುಗಳನ್ನು ಅರ್ಥಮಾಡಿಕೊಂಡು ನಮ್ಮ ಜೀವನದಲ್ಲಿ ಸ್ವಲ್ಪವಾದರೂ ಕಾರ್ಯರೂಪಕ್ಕೆ ತಂದರೆ, ಆಧುನಿಕ ಯುಗದ ನೂರಾರು ಸಮಸ್ಯೆಗಳಿಗೆ ಅದೇ ದಿವ್ಯೌಷಧಿಯಾಗಬಲ್ಲುದು!

ಸ್ವಲಾಭದ ದೃಷ್ಟಿಯನ್ನು ಸಾಧ್ಯವಾದಷ್ಟು ಬಿಟ್ಟು ಇತರರನ್ನು ಪ್ರೀತಿಸಲು ಕಲಿಯಬೇಕು ನೀವು. ಇತರರ ಅಭ್ಯುದಯವನ್ನು ನೀವೇಕೆ ಹಾರೈಸಬಾರದು? ಇತರರ ಏಳಿಗೆಯನ್ನು ಕಂಡು ನೀವೂ ಸಂತುಷ್ಟರಾಗಬಾರದೇನು? ಗೊತ್ತಿರಲಿ—ಇದರಿಂದ ನಿಮಗೇ ಅಮೂಲ್ಯ ಲಾಭವಾಗುವುದು! ದ್ವೇಷವನ್ನು ಬಿಟ್ಟು ಉದಾತ್ತ ಪ್ರೀತಿ ಸೌಹಾರ್ದತೆಯಿಂದ ನೀವು ಗೆಲ್ಲಲಾರಂಭಿಸಿ. "ದ್ವೇಷ-ಅಸೂಯೆ ಭಾವನೆಯನ್ನು ನೀವು ಪಡೆದಿದ್ದರೆ ಅದು ಚಕ್ರಬಡ್ಡಿ ಸಹಿತ ನಿಮ್ಮ ಮೇಲೆ ಧಾಳಿ ನಡೆಸುವುದು. ಒಂದು ಬಾರಿ ಅದನ್ನು ನೀವು ಚಲಿಸುವಂತೆ ಮಾಡಿದರೆ ಅದರ ಘೋರ ಪರಿಣಾಮವನ್ನು ಉಣ್ಣಲೇಬೇಕು"—ಎಂದು ಎಚ್ಚರಿಸುವರು ಸ್ವಾಮಿ ವಿವೇಕಾನಂದರು.

ಚಿಂತೆಯಿಂದಾಗಿ ನಿಮ್ಮ ವಿವೇಕವನ್ನು ಅಪಹರಿಸುವ ಇನ್ನೊಂದು ದುಷ್ಟಶಕ್ತಿ ಜನಿಸುತ್ತದೆ—ಅದೇ ಕ್ರೋಧ. ಬಸವಣ್ಣನವರ ವಾಣಿ ಕೇಳಲಿಲ್ಲವೇ?— "ಮನೆಯೊಳಗಣ ಕಿಚ್ಚು ಮನೆಯನ್ನೇ ಸುಡುವಂತೆ ತನ್ನಲ್ಲಿ ಹುಟ್ಟಿದ ಕೋಪ ತನ್ನನ್ನೇ ಸುಡದೆ ಬಿಡದು." "ಸಿಟ್ಟು ನಮ್ಮ ಮಿದುಳನ್ನು ಪ್ರವೇಶಿಸುವ ಮೊದಲು ನಮ್ಮ ಬುದ್ಧಿಯನ್ನು ತಲೆ ಬುರುಡೆಯಿಂದ ಹೊರಗೆ ದೂಡಿ ತಿರುಗಿ ಅದು ಒಳಗೆ ಬರದಂತೆ ತಲೆಯ ಎಲ್ಲಾ ಬಾಗಿಲುಗಳನ್ನು ಮುಚ್ಚಿ ಬಿಡುತ್ತದೆ"ದು ಪ್ಲುಟಾರ್ಕ್ ಹೇಳಿದ ಮಾತು ಎಷ್ಟೊಂದು ಸತ್ಯವಲ್ಲವೇ!? ಸಿಟ್ಟಿನ ಕುರಿತು ಶ್ಲೋಕವೊಂದು ಹೀಗೆ ಹೇಳುತ್ತದೆ— 'ಉತ್ತಮರ ಕೋಪ ಒಂದು ಕ್ಷಣಕಾಲವಿರುತ್ತದೆ, ಮಧ್ಯಮರದು ಎರಡು ಗಂಟೆಯ ತನಕ, ಅಧಮರು ದಿನವಿಡೀ ಕೋಪಿಸಿಕೊಳ್ಳುತ್ತಾರೆ. ಪಾಪಾತ್ಮರು ಜೀವಮಾನವೆಲ್ಲ ಕೋಪವನ್ನಿಟ್ಟುಕೊಳ್ಳುತ್ತಾರೆ.' ಕ್ಷಣಕಾಲ ಯೋಚಿಸಿ—ನೀವು ಯಾವ ಪಂಗಡಕ್ಕೆ ಸೇರುವಿರಿ? ಎಂದು.

ಎಷ್ಟೋ ವೇಳೆ ನಮ್ಮ ಸಂಕಲ್ಪ ಪ್ರಯತ್ನಗಳನ್ನು ಮೀರಿ ದುಃಖದಾಯಕ ಘಟನೆಗಳು ಜರಗುತ್ತವೆ. ಜೀವನದಲ್ಲಿ ಸಹಜವಾದ ಇಂಥ ಅನಿವಾರ್ಯ ಘಟನೆಗಳನ್ನೆದುರಿಸುವಲ್ಲಿ

ತಾಳ್ಮೆಯ ಮೇರೆ ಮೀರಬೇಕೇ ಹೊರತು ಸಿಟ್ಟಿನದ್ದಲ್ಲ. ಸಿಟ್ಟಿಗೇಳುವ ಮುನ್ನ ಈ ವಿಚಾರಗಳನ್ನು ನೀವು ಜ್ಞಾಪಿಸಿಕೊಳ್ಳಿ–

೧. ಸಿಟ್ಟು ನಿಮ್ಮ ದೈಹಿಕ ಹಾಗೂ ಮಾನಸಿಕ ಸಮತ್ವವನ್ನು ನಾಶ ಮಾಡುವುದು.

೨ ಇತರರೊಂದಿಗೆ ಸಿಟ್ಟುಗೊಂಡಲ್ಲಿ ಸುಮ್ಮನೆ ನೀವು ದ್ವೇಷ ಕಟ್ಟಿಕೊಳ್ಳಬೇಕಾಗುವುದು.

೩. ಸಿಟ್ಟಿನಿಂದ ನಿಮ್ಮ ವರ್ತನೆ ಇತರರಿಗೆ ಅಸಹ್ಯವಾಗುವುದು.

೪. ಆಗ ನಿಮ್ಮನ್ನು ಜನರು ಹಿಂದಿನಿಂದ ಹಾಸ್ಯ ಮಾಡುವರು.

೫. ನಿಮಗಾಗ ಯಾರ ಸಹಾನುಭೂತಿಯೂ ದೊರಕದು.

'ಯಾವುದನ್ನು ನಿವಾರಿಸುವುದು ಅಶಕ್ಯವೋ, ಪರಿಹರಿಸುವುದು ಅಸಾಧ್ಯವೋ ಅದನ್ನು ಕುರಿತು ನೀನು ಚಿಂತಿಸಬೇಡ' ಎನ್ನುವುದು ಭಗವದ್ಗೀತೆಯ ವಾಕ್ಯ. 'ನಿಜವಾದ ಶಾಂತಿಯು ಕಷ್ಟ ಹಾಗೂ ಗಂಡಾಂತರವನ್ನು ಸ್ವೀಕರಿಸುವುದರಿಂದ ಬರುತ್ತದೆಂ'ದು ಚೀನಿ ದಾರ್ಶನಿಕ ಕನ್‌ಫ್ಯೂಶಿಯಸ್ ಹೇಳಿದ. ವೃಥಾ ಚಿಂತೆ ದ್ವೇಷಕ್ಕೂ ಅಸೂಯೆಗೂ ಕ್ರೋಧಕ್ಕೂ ಕಾರಣವಾಗಿರುವಾಗ ಚಿಂತೆಯಿಂದ ಸಾಧ್ಯವಾದಷ್ಟು ದೂರವಿರಲು ಯತ್ನಿಸಿ.

ಬದುಕಿನಲ್ಲಿ ಅತಿಮುಖ್ಯವಾದ ಇನ್ನೊಂದು ವಿಷಯವಿದೆ. ಅದು 'ನಿಮ್ಮನ್ನು ನೀವು ತಿಳಿದುಕೊಳ್ಳುವುದು.' ಹೆಚ್ಚಿನ ವೇಳೆ ನಾವು ಇತರರ ಬಗ್ಗೆ ಚೆನ್ನಾಗಿ ಅರಿತಿರುತ್ತೇವೆಯೇ ಹೊರತು ನಮ್ಮ ಕುರಿತು ನಮಗೆ ಪೂರ್ಣ ಮಾಹಿತಿ ತಿಳಿದೇ ಇರುವುದಿಲ್ಲ! ನಮ್ಮ ನಿಜವಾದ ಯೋಗ್ಯತೆಗಿಂತಲೂ ಹತ್ತು ಪಾಲು ಹೆಚ್ಚಾಗಿ ನಾವು ಪಡೆದಿರುವೆವೆಂದು ತಿಳಿದು ಅತಿರೇಕ ಆತ್ಮವಿಶ್ವಾಸ ಹೊಂದಿದ ನಾವು ಅನೇಕ ಸಂದರ್ಭಗಳಲ್ಲಿ ನಮ್ಮ ಅಧಃಪತನಕ್ಕೆ ಕಾರಣರಾಗಿ ಚಿಂತಿಸಬೇಕಾಗುವುದು. ನಿಜ ಹೇಳುವುದಾದರೆ ನಮ್ಮಲ್ಲಿ ಹಲವರಿಗೆ ಇಬ್ಬಗೆಯ ವ್ಯಕ್ತಿತ್ವವಿದೆ. ಹತ್ತು ಜನರೊಂದಿಗೆ ಬೆರೆಯುವಾಗ ತೋರಿಕೆಯ ವ್ಯಕ್ತಿತ್ವವೊಂದು; ನಿಜವಾದ ವ್ಯಕ್ತಿತ್ವ ಇನ್ನೊಂದು. ಇಂಥವರು ತಮ್ಮ ನೈಜಸ್ವರೂಪವನ್ನು ಮುಚ್ಚಿಡಲು ಸದಾ ಹೋರಾಡುತ್ತಿರುತ್ತಾರೆ. ಕಜ್ಜಿ ಕುರುವಿನಿಂದ ಸ್ನಾನವಿಲ್ಲದೆ ಮೈಯೆಲ್ಲ ದುರ್ವಾಸನೆ ಬರುತ್ತಿದ್ದರೂ ಸುಗಂಧದ್ರವ್ಯ ಲೇಪಿತ ಬಟ್ಟೆ ಧರಿಸಿಕೊಂಡು ಮುಖಕ್ಕೆ ಪೌಡರು ಬಳಿದುಕೊಂಡವರ ಪಂಕ್ತಿಗೆ ಸೇರುವವರಿವರು!

ಇನ್ನು ನಮ್ಮಲ್ಲಿ ಹೆಚ್ಚಿನವರು ಯಾರನ್ನೋ ಕಂಡು ಏನೋ ಆಗಲು ಹೋಗಿ ಏನೇನೋ ಆಗುತ್ತಾರೆ; ಚಿಂತಾಕ್ರಾಂತರಾಗಿ ಕೊರಗಿ ಸೊರಗುತ್ತಾರೆ, ಕುದಿ ಕುಂದುತ್ತಾರೆ. ತಮ್ಮ ಅಭಿರುಚಿ—ಸಾಮರ್ಥ್ಯ, ಇತಿ-ಮಿತಿಗಳನ್ನು ತಿಳಿದುಕೊಳ್ಳದೆ ಪ್ರತಿಯೊಂದು ಹೆಜ್ಜೆಯಲ್ಲೂ ಪರರನ್ನು ಅನುಕರಿಸುವ ಆತ್ಮಹನನ ಕಾರ್ಯ ವೆಸಗುತ್ತಾರೆ. ಇಂಥವರು ತಿಳಿದುಕೊಳ್ಳಬೇಕಾದ ವಿಷಯ ಬೇಂದ್ರೆಯವರೆಂದಂತೆ— 'ನಿನ್ನೊಳಗೆ ನೀ ಹೊಕ್ಕು, ನಿನ್ನನೇ ನೀ ಕಂಡು ನೀನೇ ನೀನಾಗು ಗೆಳೆಯ?'

ನೀವೇ ನೀವಾಗಲು ನಿಮ್ಮ ಅಂತಃಪರೀಕ್ಷೆ ಅತ್ಯಗತ್ಯ. ನಿಮ್ಮ ಅಭಿರುಚಿ, ವೈಶಿಷ್ಟ್ಯ, ಸಾಮರ್ಥ್ಯಗಳನ್ನು ತಿಳಿಯಲೆತ್ನಿಸಿದಂತೆಯೇ ನಿಮ್ಮ ದೋಷಗಳೇನೆಂಬುದನ್ನು ತಿಳಿದುಕೊಳ್ಳಲು ಪ್ರಯತ್ನಿಸಿ. ನಿಮ್ಮ ದೌರ್ಬಲ್ಯಗಳನ್ನೂ ತಪ್ಪುಗಳನ್ನೂ ಕಂಡುಹುಡುಕುವ ಧೈರ್ಯ ನಿಮಗಿದೆಯೇ? ನಿಮ್ಮ ದೌರ್ಬಲ್ಯಗಳನ್ನು ಖಂಡಿತ ಅಡಗಿಸಬೇಡಿ. ಬೆಳಕು ಗಾಳಿಗಳಿಲ್ಲದ ಸ್ಥಳದಲ್ಲಿ ರೋಗಾಣುಗಳು ಬೆಳೆದು ಹೇಗೆ ಅಪಾಯಕಾರಿಗಳಾಗಬಲ್ಲವೋ ಹಾಗೆ ನಿಮ್ಮ ದೌರ್ಬಲ್ಯಗಳನ್ನು ಗುರುತಿಸದೆ ಅಡಗಿಸಲೆತ್ನಿಸುವ ವಿಧಾನದಿಂದ ನಿಮಗೇ ಅಪಾಯ ಒದಗಿ ಬರುವುದು.

“ನನ್ನ ನ್ಯೂನತೆಗಳು ಎಷ್ಟೆಂಬುದನ್ನು ನಾನು ವ್ಯಸನದಿಂದ ಅರಿತಿದ್ದೇನೆ. ಆ ಅರಿವು ನನಗೆ ದುಃಖ ತರುವಷ್ಟಿದೆ. ಆ ಅರಿವೇ ನನ್ನ ಸರ್ವಶಕ್ತಿಯ ಮೂಲ. ಏಕೆಂದರೆ ತನ್ನ ದೌರ್ಬಲ್ಯಗಳ ಅರಿವಾಗುವುದೇ ಮಾನವನಿಗ

ಒಂದು ಅಪೂರ್ವ ಬಲ," ಎಂಬುದು ಮಹಾತ್ಮಾ ಗಾಂಧೀಜಿ. ಅಭಿವೃದ್ಧಿಯ ದಾರಿಯಲ್ಲಿ ನಿಮ್ಮ ಹೆಜ್ಜೆ ಎಲ್ಲಿ ತಪ್ಪುತ್ತದೆ ಎಂಬ ತಿಳು-ವಳಿಕೆ ನಿಮಗೆ ಅತ್ಯಗತ್ಯ. ಆಗ ನೀವು ಸರಿ ದಾರಿಯಲ್ಲಿ ನಡೆಯುವ ಅವಕಾಶವಿರುತ್ತದೆ.

ನಿಮ್ಮ ದೌರ್ಬಲ್ಯಕ್ಕೆ ಇನ್ನೊಬ್ಬರನ್ನು ಮಾತ್ರ ವೃಥಾ ದೂರಬೇಡಿ. ಅತಿರೇಕ ಧೂಮ-ಪಾನದಿಂದ ನಾಲಿಗೆಯ ಕ್ಯಾನ್ಸರಿಗೊಳಗಾದ ವ್ಯಕ್ತಿಯೋರ್ವ ವೈದ್ಯರು ಧೂಮಪಾನ ವರ್ಜಿಸಬೇಕೆಂದಾಗ ಅದು ತನ್ನ ತಪ್ಪಲ್ಲ ವೆಂದೂ ತನ್ನ ಆಪ್ತಮಿತ್ರನೊಬ್ಬ ಬೇಡ ವೆಂದಾಗಲೂ ಸಿಗರೇಟುಗಳನ್ನು ತನಗಿತ್ತು ಈ ದುರಭ್ಯಾಸ ಪ್ರಾರಂಭಿಸಿದ್ದನೆಂದೂ ಉತ್ತ-ರಿಸಿದನಂತೆ! ಸ್ನೇಹಿತ ಅದೆಷ್ಟೇ ಒತ್ತಾಯಿ ಸಲಿ... ಧೂಮಪಾನ ಮಾಡುವವರು ನೀವೇ ಎಂದಾದ ಮೇಲೆ ನಿಮ್ಮ ಈ ದೌರ್ಬಲ್ಯಕ್ಕೆ ಯಾರು ಹೊಣೆ ಹೇಳಿ?

ನಿಮ್ಮ ಬಾಲ್ಯದ ದಿನಗಳಲ್ಲಿ ಯೋಗ್ಯ ರೀತಿಯ ತರಬೇತು ನಿಮಗೆ ದೊರೆಯದಿದ್ದಿರ ಬಹುದು. ನಿಮ್ಮ ತಂದೆ ತಾಯಂದಿರೇ ನಿಮಗೆ ತಪ್ಪನ್ನೆಸಗಿರಬಹುದು. ಆದರೆ ಅವರನ್ನೇ ದೂಷಿಸುವ ಫಲವೇನು? ಅವರು ಜೀವನಕ್ಕೆ ಸರಿಯಾಗಿ ಹೊಂದಿಕೊಂಡಿರದಿದ್ದರೆ ನೀವಾದರೂ ಸರಿಯಾಗಿರಬಾರದೇನು? ವ್ಯಾವಹಾರಿಕ ದೃಷ್ಟಿಯಿಂದ ನೋಡಿದರೆ, ತಂದೆ ತಾಯಂದಿರನ್ನು ಆಯ್ಕೆ ಮಾಡಲು ಸ್ವಾತಂತ್ರ್ಯ ನಿಮಗಿಲ್ಲವಲ್ಲ. ಆಗಿರುವಾಗ ನಿಮ್ಮ ಪರಂಪರೆ ಪರಿಸ್ಥಿತಿಗಳನ್ನು ದೂರಿ ಉಪಯೋಗವಿಲ್ಲ. ನೆಲದ ಮೇಲೆ ಬಿದ್ದಾಗ ನೆಲವನ್ನೇ ಆಧರಿಸಿ ಮೇಲೇಳುವಂತೆ ಪರಿ-ಸ್ಥಿತಿಯ ಉಪಯೋಗವನ್ನು ಪಡೆದುಕೊಂಡೇ ನೀವು ಮೇಲಕ್ಕೇರಬೇಕು. ಬೇರೇನೂ ಉಪಾಯ ಈ ದಿಸೆಯಲ್ಲಿಲ್ಲ.

ಚಿಂತಿತನಾದ ವ್ಯಕ್ತಿಗೆ ಸುಖ ಶಾಂತಿ

ಗಳೆಂದರೆ ಕನಸು ಮಾತ್ರವೆ. ಸಮಾಜದಲ್ಲಿ ಅಧಿಕ ಸುಖಿ ಎಂದರೆ ನಿಜವಾಗಿಯೂ ಉದ್ಯಮಿ. ಉದ್ಯಮಶೀಲ ವ್ಯಕ್ತಿ ಆರೋಗ್ಯದೊಂದಿಗೆ ಆರ್ಥಿಕಾಭಿವೃದ್ಧಿಯನ್ನು ಸಾಧಿಸುತ್ತಾನೆ. ನಾಳಿನ ಕೆಲಸಕ್ಕೆ ಅವನು ನವಸ್ಫೂರ್ತಿಯಿಂದ ತೊಡಗುತ್ತಾನೆ. ದಿನದಲ್ಲಿ ೧೮ ಗಂಟೆಗಳಿಗಿಂತಲೂ ಹೆಚ್ಚು ಕಾಲ ದುಡಿಯುತ್ತಿದ್ದ ನೆಹರೂ ತಮ್ಮನ್ನು ಕುರಿತು ಹೀಗೆ ಹೇಳಿದ್ದರು– "ಕಾರ್ಯಭಾರದಿಂದ ನಾನು ನನ್ನ ಶರೀರ ಹಾಗೂ ಮಿದುಳಿನ ಸ್ಫೂರ್ತಿಯನ್ನು ಸದಾ ಕಾಪಾಡುತ್ತೇನೆ. ಕೆಲಸ ಕೇವಲ ಮನರಂಜನೆ ಅಥವಾ ಜೀವನಯಾಪನೆಯ ಸಾಧನವಲ್ಲ. ಅದು ಕೇವಲ ಸ್ವಾಸ್ಥ್ಯ ಹಾಗೂ ಸುಖದ ಸಾಧನೆಯಲ್ಲ. ಅದು ಮನುಷ್ಯನ ಮಹತ್ವದ ಅಡಿಗಲ್ಲು."

ಬೆಂಜಮಿನ್ ಫ್ರಾಂಕ್ಲಿನ್ ಸ್ವಾರಸ್ಯಕರವಾಗಿ ಹೇಳುತ್ತಾನೆ, "ಒಂದು ತಿಂಗಳ ರೋದನಕ್ಕಿಂತ ಒಂದು ಗಂಟೆಯ ಕಾಲದ ಪರಿಶ್ರಮವು ಆನಂದವನ್ನೀಯುತ್ತದೆ; ನಿಮ್ಮ ಸಂಕಷ್ಟಗಳನ್ನು ದೂರವಿರಿಸುವುದು." ನಿಮ್ಮ ಕೆಲಸವನ್ನು ಅತ್ಯುತ್ತಮ ರೀತಿಯಲ್ಲಿ ನಿರ್ವಹಿಸುವುದರಿಂದಲೇ ನಿಜವಾದ ಸುಖ ಶಾಂತಿ ನಿಮಗೆ ಲಭ್ಯವಾಗುತ್ತದೆ. ಬದಲು ಸುಖಶಾಂತಿ ದೊರೆಯಲೆಂದು ವೃಥಾ ಹಲುಬದಿರಿ. ಚಿಂತಿತನಾದ ವ್ಯಕ್ತಿ ಯಾವುದಾದರೊಂದು ಕೆಲಸದಲ್ಲಿ ಮಗ್ನನಾದಲ್ಲಿ ಅವನ ಚಿಂತೆ ತನ್ನಿಂದ ತಾನಾಗಿಯೇ ಮಾಯವಾಗುವುದು. "ನೀವು ಸಂತುಷ್ಟರಾಗಿದ್ದೀರೇ ಅಥವಾ ಇಲ್ಲವೇ ಎಂದು ಯೋಚಿಸುತ್ತ ಕುಳಿತಿರಲು ವಿರಾಮವಿರುವುದೇ ನೀವು ದುಃಖಿತರಾಗಿರುವುದರ ರಹಸ್ಯ." ಎಂದು ಬರ್ನಾರ್ಡ್ ಷಾ ಹೇಳಿದ್ದು ಎಷ್ಟು ಸಮಂಜಸವಾಗಿದೆಯಲ್ಲವೇ? "ನಿಮ್ಮ ವಿರಾಮ ಕಾಲವನ್ನು ಹೇಗೆ ಕಳೆಯುವಿರಿ?" ಎಂದು ಡಾ. ಎಂ. ವಿ. ಅವರನ್ನು ಪ್ರಶ್ನಿಸಿದಾಗ ಅವರಿತ್ತ ಉತ್ತರ ಹೀಗಿತ್ತು "ನನಗೆ ವಿರಾಮವೇ ಇಲ್ಲ. ಆದುದರಿಂದ ವಿರಾಮ ಕಾಲವನ್ನು ಹೇಗೆ ಕಳೆಯುವುದೆಂಬ ಪ್ರಶ್ನೆಯೇ ಉದ್ಭವಿಸದು. ನಾನು ದುಡಿದಷ್ಟು ಕೆಲಸ ಇದ್ದೇ ಇದೆ"

'ದೃಢ ನಿಶ್ಚಯವನ್ನು ಕೂಡು ಕೆಲಸ ನಡೆಯುತ್ತದೆ' ಎಂಬ ಚೀನಿ ಗಾದೆ ಮಾತೊಂದಿದೆ. ಸಮಯವಿಲ್ಲ... ಮನಸ್ಸಿಲ್ಲ ಎಂಬ ಪೊಳ್ಳು ಕಾರಣಗಳನ್ನೊಡ್ಡಿ ನಿಮ್ಮ ಕೆಲಸಗಳನ್ನು ಮುಂದೆ ಹಾಕಬೇಡಿ. ದಿನ ಹೋದಂತೆ ಅವು ಭೂತಾಕಾರವಾಗಿ ನಿಮ್ಮನ್ನೇ ಗದರಿಸತೊಡಗುತ್ತವೆ. ಹೊರಲಾರದ ಹೊರೆಯನ್ನು ಹೊತ್ತವನಂತಾಗುತ್ತದೆ ನಿಮ್ಮ ಅವಸ್ಥೆ! ಅದರಿಂದ ಪಾರಾಗಲು ಸರ್ವಪ್ರಯತ್ನದಿಂದ, ದೃಢ ನಿಶ್ಚಯದಿಂದ ದೈನಂದಿನ ಕೆಲಸ ಕಾರ್ಯಗಳನ್ನು ಪೂರ್ಣಗೊಳಿಸಿ ಸಂತೃಪ್ತಿಯ ನಿಟ್ಟುಸಿರನ್ನು ಬಿಟ್ಟುಬಿಡಿ. ನೀವು ಕೆಲಸದಲ್ಲಿ ಮಗ್ನರಾದಾಗಲೇ ಎಲ್ಲ ಚಿಂತೆಯನ್ನೂ ಮರೆಯಬಲ್ಲಿರಿ ಎಂಬುದು ಮಾತ್ರ ಸತ್ಯ.

ಇತರರ ಕುರಿತು ಯೋಚಿಸಿ ಅವರನ್ನು ಟೀಕಿಸುವ ದುಷ್ಕರ್ಮ ಮಾತ್ರ ನಿಮ್ಮಿಂದ ನೆರವೇರದಿರಲಿ. ತಮಗಿಂತ ಹೆಚ್ಚು ವಿದ್ಯಾವಂತರನ್ನು, ಹೆಚ್ಚು ಯಶಸ್ವಿಗಳಾದವರನ್ನು ಟೀಕಿಸುವಾಗ, ಅವರಲ್ಲಿ ಏನಾದರೊಂದು ಹುಳುಕನ್ನು ಹುಡುಕುತ್ತಿರುವಾಗ ಕೆಲವರಿಗೆ ಒಂದು ರೀತಿಯ ಅನಾಗರಿಕ ಆನಂದ ಉಂಟಾಗುತ್ತದೆ. ಇನ್ನು ಕೆಲವರಿಗೆ, ಇತರರ ಒಳ್ಳೆಯ ಗುಣಗಳನ್ನು ಮೆಚ್ಚುವುದೆಂದರೆ ತಾವು ಅವರಿಗಿಂತ ಕೆಳಮಟ್ಟದವರಾದಂತೆಯೇ ಎಂಬ ಭಾವನೆ ಬೇರೂರಿ ಅಸಂಬದ್ಧವಾಗಿಯಾದರೂ ಯಾರನ್ನಾದರೂ ಟೀಕಿಸಿದ ಹೊರತು ಅವರಿಗೆ ಮನಶ್ಶಾಂತಿ ದೊರೆಯದು. ಇತರರ ದುಃಖ ಕ್ಲೇಶಗಳನ್ನು ಸಹಾನುಭೂತಿಯಿಂದ ಕಾಣುವ ದೊಡ್ಡ ಗುಣ ನಿಮ್ಮಲ್ಲಿ ಬೆಳೆದು ಬರಲಿ. ತಾಳ್ಮೆ ಇದ್ದರೆ ಅದು ಲಾಭಕರ ಎಂದು ನಿಮಗೇ ತಿಳಿಯುವುದು.

ನೀವು ಟೀಕಿಸುವುದಿಲ್ಲ ಎಂದಿದ್ದರೂ ಇತರರ ಟೀಕೆಗಳಿಗೆ ನೀವು ಪಾತ್ರರಾಗಿಯೇ ಆಗುತ್ತೀರಾ. ಆ ಕುರಿತು ಮಾತ್ರ ಖಂಡಿತ ಚಿಂತಿಸಬೇಡಿ. ಟೀಕೆಯಿಂದ ಸಂಪೂರ್ಣ ತಪ್ಪಿಸಿಕೊಳ್ಳಬೇಕಾದರೆ ಆಂಗ್ಲ ಗಾದೆಯೊಂದು ಹೇಳುವಂತೆ 'ನೀವು ಏನೂ ಹೇಳಬಾರದು, ಏನೂ

ಮಾಡಬಾರದು. ಏನೂ ಆಡಬಾರದು.' ಗೌತಮ ಬುದ್ಧ ಹೇಳುತ್ತಾನೆ "ಜನರು ಮೌನದಿಂದಿರುವವನನ್ನು ನಿಂದಿಸುತ್ತಾರೆ. ಮಾತುಗಾರರನ್ನೂ ನಿಂದಿಸುತ್ತಾರೆ. ಮಿತಭಾಷಿಗಳನ್ನೂ ನಿಂದಿಸುತ್ತಾರೆ. ಲೋಕದಲ್ಲಿ ನಿಂದೆಯನ್ನು ಕೇಳದ ವ್ಯಕ್ತಿ ಇಲ್ಲವೇ ಇಲ್ಲ" ಮಹಾ ವಿಜ್ಞಾನಿ ಐನ್‌ಸ್ಟೈನ್ ಸಾಪೇಕ್ಷತಾ ವಾದವನ್ನು ಪ್ರಕಟಪಡಿಸಿದಾಗ ಅದೊಂದು ಹುಚ್ಚುವಾದವೆಂದು ಅನೇಕ ವಿಜ್ಞಾನಿಗಳೇ ಗೇಲಿಮಾಡಿದ್ದರು.

ಆದರೆ ಟೀಕೆಯನ್ನು ಸಂಪೂರ್ಣವಾಗಿ ಅಲಕ್ಷಿಸುವುದು ಒಳಿತಲ್ಲ-ಅದನ್ನು ತಿಳಿದು ಹುರುಳಿಲ್ಲವೆಂದಾದರೆ ಅಲಕ್ಷಿಸುವುದು ಉಚಿತ. ಕಾರಣವಿಷ್ಟೆ- ನಮ್ಮ ಕುರಿತು ನಮಗಿರುವ ಅಭಿಪ್ರಾಯಗಳಿಗಿಂತಲೂ ನಮ್ಮ ಶತ್ರುಗಳ ಅಭಿಪ್ರಾಯವೇ ಎಷ್ಟೋ ವೇಳೆ ಸತ್ಯಕ್ಕೆ ಹತ್ತಿರವಾಗಿರುತ್ತದೆ. ನಮ್ಮ ಬೆನ್ನು ನಮಗೆ ಕಾಣದು; ಅಂತೆಯೇ ನಮಗೆ ಸುಲಭವಾಗಿ ನಮ್ಮ ದೋಷ ತಿಳಿಯುವುದಿಲ್ಲ. ಆದುದರಿಂದ ಇತರರ ಯಥಾರ್ಥ ವಿಮರ್ಶೆಯು ನಮಗೆ ರಚನಾತ್ಮಕವಾದ ಟೀಕೆಯಾಗಿ ತೋರಿ ಹಲವು ಬಾರಿ ನಮ್ಮನ್ನು ಮೇಲಕ್ಕೇರಿಸಿ ಚಿಂತನಶೀಲರನ್ನಾಗಿ ಮಾಡಿಸಬಲ್ಲದು. ನೆನಪಿಡಿ- ಟೀಕೆಗಳಲ್ಲಿ ಹೆಚ್ಚಿನಂಶವನ್ನು ದೂರಮಾಡುವ ಉಪಾಯವೊಂದಿದೆ- 'ನೀವೇ ನಿಮ್ಮ ಅತ್ಯಂತ ಕಟು ವಿಮರ್ಶಕರಾಗುವುದು.'

ಇತರರ ಮುಖಸ್ತುತಿಗಳಿಗೆ ಸುಲಭದಲ್ಲಿ ಮಾರುಹೋಗಿ ಅನರ್ಥಗಳು ನಿಮ್ಮಿಂದ ಸಂಭವಿಸಿ ಚಿಂತೆಗೆಡೆಮಾಡಿಕೊಟ್ಟಾವು... ಜೋಕೆ! ತಮ್ಮ ಸ್ವಾರ್ಥಸಾಧನೆಯಾಗುವ ತನಕ ಜನರು ನಿಮ್ಮನ್ನು ಒಂದೇ ಸಮನೆ ಹೊಗಳುತ್ತಾರೆಂಬುದನ್ನು ಅರಿತಿರುವಿರಲ್ಲವೇ? ನಿಮ್ಮನ್ನು ನಿಜವಾಗಿ ಅರಿತು ಅಭಿಪ್ರಾಯಗಳನ್ನು ಕೊಡಲು ಯತ್ನಿಸುವವರೆಷ್ಟು ಮಂದಿ ಹೇಳಿ? ಜನರ ಪೊಳ್ಳು ಹೊಗಳಿಕೆ [illegible] ನೀವು ನಿಮ್ಮ ಗುರಿಯಿಂದ ಜಾರುತ್ತೀರಿ. ಆ ಹೊಗಳಿಕೆಯನ್ನು ಉಳಿಸಿಕೊಳ್ಳುವ ಹಂಬಲ ಹೆಚ್ಚಿ ನಿಮ್ಮ ಬದುಕು ನಿಮ್ಮ ಅಧೀನವಿರುವುದೇ ಇಲ್ಲ! [illegible] ಹೇಳಿದಂತೆ, "ಜಗತ್ತು ಏನು ಹೇಳೀತು ? ಜನರು ಏನು ಹೇಳಿಯಾರೆಂದು ಯೋಚಿಸದೆ ತನ್ನ ಕಾರ್ಯ ಮಾತ್ರದಲ್ಲಿ ಮಗ್ನನಾಗಿ ಆ ಕಾರ್ಯದ ಯಶಸ್ಸಿನತ್ತ ಲಕ್ಷ್ಯಕೊಟ್ಟವನೇ ಎಲ್ಲರಿಗಿಂತಲೂ ಹೆಚ್ಚು ಸುಖಿಯಾಗುತ್ತಾನೆ?"

ಕಾಲಕೆಟ್ಟಿದೆ ಎನ್ನದೆ, ಜನರು ಕೆಟ್ಟರು ಎಂದರೆ ನೀವು ನಂಬುವಿರಾ ? ಕೆಲವರು ಇತರರ ದುರ್ಗುಣಗಳನ್ನು ದುರ್ಬೀನಿಟ್ಟು ನೋಡಿ ಅವನ್ನೇ ಎತ್ತಿ ಎತ್ತಿ ಆಡುತ್ತಿರುವರು. ಅಂಥವರೊಡನೆ ನೀವೇನಾದರೂ ಸದ್ವಿಚಾರಗಳನ್ನು ಹೇಳಲಾರಂಭಿಸಿ. ಅದರಲ್ಲಿ ಅವರಿಗೆ ಎಳ್ಳಷ್ಟೂ ನಂಬಿಕೆಯಿಲ್ಲ- "ಅದೆಲ್ಲ ಈ ಕಲಿಯುಗದಲ್ಲಿ ಎಲ್ಲಿ ಸಾಧ್ಯ ?" ಎನ್ನುತ್ತಾರೆ ನೋಡಿ ! ನೈತಿಕ ಅಧಃಪತನದ ಸುದ್ದಿ ಯಾರ ಬಗ್ಗೆಯಾದರೂ ಇದೆ ಎಂದು ಬಿಡಿ. ಕಣ್ಣು ಮೂಗುಗಳ ಜೊತೆ ಕೇಳುವ ಶಕ್ತಿ ತೋರಿಸಿ "ಇರಬಹುದು-ಇರಬಹುದು" ಎಂದೇ ಉದ್ಗರಿಸಾರಂಭಿಸುವರು ಅವರು!

ಇತರರ ಕುರಿತು ಸುಳ್ಳುವರದಿಗಳನ್ನು ಮಾತ್ರವೇ ನಂಬಿ ಚಿಂತಿಸದಿರಿ. ಒಳ್ಳೆಯದನ್ನು [illegible] ಈ [illegible] ನಿಮ್ಮ [illegible] ಸತ್ಯವಾದುದನ್ನು [illegible] ವಾಗಿ ಗೊಬ್ಬರದ ಗುಂಡಿಯಲ್ಲಿ ಬೀಳುವಿರಾ? ಜೇನು ನೊಣವಾಗಿ ಜೇನು ಮಾತ್ರವನ್ನೇ ಹೀರುವಿರಾ? ನೀವೇ ನಿರ್ಧರಿಸಿಕೊಳ್ಳಿ.

'ನಮ್ಮ ಯೋಚನೆಗಳೇ ನಮ್ಮ ಜೀವನವನ್ನು ರೂಪಿಸುತ್ತವೆ' ಎಂಬುದನ್ನು ತಿಳಿದಿರುವಿರಿ ತಾನೇ? 'ಗಾಡಿಯನ್ನೆಳೆಯುವ ಎತ್ತಿನ ಹೆಜ್ಜೆಗಳನ್ನು ಗಾಡಿಯ ಚಕ್ರವು ಅನುಸರಿಸುವಂತೆ ದುಷ್ಟ ಯೋಚನೆ ಹಾಗೂ ಕೆಲಸಗಳನ್ನು ಹಿಂಬಾಲಿಸಿ ಸಂಕಷ್ಟಗಳು ಬಂದೇ ಬರುತ್ತವೆ' ಎಂಬ ಗೌತಮ ಬುದ್ಧನ ಪವಿತ್ರ ವಾಣಿಯನ್ನು ಸದಾ ಸ್ಮರಣೆಯಲ್ಲಿಡಿ. ನೀವು ಸಂಗ್ರಹಿಸುವ [illegible] ಗಳೇ [illegible] ನಿಮ್ಮ ಮನಸ್ಸು? ಅವು ಬೆಳೆಯುವ ಕ್ಷೇತ್ರ.

ಮಹಾರೋಗದ ನಿವಾರಣೆ-೪

ಅನ್ನನಾಳದ ಕ್ಯಾನ್ಸರ್

ಇದು ಸಾಮಾನ್ಯವಾಗಿ ೫೦ ವರ್ಷಕ್ಕೆ ಮಿಕ್ಕಿದ ಜನರಲ್ಲಿ ಕಂಡುಬರುತ್ತದೆ.
ಅವರಲ್ಲಿಯೂ ಹೆಂಗಸರಿಗಿಂತಲೂ ಗಂಡಸರಲ್ಲಿ
ಈ ಬೇನೆ ಉಂಟಾಗುವ ಸಂಭವ ಹೆಚ್ಚು

- ನಿಮಗೆ ಊಟ ಮಾಡುವಾಗ ಗಂಟಲು ಹಿಡಿದಂತಾದರೆ.
- ಆಹಾರ ನುಂಗಲು ತೊಂದರೆಯಾದರೆ,
- ಆಹಾರ ನುಂಗಿದ ಕೂಡಲೆ ವಾಂತಿಯಾಗುವಂತಿದ್ದರೆ,
- ನಿಮ್ಮ ಧ್ವನಿಯಲ್ಲಿ ಬದಲಾವಣೆಯಾದರೆ,
- ಊಟವು ಮೊದಲಿಗಿಂತಲೂ ನಿಧಾನವಾಗತೊಡಗಿದರೆ
- ರೊಟ್ಟಿ ಚಪಾತಿಯಂಥ ಆಹಾರಗಳು ಗಂಟಲೊಳಗೆ ಇಳಿವ ವೇಳೆ ಪ್ರತಿ ಸಲ ನೀರು ಕುಡಿಯಬೇಕೆನಿಸಿದರೆ,
- ಯಾವದೇ ದ್ರವವು ಸೋರಜೀಳದೆ ಕಿವಿಯಲ್ಲಿ ನೋವು ಉಂಟಾದರೆ,

ನಿಮಗೆ ಅನ್ನನಾಳದ ಕ್ಯಾನ್ಸರ್ ಆಗಿದೆಯೆಂದು ತಿಳಿದುಕೊಳ್ಳಬೇಕು. ನೀವು ಕೂಡಲೆ ಯೋಗ್ಯ ಡಾಕ್ಟರರಿಗೆ ತೋರಿಸಿ ಉಪಚಾರ ಪಡೆಯಬೇಕು. ಪ್ರಾರಂಭಿಕ ಅವಸ್ಥೆಯಲ್ಲಿರುವ ಈ ಬೇನೆ ನೂರಕ್ಕೆ ನೂರರಷ್ಟು ಗುಣವಾಗಬಲ್ಲದು ನೀವೇನೂ ಅಧೀರರಾಗಬೇಕಿಲ್ಲ.

ಇದರಂತೆ ಇತರ ಅವಯವಗಳಲ್ಲಿಯೂ ಕ್ಯಾನ್ಸರ್ ತಗಲುವ ಸಂಭವವಿದೆ. ಇಂಥವರಿಗೆ ಮಾತ್ರ ಈ ರೋಗ ತಗಲುತ್ತದೆಂದು ಖಚಿತವಾಗಿ ಹೇಳಲು ಬರುವದಿಲ್ಲ. ಇದೊಂದು ಸಾರ್ವತ್ರಿಕ ರೋಗ. ಇದರಿಂದ ಬಳಲುವ ಬಡ ಹಾಗೂ ಮಧ್ಯಮ ವರ್ಗದ ಜನರಿಗೆ ನೆರವಾಗಲು ಹುಬ್ಬಳ್ಳಿಯ ಅಮರಗೋಳದ ಬಳಿ ಒಂದು ಸುಸಜ್ಜಿತ ಆಸ್ಪತ್ರೆಯೊಂದನ್ನು ಯೋಜಿಸಲಾಗಿದೆ.

ಈ ಸತ್ಕಾರ್ಯಕ್ಕೆ ನೀವು ಮುಕ್ತಹಸ್ತದಿಂದ ನೆರವಾಗಿರಿ. ನಿಮ್ಮ ವಂತಿಗೆ ಬೇಗ ಬರಲಿ.

ಡಾ. ಬಿ. ಆರ್. ಪಾಟೀಲ, ಚೇರಮನ

ಕ್ಯಾನ್ಸರ್ ಶುಶ್ರೂಷಾ ಹಾಗೂ ಸಂಶೋಧನೆ ಸಂಸ್ಥೆ

ವಿದ್ಯಾನಗರ, ಹುಬ್ಬಳ್ಳಿ



ಸ್ಥಳದಾನ

ಸೊಂಡೂರ ಮ್ಯಾಂಗನೀಸ್ ಆ್ಯಂಡ್ ಐರನ್ ಓರ್ಸ್ ಲಿ.,

ಸೊಂಡೂರು (ಬಳ್ಳಾರಿ ಜಿಲ್ಲೆ)

[illegible] ನೀವು [illegible] ಪ್ರಕೃತಿ ಸತ್ಫಲವನ್ನು ಕೊಡುವುದು ಸಾಧ್ಯವೇ ಹೇಳಿ?

ಹಾಗಾಗಿ ನೀವೇನು ಆಗಬೇಕೆಂದು ಇಚ್ಛಿಸಿದ್ದೀರೋ ಅದಕ್ಕೆ ಸಂಬಂಧಿಸಿದ ವಿಚಾರಗಳನ್ನೇ ಮನಸ್ಸಿನಲ್ಲಿ ಮೆಲುಕು ಹಾಕಿ. ನಿಮಗೇ ಸಂಶಯ ಬಂದಾಗ ನಿಮ್ಮನ್ನು ಕೇಳಿಕೊಳ್ಳಿ–'ಬೆಳಗಿನಿಂದ ಸಂಜೆಯ ತನಕ ನಿಮ್ಮ ಮನಸ್ಸನ್ನಾಳುವ ವಿಚಾರಗಳು ಯಾವುವು?' ಎಂಬುದಾಗಿ. ದುಷ್ಟ ಪ್ರವೃತ್ತಿ ಅಥವಾ ದುರಭ್ಯಾಸಗಳುಳ್ಳವರ ಸಹವಾಸವನ್ನು ಪೂರ್ತಿಯಾಗಿ ತ್ಯಜಿಸಿ. ನಿಮ್ಮ ಸಂಪರ್ಕದಲ್ಲಿ ಬಂದ ವ್ಯಕ್ತಿಯ ಸದ್ಗುಣಗಳನ್ನು ಕಾಣಲು ಯತ್ನಿಸಿ. ಅವುಗಳನ್ನೇ ಸಂತೋಷದಿಂದ ಮನದಲ್ಲಿ ಮೆಲುಕು ಹಾಕುತ್ತಿರಿ. ನೀವು ಪೂರ್ವದ ಕಡೆಗೆ ಹೋದಂತೆಲ್ಲ ಪಶ್ಚಿಮ ದೂರವಾಗುವುದಿಲ್ಲವೇ? ಅಂತೆಯೇ ನಿಮ್ಮ ಮನಃಪೂರ್ತಿ ಸದ್ವಿಚಾರಗಳು, ಸದಾಲೋಚನೆಗಳು ತುಂಬಿಕೊಂಡಾಗ ನೀವೂ ಸತ್ಸ್ವರೂಪರಾಗುವಿರಿ; ಚಿಂತೆಯಿಂದ ದೂರಾಗಿ ಮಹಾನುಭಾವರಾಗುವಿರಿ; ನಿಮ್ಮ ಬಳಿ ಬಂದವರಲ್ಲೆಲ್ಲ ಅದ್ಭುತ ಬದಲಾವಣೆಯನ್ನುಂಟು ಮಾಡುವಿರಿ.

ಹಣದ ಸಮಸ್ಯೆ ಉದ್ಭವಿಸಿ ನೀವು ಚಿಂತೆಗೀಡಾಗುವುದನ್ನು ತಪ್ಪಿಸಲು ಮಿತವ್ಯಯದ ಕುರಿತು ಅಧ್ಯಯನ ನಿಮಗೆ ಅತ್ಯಗತ್ಯ. ಆದಾಯಕ್ಕೆ ಹೊಂದಿಕೊಳ್ಳುವಂತೆ ಖರ್ಚಿನ ದಾರಿಯನ್ನು ಸೃಷ್ಟಿಸಿಕೊಂಡು ವ್ಯವಹಾರ ಕ್ಷೇತ್ರದಲ್ಲಿ ಜಾಣರಾಗಿ ವರ್ತಿಸಿ ನೀವು. ಗಾಂಧೀಜಿ ಎರವಡಾ ಸೆರೆಮನೆಯಲ್ಲಿದ್ದಾಗ ಸರ್ಕಾರ ಅವರ ಖರ್ಚಿಗೆ ಕಳುಹಿಸುತ್ತಿದ್ದ ಎರಡುನೂರು ರೂ. ಗಳಲ್ಲಿ ಕೇವಲ ಮೂವತ್ತೈದು ರೂ. ಗಳನ್ನು ಮಾತ್ರ ಖರ್ಚುಮಾಡಿ ಉಳಿದ ಹಣವನ್ನವರು ಹಿಂದಿರುಗಿಸುತ್ತಿದ್ದರಂತೆ! ಬೆಂಗಳೂರಿನಲ್ಲಿ ಗಾಂಧೀಜಿ ಬಿಡಾರ ಹೂಡಿದ್ದ ಕಾಲವದು. ಬಟ್ಟೆ ಒಗೆಯಲು ಅಗಸನಿಗೆ ಹಣ ಹೆಚ್ಚಾದ ಬಗ್ಗೆ ಗಾಂಧೀಜಿ ಅಸಮಾಧಾನ ವ್ಯಕ್ತಪಡಿಸಿದಾಗ, ಮಹಾದೇವ ಭಾಯಿ ತಾನು ಪ್ರತಿ ದಿನ ಬೆಳಗ್ಗೆ ೪ ಗಂಟೆಗೆ ಎದ್ದು ರಾತ್ರಿ ೧೨ ತನಕ ಅವಿಶ್ರಾಂತ ದುಡಿಮೆಗೈಯುತ್ತಿರುವ ವಿಷಯ ಹೇಳಿಕೊಳ್ಳಲಾಗಿ, ಗಾಂಧೀಜಿ ಅವರೊಡನೆ ಬೆಳಗಿನ ಜಾವ ೩ ಗಂಟೆಗೇನೇ ಎದ್ದು ಬಟ್ಟೆ ಒಗೆದುಕೊಳ್ಳಬೇಕಾಗಿ ಆದೇಶ ನೀಡಿದರಂತೆ!

ಆಂಗ್ಲ ವಿದ್ವಾಂಸನೊಬ್ಬನ ಮಾತು ಈ ದಿಸೆಯಲ್ಲಿ ಉಲ್ಲೇಖನಾರ್ಹ– "ಹಣವನ್ನು ಹೇಗೆ ಸಂಪಾದಿಸಬೇಕೆಂಬುದು ಎಲ್ಲರಿಗೂ ತಿಳಿದಿದೆ. ಆದರೆ ಅದನ್ನು ಹೇಗೆ ವೆಚ್ಚ ಮಾಡಬೇಕೆಂಬುದು ಲಕ್ಷಕ್ಕೊಬ್ಬನಿಗೂ ಸರಿಯಾಗಿ ತಿಳಿದಿಲ್ಲ." ನೀವೇ ನಿಮ್ಮ ಖರ್ಚಿನ ಪ್ರಾಮಾಣಿಕ ವಿಮರ್ಶೆ ಒಮ್ಮೆಯಾದರೂ ಮಾಡಿ ನೋಡಿ. ಅನಗತ್ಯವಾದ ಖರ್ಚಿನ ದಾರಿಯು ಖಂಡಿತವಾಗಿಯೂ ನಿಮಗಾಗ ಗೋಚರಿಸೀತು. ಆರ್ಥಿಕ ಯಶಸ್ಸು ಸಾಧಿಸಬೇಕಾದರೆ ಬೇಕನ್ ಹೇಳಿದ ನುಡಿಗಳನ್ನು ನೆನಪಿನಲ್ಲಿಟ್ಟುಕೊಳ್ಳಿ–'ಹಣ ಒಳ್ಳೆಯ ಸೇವಕನೂ ಹೌದು; ದುಷ್ಟ ಯಜಮಾನನೂ ಹೌದು. ಹಣವನ್ನು ನಿಮ್ಮ ಸೇವಕನನ್ನಾಗಿ ಮಾಡಿರಿ ಆದರೆ ನೀವೇ ಅದರ ಸೇವಕನಾಗಬೇಡಿ.'

ಮಾನವನ ಎಲ್ಲಾ ಸಮಸ್ಯೆಗಳನ್ನು ವಿಜ್ಞಾನ ಪರಿಹರಿಸೀತೆಂದು ನೀವು ನಂಬುವಿರಾ? ವಿಜ್ಞಾನಕ್ಕೂ ಅದರದೇ ಆದ ಸೀಮಿತ ಪರಿಧಿಯೊಂದಿದೆ. ಪ್ರಸಿದ್ಧ ವಿಜ್ಞಾನಿ ಐನ್‌ಸ್ಟೈನ್ ಹೀಗೆ ಹೇಳಿದ್ದರು: "ವಸ್ತು ವಿಜ್ಞಾನವು ನಮ್ಮ ಜೀವನಕ್ಕೆ ಬೇಕಾಗುವ ನೂರಾರು ಸುಖ ಸೌಕರ್ಯಗಳನ್ನು ಒದಗಿಸಿಕೊಡಬಹುದಾದರೂ ಜೀವನದ ಕೊನೆಯ ಗುರಿಯನ್ನು ನಾವು ಬೇರೆಯೇ ಮಾರ್ಗದಿಂದ ತಿಳಿಯಬೇಕಾಗಿದೆ." ವಿಖ್ಯಾತ ವೈದ್ಯರಾಗಿ, ಸಂಶೋಧಕರಾಗಿ ಯಶಸ್ಸನ್ನು ಪಡೆದ ಡಾ. ಅಲೆಕ್ಸಿಸ್ ಕೆರೆಲ್ ಈ ಅಭಿಪ್ರಾಯ ಮುಂದಿಟ್ಟಿರುವರು– "ಮನುಷ್ಯ ಪಡೆಯಬಹುದಾದ ಶಕ್ತಿಗಳಲ್ಲಿ ಪ್ರಾರ್ಥನೆ ಅತ್ಯಂತ ಶಕ್ತಿಯುತವಾದುದು. ನೀವು ಹೃತ್ಪೂರ್ವಕವಾಗಿ ಪ್ರಾರ್ಥನೆಯ ಅಭ್ಯಾಸ ಮಾಡಿದರೆ ನಿಮ್ಮ ಬದುಕಿನಲ್ಲಿ ಎದ್ದು ತೋರುವ ಅನೇಕ ಬದಲಾವಣೆಗಳನ್ನು

ಮಾಡಿಕೊಳ್ಳಬಹುದು. ಎಲ್ಲ ರೀತಿಯ ವೈದ್ಯಕೀಯ ಚಿಕಿತ್ಸೆಗಳಿಂದಲೂ ಗುಣವಾಗದ ರೋಗಗಳು ಜನಗಳ ಶ್ರದ್ಧಾಪೂರ್ವಕ ಪ್ರಾರ್ಥನೆಯಿಂದ ವಾಸಿಯಾದುದನ್ನು ವೈದ್ಯನಾಗಿ ನಾನು ಕಂಡಿದ್ದೇನೆ. ಇಂದು ಪ್ರಾರ್ಥನೆ ಎಲ್ಲ ದೇಶದ ಜನರಿಗೂ ಅತ್ಯಗತ್ಯವಾದ ಅಭ್ಯಾಸ." ಪ್ರಾರ್ಥನೆಯಿಂದ ಪರಿವರ್ತನೆಯಂತೂ ಖಂಡಿತ ಸಾಧ್ಯ. ಪ್ರಾರ್ಥನೆಯೇ ತನ್ನ ಜೀವಾಳವೆನ್ನುತ್ತಿದ್ದರು ಮಹಾತ್ಮಾ ಗಾಂಧೀಜಿ. "ನನ್ನ ಜೀವನವನ್ನು ಉಳಿಸಿರುವುದು ಪ್ರಾರ್ಥನೆ. ಅದಿಲ್ಲದಿದ್ದರೆ ಬಹಳ ಹಿಂದೆಯೇ ನಾನು ಹುಚ್ಚನಾಗಬೇಕಿತ್ತು... ಪ್ರಾರ್ಥನೆ, ಉಪವಾಸಗಳಂಥ ಪ್ರಭಾವಶಾಲಿಯಾದ ಸಾಧನವು ಬೇರೊಂದಿಲ್ಲ. ಅದೇ ನಮಗೆ ಸರಿಯಾದ ಶಿಸ್ತನ್ನು ನೀಡುವುದು. ಅದೇ ಸ್ವಾರ್ಥತ್ಯಾಗವನ್ನೂ ವಿನಯ ವಿಶೇಷವನ್ನೂ ಧೈರ್ಯ ಸ್ಥೈರ್ಯವನ್ನೂ ಕಲಿಸುವುದು. ಈ ಗುಣಗಳಿಲ್ಲದಿದ್ದಲ್ಲಿ ನಿಜವಾದ ಪ್ರಗತಿ ಖಂಡಿತ ಆಗದು." ಎಂದರು ಗಾಂಧೀಜಿ. ಪ್ರಾರ್ಥನೆಯ ಅಭ್ಯಾಸವನ್ನು ರೂಢಿಸಿಕೊಳ್ಳಲು ಸಂತರ ಜೀವನವನ್ನು ಅಧ್ಯಯನ ಮಾಡಿ.

ನಿಮ್ಮ ಶರೀರವನ್ನು ರಕ್ಷಿಸಿಕೊಳ್ಳಿ....

ನೀವು ಪಡೆದಿರುವ ದೇಹ ಕೇವಲ ಎಲುಬು ಮಾಂಸಗಳಿಂದ ಮಾತ್ರ ಕೂಡಿಲ್ಲ. ಅತ್ಯಗಾಧ ಚೈತನ್ಯ ತೋರಿಸುತ್ತಿರುವ ಅದು ಸೋಜಿಗದ ಯಂತ್ರ! ಅತ್ಯದ್ಭುತ ರೀತಿಯಲ್ಲಿ ಕ್ರಮಬದ್ಧವಾಗಿ ಕಾರ್ಯ ನಡೆಸುತ್ತಿರುವ ಮಹಾ ಕಾರ್ಖಾನೆ ಅದು!

ಒಂದು ಅಂಚೆಚೀಟಿಯಷ್ಟು ವಿಸ್ತಾರವಾದ ಮಾನವನ ಚರ್ಮದಲ್ಲಿ ೩,೦೦೦,೦೦೦ ಜೀವಕೋಶಗಳೂ ೧ ಗಜ ರಕ್ತನಾಳಗಳೂ ೪ ಗಜ ನರತಂತುಗಳೂ ೧೦೦ ಬೆವರು ಗ್ರಂಥಿಗಳೂ ೧೫ ತೈಲ ಗ್ರಂಥಿಗಳೂ ೨೫ ನರದ ಬಿಂದುಗಳೂ ಇರುತ್ತವೆಂದರೆ ನೀವು ಆಶ್ಚರ್ಯಪಡುವಿರಾ? ನಮ್ಮ ದೇಹದಲ್ಲಿರುವ ಎಲ್ಲಾ ರಕ್ತನಾಳಗಳ ಒಟ್ಟು ಉದ್ದವೇ ಸುಮಾರು ೮೫,೦೦೦ ಮೈಲುಗಳಷ್ಟು! ಒಂದು ಮಾತ್ರದಷ್ಟು ರಕ್ತದಲ್ಲಿ ಸುಮಾರು ೫,೦೦೦,೦೦೦ ಕೆಂಪು ರಕ್ತಕಣಗಳೂ, ೧೦,೦೦೦ ಬಿಳಿ ರಕ್ತ ಕಣಗಳೂ, ೫,೦೦ ೦೦೦ ಪ್ಲೇಟ್ಲೆಟ್‌ಗಳೂ ಇವೆ! ೩೦ ಲಕ್ಷ ಕೆಂಪು ರಕ್ತ ಕಣಗಳು ಪ್ರತಿಕ್ಷಣದಲ್ಲೂ ನಾಶಗೊಳ್ಳುತ್ತವೆ, ಅವುಗಳ ದೈನಂದಿನ ಉತ್ಪಾದನೆ ದೇಹದಲ್ಲಿ ಸುಮಾರು ೯೦೦ ಬಿಲಿಯನ್! ಕೆಂಪು ರಕ್ತಕಣವೊಂದರ ಜೀವನಾವಧಿ ಕೇವಲ ೧೨೦ ದಿನಗಳಾದರೂ ಅದು ನಾಶಗೊಳ್ಳುವ ಮೊದಲು ದೇಹದಲ್ಲಿ ಸುಮಾರು ೧೦೫ ಮೈಲುಗಳಷ್ಟು ಚಲಿಸಿರುತ್ತದಂತೆ! ದಿನವೊಂದಕ್ಕೆ ೧೫೦ ಲೀಟರುಗಳಷ್ಟು ಮೂತ್ರ ನಮ್ಮ ಎರಡು ಮೂತ್ರಜನಕಾಂಗಗಳಿಂದ ಉತ್ಪಾದಿಸಲ್ಪಟ್ಟರೂ [illegible] ದೇಹಕ್ಕೆ ಅನಗತ್ಯವಾದ ಕಶ್ಮಲಾಂಶಗಳನ್ನೊಳಗೊಂಡು ನಾವು ವಿಸರ್ಜಿಸುವುದು ಕೇವಲ ೧½ ಲೀಟರಿನಷ್ಟು ಮೂತ್ರ ಮಾತ್ರವನ್ನೇ! ಒಟ್ಟಿನಲ್ಲಿ, ನಮ್ಮ ಶರೀರವೇ ಒಂದು ವಿಸ್ಮಯದಂತಿದೆ. ಅಜಾಗರೂಕತೆಯಿಂದ ಈ ಅಮೂಲ್ಯ ದೇಹವನ್ನು ನಾವು ಕೆಡಿಸಿಕೊಂಡೆವಾದರೆ ಅದರ ರಿಪೇರಿ ಕಷ್ಟಸಾಧ್ಯವೇ ಸರಿ. ನಿಮ್ಮ ಶರೀರದ ರಕ್ಷಣೆಯ ಜವಾಬ್ದಾರಿಯನ್ನು ಹೊತ್ತುಕೊಂಡ ನೀವು ನಿಷ್ಠೆಯಿಂದ ಅದನ್ನು ನಿರ್ವಹಿಸಬೇಕು. ಈ ದಿಸೆಯಲ್ಲಿ ಈ ವಿಚಾರಗಳತ್ತ ಗಮನ ಕೊಡಿ—

೧. ನಿಮ್ಮ ಜೀವನಕ್ಕೆ ಮೂಲಾಧಾರವಾದುದು ಉಸಿರಾಟ. ದೀರ್ಘವೂ, ಲಯಬದ್ಧವೂ ಆದ ಉಸಿರಾಟ ಸ್ವಾಭಾವಿಕವೂ ಆರೋಗ್ಯದಾಯಕವೂ ಆಗಿದೆ. ದೀರ್ಘ ಉಸಿರಾಟದ ಅಭ್ಯಾಸಕ್ಕೆ ಪ್ರಾತಃಕಾಲವೇ ಪ್ರಶಸ್ತವಾದ ಸಮಯ.

೨. ನಿಮ್ಮ ಶರೀರ ಆಹಾರ ಬೇಡುವ ವಿಧಾನವೇ ಹಸಿವೆ. ಹಸಿವೆ ಇಂಗಿಸಿಕೊಳ್ಳಲೋಸುಗ ನೀವು ಆಹಾರ ಸೇವಿಸಿ. ದೇಹದ ಆರೋಗ್ಯ ಕಾಪಾಡುವಲ್ಲಿ ಪೌಷ್ಟಿಕ ಆಹಾರಾಂಶಗಳ ಅಗತ್ಯ ಬಹಳಷ್ಟಿದೆ. ಹಿತವಾಗಿ ಮಿತವಾಗಿ, ಕ್ರಮಬದ್ಧವಾಗಿ ಆಹಾರ ಸೇವನೆ

ಮಾಡುವವರು ನಿತ್ಯ ಆರೋಗ್ಯವಂತರೆಂಬುದನ್ನು ಮಾತ್ರ ಎಂದಿಗೂ ಮರೆಯದಿರಿ. ಊಟ ತಿಂಡಿ ಮಾಡುವಾಗ ಅವಸರಕ್ಕೆ ಎಡೆಗೊಡಬೇಡಿ. ಹಲ್ಲಿನ ಕೆಲಸವನ್ನು ಕರುಳಿಗೆ ಕೊಡಬೇಡಿ.

೩. ದೇಹದ ನೈರ್ಮಲ್ಯ ರಕ್ಷಣೆಯಲ್ಲಿ ನಿಮ್ಮ ಪಾತ್ರ ಹಿರಿದಾಗಿರಲಿ.

೪. ಬಗೆಬಗೆಯ ಭೋಗಲಾಲಸೆಗಳಿಗೆ ಬಾಯ್ಬಿಡದೆ, ನಿಸರ್ಗ ದೊರಕಿಸಿದ ಸನ್ನಿವೇಶಗಳ ಉಪಯೋಗ ಪಡೆದು ದೈಹಿಕ ಶ್ರಮ ಪರಿಸರದಲ್ಲಿ ಉದಾಸೀನರಾಗದಿರಿ. ಲಯಬದ್ಧ ಜೀವನ ನಿಮ್ಮದಾಗುವಂತೆ ಸದಾ ಯತ್ನಿಸಿ.

೫. ದಣಿದ ನಿಮ್ಮ ದೇಹಕ್ಕೆ ವಿಶ್ರಾಂತಿ ಒದಗಿಸುವಲ್ಲಿ ಎಂದಿಗೂ ಹಿಂದಾಗದಿರಿ. ದೈಹಿಕ ಮತ್ತು ಮಾನಸಿಕ ಬಳಲಿಕೆಯ ಪರಿಹಾರಕ್ಕೆ ಪರಮೌಷಧ ನಿದ್ರೆ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಿ. ನಿಮ್ಮ-ಆಹಾರ ವಿಹಾರ, ಕೆಲಸ ಕಾರ್ಯಗಳಲ್ಲಿ ನಿಯಮವನ್ನಿಟ್ಟುಕೊಂಡಲ್ಲಿ ಸುಲಭದಲ್ಲಿ ನಿದ್ರಾವಶರಾಗಬಹುದು ನೀವು.

೬. ನಿಮ್ಮ ಆರೋಗ್ಯ ರಕ್ಷಣೆಯಲ್ಲಿ ಧರ್ಮಾರ್ಥವಾಗಿ ನಿಮಗಿಂದು ದೊರೆಯುವ ನೀರು, ಶುದ್ಧ ಹವೆ ಹಾಗೂ ಸೂರ್ಯಪ್ರಕಾಶ– ಈ ಮೂರು ಪದಾರ್ಥಗಳ ಉಪಯೋಗವನ್ನು ಆದಷ್ಟು ಹೆಚ್ಚಿನ ಪ್ರಮಾಣದಲ್ಲಿ ಪಡೆದುಕೊಳ್ಳಿರಿ. ನಿಮ್ಮ ಬೆಡಗಿಗಾಗಿಯೇ ನಿಸರ್ಗದ ಈ ಕೊಡುಗೆ– ಎಂಬುದನ್ನು ಮರೆಯಬೇಡಿ.

೭. ನಿಮ್ಮ ಸೌಂದರ್ಯ ರಕ್ಷಣೆಯಲ್ಲಿ ಮುಖ್ಯ ಪಾತ್ರ ವಹಿಸುವಂಥವು ಇಂದು ಸರ್ವತ್ರ ಪತ್ರಿಕೆಗಳಲ್ಲಿ ಕಾಣಬರುವ ಚರ್ಮದ ಕಾಂತಿ ಹೆಚ್ಚಿಸುವ ಸೋಪುಗಳಲ್ಲ, ಕೂದಲನ್ನು ಸೊಂಪಾಗಿ ಬೆಳೆಸುವ ತೈಲಗಳಲ್ಲ, ಮುಖಕ್ಕೆ ತೇಜಸ್ಸನ್ನೀಯುವ ಸ್ನೋ ಪೌಡರುಗಳಲ್ಲ, ನಿಮ್ಮ ಕೊಬ್ಬನ್ನು ಕರಗಿಸುವ ಗುಳಿಗೆಗಳಲ್ಲ, ನಿಮ್ಮನ್ನು ಎತ್ತರಕ್ಕೆ ಬೆಳೆಸುವ ಮಾತ್ರೆ ಔಷಧಗಳಲ್ಲ! "ಪ್ರತಿದಿನದ ನಿರ್ದಿಷ್ಟ ವ್ಯಾಯಾಮ ಮತ್ತು ಉತ್ತಮ ಆಹಾರಗಳೇ ಆತ್ಮತೃಪ್ತ ಸೌಂದರ್ಯದ ಸಾಧನಗಳು." ಎಂದು ಪ್ರಖ್ಯಾತ ಆಂಗ್ಲ ಚಲನಚಿತ್ರ ನಟಿ ಬೆಟ್ಟಿ ಡೇವಿಸ್ ಹೇಳಿದ ಮಾತುಗಳನ್ನು ಜ್ಞಾಪಕದಲ್ಲಿಡಿ. ನೀವು ಸೇವಿಸುವ ಆಹಾರದ ಪ್ರತಿ ತುತ್ತೂ ನಿಮ್ಮ ವ್ಯಕ್ತಿತ್ವ ಹಾಗೂ ಸೌಂದರ್ಯದ ಮೇಲೆ ಅಪಾರ ಪ್ರಭಾವವನ್ನು ಬೀರುತ್ತದೆ. ನಿಮ್ಮ ತ್ವಚೆ ನುಣುಪಾಗಿ, ಕೂದಲು ನೀಳವಾಗಿರುವಂತೆ ಮಾಡಿ, ನಿಮ್ಮ ಕಣ್ಗಳ ಕಾಂತಿ ಹೆಚ್ಚಿಸಿ, ಆಕರ್ಷಕ ಮೈಮಾಟವನ್ನು ನಿಮಗೊದಗಿಸುವುದೂ ನಿಮ್ಮ ಆಹಾರವೇ! ಸೌಂದರ್ಯದ ಇನ್ನೊಂದು ಅನಿವಾರ್ಯ ಘಟಕ ಬ್ರಹ್ಮಚರ್ಯ ಎಂಬುದನ್ನು ಮರೆಯಬಾರದು ನೀವು.

೮. ನಿಮ್ಮ ಧ್ವನಿ ಗಂಭೀರವಾಗಿ, ಮಂದ್ರವಾಗಿ, ಭಾವೋದ್ರೇಕರಹಿತವಾಗಿದ್ದು, ಸ್ಪಷ್ಟವಾಗಿ, ಸರಳ ಭಾಷೆಯಲ್ಲಿ, ನಿರರ್ಗಳವಾಗಿ ನೀವು ಸಂಭಾಷಣೆಗೈಯಬಲ್ಲಿರಾದರೆ ನಿಮ್ಮ ವ್ಯಕ್ತಿತ್ವಕ್ಕೆ ಹೆಚ್ಚಿನ ಮೆರಗು ಬರುವುದು ಖಂಡಿತ.

೯. 'ಹೆಂಗಸು ಚಿತೆಗೇರ ಹೊರಟಿದ್ದರೂ ತನ್ನ ಉಡಿಗೆ ತೊಡಿಗೆಗಳನ್ನು ಸರಿಪಡಿಸಿಕೊಳ್ಳಲು ಹತ್ತು ನಿಮಿಷ ಹೆಚ್ಚು ಉಪಯೋಗಿಸುವಳು' ಎಂಬ ಜನಜನಿತವಾದ ಮಾತೊಂದಿದೆ. ನಿಮ್ಮ ಉಡಿಗೆ ತೊಡಿಗೆಗಳ ಬಗ್ಗೆ ಅರ್ಥಾತ್ ನಿಮ್ಮ ಬಾಹ್ಯ ಸೌಂದರ್ಯ ರಕ್ಷಣೆಯ ವಿಚಾರದಲ್ಲಿ ನೀವು ಎಂತಿದ್ದರೂ ಸದಾ ಜಾಗೃತರೇ. ಆದರೆ ಅಂತರ್ದೃಷ್ಟಿಯಿಂದ ನಿಮ್ಮ ವಾಸ್ತವಿಕ ಸೌಂದರ್ಯವನ್ನು ಕಾಣಲು ಎಂದಾದರೂ ಯತ್ನಿಸಿದ್ದೀರಾ? ಬಾಹ್ಯ ಸೌಂದರ್ಯಕ್ಕಿಂತಲೂ ಆಂತರಿಕ ಸೌಂದರ್ಯವೇ ಮುಖ್ಯವೆಂಬುದನ್ನು ನೀವು ಮರೆಯಬೇಡಿ. ಪ್ರಿಸಂ' ಒಂದರ ಮೂಲಕ ಬೆಳಕಿನ ಕಿರಣವೊಂದು ಹಾದು ಹೋದಾಗ ಅದು ಕಾಮನ ಬಿಲ್ಲಿನ ಸಪ್ತವರ್ಣಗಳಾಗಿ ಒಡೆಯಲ್ಪಡುವುದಷ್ಟೆ. ಅಂತೆಯೇ ನಿಮ್ಮ ವ್ಯಕ್ತಿತ್ವವನ್ನೂ ವಿಶ್ಲೇಷಿಸಿದಾಗ ಆಂತರಿಕ ಸ್ವರೂಪದ ಸುಂದರ ಹಾಗೂ ಕುರೂಪದ ಸಾಮಗ್ರಿಗಳನ್ನು ನೀವಲ್ಲಿ ಕಾಣ

ಮಾನಸಿಕ ಅಭ್ಯಾಸಗಳು		ಭಾವನಾತ್ಮಕ ಅಭ್ಯಾಸಗಳು		ದೈಹಿಕ ಅಭ್ಯಾಸಗಳು	
ಸುರೂಪ	ಕುರೂಪ	ಸುರೂಪ	ಕುರೂಪ	ಸುರೂಪ	ಕುರೂಪ
ಉದ್ದೇಶ	ಉದ್ದೇಶಹೀನತೆ	ಶ್ರದ್ಧೆ	ಸಂಶಯ	ಶಾಂತತೆ	ಗೊಂದಲ
ಧೈರ್ಯ	ಅಧೈರ್ಯ	ಆಸೆ	ದುರಾಸೆ	ಶಕ್ತಿ	ಜಾಡ್ಯ
ಚಾತುರ್ಯ	ಅಜಾಗ್ರತೆ	ಪ್ರೀತಿ	ಮಾತ್ಸರ್ಯ	ವಿನಯ	ಅಸಭ್ಯತೆ
ಉತ್ಸಾಹ	ಸೋಮಾರಿತನ	ನಂಬಿಕೆ	[illegible]	ಗಾಂಭೀರ್ಯ	[illegible]
ಆತ್ಮವಿಶ್ವಾಸ	ಅಹಂಕಾರ	ಸತ್ಯ	ಸುಳ್ಳು	ಶುಚಿತ್ವ	ಅಶುಚಿತ್ವ
ಪರಿಶೀಲನೆ	ಅಲಕ್ಷ್ಯ	ನಿಸ್ವಾರ್ಥತೆ	ಸ್ವಾರ್ಥತೆ	ಪ್ರಸನ್ನತೆ	ಬಿಗುವರ್ತನೆ
ಏಕಾಗ್ರತೆ	ಚಂಚಲತೆ	ಔದಾರ್ಯ	ಕೃಪಣತೆ	ಆಸನ	ಅಸ್ಥಿರತೆ

ಬಹುದು. ಅವುಗಳ ವಿವರ ಇಲ್ಲಿದೆ ನೋಡಿ.

೧೦. ಮನುಷ್ಯನು ಅಭ್ಯಾಸಗಳ ಒಂದು ಮೂಟೆ ಎನ್ನುತ್ತಾರೆ. ನಿಮ್ಮ ಮನಸ್ಸು, ಭಾವನೆ ಮತ್ತು ದೇಹ– ಇವುಗಳಿಗೆ ಸಂಬಂಧಿಸಿದ ಅಭ್ಯಾಸಗಳ ಮೊತ್ತವೇ ನಿಮ್ಮ ವ್ಯಕ್ತಿತ್ವ ಹಾಗೂ ಸೌಂದರ್ಯ. ತುಸು ಕಾಲ ಯೋಚಿಸಿ ನಿಮ್ಮಲ್ಲಿ ಸುರೂಪದ ಘಟಕಗಳಿವೆಯೋ? ಎಲ್ಲವೂ ಕುರೂಪದ ಸಾಮಗ್ರಿಗಳೇ?

೧೧. ನಿಮ್ಮ ವ್ಯಕ್ತಿತ್ವ ಹಾಗೂ ಸೌಂದರ್ಯ ಬೆಳೆಸಿಕೊಳ್ಳುವಲ್ಲಿ ಇಷ್ಟಾದರೂ ಪ್ರಯತ್ನಿಸಿ. ಸಮಯ ಇನ್ನೂ ಮೀರಿ ಹೋಗಿಲ್ಲ. ಪ್ರತಿಯೊಂದು ಕುರೂಪದ ಸಾಮಗ್ರಿಯನ್ನು ದೂರಕ್ಕೆಸೆದು ಸೌಂದರ್ಯದ, ಸುರೂಪದ ಸಾಮಗ್ರಿಯನ್ನು ನಿಮ್ಮದಾಗಿ ಮಾಡಿಕೊಳ್ಳಿ.

೧೨. ನೀವು ನಿರೀಕ್ಷಿಸಿದ ವ್ಯಕ್ತಿತ್ವವನ್ನು ಪಡೆಯಲು ಸ್ಪಷ್ಟವಾದ ಕಲ್ಪನೆಯೊಂದಿಗೆ ಅದನ್ನು ಕಾರ್ಯರೂಪಕ್ಕೆ ತರಲು ರಚನಾತ್ಮಕವಾಗಿ ದುಡಿಯುವಲ್ಲಿ ನಿರಂತರವಾಗಿ ಪ್ರಯತ್ನಿಸಲು ಸಾಧ್ಯವಾದರೇನೆ ತೀವ್ರ ಬದಲಾವಣೆಗಳನ್ನು ಮಾಡಿಕೊಳ್ಳಬಹುದು. ಮರೆಯದಿರಿ, ಕಾರ್ಯರೂಪಕ್ಕೆ ತರದ ಕಲ್ಪನೆ ಸಂಪೂರ್ಣ ವ್ಯರ್ಥ.

ಬಾಳು ಬೆಳಗಲಿ...

ಸಂಘಜೀವಿಯಾದ ಮಾನವ ಕಲಿಯಬೇಕಾದ ಪ್ರಮುಖ ಅಂಶವೇ ಇನ್ನೊಬ್ಬರನ್ನು ಮೆಚ್ಚಲು, ಇನ್ನೊಬ್ಬರನ್ನು ಅರ್ಥಮಾಡಿಕೊಳ್ಳಲು. ಇದೇ ಮಧುರ ಮಾನವೀಯ ಸಂಬಂಧಕ್ಕೆ ಸೋಪಾನ. ಇದರ ಅಭಾವವೇ ಎಲ್ಲ ವಿಧದ ಅಶಾಂತಿ, ಅತೃಪ್ತಿ, ಅಸಮಾಧಾನ, ದ್ವೇಷ, ದ್ರೋಹಗಳಿಗೆ ಕಾರಣ. ಇದರ ಸ್ಪಷ್ಟ ನಿರೂಪಣೆ ಭಾರವಿಯ ಕತೆಯಿಂದ ಸುಲಭ ಸಾಧ್ಯ. ಆತ ಏನೇ ಒಳ್ಳೆಯ ಕೆಲಸ ಮಾಡಲಿ, ಎಷ್ಟೇ ದಕ್ಷತೆಯಿಂದ ಮಾಡಲಿ, ಎಂಥದೇ ಪ್ರತಿಭಾಸ್ವತ ಕೃತಿ ರಚಿಸಲಿ– ಅವನ ತಂದೆ ಮಾತ್ರ ಅವನನ್ನು ಕುರಿತು ಪ್ರಶಂಸೆಯ ಒಂದು ನುಡಿಯನ್ನೂ ಆಡಿದ್ದಿಲ್ಲ. ಇದು ಮಾತ್ರ ಭಾರವಿಯಿಂದ ಸಹಿಸಲಾಗಲಿಲ್ಲ. ತಂದೆಯ ಟೀಕಾಯುಕ್ತ ನಡವಳಿಕೆ ಅವನ ಕೋಪದ ಜ್ವಾಲೆಗೆ ತುಪ್ಪವನ್ನು ಸುರಿಯಿತು. ಆ ಉನ್ಮಾದದಲ್ಲಿ ತನ್ನ ತಂದೆಯ ಕೊಲೆಗೈಯಬೇಕೆಂದು ನಿರ್ಧರಿಸಿ, ದೊಡ್ಡ ಕಲ್ಲೊಂದನ್ನು ಬಳಿಯಿಟ್ಟುಕೊಂಡು ಕಾದು ಅಟ್ಟದ ಮೇಲೆ ಭಾರವಿ ಕುಳಿತಿದ್ದ. ತನ್ನ ಮಗನ ಯಾವುದೇ ಕಾರ್ಯವನ್ನು ಸ್ತುತಿಸದ ಬಿಗುವರ್ತನೆಯ ಬಗ್ಗೆ ತಾಯಿಯಿಂದ ವಿವರಣೆ ಕೇಳಲಾಗಿ ಭಾರವಿಯ ತಂದೆ ಈ ರೀತಿ ಉತ್ತರಿಸಿದ— "ನಾನೆಷ್ಟು ಹೃತ್ಪೂರ್ವಕವಾಗಿ ಅವನನ್ನು ಮೆಚ್ಚುತ್ತಿದ್ದೇನೆಂದು ನಿನಗೆ ಗೊತ್ತಿಲ್ಲವೇ? ಮಕ್ಕಳನ್ನು ಅವರ ಎದುರಲ್ಲೇ ಹೊಗಳಬಾರದೆಂಬುದು ಪೂರ್ವಿಕರ ಹೇಳಿಕೆ. ಅದರಿಂದ ಅವರ ಅಹಂಕಾರ ಹೆಚ್ಚುತ್ತದೆ.?" ತಂದೆಯ

ಈ ಮಾತುಗಳನ್ನು ಕೇಳಿ ಭಾರವಿ ರೋಮಾಂಚನಗೊಂಡ ತಂದೆ ಆಡಿದ ಮೆಚ್ಚುಗೆಯ ಒಂದೇ ಒಂದು ಮಾತು—ಅದೂ ಕದ್ದು ಕೇಳಿದ್ದು—ಅವನ ಜೀವನದ ಸಾರ್ಥಕತೆಗೆ ಕಾರಣವಾಯಿತು. ಕಿರಾತಾರ್ಜುನೀಯದಂಥ ಮಹಾಕೃತಿಯನ್ನೇ ರಚಿಸಿ ತುಂಬುಬಾಳನ್ನು ನಡೆಸಿ ಆತ ಮುಂದೆ ಕೀರ್ತಿಶಾಲಿಯಾದ.

ಬಾಳು ಬಂಗಾರವಾಗಬೇಕೆಂಬ ಹೆಬ್ಬಯಕೆ ನಮ್ಮೆಲ್ಲರಲ್ಲೂ ಇದೆ. ಆ ಕುರಿತು ಜ್ಞಾನ ಸಂಪಾದನಕ್ಕೂ ನಮ್ಮಲ್ಲಿ ಕೊರತೆಯಿಲ್ಲ. ನಮ್ಮಲ್ಲಿರುವ ಮುಖ್ಯ ದೋಷ ಡೇಲ್ ಕಾರ್ನೆಗಿ ಹೇಳುವಂತೆ "ಅಜ್ಞಾನದಲ್ಲಿಲ್ಲ, ಕ್ರಿಯಾಹೀನತೆಯಲ್ಲಿ." ಧೂಮಪಾನ ಅಪಾಯಕ್ಕೆ ಆಹ್ವಾನವೆಂದು ಸಿಗರೇಟು ಪ್ರಿಯರೆಲ್ಲರಿಗೂ ತಿಳಿದಿದೆ. ಆದರೂ ತಿಳಿದುದನ್ನು ಕಾರ್ಯರೂಪಕ್ಕೆ ತರುವ ಹುಮ್ಮಸ್ಸು, ಬಲ ಹಾಗೂ ಶಕ್ತಿ ಅವರಲ್ಲಿಲ್ಲವಾಗಿದೆ. ದೃಢ ನಿಶ್ಚಯ ಮತ್ತು ಸತತ ಪ್ರಯತ್ನ—ಇದು ನಮ್ಮಲ್ಲಿದ್ದರೆ ಯಾವುದನ್ನೂ ನಾವು ಮಾಡಿ ಮುಗಿಸಬಹುದು.


ಆಕಾಶಗೋಪುರ ಕಟ್ಟುವಲ್ಲಿ ನಾವೆಲ್ಲರೂ ನಿಸ್ಸೀಮರೇ. 'ನಾವು ಜನಪ್ರಿಯರಾಗಬೇಕು. ಜನ ನಮ್ಮನ್ನು ಗೌರವಿಸಬೇಕು. ನಮ್ಮ ಮಾತಿಗೆ ಬೆಲೆ ಕೊಡಬೇಕು. ಜನ ನಮ್ಮ ಇಚ್ಛೆಯನ್ನು ನೆರವೇರಿಸಬೇಕು'— ಹೀಗೆ ಏನೇನೋ ಆಶೆಗಳನ್ನಿಟ್ಟುಕೊಂಡು ಕನಸಿನ ಸಾಮ್ರಾಜ್ಯದಲ್ಲಿ ವಿಹರಿಸುವವರು ನಾವು. ನಮ್ಮ ಆಶೆ ಆಶೆಯಾಗಿಯೇ ಉಳಿಯಬಾರದು, ವಸ್ತುಸ್ಥಿತಿಗೆ ಪರಿವರ್ತಿತವಾಗಬೇಕು. ನಿಮ್ಮನ್ನು ನೀವು ತಿದ್ದಿಕೊಳ್ಳಲಾರಂಭಿಸಿ. ಇತರರ ದೋಷ ಮಾತ್ರವನ್ನೇ ದೊಡ್ಡ ಸ್ವರದಲ್ಲಿ, ಖಾರವಾದ ಶಬ್ದಗಳಲ್ಲಿ ನೀವು ವಿವರಿಸುವ ಮಾತ್ರಕ್ಕೆ ನಿಮ್ಮಿಂದಾಗುವುದು ಒಂದು ಸಾಧನೆ ಮಾತ್ರ—ನಿಮ್ಮ ಶತ್ರುಗಳ ಸಂಖ್ಯೆ ಹೆಚ್ಚಾಗುವುದು! ಟೀಕೆಗಳನ್ನೂ ಬಿರುನುಡಿಗಳನ್ನೂ ಕಡಮೆ ಮಾಡಲು ಸಾಧ್ಯವಾದಷ್ಟು ನೀವು ಯತ್ನಿಸಿ. ಇತರರ ಒಳ್ಳೆಯ ಅಂಶಗಳನ್ನು ಸ್ಪಷ್ಟವಾಗಿ, ಹೃತ್ಪೂರ್ವಕವಾಗಿ, ಪ್ರತ್ಯಕ್ಷವಾಗಿ ಮೆಚ್ಚಿ ಬಿಡಿ.

ನೀವೆಷ್ಟೇ ಸಂಯಮಯುಕ್ತ, ಶಿಸ್ತುಪೂರ್ಣ, ನಿಸ್ವಾರ್ಥ ಬಾಳನ್ನು ಬೆಳಗಿಸುವವರಾಗಿರಬಹುದು. ಆದರೆ ಜನರ ಅಹಂಕಾರಕ್ಕೆ ನೀವು ಆಘಾತ ಮಾಡಿ ನೋಡಿ. ಅವರದನ್ನು ಎಂದಿಗೂ ಸಹಿಸಲಾರರು. ತಮ್ಮ ಶಕ್ತಿಸರ್ವಸ್ವವನ್ನುಪಯೋಗಿಸಿ ಅದನ್ನವರು ವಿರೋಧಿಸದೆ ಇಲ್ಲ. ಪ್ರತಿಯೊಬ್ಬನಿಗೂ ಅತ್ಯಂತ ಪ್ರಿಯವಾದುದು—'ನಾನು' ಎಂಬುದು; ಅಷ್ಟೊಂದು ಪ್ರಿಯವಾದ 'ನಾನು' ವನ್ನು ನೀವು ನಿಂದೆಯ ಮಾತುಗಳಿಂದ ತುಳಿಯ ಹೊರಟರೆ ಏನಾದೀತೆಂದು ಊಹಿಸಿಕೊಳ್ಳಿ.

ಈ ದಿನ ಒಂದು ಕೆಲಸ ಮಾಡಿ. ನೀವು ಭೇಟಿಯಾಗುವ ಎಲ್ಲರಲ್ಲಿಯೂ ಯಾವುದಾದರೊಂದು ಮೆಚ್ಚುವಂಥ ಅಂಶವನ್ನು ಕಂಡುಕೊಳ್ಳಿರಿ. ಪ್ರತಿಯೊಬ್ಬರಲ್ಲೂ ಏನಾದರೊಂದು ಮೆಚ್ಚತಕ್ಕ ಅಂಶ ಖಂಡಿತ ಸಿಗುತ್ತದೆ. ಅವರೊಡನೆ ವ್ಯವಹರಿಸುವಾಗ ಸಂದರ್ಭಾನುಸಾರ ಆ ಕುರಿತು ಮೆಚ್ಚಿಗೆ ವ್ಯಕ್ತಪಡಿಸಲು ಯತ್ನಿಸಿ. ಅದೆಂಥ ಅದ್ಭುತವನ್ನು ಮಾಡುತ್ತದೆಂಬುದನ್ನು ಶೀಘ್ರದಲ್ಲೇ ನೀವು ಮನಗಾಣುವಿರಿ.

ಖಂಡನೆಯಿಂದ, ಟೀಕೆಯಿಂದ, ನಿಂದನೆಯಿಂದ ಯಾರನ್ನಾದರೂ ತಮ್ಮ ಅಭಿಪ್ರಾಯಕ್ಕೆ ತಿರುಗಿಸಿದವರಿದ್ದಾರೆಯೇ? ಸತ್ಯ ಹೇಳಬೇಕಾದರೆ 'ಇಲ್ಲ.' ಇತರರ ಒಳ್ಳೆಯ ಅಂಶವನ್ನು ಕಾಣುವ ದೃಷ್ಟಿಯನ್ನು ನೀವು ಬೆಳೆಸಿಕೊಂಡರೆ ನಿಮ್ಮ ಪಾಲಿನ ಪ್ರಪಂಚ ಅದೆಷ್ಟೋ ಸುಖಮಯವಾಗುತ್ತದೆ. ಇತರರನ್ನು ಅರಿಯುವ, ಗೌರವಿಸುವ ಮೆಚ್ಚುವ ಕಲೆ—ಜೀವನದ ಸಾರ್ಥಕತೆಗೆ ಬಹಳಷ್ಟು ಮುಖ್ಯ ಎಂಬುದನ್ನು ಖಂಡಿತವಾಗಿಯೂ ಮರೆಯದಿರಿ.

ಅಂತರ ರಾಷ್ಟ್ರೀಯ ಖ್ಯಾತಿಯ ಪ್ರಸಿದ್ಧ ಜನನಾಯಕ ಬೆಂಜಮಿನ್ ಫ್ರಾಂಕ್ಲಿನ್ನನ ಅದ್ಭುತ ಯಶಸ್ಸಿನ ಗುಟ್ಟೇನೆಂದು ಪ್ರಶ್ನಿಸಿದಾಗ ಆತ ಹೇಳಿದನಂತೆ, "ಯಾರ ಕುರಿತಾಗಿಯೂ ನಾನು ಕೆಟ್ಟ ಶಬ್ದಗಳನ್ನಾಡುವುದಿಲ್ಲ." ತನ್ನನ್ನು ಶಿಲುಬೆಗೇರಿಸಿದವರಿಗೂ






ರುಚಿ, ವಿಟಮಿನ್‌ಗಳು ಮತ್ತು ಪೋಷಣೆ– ಇವುಗಳಿಗಾಗಿ ಅಪ್ಪಟ ಬಿಸ್ಕಿಟ್

ಬ್ರಿಟಾನಿಯಾ
ಗ್ಲೂಕೋಸ್-ಡಿ



ತುಲನಾತ್ಮಕ ಪರೀಕ್ಷಣಗಳು ಸಿದ್ಧಪಡಿಸಿವೆ : ಗ್ಲೂಕೋಸ್ ಡಿ ಯಲ್ಲಿ ವಿಟಮಿನ್ ಮತ್ತು ಪೋಷಕಾಂಶಗಳು ಅಧಿಕ ಪ್ರಮಾಣದಲ್ಲಿವೆ. ಮತ್ತು ಅದರ ರುಚಿ, ಸಿಹಿ ಹಾಗೂ ಗರಿಮುರಿತನಕ್ಕಾಗಿ ಜನ ಮೆಚ್ಚುತ್ತಾರೆ.



ಆದ್ದರಿಂದಲೇ ಬೇರೆ ಯಾವುದೇ ಗ್ಲೂಕೋಸ್ ಬಿಸ್ಕಿಟ್‌ಗಿಂತ ಅಧಿಕವಾಗಿ ಬ್ರಿಟಾನಿಯಾ ಗ್ಲೂಕೋಸ್ ಡಿ ಜನರನ್ನು ಆಕರ್ಷಿಸುತ್ತದೆ.



ಬ್ರಿಟಾನಿಯಾ ಬಿಸ್ಕಿಟ್ ಬಲು ಶ್ರೇಷ್ಠ

ಲಿಂಟಾಸ್-BBC.GL.10-77 KN

ದೇವರ ಆಶೀರ್ವಾದವನ್ನು ಕೋರಿಲ್ಲವೇ ಯೇಸುಕ್ರಿಸ್ತ? "ದ್ವೇಷ ಮಾಡಿದವನನ್ನು ಪೋಷಿಸಲು ಬೇಕು, ಹುಸಿದು ಮನೆಕೊಂಬುವನ ಹಾಡಿ ಹರಸಲು ಬೇಕು, ಅಸಿಯುಲಿರಿದವನ ಹೆಸರ ಮುಂಟನಿಗಿಡಬೇಕು" ಎಂದು ದಾಸಶ್ರೇಷ್ಠ ಪುರಂದರದಾಸರು ಹಾಡಲಿಲ್ಲವೇ?

ಮಹಾತ್ಮರ ಮಟ್ಟಕ್ಕೇರಿದವರು ನಾವಲ್ಲ; ಅನ್ಯಾಯ ಮಾಡಿದವರಿಗೆ ಔದಾರ್ಯ ತೋರಿಸುವಷ್ಟು ಸಂಸ್ಕಾರ ನಮ್ಮಲ್ಲಿಲ್ಲ ನಿಜ. ಆದರೆ ನಮ್ಮ ಸಹಜೀವಿಗಳಲ್ಲಿ ಒಳ್ಳೆಯದನ್ನು ಕಂಡು ಮೆಚ್ಚುವ ಸ್ವಭಾವ ನಾವು ಬೆಳೆಸಿಕೊಳ್ಳದಿದ್ದರೆ ಯಾರಿಗೇನೂ ನಷ್ಟವಿಲ್ಲವಲ್ಲ—ನಮ್ಮ ಬದುಕೇ ನೀರಸವಾಗುತ್ತದೆ, ನಮ್ಮ ಬಾಳೇ ದುರ್ಗಮವಾಗುತ್ತದೆ. ಅಂದ ಮೇಲೆ ನೆನಪಿರಲಿ—ಬಿರುನುಡಿಯ ಬರಸಿಡಿಲಿನಿಂದ ಇತರರ ಆತ್ಮಾಭಿಮಾನಕ್ಕೆ ಎಂದಿಗೂ ಧಕ್ಕೆ ತರಬೇಡಿ... ಅಂದರೆ ಮುಖಸ್ತುತಿ ಮಾಡಲು ಕಲಿಯಿರಿ ಎಂದು ಅರ್ಥ ಮಾಡಿಕೊಳ್ಳಬೇಡಿ; ಇನ್ನೊಬ್ಬರಲ್ಲಿರುವ ಒಳ್ಳೆಯ ಅಂಶವನ್ನು ಕಂಡು ಪ್ರಾಮಾಣಿಕವಾಗಿ, ಹೃತ್ಪೂರ್ವಕವಾಗಿ ಮೆಚ್ಚಿ.

"ಜನರ ಮೇಲೆ ಬರಹಗಾರನಿಗೆ ಆಸಕ್ತಿ ಇಲ್ಲವೆಂದಾದರೆ ಜನರಿಗೆ ಅವನ ಕೃತಿಗಳ ಮೇಲೆ ಖಂಡಿತ ಆಸಕ್ತಿ ಬರುವುದಿಲ್ಲ." ಎಂಬ ಮಾತೊಂದಿದೆ. ವ್ಯಾವಹಾರಿಕ ಜಗತ್ತಿನಲ್ಲಿ ಬದುಕುವವರೆಲ್ಲರಿಗೂ ಈ ಮಾತು ಅನ್ವಯಿಸುತ್ತದೆ. 'ನೀವು ಎಲ್ಲರನ್ನೂ ಮನಸಾರೆ ಖಂಡಿಸಿ ಹೀಯಾಳಿಸಿ; ಆದರೆ 'ನಿಮ್ಮನ್ನು ಎಲ್ಲರೂ ಗೌರವಿಸಬೇಕು— ಪ್ರೀತಿಸಬೇಕು.' ಇದ್ಯಾವ ನ್ಯಾಯ ಹೇಳಿ? ಜಗತ್ತಿನ ಯಾವ ಜಗದಲ್ಲೂ ಈ ತತ್ತ್ವ ಈ ತನಕ ಜಾರಿಗಂತೂ ಬರಲಿಲ್ಲ!

ಜನಪ್ರಿಯತೆಯ ದಾರಿಯಲ್ಲಿ 'ನಾಮದ ಬಲ' ಅಷ್ಟಿಷ್ಟಲ್ಲ. ಒಬ್ಬರ ಹೆಸರು ನಿಮಗೆ ನೆನಪಿದೆ ಎಂದಾದರೆ ಅವರಲ್ಲಿ ನಿಮಗೆ ಸ್ವಲ್ಪವಾದರೂ ಆಸಕ್ತಿಯಿದೆ ಎಂದುದು ಸುಸ್ಪಷ್ಟವೇ. ಅಂತಿರುವಾಗ, 'ನಮಸ್ಕಾರ ಸ್ವಾಮಿ', 'ಏನು ರಾಯರೇ?' ಎನ್ನುವುದಕ್ಕಿಂತ 'ನಮಸ್ಕಾರ ಕೃಷ್ಣಮೂರ್ತಿಗಳೇ' 'ಏನು ರಾಮಾಚಾರ್ಯರೇ' ಎನ್ನುವುದು ಒಳ್ಳೆಯದು. ಇತರರ ಹೆಸರನ್ನು ನೆನಪಿಟ್ಟುಕೊಳ್ಳುವುದು ರಾಜಕೀಯ ಮುಖಂಡರಿಗಂತೂ ಅವಶ್ಯಕವಾದ ಒಂದು ಅಭ್ಯಾಸವೇ. ಅಮೆರಿಕದ ಅಧ್ಯಕ್ಷರಾಗಿದ್ದ ರೂಸ್‌ವೆಲ್ಟರು ತಾವು ಭೇಟಿಯಾದ ಕೂಲಿಕಾರರ ಹೆಸರನ್ನೂ ಮರೆಯುತ್ತಿರಲಿಲ್ಲವಂತೆ!

ಮುಗುಳ್ನಗು ವರ್ಚಸ್ವೀಜೀವನದ ಅನಿವಾರ್ಯ ಅಂಶ. ಅದು ನಿಮ್ಮ ಹಾಗೂ ನಿಮ್ಮೊಡನಿರುವವರಲ್ಲಿ ಒಂದು ಮಧುರ ವಾತಾವರಣವನ್ನು ನಿರ್ಮಿಸಿ ಗೆಳೆತನದ ಭಾವವನ್ನು ಹಬ್ಬಿಸುತ್ತದೆ. ನಗುವನ್ನು ಬಂಧಿಸಿಟ್ಟು ಗಂಭೀರತೆಯ ತೀವ್ರ ರೇಖೆಗಳನ್ನು ನೀವೆಂದಿಗೂ ನಿಮ್ಮ ಮುಖದಲ್ಲಿ ಮೂಡಿಸದಿರಿ. ಆದರೆ ಹೃದಯದಲ್ಲಿ ಸದ್ಭಾವನೆಯಿಲ್ಲದೆ ತುಟಿಯಲ್ಲಿ ಮಾತ್ರ ತೋರಿಸುವ ಯಾಂತ್ರಿಕವಾದ ದೇಶಾವರಿ ನಗು ಖಂಡಿತ ಪ್ರಭಾವಶಾಲಿಯಾಗದು. ಅದನ್ನು ತ್ಯಜಿಸಿಬಿಡಿ.

ನಿಮ್ಮ ಮಾತುಕತೆಯಲ್ಲಿ 'ನಾನು'ವಿನ ಉಪಯೋಗ ಸಾಧ್ಯವಾದಷ್ಟು ಕಡಿಮೆ ಮಾಡಿಕೊಂಡು ಸುಲಭದಲ್ಲಿ ಜನಪ್ರಿಯರಾಗಿ. ನಿಮ್ಮಲ್ಲಿ ಪ್ರಶಂಸಾರ್ಹ ಗುಣವಿದ್ದಲ್ಲಿ, ಅದರ ಜಾಹೀರಾತನ್ನು ನೀವು ಮಾಡುವುದು ಉಚಿತವಾಗಲಾರದಾದರೂ ಅತಿ ವಿನಯದ ಭರದಲ್ಲಿ ಅದರ ಅಸ್ತಿತ್ವವನ್ನೇ ಅಲ್ಲಗಳೆಯುವುದಂತೂ ಸರ್ವಥಾ ಸರಿಯಲ್ಲ. ನಿಜವಾದ ಮತ್ತು ಯೋಗ್ಯವಾದ ಮೆಚ್ಚಿಕೆಯನ್ನು ಸ್ವೀಕರಿಸಲು ಯಾರೂ ನಾಚಬೇಕಾಗಿಲ್ಲ.

ಇತರರೊಡನೆ ಚರ್ಚೆ ನಡೆಸುವುದರಿಂದ ನಿಮ್ಮ ಶತ್ರುಗಳ ಸಂಖ್ಯೆ ಹೆಚ್ಚಾಗಬಹುದಷ್ಟೆ; 'ವಾದೇ ವಾದೇ ಜಾಯತೇ ವೈರ ವೃಕ್ಷಃ' ಎಂಬ ಹಾಸ್ಯದ ಚಟಾಕಿಯೊಂದಿದೆ. ವಾದ ಮಾಡಿ ಇತರರನ್ನು ನಿಮ್ಮ ಅಭಿಪ್ರಾಯಕ್ಕೆ ತಿರುಗಿಸುವುದು ಬಹು ಮಟ್ಟಿಗೆ ಅಸಾಧ್ಯವೇ ಸರಿ. ಇದಿಲ್ಲವಾಗಿದ್ದರೆ ಪ್ರಪಂಚದ ಎಲ್ಲ ಕ್ಷೇತ್ರಗಳಲ್ಲೂ ಭಯಂಕರ ಪ್ರಮಾಣದ ಭಿನ್ನಾಭಿಪ್ರಾಯವೇಕೆ? ದೆ. ತ. ಅದೆ. ತ. ಎಷ್ಟಾ-

ದ್ವೈತವಂತೆ, ಕಮ್ಯುನಿಸ್ಟ್, ಬಂಡವಾಳಶಾಹಿ ಸೋಷಲಿಸ್ಟ್, ಕಾಂಗ್ರೆಸಂತೆ... ಹೀಗೆ ಹಲವು ಭಿನ್ನಾಭಿಪ್ರಾಯಂಗಳು ಚರ್ಚೆಯಿಂದ ಮನಃ ಪರಿವರ್ತನೆಯಾಗುವುದಾದರೆ ಇರಲು ಸಾಧ್ಯ ವಿತ್ತೆ? ವಾದ, ತರ್ಕಗಳಿಂದ ನೀವು ದೂರ ವಿರಲು ಯತ್ನಿಸಿ, ನಿಮ್ಮ ವೈಯಕ್ತಿಕ ಅಭಿ-ಪ್ರಾಯವನ್ನು ಸೂಚಿಸಲೇ ಬೇಕಾದಾಗ ಭಾವೋದ್ರೇಕವಿಲ್ಲದೆ, ಯಾರಿಗೂ ನೋವಾಗ ದಂತೆ ಹೇಳಲು ಯತ್ನಿಸಿ. ನಿಮ್ಮ ಎದು-ರಾಳಿಯ ಅಭಿಪ್ರಾಯ ಖಂಡಿತ ತಪ್ಪೆಂದು ತಿಳಿದು ಅದನ್ನು ಹೇಳುವುದು ಅನಿವಾರ್ಯ ವಾದರೆ ಸೂಚ್ಯವಾಗಿ ಹೇಳಿ, ಹಾಸ್ಯವಾಗಿ ತೇಲಿಸಿ– ಎಂದಿಗೂ ಸೋಲಿಸುವ ಹವ್ಯಾಸ ಬೇಡ.

'ಮೌನ ಜ್ಞಾನಿಗಳ ಲಕ್ಷಣ' ಎಂಬ ಮಾತಿದೆ. 'ಮಾತು ಬೆಳ್ಳಿಯಾದರೆ ಮೌನ ಬಂಗಾರ-ವೆ'ನ್ನುತ್ತದೆ ಜರ್ಮನ್ ಗಾದೆ. ಯಾವಾಗಲೂ ಅಧಿಕ ಪ್ರಸಂಗದಿಂದಲೇ ಅನರ್ಥವುಂಟಾಗು ವುದು. "ಎಷ್ಟೋ ಬಾರಿ ಮಾತನಾಡಿದ್ದಕ್ಕೆ ನಾನು ಸಂತಾಪಪಟ್ಟಿದ್ದೇನೆ. ಆದರೆ ಯಾವ ಸಂದರ್ಭದಲ್ಲೂ ಮೌನವಾಗಿದ್ದುದಕ್ಕೆ ಸಂತಾಪ ಪಟ್ಟಿಲ್ಲ" ಎಂದು ಸೈರಸ್ ಹೇಳಿದ ಮಾತನ್ನು ದಿವಕ್ಕೆ ಮೂರಾವರ್ತಿ ಸ್ಮರಿಸೋಣ.

ಜನರೊಂದಿಗೆ ನೀವು ವರ್ತಿಸುವ ಮೊದಲು ವಿಲ್ ಡ್ಯೂರೆಂಟರ ಈ ಮಾತನ್ನು ಕೇಳಿ– "ಜನರೊಂದಿಗೆ ಮಾತನಾಡುವಾಗ ಹರಿತವಾದ ಶಬ್ದಗಳನ್ನು ಉಪಯೋಗಿಸಬೇಡಿ. ಅದರಿಂದ ನಿಮಗೇನೂ ಲಾಭವಿಲ್ಲ. ಅವರೊಂದಿಗೆ ಸಹನೆ, ಸಹಕಾರದಿಂದಿರಲು ಕಲಿಯಿರಿ. ಜನ-ರೊಡನೆ ಉತ್ಸಾಹ ಮತ್ತು ಸಮಾಧಾನದಿಂದ, ಪ್ರೀತಿ ಮತ್ತು ವಿಶ್ವಾಸದಿಂದ ಮಾತನಾಡಿ. ಒಂದೊಮ್ಮೆ ಇದು ಅಸಾಧ್ಯವಾದರೆ ನೀವು ಮೌನವಾಗಿದ್ದು ಮುಗುಳ್ನಗೆ ಬೀರಿ ಬಿಡಿ. ಆದೇ ನಿಮ್ಮ ಅಂತರಂಗವನ್ನೂ ನಡತೆಯನ್ನೂ ಬಿಂಬಿಸುವುದು.

ಬದುಕುವ ದಾರಿ ಕುರುಡ ಕ್ರಮಿಸುವ ದಾರಿ ಅಲ್ಲ; ಅದೊಂದು ಸುವ್ಯವಸ್ಥಿತವಾದ, ಸುಸಜ್ಜಿತ; ಕ್ರಮಬದ್ಧ ದಾರಿ. ಸಮರ್ಥ ಬಾಳ್ವೆ ನಿಮ್ಮದಾಗುವಲ್ಲಿ ನೀವು ಅರಿತಿರ-ಬೇಕಾದ ಸತ್ಯವದು ಬಹಳ ಸರಳ–

'ನಿನ್ನನ್ನು ನೀನು ಸರಿಪಡಿಸಿಕೊಂಡರೆ ಪ್ರಪಂಚದಲ್ಲಿ ಒಬ್ಬ ಮೂರ್ಖ ಕಡಿಮೆಯಾದ'

–ಥಾಮಸ್ ಕಾರ್ಲೈಲ್

'ಬಹುವಿದ್ಯೆ ಬಹುತರ್ಕ ಬಹುವೇಷ
ಬೇಕಿಲ್ಲ'
ವಹಿಸೆ ಜೀವನ ಭರವನದು
ಹಗುರವೆನಿಸವೊಲ್
ಸಹಜ ಸಮರಸಭಾವ ಅಂತಃ
ಪರೀಕ್ಷೆಗಳು
ವಿಹಿತವಾತ್ಮದ ಹಿತಕೆ– ಮಂಕುತಿಮ್ಮ'

–ಡಿ. ವಿ. ಜಿ



Printed & published by Shri K. Janardana for the Karnataka Patrika Private Ltd. at the Samyukta Karnatak Press, Koppikar Road, Hubli. Rep: Bombay: V. S. Mani, Phone: 472794, Calcutta: H. Muzamdar, Phone 46-4238: Madras: P. N. Srinivasan, Phone: 83748; New Delhi: P. R. Chopra Phone: 224130.

KASTURI PRICE: 1·25 Regd. No. KRNG 43
Registered with the Registrar of Newspapers for India under No. 3633/57